
ಪುಸ್ತಕ ಪ್ರಪಂಚ

ಸಂಪುಟ ೫೧ ಫೆಬ್ರವರಿ ೨೦೦೧ ಸಂಚಿಕೆ ೪



ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ
ಮೈಸೂರು

ಪುಸ್ತಕ ಪ್ರಪಂಚ

ಮಾಸಿಕ

ಪರಿವಿಡಿ

ಮುಖಚಿತ್ರ : ಅಪೂರ್ವ ಕಲಾಕೃತಿ

PUSTAKA PRAPANCHA: Monthly

Published and printed by Karnataka State Adult Education Council,Mysore-6,
Price : Rupees Ten

ಬಿಡಿಪ್ರತಿ : ರೂ.೧೦

ವಾರ್ಷಿಕ ಚಂದಾ : ರೂ, ೧೦೦

ಅಜೀವ ಸದಸ್ಯತ್ವ ಚಂದಾ :

ವ್ಯಕ್ತಿಗೆ : ರೂ. ೬೦೦

ಸಂಸ್ಥೆಗೆ : ರೂ. ೯೦೦

ಪ್ರಕಟಣೆ
ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ
ಮೈಸೂರು-೫೭೦ ೦೦೬

ಭ್ರಷ್ಟಾಚಾರಕ್ಕೆಂದು ಕೊನೆ?

ಪ್ರತಿನಿತ್ಯ ನಮ್ಮ ಸುತ್ತಮುತ್ತ ನಡೆಯುತ್ತಿರುವ, ನೋಡುತ್ತಿರುವ , ಕೇಳುತ್ತಿರುವ ಭ್ರಷ್ಟಾಚಾರದ ಸಂಗತಿಗಳನ್ನು ಕೇಳಿ ಕೇಳಿ ಸಾಕಾಗಿಹೋಗಿದೆ; ಜೀವನದ ಬಗ್ಗೆಯೇ ಜುಗುಪ್ಸೆ ಮೂಡಿದೆ. ಕ್ರಿಕೆಟ್ ಮೋಸದಾಟವೂ ಸೇರಿಕೊಂಡಂತೆ ಅದರ ಅವತಾರಗಳು, ರೂಪಾಂತರಗಳು ಅನಂತ. ಆ ಬಗ್ಗೆ ನಾನು ಕೆಲವು ಲೇಖನಗಳನ್ನು ಬರೆದಿದ್ದೇನೆ. ಅವುಗಳಿಂದ ಏನೇನೂ ಪ್ರಯೋಜನವಾಗಲಾರದೆಂಬುದನ್ನು ನಾನು ಬಲ್ಲೆ. ಆದರೂ ಬುದ್ಧಿಜೀವಿಗಳು ಆ ಕಡೆಗೆ ಕಣ್ಣು ಹೊರಳಿಸದಿದ್ದರೆ, ಕಿವಿ ತಿರುಗಿಸದಿದ್ದರೆ, ಬಾಯಿ ತೆರೆಯದಿದ್ದರೆ, ಲೇಖನಿಯನ್ನಾಡಿಸದಿದ್ದರೆ ಸಮಾಜಕ್ಕೆ, ದೇಶಕ್ಕೆ, ದೇವರಿಗೆ ದ್ರೋಹ ಬಗೆದಂತಾಗುತ್ತದೆಂದು ಸ್ಪಷ್ಟಪಡಿಸಬೇಕಾಗಿದೆ. ಪರಿಣಾಮ ಏನೇ ಇರಲಿ, ಪ್ರತಿಭಟನೆ ಅನಿವಾರ್ಯ. ಏನಿಲ್ಲದಿದ್ದರೂ ಅದು ಎಚ್ಚರಿಕೆಯ ಗಂಟೆಯಾದೀತು.

ಕಳೆದ ಡಿಸೆಂಬರ್ ತಿಂಗಳಲ್ಲೊಂದು ದಿನ ನಾನು ಬೆಂಗಳೂರಿಗೆ ಹೋಗಿದ್ದಾಗ, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮದ ಅಧ್ಯಕ್ಷರಾದ ಶ್ರೀ ವಿ.ಪ.ಬಳಿಗಾರ ಅವರನ್ನು ಭೇಟಿಮಾಡಿದ್ದೆ. ಅವರು ಕವಿಮಿತ್ರರಾದ್ದರಿಂದ ಅವಕಾಶವಾದಾಗ ಅವರನ್ನು ನೋಡುವ ಇಚ್ಛೆ ಸಹಜವಾದದ್ದು. ಜತೆಗೆ ಕುವೆಂಪು ವಿದ್ಯಾವರ್ಧಕ ಟ್ರಸ್ಟಿಗೆ ಸಂಬಂಧಿಸಿದ ಕೆಲಸವೂ ಇತ್ತು. ಮಾತುಕತೆ ಮುಗಿಸಿ, ಹೊರಗೆ ಹೊರಡುವಾಗ, ಕೆಪಿಟಿಸಿಎಲ್ ಗ್ರಾಹಕರಿಗೆಂದು ಅಚ್ಚಾಗಿದ್ದ ವಿನಂತಿ ಪತ್ರವನ್ನು ನನ್ನ ಕೈಗಿತ್ತು, 'ಬಂದವರಿಗೆಲ್ಲ ಕೊಡುತ್ತೇನೆ. ಇಲಾಖೆಯಲ್ಲಿಯ ಭ್ರಷ್ಟಾಚಾರವನ್ನು ತಪ್ಪಿಸಲು ಇದೊಂದು ಪ್ರಯತ್ನ' ಎಂದರು. 'ನಮ್ಮ ನಿಗಮದ ಉದ್ದೇಶವು ಈಡೇರಬೇಕಾದರೆ ಗ್ರಾಹಕರು ಸಂಪೂರ್ಣ ಸಹಕಾರ ನೀಡಬೇಕಾಗುತ್ತದೆ. ಯಾರಿಗೂ ಲಂಚದ ಆಮಿಷ ತೋರಿಸಬಾರದು. ಲಂಚ ತೆಗೆದುಕೊಳ್ಳುವುದಷ್ಟೇ ಅಲ್ಲ, ಲಂಚಕೊಡುವುದೂ ಅಪರಾಧ. ಒಂದು ವೇಳೆ ತಮಗೆ ನಮ್ಮ ನಿಗಮದ ನೌಕರರಾಗಲಿ ಅಥವಾ ಮಧ್ಯವರ್ತಿಗಳಾಗಲಿ ಲಂಚ ಕೇಳಿದಲ್ಲಿ ಇಲ್ಲ ಕಿರುಕುಳ ಕೊಟ್ಟಲ್ಲಿ ತಾವು ನೇರವಾಗಿ ಸಂಬಂಧಪಟ್ಟ ಹಿರಿಯ ಅಧಿಕಾರಿಗಳಿಗೆ ದೂರು ಕೊಡಿ. ಅಲ್ಲಿಯೂ ನಿಮಗೆ ಪರಿಹಾರ ಸಿಗದಿದ್ದಲ್ಲಿ ಪತ್ರದ ಮುಖಾಂತರ ಅಥವಾ ದೂರವಾಣಿ ಮುಖಾಂತರ ನನ್ನನ್ನು ಸಂಪರ್ಕಿಸಿ'. ಬಳಿಗಾರರು ದಕ್ಷರು, ಪ್ರಾಮಾಣಿಕರು, ಬುದ್ಧಿವಂತರೆಂಬುದನ್ನು ನಾನು ಬಲ್ಲೆ. ಲಂಚ ತಪ್ಪಿಸಲು ಅವರು ಮಾಡುತ್ತಿರುವ ಪ್ರಯತ್ನ ಸಫಲವಾಗುತ್ತಿದೆಯೆ ? ಬಳಿಗಾರರು ಚಾಪೆಯ ಕೆಳಗೆ ನುಸುಳಿದರೆ, ಲಂಚಕೋರರು ರಂಗವಲ್ಲಿಯ ಕೆಳಗೆ ನುಸುಳುತ್ತಾರೆ.

ಕೋಟ್ಯಂತರ ರೂಪಾಯಿ ಮೊತ್ತದ ವಿದ್ಯುತ್ತು ಕಳ್ಳತನವಾಗುತ್ತಿರುವುದೇ ಈ ಗಾದೆಗೆ ಸಾಕ್ಷಿಯಾಗಿದೆ. ಒಂದು ಕಡೆ ಕೆರೆಯ ಒಡಕು ಮುಚ್ಚಿದರೆ, ಮತ್ತೊಂದು ಕಡೆ ದೊಡ್ಡ ಬಿರುಕು ಕಾಣಿಸಿಕೊಳ್ಳುತ್ತದೆ; ಒಂದೆಡೆ ದಾರಿ ಮುಚ್ಚಿದರೆ, ಮತ್ತೊಂದು ಕಡೆ ದಾರಿ ತೆಗೆಯುತ್ತಾರೆ. ಪಾಪ ಭಯ, ನೈತಿಕ ಪ್ರಜ್ಞೆಯಿಲ್ಲದವರು ಲಂಚಾರ್ಜನೆಗೆ ಹೊಸಹೊಸ ಕನ್ನಗಳನ್ನು ಕಂಡುಕೊಳ್ಳುತ್ತಾರೆ; ನಿಷ್ಕಳಂಕ ಮಂತ್ರಿಗಳಿಗೂ, ದರ್ಪಿಷ್ಠ ಅಧಿಕಾರಿಗಳಿಗೂ ಚಳ್ಳೆಹಣ್ಣು ತಿನ್ನಿಸುತ್ತಾರೆ. ಉದಾಹರಣೆಗೆ ಲೋಕೋಪಯೋಗಿ ಅಥವಾ ವಿದ್ಯುತ್ ಇಲಾಖೆಗಳಲ್ಲಿ ನಡೆಯುವ ಕರಾಮತ್ತನ್ನು ಗಮನಿಸಬಹುದು. ಅಧಿಕಾರಿಗಳು ಕಂತ್ರಾಟುದಾರರೂ ಹೊಂಚುಹಾಕಿ ಜಿಗಣೆಗಳಂತೆ ಸಮಾಜದ ಸತ್ವವನ್ನೆಲ್ಲ ಹೀರಿ ಬಿಡುತ್ತಾರೆ. ಅವರಿಬ್ಬರು ಜತೆಯಾದರೆ ಎಂಥ ಗೂಢಚಾರನೂ ಅವರ ಸಂಚನ್ನು ಭೇದಿಸಲಾರ. ಕಂತ್ರಾಟುದಾರರು ಪ್ರತಿಯೊಂದು ಕೆಲಸದ ಖರ್ಚು ವೆಚ್ಚಗಳ ಅಂದಾಜು ಪಟ್ಟಿಯನ್ನು ಸಲ್ಲಿಸುತ್ತಾರಷ್ಟೆ. ಅದರಲ್ಲಿ ಅಧಿಕಾರಿಗಳಿಗೆ ಸಂದಾಯವಾಗಬೇಕಾದ ಮಾಮೂಲನ್ನು ಸಹ ಸೇರಿಸಿರುತ್ತಾನೆ. ಟ್ರಾನ್ಸ್‌ಫಾರ್ಮರ್ ಸ್ಥಾಪನೆ

ಮಾಡುವ ಕೆಲಸಕ್ಕೆ ಅಂದಾಜು ಪಟ್ಟಿಯನ್ನು ಕರೆದಾಗ, ಒಬ್ಬ ಕಂತ್ರಾಟುದಾರ ತನ್ನ ಸೇವೆಗಾಗಿ ೨೫ ಸಾವಿರ ಪ್ರತಿಫಲ ಕೇಳುತ್ತಾನೆ. ಸಾಮಗ್ರಿಗಳ ಖರ್ಚು ಬೇರೆ. ಕೆಳಗಿನ ಕಚೇರಿಯಿಂದ ಒಂದೂವರೆ ಮೈಲಿ ದೂರದಲ್ಲಿರುವ ಮೇಲಣ ಕಚೇರಿಗೆ ಕಡತ ತಳ್ಳಬೇಕಾದರೆ ತಗಲುವ ಖರ್ಚು ೨೦ ಸಾವಿರ ರೂಪಾಯಿಯಂತೆ. ಈ ಅಂದಾಜುಪಟ್ಟಿಯ ವಿಶ್ಲೇಷಣೆ ಸದ್ಯಕ್ಕೆ ಅನಾವಶ್ಯಕ. ಅದು ಹೈಸ್ಕೂಲು ವಿದ್ಯಾರ್ಥಿಗೂ ಅರ್ಥವಾಗುತ್ತದೆ. ಆ ಕೆಲಸಕ್ಕೆ ಅವನು ಕೇಳಿದ ಒಟ್ಟು ಮೊತ್ತ ಸುಮಾರು ನಾಲ್ಕೂವರೆ ಲಕ್ಷ. ಅದೇ ಕೆಲಸಕ್ಕೆ ಗೊತ್ತಿರುವ ಕಂತ್ರಾಟುದಾರ ಕೇಳಿದ ಮೊತ್ತ ಸುಮಾರು ಮೂರು ಲಕ್ಷ. ಎರಡನೆಯ ಕಂತ್ರಾಟುದಾರನ ಲೆಕ್ಕ ಗೊತ್ತಾದ ಕೂಡಲೇ ಮೊದಲನೆಯವನು ಸಹ ತನ್ನ ಅಂದಾಜನ್ನಿಳಿಸುತ್ತಾನೆ. ಇದೆಲ್ಲ ಹಗಲು ದರೋಡೆಯನ್ನಬೇಕಾಗುತ್ತದೆ. ಕಂತ್ರಾಟುದಾರರನ್ನು ನಿಯಂತ್ರಿಸುವ ಅಧಿಕಾರವಿದ್ದಾಗ ಮಾತ್ರ ಶ್ರೀಬಳಿಗಾರರ ಸುತ್ತೋಲೆಗೆ ಬೆಲೆ ಬಂದೀತು.

ಹೊಸದೊಂದು ಕೈಗಾರಿಕೆಗೆ ಲೈಸೆನ್ಸ್ ಕೊಡುವ ವಿಷಯ ಸರ್ಕಾರದ ಮುಂದಿದೆಯೆಂದಿಟ್ಟು ಕೊಳ್ಳೋಣ. ಸರ್ಕಾರಕ್ಕೆ ತೆರಬೇಕಾದ ಶುಲ್ಕವನ್ನು ತಪ್ಪಿಸಿಕೊಳ್ಳಲು ಮಾಲೀಕರು ತಮ್ಮ ಬುದ್ಧಿಬಲವನ್ನೆಲ್ಲ ಖರ್ಚುಮಾಡುತ್ತಾರೆ. ಹತ್ತು ವರ್ಷದ ನಂತರ ಶುಲ್ಕವನ್ನು ಪಾವತಿ ಮಾಡು ವುದಾಗಿ ವಿನಂತಿಸಿಕೊಳ್ಳುತ್ತಾರೆ. ಆ ಸಮಯದಲ್ಲಿ ಕಾರ್ಖಾನೆ ಇರುತ್ತದೆಯೋ, ಪಾಪ ರಾಗುತ್ತದೆಯೊ, ಬ್ಯಾಂಕ್ ಸಾಲಕ್ಕೆ ಸಾಕಾಗುತ್ತದೆಯೊ, ಗೊತ್ತಿಲ್ಲ. ಆದರೆ ಸರ್ಕಾರದ ಆಡಳಿತಗಾರ, ಬುದ್ಧಿವಂತರಾದರೆ ವಿರೋಧಪಕ್ಷದ ನಾಯಕರ ಕೈಬೆಚ್ಚಗಾಗುತ್ತದೆ. ಮಾಲೀಕರು ಸಹ ಶಕ್ತಿಮೀರಿ ದುಡಿದು, ಸರ್ಕಾರವನ್ನು, ದೇಶವನ್ನು ವಂಚಿಸಿ, ಸುಖಲೋಲುಪ ಜೀವನವನ್ನು ನಡಸುತ್ತಾರೆ. ಇದೂ ಭ್ರಷ್ಟಾಚಾರದ ಒಂದು ರೂಪ.

ಪ್ರಜಾತಂತ್ರ ವ್ಯವಸ್ಥೆಯಲ್ಲಿ ಕೆಲಸಮಾಡಲು ಸರ್ಕಾರಕ್ಕೆ ಮುಕ್ತ ಅವಕಾಶವಿಲ್ಲ ಎಂದು ಸಾತ್ವಿಕರೂ ಪ್ರಾಮಾಣಿಕರೂ ಆದ ಆರೋಗ್ಯ ಸಚಿವ ಡಾ.ಎ.ಬಿ.ಮಾಲಕರೆಡ್ಡಿ ಹಾಸನದ ಸಮಾರಂಭವೊಂದರಲ್ಲಿ ನೊಂದು ನುಡಿಯುತ್ತಾರೆ (ಪ್ರಜಾವಾಣಿ:೨೫.೧೨.೨೦೦೦) 'ಸರಿಯಾಗಿ ಕಾರ್ಯನಿರ್ವಹಿಸದ ವೈದ್ಯರು ಅಥವಾ ಅಧಿಕಾರಿಗಳ ವಿರುದ್ಧ ಕ್ರಮ ತೆಗೆದು ಕೊಳ್ಳುತ್ತಿದ್ದಂತೆಯೇ ಅವರನ್ನು ಸೇವೆಯಲ್ಲಿ ಉಳಿಸಿ ಎಂದು ೧೦ ಮಂದಿ ಶಾಸಕರು ಸಂರಕ್ಷಣೆಗೆ ಧಾವಿಸುತ್ತಾರೆ. ... ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಜೀವಂತವಾಗಿಡಲು ನಾವು ಸಂದರ್ಭಕ್ಕೆ ತಕ್ಕಂತೆ ಹೊಂದಿಕೊಳ್ಳಬೇಕಾಗುತ್ತದೆ. ರಾಜಿಮಾಡಿಕೊಳ್ಳಬೇಕಾಗುತ್ತದೆ. ನಮ್ಮಿಂದ ಜಗತ್ತಿನ ಸುಧಾರಣೆ ಯಾಗುವುದಿಲ್ಲ ಎಂಬ ಸತ್ಯವನ್ನು ಅರಿತು ನಾನೊಬ್ಬನಾದರೂ ಸರಿಯಾಗಿದ್ದರೆ ಸಾಕು ಎಂಬ ಮನೋಭಾವನೆ ಬೆಳೆಸಿಕೊಂಡರೆ ಮಾನವವರ್ಗಕ್ಕೆ ಅದೇ ದೊಡ್ಡ ಕೊಡುಗೆಯಾಗುತ್ತದೆ' ಎಂಬ ಆ ಪ್ರಾಮಾಣಿಕ ಸಚಿವರ ಮಾತುಗಳಲ್ಲಿ ನಿರಾಶೆ ಅಸಹಾಯಕತೆಗಳು ಎದ್ದುಕಾಣುತ್ತವೆ. ಇದೂ ರಾಜಕೀಯ ಭ್ರಷ್ಟಾಚಾರದ ಜಾತಿಗೆ ಸೇರುತ್ತದೆ. ಸಿ.ಟಿ.ಸ್ಕ್ಯಾನಿಂಗ್ ಮೊದಲುಗೊಂಡು ಹಲವು ವೈದ್ಯಗೃಹಗಳು ರೋಗಿಗಳ ಪಾಲಿಗೆ ಶನಿಗ್ರಹಗಳಾಗಿವೆ ಎಂಬುದನ್ನು ಮರೆಯಲಾಗದು.

ಇತ್ತೀಚೆಗೆ ಮೈಸೂರು ವಿಶ್ವವಿದ್ಯಾನಿಲಯ ನಡೆಸಿದ ವೈದ್ಯ ಪರೀಕ್ಷೆಗಳಲ್ಲಿ ಸುಮಾರು ಇಪ್ಪತ್ತು ಫೇಲಾದ ವಿದ್ಯಾರ್ಥಿಗಳನ್ನು ಪಾಸುಮಾಡಿಸಲಾಯಿತು ಎಂಬ ಸುದ್ದಿ ಎಲ್ಲ ಪತ್ರಿಕೆಗಳಲ್ಲಿ ಪ್ರಸಿದ್ಧಿ ಯಾಯಿತು. ಅದಕ್ಕೆ ಮೌಲ್ಯಮಾಪನ ಮಾಡಿದ ವೈದ್ಯ ಪ್ರಾಧ್ಯಾಪಕರು ಕಾರಣರಲ್ಲ, ಬೇರೆಯ ದುಷ್ಟರು ಎಂದು ಹೇಳಲಾಯಿತು. ಹಿಂದಿನಿಂದಲೂ ಅಂಥ ದುಷ್ಟರಿಂದ ಇಂಥ ಅಪರಾಧಗಳು ನಡೆಯುತ್ತಿವೆ. ಇವು ಪರೀಕ್ಷಾಮೂಲದ ಭ್ರಷ್ಟಾಚಾರಗಳು.

ಕ್ರಿಕೆಟ್ ಮೋಸದಾಟವೆಂಬುದು ಇತ್ತೀಚೆಗೆ ಇಡೀ ಜಗತ್ತಿನಲ್ಲಿ ಸುದ್ದಿಯಾಗಿರುವ ವಿಷಯ.

ಕ್ರಿಕೆಟ್ ಇಂಗ್ಲೆಂಡಿನ ಸಸೆಕ್ಸ್ ಮತ್ತು ಕೆಂಟ್ ಪ್ರದೇಶದಲ್ಲಿ ಜನ್ಮತಾಳಿದ ಜಾನಪದ ಕ್ರೀಡೆ. ರೈತರು ಹಬ್ಬಹರಿದಿನಗಳಲ್ಲಿ ಆ ಆಟವನ್ನಾಡುತ್ತಿದ್ದರು. ನಮ್ಮಲ್ಲಿ ಲಗ್ಗೆ ಚೆಂಡಿದ್ದಹಾಗೆ. ಬರಬರುತ್ತ, ಅದು ಜೂಜಿನ ರೂಪವನ್ನು ತಾಳುತ್ತದೆ ; ಬಾಜಿ ಕಟ್ಟುವ ಪರಿಪಾಠವೂ ಬೆಳೆಯುತ್ತದೆ. ಆ ಆಟವನ್ನು ನೋಡಲು ಶ್ರೀಮಂತರು ನೆರೆಯುತ್ತಾರೆ, ದೊಡ್ಡ ದೊಡ್ಡ ಪ್ರಮಾಣದ ಬಾಜಿಯನ್ನು ಕಟ್ಟುತ್ತಾರೆ. ಕೊನೆ ಕೊನೆಗೆ ಕೆಲವು ಬದಲಾವಣೆಗಳೊಡನೆ, ಶ್ರೀಮಂತರೇ ಯುವಕರನ್ನು ಮುಂದೆ ಬಿಟ್ಟುಕೊಂಡು ಕ್ರೀಡಾಕೂಟಗಳನ್ನು ನಡಸುತ್ತಾರೆ; ನಗರಗಳಲ್ಲಿ ಅದು ಜನಪ್ರಿಯವಾಗುತ್ತದೆ.

ಆಂಗ್ಲರು ಇಂಡಿಯಾವನ್ನು ಗೆದ್ದುಕೊಂಡು, ಆಳ್ವಿಕೆ ನಡಸಲಾರಂಭಿಸಿದಾಗ, ಬ್ರಿಟಿಷ್ ಸೈನಿಕರು ಆ ಆಟವನ್ನು ಜರುಗಿಸುತ್ತಾರೆ. ಅದು ಭಾರತೀಯರನ್ನೂ ಆಕರ್ಷಿಸುತ್ತದೆ. ಮೊದ ಮೊದಲು ಮುಂಬೈ, ಚೆನ್ನೈ, ಕೋಲ್ಕತಗಳಲ್ಲಿ ಶುರುವಾದದ್ದು, ಇತರ ನಗರ ಪಟ್ಟಣಗಳಿಗೂ ಹರಡುತ್ತದೆ. ರಾಜರೇ ಅದಕ್ಕೆ ಆಶ್ರಯ ನೀಡುತ್ತಾರೆ. ವಿಜಯನಗರದ ರಾಜಕುಮಾರ ಸ್ಥಾಪಿಸಿದ ಕ್ರೀಡಾ ಸಂಸ್ಥೆಯ ಕೀರ್ತಿ ಇಂಗ್ಲೆಂಡಿನವರೆಗೆ ಹಬ್ಬುತ್ತದೆ. ಅದು ವಿದೇಶೀಯವಾದದ್ದಾದರೂ ಭಾರತೀಯರು ಅದಕ್ಕೆ ದುಂಬಾಲು ಬೀಳುತ್ತಿರುವುದು ಆಶ್ಚರ್ಯಕರ ಸಂಗತಿ. ಅದೀಗ ಘನತೆ ಗಾಂಭೀರ್ಯವುಳ್ಳ ಶಿಷ್ಟ ಕ್ರೀಡೆಯೆಂಬುದಂತು ನಿಜ. ಆದರೆ ಆಟಗಾರರು ಹಣದ ವ್ಯಾಮೋಹದಿಂದ ಮೋಸಮಾಡಲಣಿಯಾದದ್ದು ಅಕ್ಷಮ್ಯ ಸಂಗತಿ. ಮೋಸ ಎಲ್ಲಿದ್ದರೂ, ಕ್ರೀಡಾರಂಗದಲ್ಲಿಲ್ಲ ಎಂಬ ವಿಶ್ವಾಸವಿಂದು ಹುಸಿಯಾಗಿದೆ. ಇನ್ನು ಮೇಲೆ ಗೂಢಚಾರರ ದಳ ಈ ಆಟಗಾರರ ಮೇಲೂ ಕಣ್ಣಿಡಬೇಕಾದ ಸಂದರ್ಭವೊದಗಿದುದು ವಿಷಾದದ ವಿಷಯವಾಗಿದೆ.ಇದೂ ಭ್ರಷ್ಟಾಚಾರದ ಸಂತತಿಗೆ ಸೇರಿದ್ದೇ.

ಇಂತೆಯೇ ವರ್ಗಾವಣೆ,ನೇಮಕಾತಿ, ಹಲವು ಹೊಸ ಹೊಸ ಯೋಜನೆ ಹಾಗೂ ಕಾರ್ಯಕ್ರಮಗಳು ಭ್ರಷ್ಟಾಚಾರದ ಮೂಲಗಳೆನ್ನಬೇಕಾಗಿದೆ. ಶಾಸನ ಸಭೆಯ ಕಳೆದ ಅಧಿವೇಶನದ ಕಾಲದಲ್ಲಿ ಕವಿ-ಶಾಸಕ ಸಿದ್ದಲಿಂಗಯ್ಯನವರು ನೇಮಕಾತಿ ಸಂಸ್ಥೆಯೊಂದರ ಬಗ್ಗೆ ಹೌಹಾರಿದ ಸಂಗತಿಯನ್ನು ಜನ ಮರೆತಿರಲಾರರು. ಸ್ವಾತಂತ್ರ್ಯಾನಂತರ ದೇಶದಲ್ಲಿ ಭ್ರಷ್ಟಾಚಾರ ತಾಂಡವವಾಡುತ್ತಿದೆ, ಚಾರಿತ್ರ್ಯಹೀನತೆ ರಸಾತಲ ಮುಟ್ಟಿದೆ ಎಂದು ೨೪.೧೨.೨೦೦೦ನೆಯ ದಿನದಂದು ಕೇಂದ್ರದ ಗೃಹಮಂತ್ರಿ ಶ್ರೀ ಎಲ್.ಕೆ.ಅದ್ವಾನಿಯವರು ಜೈಂಟ್ಸ್ ಸಂಸ್ಥೆಯ ೨೬ನೆಯ ಸಮ್ಮೇಳನವನ್ನು ಉದ್ಘಾಟಿಸುತ್ತ ಹೇಳಿದ ಮಾತುಗಳಲ್ಲಿ ಸತ್ಯವಿರಲೇ ಬೇಕು. ಗೃಹಮಂತ್ರಿಗಲ್ಲದೆ ಇನ್ನಾರಿಗೆ ಸತ್ಯ ಗೊತ್ತಾದೀತು ? 'ಈಗ ರಾಜಕೀಯ ಎಂದರೆ ಅಧಿಕಾರ ಹಾಗೂ ಹಣ ಮಾಡುವುದಕ್ಕಾಗಿ ವ್ಯಕ್ತಿಗಳು ಪಡೆದುಕೊಳ್ಳುವ ಪಾಸ್‌ಪೋರ್ಟ್' (ಪ್ರಜಾವಾಣಿ: ೨೫.೧೨.೨೦೦೦) ಎಂದು ಘೋಷಿಸಿದ್ದಾರೆ. ಅವರ ಘೋಷಣೆಯಲ್ಲಿಯೂ ಅನಾಥ ಸ್ಥಿತಿ ಎದ್ದು ಕಾಣುತ್ತದೆ. ರಾಜ್ಯಗಳ ಮಂತ್ರಿಗಳು ತಮ್ಮ ಸ್ಥಾನವುಳಿಸಿಕೊಳ್ಳುವ ಸಲುವಾಗಿ ದೆಹಲಿಯ ರಾಜಕಾರಣಿಗಳಿಗೆ ಆಗಾಗ್ಗೆ ನೈವೇದ್ಯ ನೀಡುತ್ತಿರಬೇಕಂತೆ. ಅವರು ರಾಜ್ಯಗಳ ರಾಜಧಾನಿಗಳಿಗೆ ಬಂದು, ಮಂತ್ರಿಗಳ ಶಕ್ತಿಸಾಮರ್ಥ್ಯಗಳನ್ನು ಪರೀಕ್ಷಿಸುವ ನಾಚಿಕೆಗೇಡಿನ ಸಂಗತಿಗಳು ಹತ್ತು ಹಲವು ಗುಮಾನಿಗಳಿಗೆ ಕಾರಣವಾಗಿವೆಯೆಂದು ಸಾಮಾನ್ಯ ಜನರೂ ಆಡಿಕೊಳ್ಳುತ್ತಿದ್ದಾರೆ. ಇದನ್ನೆಲ್ಲ ನೋಡಿದಾಗ ದೆಹಲಿಯಲ್ಲಿರುವ ನೀತಿಗೆಟ್ಟ ರಾಜಕಾರಣಿಗಳೇ ಭ್ರಷ್ಟಾಚಾರಗಳಿಗೆ ಮೂಲ ಎಂಬ ಸಂಶಯ ಸರ್ವವ್ಯಾಪಕವಾಗಿದೆ.

ಭ್ರಷ್ಟಾಚಾರದ ಕೋಟ್ಯಂತರ ರೂಪಗಳನ್ನು ಅಡಗಿಸುವ ಕಾರಣಪುರುಷ ಯಾವಾಗ ಬರುತ್ತಾನೆಯೋ ಎಂದು ಭಾರತೀಯರು ದಾರಿಕಾಯುತ್ತಿದ್ದಾರೆ.

-ದೇಜಗೌ

ಗಾಂಧೀ ದರ್ಶನ

ಕೆ.ಕೆ. ರಾಘವೇಂದ್ರ ರಾವ್
ಬಿ೩, ಗಂಗೋತ್ರಿ ಅಪಾರ್ಟ್‌ಮೆಂಟ್ಸ್,
೧೩ನೆಯ ಅಡ್ಡರಸ್ತೆ, ಕಾಳಿದಾಸ ರಸ್ತೆ
ವಿ.ವಿ. ಮೊಹಲ್ಲ ಮೈಸೂರು-೫೭೦ ೦೦೨

೧೯೪೫-೪೬ರ ಚಳಿಗಾಲ. ಆಗ ನಾನು ಮದ್ರಾಸಿನ ಲಾ ಕಾಲೇಜಿನಲ್ಲಿ ವಕೀಲ ಪರೀಕ್ಷೆಗೆ ಓದುತ್ತಿದ್ದೆ. ಇದ್ದಕ್ಕಿದ್ದಂತೆಯೇ ಒಂದು ಸುದ್ದಿ ಬಂದು ನಮ್ಮ ವಿದ್ಯಾರ್ಥಿಗಳ ಶಾಂತ ಜೀವನದ ವಾತಾವರಣವನ್ನು ಸ್ವಲ್ಪ ಮಟ್ಟಿಗೆ ಅಲುಗಾಡಿಸಿತು. ''ಗಾಂಧಿಯವರು ಮದ್ರಾಸಿಗೆ ಬರುತ್ತಿದ್ದಾರೆ!'' ಆಗ ನನಗೆ ೧೮ ವರುಷ ವಯಸ್ಸು. ನಾನು ಗಾಂಧಿಯವರನ್ನು ನೋಡಿದ್ದದ್ದು ನನಗೆ ೫-೬ ವರ್ಷವಾಗಿದ್ದಾಗ ೧೯೩೦ನೆ ಇಸವಿಯಲ್ಲಿ ಅವರು ಮಡಿಕೇರಿಗೆ ಬಂದಿದ್ದಾಗ. ಮಡಿಕೇರಿಯ ರಾಜಾಸೀಟನಲ್ಲಿ ಅವರಿಗೆ ಸ್ವಾಗತ. ಅವರು ಬಂದ ಜಾಗದಲ್ಲಿ ಈಗಲೂ ಆಗ ಕಟ್ಟಿದ ಒಂದು ಸ್ಮಾರಕವಿದೆ. ನನ್ನ ತೀರ್ಥರೂಪರು ನನ್ನನ್ನು ಹೆಗಲಮೇಲಿ ಏರಿಸಿ ''ನೋಡು, ಆತನೇ ಗಾಂಧಿ'' ಎಂದು ಹೇಳಿದ್ದು ಈಗಲೂ ನನ್ನ ಕಿವಿಗಳಲ್ಲಿ ಕೇಳಿಸುತ್ತಿದೆ. ಅದು ಹಾಗಿರಲಿ. ಗಾಂಧೀಯವರು ಬಂದರೆ ಅವರನ್ನು ನೋಡಬೇಕೆಂಬ ಆಸೆ ನಮ್ಮೆಲ್ಲರಲ್ಲೂ. ಒಂದು ದಿನ ಸಾಯಂಕಾಲ ಐದು ಘಂಟೆಗೆ ಗಾಂಧಿಯವರ ಪ್ರಾರ್ಥನಾ ಸಭೆ. ನಮ್ಮ ಕಾಲೇಜು ೩ ಘಂಟೆಗೆ ಮುಗಿದರೂ ನಾನೂ ನನ್ನ ಇನ್ನೊಬ್ಬ ಮೈಸೂರಿನ ಮಿತ್ರರೂ ಆ ಪ್ರಾರ್ಥನಾ ಸಭೆಗೆ ೪ ಘಂಟೆಗೇ ಹೋಗಿ ಸೇರಿದೆವು. ಆದರೂ ನಮಗೆ ಸಿಕ್ಕಿದ ಜಾಗ ಗಾಂಧಿಯವರ ಪ್ರಾರ್ಥನಾ ಮಂಟಪದಿಂದ ಸುಮಾರು ೧೫೦ ಗಜಗಳ ದೂರದಲ್ಲಿ. ''ತಿಂತಿಣಿಯೆ ರಘುವರರ ಚರಿತೆಯಲಿ ಕಾಲಿಡಲು ತೆರಪಿಲ್ಲ'' ಎಂದು ಕುಮಾರವ್ಯಾಸ ಹೇಳಿದಂತೆ. ಅಂದಿನ ಪ್ರಾರ್ಥನಾ ಸಭೆಯಂತೂ ನಡೆಯಿತು. ಆದರೆ ನಮ್ಮಿಬ್ಬರಿಗೆ ಅಸಮಾಧಾನ. ಗಾಂಧಿಯವರನ್ನು ಹತ್ತಿರದಿಂದ ನೋಡಲಾಗಲಿಲ್ಲವಲ್ಲ ಎಂದು.

ಮಾರನೆಯ ದಿನ ಗಾಂಧಿಯವರು ನಮ್ಮ ಕಾಲೇಜಿನ ಬಳಿಯೇ ಇದ್ದ ಒಂದು ಶಾಲೆಗೆ ಬರುತ್ತಾರೆಂಬ ಸುದ್ದಿ ಬಂತು. ಹಿಂದಿನ ದಿನದಂತೆಯೇ ನಾನೂ, ನನ್ನ ಮಿತ್ರರೂ ಅಲ್ಲಿಗೆ ಹೋಗಿ ತಲುಪಿದೆವು. ಗಾಂಧಿಯವರು ಆಗಲೇ ಆ ಶಾಲೆಗೆ ಬಂದಿದ್ದರು. ಅವರು ತಿರುಗಿ ಹೋಗುವ ದಾರಿಯ ಉದ್ದಕ್ಕೂ ಜನರನ್ನು ಎರಡು ಕಡೆಯಲ್ಲಿಯೂ ಕುಳಿಸಿದ್ದರು. ಅಲ್ಲಿ ಹೆಚ್ಚಿನ ಪೊಲೀಸು ಉಸ್ತುವಾರಿ ಏನೂ ಇರಲಿಲ್ಲ - ಬರೇ ಸ್ವಯಂ ಸೇವಕರೇ. ತಮ್ಮ ಕೆಲಸವನ್ನು ಮುಗಿಸಿ ಗಾಂಧಿಯವರು ನಮ್ಮ ಎದುರಿಗೇ ಬಲಗೈಯಲ್ಲಿ ದೊಣ್ಣೆ ಎಡಗೈ ಸುಶೀಲನಯ್ಯರವರ ಹೆಗಲಿನ ಮೇಲೆ ಇರುವಂತೆ ನಡೆದುಕೊಂಡು ಹೋದರು - ಮುಖದಲ್ಲಿ ಕಾಂತಿ, ಎಣ್ಣೆಗೆಂಪು ಮೈಬಣ್ಣ, ತೀವ್ರವಾದ ವೇಗ - ''ಬೈಠೋ, ಬೈಠೋ'' ಎಂದು ಹೇಳುತ್ತಾ ಮುಂದಕ್ಕೆ ಹೋದರು. ಆಗ ನಮಗೆ ಸಂತೋಷ ಗಾಂಧಿಯವರನ್ನು ಹತ್ತಿರದಿಂದ ನೋಡಿದೆವಲ್ಲಾ ಎಂದು. ಆದರೆ ಮುಂದಿನ ದಿನ ನಡೆದದ್ದು ನನ್ನ ಜೀವನದ ಅತ್ಯಂತ ಸ್ವರ್ಣಮಯ ಅನುಭವ.

ಕಾಲೇಜು ತಲಪಿದೊಡನೇ ನನ್ನ ಸ್ನೇಹಿತರು ''ಇವತ್ತು ಅಪರಾಹ್ನ ೩ ಗಂಟೆಗೆ ಕಾಲೇಜಿನ ಎದುರಿಗಿರುವ ಭವನದಲ್ಲಿ ಗಾಂಧಿಯವರು ಕಲಾವಿದರ ಸಭೆಗೆ ಬರುತ್ತಿದ್ದಾರೆ. ಅಲ್ಲಿಗೆ ಹೋಗಲು ನನ್ನ ಹತ್ತಿರ ಮೂರು ಪ್ರವೇಶ ಪತ್ರಗಳಿವೆ - ಬರುತ್ತೀರಾ?'' ಎಂದರು. ನಮ್ಮ ಇನ್ನೊಬ್ಬರು ಮಿತ್ರರೂ ಸೇರಿ, ನಾವು ಮೂರು ಜನರೂ ನಮ್ಮ ಅಪರಾಹ್ನದ ಕ್ಲಾಸಿಗೆ ''ಚಕ್ಕರ್'' ಕೊಟ್ಟು, ಎರಡುಮುಕ್ಕಾಲು ಘಂಟೆಗೇ ಸಭೆಯ ಕಕ್ಷೆಯಲ್ಲಿ ಹೋಗಿ ಕುಳಿತೆವು - ನಮ್ಮ ಜಾಗ ಮುಂದಿನ ಜಾಗ. ೩ ಘಂಟೆಗೆ ಸರಿಯಾಗಿ

ಗಾಂಧಿಯವರು ಹಾಜರಾದರು. ಅವರು ಬಂದು ಕೂತೊಡನೆಯೇ ಪ್ರಾರ್ಥನಾ ಗೀತ. ಅದು ಮುಗಿದೊಡನೆಯೇ ಅಲ್ಲಿದ್ದ ಯಾರೋ ಒಬ್ಬರು ಕಲಾವಿದರು. ಕಾಗದದಲ್ಲಿ ಬರೆದಿದ್ದ ಗಾಂಧಿ ಯವರ ಮುಖಚಿತ್ರವನ್ನು ಅವರಿಗೆ ಒಪ್ಪಿಸಿದರು. ಮುಖ ಚಿತ್ರ ಪೆನ್ಸಿಲ್‌ನಲ್ಲಿ ಬರೆದಿದ್ದು. ಅದನ್ನು ನೋಡಿದ ಗಾಂಧಿಯವರು ಹೀಗೆಂದರು -''ನಾನು ಈತನನ್ನು ಎಲ್ಲೋ ನೋಡಿದ್ದಂತೆ ಇದೆಯಲ್ಲ!'' ಅಲ್ಲಿದ್ದವರೆಲ್ಲರಿಗೂ ನಗು. ''ನೋಡಲು ಸುಂದರನಾಗಿ ಕಾಣುತ್ತಾನೆ. ಅಲ್ಲವೆ?'' ಈಗ ನಗುವಿನ ಮಳೆ! ಗಾಂಧಿಯವರು ಹೇಳಿದರು '' ಈ ಮುಖಚಿತ್ರವನ್ನು ಹರಾಜು ಮಾಡುತ್ತೇನೆ. ಕೊಂಡುಕೊಳ್ಳಲು ಯಾರು ತಯಾರಾಗಿದ್ದೀರಿ?'' ನನ್ನ ಮೂರನೆ ಮಿತ್ರರು ಹೇಳಿದರು ''ಒಂದು ರೂಪಾಯಿ!'' ಗಾಂಧಿಯವರ ಮುಖ ನಿರಾಶೆಯನ್ನು ಪ್ರಕಟಿಸಿತು -''ಇಷ್ಟೇಯೇ ನನ್ನ ಯೋಗ್ಯತೆ?'' ನಗುಗಳ ಸುರಿಮಳೆ. ಇನ್ನೊಬ್ಬರು''ಹತ್ತು ರೂಪಾಯಿ!'' ಎಂದು ಕೂಗಿದರು. ಆಗ ಗಾಂಧಿಯವರ ಮುಖದಲ್ಲಿ ಮುಗುಳು ನಗೆ. ಮತ್ತೊಬ್ಬರು ''ಇಪ್ಪತ್ತು'' ಎಂದರು. ಹೀಗೆಯೇ ಹರಾಜು ಭರದಿಂದ ಸಾಗಿತು. ಕೊನೆಗೆ ೫೦೧ರೂಪಾಯಿಗೆ ಆ ಚಿತ್ರ ಹರಾಜಾಯಿತು. ತಲೆಯಲ್ಲಿ ಜುಟ್ಟು ಇಟ್ಟುಕೊಂಡಿದ್ದ ಒಬ್ಬ ರೈತನಂತೆ ಕಾಣುತ್ತಿದ್ದಂಥ ಸುಮಾರು ೪೦ವರ್ಷದ ಒಬ್ಬವ್ಯಕ್ತಿಯು ಬಂದು ೫೦೧ರೂಪಾಯಿಗಳನ್ನು ಇಂದಿನ ಲೆಕ್ಕದಲ್ಲಿ ರೂ ೧೦,೦೦೦ ಅಥವಾ ಹೆಚ್ಚು; ಕೊಟ್ಟು ಭಾವೋದ್ರೇಕದಿಂದ ಅಳುತ್ತಾ ಗಾಂಧಿಯವರ ಕಾಲಿಗೆ ಬಿದ್ದು ಆ ಚಿತ್ರವನ್ನು ತಬ್ಬಿಕೊಂಡು ಸಂತೋಷದಿಂದ ಕೆಳಗೆ ಇಳಿದ. ಇನ್ನು ಗಾಂಧಿಯವರು ಮಾತನಾಡಬೇಕು. ಅಷ್ಟರಲ್ಲಿ ಹೊರಗಡೆ ಧ್ವನಿವರ್ಧಕದಲ್ಲಿ ಕಿವಿ ಒಡೆಯುವಂತಹ ಗಾನ 'ಸಾರೇಜಹಾಂಸೆ ಅಚ್ಚಾ, ಹಿಂದೂಸ್ಥಾನ್ ಹಮಾರಾ' ಅಲ್ಲಿದ್ದ ಕಾರ್ಯಕರ್ತರು ''ಅದನ್ನು ನಿಲ್ಲಿಸಿ, ಅದನ್ನು ನಿಲ್ಲಿಸಿ'' ಎಂದು ಗಟ್ಟಿಯಾಗಿ ಕೂಗಿದರು. ಎಲ್ಲಾ ಕಾರ್ಯಕಲಾಪಗಳೂ ಹಿಂದಿಯಲ್ಲೇ ನಡೆದದ್ದರಿಂದ ಗಾಂಧಿಯವರಿಗೆ ಎಲ್ಲಾ ಅರ್ಥವಾಗುತ್ತಿತ್ತು. ಕೂಡಲೇ ಅವರು ಗಟ್ಟಿಯಾಗಿ, ಎಲ್ಲರಿಗೂ ಕೇಳುವಂತೆ ಹೇಳಿದರು.'' ಈ ಧ್ವನಿಯನ್ನು (ಅಂದರೆ ಭಾರತದ ಧ್ವನಿಯನ್ನು) ಯಾರಿಂದಲೂ ನಿಲ್ಲಿಸಲು ಅಸಾಧ್ಯ''.



ಕೌತುಕಗಳ ಆಗರ ವಿಶ್ವ

ಜಿ.ಟಿ.ನಾರಾಯಣರಾವ್
೮ ಅತ್ರಿ, ಕಾಮಾಕ್ಷಿ ಆಸ್ಪತ್ರೆ ರಸ್ತೆ
ಸರಸ್ವತೀಪುರ
ಮೈಸೂರು ೫೭೦ ೦೦೯

ಅಣು ರೇಣು ತೃಣ ಕಾಷ್ಠದಿಂದ ತೊಡಗಿ ರವಿ ಚಂದ್ರ ಗ್ರಹತಾರೆಗಳವರೆಗೆ ಸಮಸ್ತವನ್ನೂ ಒಳಗೊಂಡಿರುವ ಮಹಾಮನೆಯೇ ವಿಶ್ವ. ಇಂದು ತಿಳಿದಿರುವಂತೆ ಇದರ ಭೂತವೃತ್ತಾಂತವಿದು: ಸುಮಾರು ೧೫೦೦ ಕೋಟಿ ವರ್ಷಗಳ ಹಿಂದಿನ ಕಥೆ; ಇಂದಿನ ವಿಸ್ತೃತ ವಿಶ್ವ ಅಂದು ಅಂಡವಿಶ್ವವೆಂಬ ಏಕಘಟಕವಾಗಿ ಗಿಡಿದುಕೊಂಡಿತ್ತು; ಅದು ಪ್ರೋಟಾನ್, ನ್ಯೂಟ್ರಾನ್, ಎಲೆಕ್ಟ್ರಾನ್ ಮುಂತಾದ ಮೂಲಕಣಗಳ ಗಾಢರಾಶಿ. ತನ್ನ ಭಾರಕ್ಕೆ ತಾನೇ ಮಣಿದ ಅದರ ತಿರುಳಿನಲ್ಲಿ ಅಗಾಧ ಸಂಮರ್ದ ಉದ್ಭವಿಸಿ ರೌರವದ ಅತಿಶಾಖ ಸಂಜನಿಸಿತು; ಆಗ ಸಂಭವಿಸಿತೊಂದು ಮಹಾವಿಸ್ಫೋಟ; ಈ ಆದಿ ಘಟನೆಗೆ ಮಹಾ ಬಾಜಣೆ (Big Bang) ಎಂದು ಹೆಸರು. ದೇಶ-ಕಾಲ-ದ್ರವ್ಯಗಳ ಆರಂಭವೇ ಮಹಾಬಾಜಣೆ.

ಇದರ ಕಾರಣವಾಗಿ ಅಂಡವಿಶ್ವವು ಅಸಂಖ್ಯ ಅಸಮ ಗಾತ್ರ ಮತ್ತು ರಾಶಿಗಳ ಖಂಡಗಳಾಗಿ ಛಿನ್ನ ವಿಚ್ಛಿನ್ನವಾಯಿತು. ಇವುಗಳಿಗೆ ಏಕಕಾಲದಲ್ಲಿ ದ್ವಿವಿಧ ಚಲನೆಗಳು ಒದಗಿದುವು: ಆವರ್ತನೆ ಮತ್ತು ಸರಳಚಲನೆ. ಮೊದಲನೆಯದು, ತನ್ನ ಸುತ್ತ ತಾನೇ ಬುಗರಿಯಂತೆ ಗಿರಗಿರನೆ ತಿರುಗುವುದು; ಎರಡನೆಯದು, ವಿಸ್ಫೋಟಕೇಂದ್ರದಿಂದ ನೇರ ಗೆರೆಗಳ ಮೇಲೆ ಅಪಾರ ವೇಗದಲ್ಲಿ ಧಾವಿಸುವುದು. ಮೂರನೆಯದೂ ಒಂದು ಚಲನೆ ಇದೆ. ದ್ರವ್ಯರಾಶಿಯ ಅಂತಃಸ್ಥ ಗುಣ ಗುರುತ್ವ, ಎಲ್ಲವನ್ನೂ ಆಯಾ ವಸ್ತುವಿನ ಕೇಂದ್ರದೆಡೆಗೆ ಸೆಳೆಯುವ ಆಕರ್ಷಣ ಬಲವಿದು. ಅಧಿಕ ರಾಶಿಯದಕ್ಕೆ ಅಧಿಕ ಬಲ. ಎರಡು ಅಸಮ ರಾಶಿಗಳು ಪರಸ್ಪರ ಆಕರ್ಷಿಸುವಾಗ ಕಡಿಮೆ ರಾಶಿಯದಕ್ಕೆ ಹಿರಿಯದರ ಸುತ್ತ ಪರಿಭ್ರಮಿಸುತ್ತಿರುವ ಚಲನೆ ಪ್ರಾಪ್ತವಾಗುತ್ತದೆ. ಉದಾಹರಣೆಗೆ ಭೂಮಿಯು ಸೂರ್ಯನ ಸುತ್ತ ಪರಿಭ್ರಮಿಸುತ್ತಿರುವ ಚಲನೆ.

ಅಂಡವಿಶ್ವದ ಘಟಕ ಖಂಡಗಳಿಗೆ ನೀಹಾರಿಕೆಗಳೆಂದು ಹೆಸರು. ಮೂಲಕಣಗಳ ಹಾಗೂ ಸರಳ ಪರಮಾಣು ಬೀಜಗಳ ವಿಸ್ತೃತ ವ್ಯಾಪ್ತಿಯೇ ನೀಹಾರಿಕೆ. ನಿರಂತರ ಘೂರ್ಣನ ಪ್ರಕ್ರಿಯೆಗೆ, ಅಂದರೆ ತಿರುಗಣಿ ಮಡು ಸನ್ನಿವೇಶಕ್ಕೆ ಈಡಾಗುವ ನೀಹಾರಿಕೆಯ ಒಡಲಿನಲ್ಲಿ ಅಸಮಗಾತ್ರರಾಶಿಗಳ ಅಸಂಖ್ಯ ಮುದ್ದೆಗಳು ಕ್ರಮೇಣ ಮೈದಳೆಯುತ್ತವೆ: ಮೊಸರು ಕಡೆಯುವಾಗ ಬೆಣ್ಣೆ ತುಣುಕುಗಳು ಹಣುಕುವಂತೆ, ಅಥವಾ ಕಾರ್ಮೋಡದೊಳಗೆ ಆಲಿಕಲ್ಲುಗಳು ಘನಿಸುವಂತೆ.

ಇಂಥ ಒಂದೊಂದು ಮುದ್ದೆಯೂ ಒಂದೊಂದು ಗುರುತ್ವ ದ್ವೀಪ — ಎಲ್ಲವನ್ನೂ ತನ್ನತ್ತ ಆಕರ್ಷಿಸುವ ಜೊತೆಯಲ್ಲೇ ಇತರ ಎಲ್ಲವುಗಳತ್ತ ಆಕರ್ಷಿಸಲ್ಪಡುವ ಗತಿಶೀಲ ಗೋಳ. ಕೆಲವು ಮುದ್ದೆಗಳು ಒಗ್ಗೂಡಿ ಹಿರಿಮುದ್ದೆಗಳಾಗುತ್ತವೆ. ಇವು ಮಾತ್ರ ನೀಹಾರಿಕೆಯಿಂದ ಇನ್ನಷ್ಟು ದ್ರವ್ಯ ಹೀರಿ ಬೆಳೆಯುತವೆ, ಆಸುಪಾಸಿನ ಕಿರಿಮುದ್ದೆಗಳನ್ನು ಬರಸೆಳೆದು ನುಂಗಿ ಮಹಾರಾಶಿಯವಾಗಿ ಮೆರೆಯುತ್ತವೆ. ಒಟ್ಟಾರೆ ಸಾಗರದಲ್ಲಿಯ ಹಿರಿಮೀನುಗಳಿಂದ ಕಿರಿಮೀನುಗಳ ಆಪೋಶನ ಕ್ರಿಯೆ!

ಸಾಕಷ್ಟು ದ್ರವ್ಯಸಂಚಿತವಾಗಿರುವ ಮುದ್ದೆಯೊಂದರ ವಿಕಾಸಪಥವನ್ನು ಈಗ ಗಮನಿಸೋಣ. ಅಂಡವಿಶ್ವದ ತೆರದಲ್ಲಿ ಇದು ಕೂಡ ಸ್ವಂತಭಾರದಿಂದ ಕುಸಿದು ಕೇಂದ್ರಾಭಿಮುಖವಾಗಿ ಸಂಕೋಚಿಸತೊಡಗುವುದು. ಆಗ ಇದರ ಆಂತರಿಕ ಸಂಮರ್ದ ಏರುತ್ತದೆ, ಜೊತೆಯಲ್ಲೇ ಉಷ್ಣತೆ ಕೂಡ. ಒಂದು ಸಂಧಿಸ್ಥ ಹಂತ ದಾಟುವಾಗ ಮುದ್ದೆಯ ತಿರುಳಿನಲ್ಲಿ ಬೈಜಿಕ ಕ್ರಿಯೆಗಳು ಸಿಡಿಯುತ್ತವೆ — ಜನಪ್ರಿಯ ಭಾಷೆ

ಯಲ್ಲಿ: ಹೈಡ್ರೊಜನ್ ಬಾಂಬುಗಳು ಪುಂಖಾನುಪುಂಖವಾಗಿ ಆಸ್ಫೋಟಿಸ ತೊಡಗುತ್ತವೆ. ವಿಜ್ಞಾನದ ಪರಿಭಾಷೆಯಲ್ಲಿ ಹೇಳುವುದಾದರೆ ಆಗ ಹೈಡ್ರೊಜನ್ ಬೀಜ ಗಳು ಪರಸ್ಪರ ಬೆಸೆಯುತ್ತ ಹೀಲಿಯಮ್ ಬೀಜಗಳು ಮೊಳೆಯುತ್ತವೆ. ಈ ಪ್ರಕ್ರಿಯೆ ಯಲ್ಲಿ ಸಂಭವಿಸುವ ರಾಶಿನಷ್ಟವು ವಿಕಿರಣ ವಾಗಿ ಹೊರ ಚಿಮ್ಮುತ್ತದೆ. ನಮಗೆ ಸುಪರಿಚಿತ ವಾಗಿರುವ ಬೆಳಕು, ಶಾಖ, ರೇಡಿಯೊ ಅಲೆಗಳು, ಎಕ್ಸ್ ಕಿರಣಗಳು ಮುಂತಾದವು ವಿಕಿರಣದ ವಿವಿಧ ಬಗೆಗಳು.

ಮುದ್ದೆ ಈ ಹಂತ ತಲಪಿದಾಗ, ಅಂದರೆ ವಿಕಿರಣವನ್ನು ಪ್ರಸರಿಸುವ ಮಜಲು ಏರಿ ದಾಗ, ಅದನ್ನು ನಕ್ಷತ್ರ ಎನ್ನುತ್ತೇವೆ. ಸಾರಾಂಶ ವಿಷ್ಟು: ನಕ್ಷತ್ರಕ್ಕೆ ಅದರ ರಾಶಿಯ ಕಾರಣ ವಾಗಿ ಗುರುತ್ವಬಲ ಒದಗುತ್ತದೆ; ಇದು ಸಂಕೋಚನಶೀಲ ಬಲ; ಗರ್ಭ ದಲ್ಲಿಯ ಬೈಜಿಕ ಕ್ರಿಯೆಗಳ ಕಾರಣವಾಗಿ ವಿಕಿರಣ ಉತ್ಪಾದನೆ ಆಗುತ್ತದೆ; ಇದು ವ್ಯಾಕೋಚನ ಶೀಲ ಶಕ್ತಿ. ಈ ಪರಸ್ಪರ ವಿರುದ್ಧ ಮತ್ತು ಅಸಮ ಬಲಗಳು ಕ್ರಮೇಣ ಸಮಸ್ಥಿತಿ ಐದುತ್ತವೆ. ಉದಾಹರಣೆಗೆ ನಮ್ಮ ಸೂರ್ಯ.

ಸಾಂಕೇತಿಕವಾಗಿ ನಕ್ಷತ್ರವನ್ನು ಹೀಗೆ ವಿವರಿಸಬಹುದು: ಕೇಂದ್ರದಲ್ಲಿಯ ಬೈಜಿಕ ಕುಲುಮೆಗೆ ಒಡಲಿನಿಂದ ಇಂಧನ ಊಡಿ ವಿಕಿರಣವನ್ನೂ ಭಸ್ಮವನ್ನೂ ಉತ್ಪಾದಿಸುವ, ವಿಕಿರಣವನ್ನು ವಿಶ್ವದ ಅಗಾಧ ವ್ಯಾಪ್ತಿಗೆ ಚೆಲ್ಲುವ ಆದರೆ ಭಸ್ಮವನ್ನು ತನ್ನಲ್ಲೇ ಇಟ್ಟುಕೊಳ್ಳುವ ಕರ್ಮಾಗಾರವೇ ವಿಶ್ವ. ಇದು ಕರ್ತಾರನ ಕಮ್ಮಟವಯ್ಯಾ, ಇಲ್ಲಿ ಅಂದರೆ ಭೂಮಿಯಲ್ಲಿ ಸಲ್ಲುವ ನಿಯಮಗಳು ಅಲ್ಲಿಯೂ ಅಂದರೆ ವಿಶ್ವದಲ್ಲಿಯೂ ಸಲ್ಲುವು ವಯ್ಯಾ! ಆದ್ದರಿಂದಲೇ ನರಕೀಟಕ್ಕೆ ನಭೋಂಗಣದ ವಿಸ್ತಾರ ವೈವಿಧ್ಯಗಳನ್ನು ತುಸುವಾದರೂ ಅರಿಯಲು ಸಾಧ್ಯವಾಗಿರು ವುದು.

ನಕ್ಷತ್ರ ವಿಕಾಸದ ಮೊದಲ ಹಂತದಲ್ಲಿ ಕುಲುಮೆಗೆ ಇಂಧನ ಹೈಡ್ರೊಜನ್. ಎಂದೇ ಇದನ್ನು ಹೈಡ್ರೊಜನ್ ನಕ್ಷತ್ರವೆಂದು ಉಲ್ಲೇಖಿ ಸುವುದುಂಟು. ಇದರಲ್ಲಿಯ ಇಂಧನ ಸಂಗ್ರಹ ಕ್ಷಯಿಸಿದಂತೆ ವಿಕಿರಣದ ತೀವ್ರತೆ ತಾರಾತಿ ತಾರಕ್ಕೆ ಜಿಗಿಯುತ್ತದೆ. ಆದ್ದರಿಂದ ಕುಲುಮೆ ಅಧಿಕಾಧಿಕ ಇಂಧನ ಬೇಡುತ್ತದೆ. ಆದರೆ ಹೈಡ್ರೊಜನ್ ಉಗ್ರಾಣ ಬರಿದೋ ಬರಿದು. ಇತ್ತ ಹೀಲಿಯಮ್ ಸಂಗ್ರಹ ಹಿರಿದೋ ಹಿರಿದು. ಅಂದರೆ ಹೈಡ್ರೊಜನ್ ತಾರೆಯ ಅವಸಾನ ಕ್ಷಣ ಸನ್ನಿಹಿತವಾಗುತ್ತಿದೆ ಎಂದರ್ಥ.

ಆಗ ಗುರುತ್ವದ ಸಂಕೋಚನಶೀಲ ಬಲಕ್ಕಿಂತ ವಿಕಿರಣದ ವ್ಯಾಕೋಚನಶೀಲ ಬಲ ಅತಿಯಾಗಿ ವರ್ಧಿಸಿರುತ್ತದೆ. ನಕ್ಷತ್ರಗಾತ್ರ ಕ್ರಮೇಣ ಹಿಗ್ಗುತ್ತದೆ. ಮತ್ತೆ ಗುರುತ್ವ-ವಿಕಿರಣ ಸಮಸ್ಥಿತಿ ಒದಗುವ ತನಕವೂ ಈ ವ್ಯಾಕೋಚನ ಮುಂದುವರಿಯುತ್ತದೆ. ಈ ಸ್ಥಿತಿಯಲ್ಲಿ ಅದರದು ದೈತ್ಯಗಾತ್ರ, ನಿಮ್ನ ಉಷ್ಣತೆ ಮತ್ತು ಕೆಂಪು ಬಣ್ಣ. ಎಂದೇ ಅದಕ್ಕೆ ರಕ್ತದೈತ್ಯವೆಂದು ಹೆಸರು, Red giant. ಆಕಾಶದಲ್ಲಿ ನಮಗೆ ಕಾಣುವ ರಕ್ತದೈತ್ಯಗಳೆಂದರೆ ರೋಹಿಣಿ, ಆರ್ದ್ರಾ ಮತ್ತು ಜ್ಯೇಷ್ಠಾ. ಇಂಥ ಒಂದನ್ನು ಸೂರ್ಯನ ನೆಲೆಯಲ್ಲಿ ಪ್ರತಿಷ್ಠಾಪಿಸಿದರೆ ನಾವೆಲ್ಲರೂ ಅದರ ಮಹೋದರದೊಳಗೆ ಚಿರನಿದ್ರಾಸುಖಿಗಳಾಗುವುದು ಖಾತ್ರಿ!

ರಕ್ತ ದೈತ್ಯ ಎಂದರೆ ಹೀಲಿಯಮ್ ನಕ್ಷತ್ರ. ಇದರಲ್ಲಿ ಪುನಃ ಗುರುತ್ವದ ಸಂಕೋಚನಕ್ರಿಯೆ ಆರಂಭವಾಗುತ್ತದೆ. ಈಗ ಬೈಜಿಕ ಕುಲುಮೆಗೆ ಗ್ರಾಸ ಹೀಲಿಯಮ್, ದಹನಫಲ ಹಿಂದಿನಂತೆ ವಿಕಿರಣ, ಭಸ್ಮ ಕಾರ್ಬನ್. ಇಂಥ ಒಂದು ತಾರೆಯ ಅಸ್ತಿತ್ವ ೧೯೧೫ರ ವೇಳೆಗೆ ಪರೋಕ್ಷ ವಿಧಾನಗಳಿಂದ ದೃಢಪಟ್ಟಿತು. ಬರಿಗಣ್ಣಿಗೆ ಇದು ಅಗೋಚರ. ಇಂಥಲ್ಲಿ ಸಿದ್ಧಾಂತದ ಭದ್ರ ಬುನಾದಿ ಇದ್ದ ಹೊರತು ದೂರದರ್ಶಕ ವೀಕ್ಷಣೆಯಾದರೂ ಲಕ್ಷ್ಯರಹಿತ ಶೋಧನೆ ಆಗುತ್ತದೆ. ಈ ಅಗೋಚರ ನಕ್ಷತ್ರವೊಂದು

ವಿಚಿತ್ರ ಕಾಯ: ತೀವ್ರ ತಪ್ತ, ಕುಬ್ಜಗಾತ್ರ ಮತ್ತು ಪ್ರಬಲ ಗುರುತ್ವ ಇದರ ಪ್ರಮುಖ ಲಕ್ಷಣಗಳು. ಎಂದೇ ಇದರ ಹೆಸರು ಶ್ವೇತಕುಬ್ಜ, White Dwarf. ತರುವಾಯದ ದಿನಗಳಲ್ಲಿ ರಕ್ತ ದೈತ್ಯಗಳ, ಶ್ವೇತ ಕುಬ್ಜಗಳ ಮತ್ತು ಇತರ ನಕ್ಷತ್ರ—ವೈಚಿತ್ರ್ಯಗಳ ಹುಲುಸು ಕೊಯ್ಲು ಖಗೋಳ ವಿಜ್ಞಾನಿಗಳ ಕಣಜ ಸೇರಿತು.

ಅಲ್ಲಿಗೆ ನಕ್ಷತ್ರ ವಿಕಾಸದ ಮೊದಲ ಮೂರು ಮಜಲುಗಳು ಪತ್ತೆ ಆದಂತಾಯಿತು. ಇವುಗಳ ಕೂಲಂಕಷ ಅಧ್ಯಯನ ಮಾಡಿದ ಸಿದ್ಧಾಂತ ಚತುರರು, ೧೯೨೦-೩೦ರ ಅವಧಿಯಲ್ಲಿ, ಈ ಮುಂದಿನ ಎರಡು ರಹಸ್ಯಗಳನ್ನು ಭೇದಿಸಿದರು: ಒಂದು, ನಕ್ಷತ್ರದ ಶಕ್ತಿರಹಸ್ಯ ಅದರಲ್ಲಿ ನಿರಂತರವಾಗಿ ಜರಗುವ ಸಂಲಯನ ಕ್ರಿಯೆಗಳಲ್ಲಿ ಅಡಗಿದೆ, ಮತ್ತು ಎರಡು, ಶ್ವೇತಕುಬ್ಜ ಹಂತ ತಲಪಿದ ನಕ್ಷತ್ರ ಮುಂದೆ ಶಾಶ್ವತವಾಗಿ ಅದೇ ಸ್ಥಿತಿಯಲ್ಲಿರುತ್ತದೆ.

ಶ್ವೇತಕುಬ್ಜದ ಶಾಶ್ವತತೆ ಎಂಬ ಪರಿಕಲ್ಪನೆಯನ್ನು ಭಾರತಸಂಜಾತ ಸುಬ್ರಹ್ಮಣ್ಯನ್ ಚಂದ್ರಶೇಖರ್ ತಿರಸ್ಕರಿಸಿದರು — ೧೯೩೦ರಲ್ಲಿ. ಆಗ ಇವರ ವಯಸ್ಸು ಕೇವಲ ಇಪ್ಪತ್ತು. ಈ ಅಸೀಮ ಸೌಂದರ್ಯಾರಾಧಕರಿಗೆ ಇದೊಂದು ವಿಕಾರ ವಿಕೃತ ವಿಕಲ್ಪನೆ ಎನಿಸಿತ್ತು. ಸಮಗ್ರ ಸಮಸ್ಯೆಯನ್ನು ಇವರು ಆಮೂಲಾಗ್ರ ನಿಖರ ಗಣಿತ ಅಧ್ಯಯನಕ್ಕೆ ಒಡ್ಡಿ ನಕ್ಷತ್ರಲೋಕದ ಅನ್ವೇಷಣೆಗೆ ನವಮಾರ್ಗವನ್ನೇ ಪ್ರವರ್ತಿಸಿದರು. ಇವರ ಸೈದ್ಧಾಂತಿಕ ತೀರ್ಮಾನದ ಪ್ರಕಾರ ಶ್ವೇತಕುಬ್ಜ ಅಥವಾ ಕಾರ್ಬನ್ ತಾರಾಹಂತ ತಲಪಿದ ನಕ್ಷತ್ರ ಒಂದು ಕವಲು ದಾರಿಯ ಮುಂದೆ ನಿಂತಿರುತ್ತದೆ: ಇದರ ರಾಶಿ ಸೌರರಾಶಿಯ ೧.೪ ಮಡಿ ಮಿತಿಯೊಳಗಿದ್ದರೆ ಮಾತ್ರ ಇದು ಶ್ವೇತಕುಬ್ಜವಾಗಿಯೇ ಉಳಿದಿರುವುದು, ಕ್ರಮೇಣ ವಿಕಿರಣನಷ್ಟದಿಂದ ನಂದಿ ಕೊನೆಗಾಣುತ್ತದೆ. ಈ ಮಿತಿಯನ್ನು ಮೀರಿದ ಕಾರ್ಬನ್ ನಕ್ಷತ್ರದ ಭವಿಷ್ಯವೇನು?

ತಾರಾಯಣದ ಈ ಗಡಿಗೆ(೧.೪ ಮಡಿ ಸೌರರಾಶಿ-) ಚಂದ್ರಶೇಖರ್ ಪರಿಮಿತಿ ಎಂದು ಹೆಸರು. ಇದು ನಕ್ಷತ್ರಲೋಕದ ಲಕ್ಷ್ಮಣರೇಖೆ. ಇದರ ಆವಿಷ್ಕಾರವಾದದ್ದು ೧೯೩೦ರ ಸುಮಾರಿಗೆ. ತರುವಾಯದ ವರ್ಷಗಳಲ್ಲಿ ಚಂದ್ರಶೇಖರರನ್ನೂ ಒಳಗೊಂಡಂತೆ ಹಲವಾರು ಮುಂಚೂಣಿ ಸಂಶೋಧಕರು, ಚಂದ್ರಶೇಖರ್ ಪರಿಮಿತಿಯನ್ನು ಮೀರುವ ಕಾರ್ಬನ್ ತಾರೆಗಳ ವಿಕಾಸ ಹಂತಗಳನ್ನು ಸೈದ್ಧಾಂತಿಕವಾಗಿ ಅನ್ವೇಷಿಸಿದರು.

೧೯೬೦-೭೦ರ ವೇಳೆಗೆ ಈ ಸಿದ್ಧಾಂತ-ಮಾರ್ಗ ಸಾಕಷ್ಟು ನೇರ್ಪುಗೊಂಡಿತ್ತು. ಇದರ ಪ್ರಕಾರ ಇಂಥ ಒಂದು ಕಾರ್ಬನ್ ನಕ್ಷತ್ರ, ಸ್ಥೂಲವಾಗಿ ಕಾರ್ಬನ್-ಆಕ್ಸಿಜನ್, ಆಕ್ಸಿಜನ್-ನೀಯಾನ್, ಸಿಲಿಕಾನ್-ಸಲ್ಫರ್ ಹಂತಗಳನ್ನು ದಾಟಿ ಕಬ್ಬಿಣ ನಕ್ಷತ್ರವಾಗುತ್ತದೆ. ಈ ಯಾವುದೇ ಘಟ್ಟದಲ್ಲಿ ಅದು ಸಾಕಷ್ಟು ದ್ರವ್ಯ ಸಂಚಿಯ ಇಲ್ಲದೇ ಭಂಡಾರ ಬರಿದಾಗಿ ಬರಖಾಸ್ತಾಗಬಹುದು. ಹಾಗಲ್ಲದೇ ಅದು ಜನಿಸುವಾಗಲೇ ಬೃಹನ್ನಕ್ಷತ್ರವಾಗಿದ್ದರೆ, ಉದಾಹರಣೆಗೆ ಸೌರರಾಶಿಯ ೧೦೦ ಮಡಿಯದಾಗಿದ್ದರೆ, ಕಬ್ಬಿಣ ಹಂತದಲ್ಲಿ ಗುರುತ್ವದ ಮರುಕಹೀನ ತಿರುಚಿ ಅಮುಂಕೆಗೆ ತೀವ್ರ ಪ್ರತಿರೋಧ ಒಡ್ಡುತ್ತದೆ. ಈ ಹಿಂದಿನ ಮಜಲುಗಳಲ್ಲಿ ನಡೆದುದಕ್ಕೆ ವ್ಯತಿರಿಕ್ತವಾಗಿ ಕಬ್ಬಿಣ ಬೀಜಗಳು ಸಂಲಯನಕ್ರಿಯೆಗೆ ಒಳಗಾಗದೇ ಮುಗಿಬಿದ್ದು ಪ್ರಳಯಾಂತಕ ಆಘಾತ ತರಂಗಗಳನ್ನು ಉತ್ಪಾದಿಸುತ್ತವೆ. ನಕ್ಷತ್ರ ಗರ್ಭದಿಂದ ಹೊಮ್ಮುವ ಇವು ತಾರೆಯ ಪದರಗಳನ್ನು ಭೇದಿಸುತ್ತ ಹೊರಧಾವಿಸಿದಂತೆ ನಕ್ಷತ್ರ ಆಸ್ಫೋಟಿಸುತ್ತದೆ. ಈ ವಿಚಿತ್ರ ವಿದ್ಯಮಾನದ ಹೆಸರು ಸೂಪರ್ನೋವಾ. ನೋವಾಸ್ಫೋಟನೆ ಎಂಬ ಬೇರೊಂದು ಘಟನೆಯೂ ಇದೆ. ಆದರೆ ಇದು ಶ್ವೇತಕುಬ್ಜದ ಅವಸಾನ ದಿನಗಳಲ್ಲಿ ಕೆಲವು ವಿರಳ ಸನ್ನಿವೇಶಗಳಲ್ಲಿ ಮಾತ್ರ ಸಂಭವಿಸುತ್ತದೆ.

ಬೃಹನ್ನಕ್ಷತ್ರದ ಅಂತಿಮ ಹರಾಕಿರಿಯೇ ಸೂಪರ್ನೋವಾ. ಇದರ ಅನಂತರವೂ ಶೇಷ ಪೂರಣವೇನಾದರೂ ಉಳಿದಿದ್ದರೆ ಅದು ಅತಿ ಗುಪ್ತ ಅತಿ ಸಾಂದ್ರ ಅತಿ ಭಾರದ ನ್ಯೂಟ್ರಾನ್ ಗುಂಡು. ಅತಿಶಯ ರಭಸದಿಂದ ಆವರ್ತಿಸುವ ಈ ಗಂಡುಗುಂಡು ಕ್ಷಿಪ್ರಗತಿಯಲ್ಲಿ ವಿಕಿರಣ ಸ್ಪಂದಗಳನ್ನು, pulses, ಇದೊಂದು ವ್ಯೋಮ ದೀಪ ಸ್ತಂಭವೋ ಎಂಬಂತೆ, ಬೀರುತ್ತಿರುವುದು. ಎಂದೇ ಇದಕ್ಕೆ ಪಲ್ಸರ್ ಎಂಬ ಅನ್ವರ್ಥಕ ನಾಮವೂ ಇದೆ. ನ್ಯೂಟ್ರಾನ್ ತಾರೆಯೇ ಪಲ್ಸರ್.

ಎಲ್ಲ ಸರಿ, ಸಿದ್ಧಾಂತ ಮಾರ್ಗದಲ್ಲಿ. ಆದರೆ ವೀಕ್ಷಣಮಾರ್ಗದಲ್ಲಿಯು ಪರಿಸ್ಥಿತಿ ಏನು ? ೧೯೫೭ರಲ್ಲಿ ಆಕಾಶಯುಗಾರಂಭ. ೧೯೬೭ರಲ್ಲಿ ಪಲ್ಸರ್ ಅಸ್ತಿತ್ವದ ದೃಢೀಕರಣ. ೧೯೬೯ರಲ್ಲಿ ಮಾನವ ಚಂದ್ರನ ಮೇಲೆ ನಿಂತು ನಿಜಕ್ಕೂ ತ್ರಿವಿಕ್ರಮನಾದ. ೧೯೮೭ರಲ್ಲಿ ಆಧುನಿಕ ವಿಜ್ಞಾನ ಯುಗ ಕುರಿತಂತೆ ಪ್ರಥಮ ಸೂಪರ್ನೋವಾದರ್ಶನ ಮತ್ತು ವೀಕ್ಷಣಸ್ಥಿರೀಕರಣ. ಈ ಎಲ್ಲ ಘಟನೆಗಳೂ ಚಂದ್ರಶೇಖರ್ ಪರಿಮಿತಿಯನ್ನು ಒಂದು ವಿಶ್ವಭೌತ ಸ್ಥಿರಾಂಕವಾಗಿ ಮನ್ನಣೆ ಮಾಡಿವೆ.

ಪಲ್ಸರಿನ ಭವಿಷ್ಯವೇನು? ಮತ್ತೆ ಸೈದ್ಧಾಂತಿಕ ಅನ್ವೇಷಣೆ ಅನಾವರಣಿಸಿದ ಚಿತ್ರ ಅತಿವಿಚಿತ್ರ ಮತ್ತು ಚಿರನಿಗೂಢ: ಇಂಥ ಒಂದು ತಾರೆಯೂ ಗುರುತ್ವ ನಿಪಾತನಕ್ಕೆ, gravitational collapse, ಬಲಿಯಾಗಿ ಸಂಕೋಚಿಸತೊಡಗುವುದು, ಒಂದು ಸಂಧಿಸ್ಥ ಕ್ಷಣದಲ್ಲಿ ಅದು ಹಠಾತ್ತನೆ ಅಂತರ್ಧಾನವಾಗಿ ಬಿಡುವುದು—ಅಂದರೆ ಅದರಿಂದ ಆ ತನಕ ಬರುತ್ತಿದ್ದ ಸ್ಪಂದಗಳು ಆ ಗಳಿಗೆ ಕೈದು! ನಕ್ಷತ್ರದಯುಸ್ತಂಭನವೇ? ಹೌದು, ಜೊತೆಗೆ ಅದರ ಭೌತ ಅಸ್ತಿತ್ವದ ಮಂಗಮಾಯ ಕೂಡ. ಈ ನಾಕ್ಷತ್ರಿಕ ವೈಚಿತ್ರ್ಯಕ್ಕೆ Black Hole ಎಂದು ಹೆಸರಿಸಲಾಯಿತು, ೧೯೬೮ರಲ್ಲಿ. ಭಾರತೀಯ ಭಾಷೆಗಳಲ್ಲಿ ಇದು ಅಷ್ಟೇ ಧ್ವನಿಪೂರ್ಣವಾಗಿ ಕೃಷ್ಣ ವಿವರ. ಎಲ್ಲವನ್ನೂ ಕಬಳಿಸುವ ಏನನ್ನೂ ಹೊರಬಿಡದ ನಾಕ್ಷತ್ರಿಕ ವೈಕುಂಠವೇ ಕೃಷ್ಣವಿವರ.

ಇದರ ಅಸ್ತಿತ್ವದೃಢೀಕರಣ ಕುರಿತ ವೀಕ್ಷಣೆಗಳು ಮುಂದುವರಿದುವು. ೧೯೯೫ರ ಜೂನ್ ೨೨ ಮತ್ತು ೨೩ರಂದು ನಾನು ಚಂದ್ರಶೇಖರರನ್ನು ಇವರ ನೆಲೆ ಶಿಕಾಗೋ ನಗರದಲ್ಲಿ ಭೇಟಿಯಾಗಿದ್ದೆ. ಆಗ ನಾನು ಅವರೆದುರಿಟ್ಟ ಒಂದು ಪ್ರಶ್ನೆ: ''ನಿಸರ್ಗವನ್ನು ಅನ್ವೇಷಿಸಲು ವಿಜ್ಞಾನಿಗೆ ಮೂಲಪ್ರೇರಣೆ ಏನು?'' ಅವರೆಂದರು:''ವಿಜ್ಞಾನಿ ಮೂಲತಃ ಒಬ್ಬ ಸೌಂದರ್ಯಾರಾಧಕ. ಇನ್ನು ನಿಸರ್ಗ ? ಅದು ಸೌಂದರ್ಯದ ಖನಿ. ಸೌಂದರ್ಯಾನುಶೀಲನೆಯೇ ವಿಜ್ಞಾನಿಯ ಪ್ರೇರಣೆ.'' ನಾನು: ''ವಿಜ್ಞಾನಿಯಾಗಿ ನಿಮ್ಮ ದೃಷ್ಟಿಯಲ್ಲಿ ಪರಮ ಸುಂದರ ನಿಸರ್ಗ ನಿರ್ಮಿತಿ ಯಾವುದು''. ಅವರು:''ಸಂದೇಹಾತೀತವಾಗಿ ಕೃಷ್ಣವಿವರ.''

ಚಂದ್ರಶೇಖರ್ ೨೧ ಆಗಸ್ಟ್ ೧೯೯೫ರಂದು ಕೃಷ್ಣವಿವರವಾದರು. ನಾಸಾ ಸಂಸ್ಥೆ ೨೩ ಜುಲೈ ೧೯೯೯ರಂದು ''ಚಂದ್ರ'' ಹೆಸರಿನ ಕೃತಕ ಉಪಗ್ರಹವನ್ನು—ವ್ಯೋಮ ನೇತ್ರವನ್ನು—ಕಕ್ಷೆಗೆ ಉಡಾಯಿಸಿತು. ಈ ವ್ಯೋಮನೇತ್ರ ಮೇ ೧೯೯೯ರ ವೇಳೆಗೆ ಕೃಷ್ಣ ವಿವರದ ವಾಸ್ತವ ಅಸ್ತಿತ್ವವನ್ನು ದೃಢೀಕರಿಸಿತು. ೨೧ ಏಪ್ರಿಲ್ ೨೦೦೦ದ ತನಕ ಹಲವು ಕೃಷ್ಣವಿವರಗಳ ಅಸ್ತಿತ್ವ ಸ್ಥಿರವಾಗಿದೆ.

ಮಹಾಬಾಜಣೆಯಿಂದ ಕೃಷ್ಣವಿವರದ ವರೆಗೆ ಮಾನವಮತಿ ಅರಳಿರುವ ಬಗೆ ರೋಚಕವಾಗಿದೆ. ಐನ್‌ಸ್ಟೈನರ ಈ ಮುಂದಿನ ಸೂಕ್ತಿ ಅತ್ಯಂತ ಧ್ವನಿಪೂರ್ಣವಾಗಿದೆ ಸಂಕೀರ್ಣ ವಿಶ್ವದ ಕುರಿತು : ''ವಿಶ್ವವು ಗ್ರಹಣಶೀಲ ಎನ್ನುವುದೇ ಅದರ ಬಗೆಗಿನ ಅತ್ಯಂತ ಅಗ್ರಹಣಶೀಲ ಕೌತುಕ!''

ಎಲುಬು ಚಿಗಿಯಲು ಎಲಿಜಾರೋವ್ ಚಿಕಿತ್ಸೆ

ಅಂಗವಿಕಲರ ಹಾಗೂ ಅಪಘಾತ ಪೀಡಿತರ ಆಶಾಜ್ಯೋತಿ

ಡಾ. ಕರವೀರಪ್ರಭು ಕ್ಯಾಲಕೊಂಡ
ವೈದ್ಯಾಧಿಕಾರಿಗಳು
ಸಮುದಾಯ ಆರೋಗ್ಯ ಕೇಂದ್ರ
ಬಾದಾಮಿ-೫೮೭ ೨೦೧
ಜಿಲ್ಲಾ: ಬಾಗಲಕೋಟೆ

ರಷ್ಯಾ ಕಮ್ಯುನಿಷ್ಟರ ನಾಡು, ಮನಬಿಚ್ಚಿ ಮಾತನಾಡುವ ಹಾಗಿಲ್ಲ. ಎಲ್ಲದಕ್ಕೂ ನಿರ್ಬಂಧ. ಅಲ್ಲೊಬ್ಬ ಎಲುಬು ಕೀಲು ತಜ್ಞ ವೈದ್ಯ... ಸಂಶೋಧನೆಯ ಹುಚ್ಚು ಹಚ್ಚಿಕೊಂಡಿದ್ದಾನೆ. ಹಗಲು ರಾತ್ರಿ ಅದೇ ವಿಚಾರ. ನಿದ್ರೆಯಿಲ್ಲ, ನೀರಡಕೆಯಿಲ್ಲ ತನ್ನ ತಲೆತಿನ್ನುವ ವಿಚಾರಗಳನ್ನು ಬೇರೆಯವರೊಂದಿಗೆ ಹಂಚಿಕೊಳ್ಳುವ ಹಾಗಿಲ್ಲ. ಆಸ್ಪತ್ರೆಯ ಮುಂದಿನ ಹೂದೋಟದಲ್ಲಿ ಮಾಲಿಯು ಕತ್ತರಿ ಹಿಡಿದು ಕಂಟಿಗಳ ತುದಿಗಳನ್ನು ಕತ್ತರಿಸುತ್ತಿದ್ದಾನೆ. ವೈದ್ಯನ ಮಿದುಳಲ್ಲಿ ವಿಚಾರಗಳ ಮಿಂಚು, ತಾಕಲಾಟ, ತಳಮಳ...

ವೈದ್ಯ ತೋಟಕ್ಕೆ ಬಂದು-''ಪ್ರತಿವಾರ ಕಂಟಿಯ ತುದಿಗಳನ್ನು ಕತ್ತರಿಸುವ ಬದಲು ಒಮ್ಮೆ ಕತ್ತರಿಸಿ ಬಿಟ್ಟರೆ ಸಾಲದೆ?'' ಎನ್ನುತ್ತಾನೆ ಮಾಲಿಗೆ

ಅಲ್ರಿ, ಈ ಹೂವಿನ ಕಂಟಿಗೆ ಗೊಬ್ರ ಗುಡೇ ಹಾಕ್ತೇವಿ. ಸಾಕಷ್ಟು ನೀರು ಉಣಸ್ತೇವಿ. ಅಂದಾಗ ಅದು ಹಚ್ಚ ಹಸುರಾಗಿ ವ್ಯ ತುಂಬಕೊಂಡ ಬೆಳತೈತಿ. ಅದನ್ನ ಮತ್ತ ಕತ್ತರಿಸಿ ಒಂದ ಮಟ್ಟಕ್ಕೆ ತರ್ತೇವಿ...''

ಈ ಮಾತು ವೈದ್ಯರ ಚಿತ್ತಕ್ಕೂ ಚೇತನ ನೀಡಿತು. ಸಸಿಗಳಿಗೆ ಪೋಷಕಗಳನ್ನು ನೀರನ್ನು ಕೊಟ್ಟಾಗ ಬೆಳೆಯುತ್ತವೆ. ಹಾಗೆ ಮನುಷ್ಯನಲ್ಲಿಯ ಎಲುಬುಗಳು, ಏಕೆ ಚಿಗಿಯುವುದಿಲ್ಲ? ಎಂದು ಚಿಂತಿಸಿದ. ಇವನ ವಿಚಾರ ಕೇಳಿದ ಈತನ ವೈದ್ಯ ಮಿತ್ರರು 'ಹುಚ್ಚ' ಎಂದರು. ಆದರೆ ಈ ಮೂಳೆತಜ್ಞ ಎದೆಗುಂದಲಿಲ್ಲ. ತನ್ನ ವಿಚಾರಗಳನ್ನು ಬಿಟ್ಟುಕೊಡಲಿಲ್ಲ. ಆ ವಿಚಾರಗಳ ಸುತ್ತ ಗಸ್ತು ಹೊಡೆದ. ಪ್ರಯೋಗಗಳನ್ನು ಮಾಡಿದ. ಎಲುಬು ಚಿಗುರುವಂತೆ ಮಾಡುವಲ್ಲಿ ಯಶಸ್ವಿಯಾದ. ಈ ವೈದ್ಯ ಮತ್ತ್ಯಾರೂ ಅಲ್ಲ. ರಷ್ಯಾದ ಡಾ. ಗಾವ್ರಿಲ್ ಅಬ್ರಮೋವಿಚ್ ಎಲಿಜಾರೋವ್. ಇವರು ಎಲುಬು ಚಿಗಿಯುವಂತೆ ಮಾಡಿದ ಚಿಕಿತ್ಸೆ ಇಂದು ಪ್ರಪಂಚದಾದ್ಯಂತ ಹೆಸರುವಾಸಿಯಾಗಿದೆ, 'ಎಲಿಜಾರೋವ್ ಚಿಕಿತ್ಸೆ' ಎಂದು ಪ್ರಸಿದ್ಧವಾಗಿದೆ.

೧೯೪೫ರಲ್ಲಿ ಎರಡನೇ ಮಹಾಯುದ್ಧ ಅಂತ್ಯಗೊಂಡಿತು. ಯುವ ವೈದ್ಯ ಎಲಿಜಾರೋವ್ ಸೈಬೇರಿಯಾದ ಕುರ್ಗಾನ್‌ದಲ್ಲಿ ಕಾರ್ಯಪ್ರವೃತ್ತನಾಗಬೇಕಾಯಿತು. ಬಡತನ ಸೈಬೇರಿಯಾ ಪ್ರದೇಶದಲ್ಲಿ ಆದಿಕಾಲದಿಂದಲೂ ಬೀಡು ಬಿಟ್ಟಿತ್ತು. ಈಗ ಯುದ್ಧದಲ್ಲಿ ಊನಗೊಂಡವರ ಮಹಾಪೂರವೇ ಅಲ್ಲಿತ್ತು... ಕೈಕಾಲು ಕಳೆದುಕೊಂಡ ಕಂಗಳ, ಗಾಯಗೊಂಡ ಯೋಧರ, ಎಲುಬು ಮುರಿದುಕೊಂಡ ಸೈನಿಕರ ದಂಡು ಆಸ್ಪತ್ರೆಯ ಆವರಣದಲ್ಲಿ ರೋಧಿಸುತ್ತಿದ್ದರು. ನೋವಿನಿಂದ ನರಳುತ್ತಿದ್ದರು. ಸಾಂಪ್ರದಾಯಿಕ ಪದ್ಧತಿಗಳಿಂದ ಇವರಿಗೆಲ್ಲಾ ಚಿಕಿತ್ಸೆ ನೀಡುವುದು, ಅವರ ಮುಖದಲ್ಲಿ ಮಂದಹಾಸ ಲಾಸ್ಯವಾಡುವಂತೆ ಮಾಡುವುದು ದುಸ್ತರವಾಗಿತ್ತು. ಚಿಕಿತ್ಸೆ ಪಡೆದವರ ಮುಖದಲ್ಲಿ ಚಿಂತೆಯ ಗೆರೆಗಳು ಹೆಚ್ಚಾಗಿದ್ದುವು. ಕಾರಣ ಮೂಳೆ ಮುರಿದ ಕಾಲು ಚಿಕಿತ್ಸೆಯ ನಂತರ ಕಿರಿದಾಗಿದ್ದುದು. ಹೀಗಾಗಿ ಅವರ ಕೈಯಲ್ಲಿ ಊರುಗೋಲು ಅನಿವಾರ್ಯವಾಗಿತ್ತು. ಒಬ್ಬೊಬ್ಬರಿಗಂತೂ ಬಗಲಿಗೆ ಬಡಿಗೆಗಳ ಉಡುಗೊರೆ ದೊರೆತಿತ್ತು. ಈ ವಾತಾವರಣ ಎಲಿಜಾರೋವ್ ಅವರ ಮನಸ್ಸನ್ನು ಕದಲಿತ್ತು. ಹೊಸ ಚಿಕಿತ್ಸಾ ವಿಧಾನದತ್ತ ಅವರ

ಮನಸ್ಸು ಹಾತೊರೆದಿತ್ತು. ಹಗಲಿರುಳು ಚಿಂತಿಸ ಹತ್ತಿತ್ತು.

ಮೂಳೆಗಳು ಮುರಿದಾಗ, ಅವುಗಳ ತುದಿಗಳನ್ನು ಒಂದರೊಡನೊಂದನ್ನು ಸೇರಿಸಿ ಸಾಕಷ್ಟು ಸಮಯ ಅಲುಗಾಡದಂತೆ ಹಿಡಿದಿಡುವ ಏರ್ಪಾಡು ಮಾಡಿದರೆ, ಅವುಗಳ ನಡುವೆ ಉತ್ಪನ್ನವಾಗುವ 'ಕ್ಯಾಲಸ್'' ನಿಂದಾಗಿ ಕೂಡಿಕೊಳ್ಳುತ್ತದೆ ಎಂಬುದು ನಿಸರ್ಗದ ನಿಯಮ. ನಾಟವೈದ್ಯರು ಮೂಳೆ ಮುರಿದಾಗ, ತಿದ್ದಿ ತೀಡಿ ಸಮಮಾಡಿ, ಬಿದಿರಿನ ಕಡ್ಡಿಗಳಿಂದ ಕಟ್ಟಿ ಕೂಡಿಸುತ್ತಾರೆ. ತಜ್ಞ ವೈದ್ಯರು ಸ್ಯಾಬು, ಕಾಸ್ಟೆಗಳನ್ನು ಹಾಕಿ, ಮುರಿದ ಮೂಳೆಯ ತುಂಡುಗಳನ್ನು ಒಂದು ಮಾಡುತ್ತಾರೆ. ಒಮ್ಮೊಮ್ಮೆ ಎಲುಬಿನ ಟೊಳ್ಳುಗಳಲ್ಲಿ ಸ್ಟೀಲ್ ಸಲಾಕೆಗಳನ್ನು ಸೇರಿಸಿ ಬೆಸೆಯುತ್ತಾರೆ. ಇವುಗಳ ಹಿಂದೆ ಇರುವ ತತ್ವ-ನಿಸರ್ಗ ನಿಯಮ ಪಾಲನೆ.

ಈ ಎಲ್ಲ ವಿಧಾನಗಳ ಉದ್ದೇಶ ಒಂದೇ: ಮೂಳೆ ಮುರಿದ ಜಾಗದಲ್ಲಿ ವ್ಯತ್ಯಾಸವಾಗಿದ್ದ ಜೈವಿಕ ಹಾಗೂ ತಾಂತ್ರಿಕ ಪರಿಸರವನ್ನು ಸರಿಪಡಿಸಿ ಜೀವಕೋಶಗಳ ಹಂತದಲ್ಲಿ ಮುರಿದ ಮೂಳೆಗಳು ಒಂದಕ್ಕೊಂದು ಕೂಡಿಕೊಂಡು ಸಹಜ ರೀತಿಯಲ್ಲಿ ವಾಸಿಯಾಗಲು ಸಹಾಯಕವಾಗುವ ಯುಕ್ತ ಜೈವಿಕ ವಾತಾವರಣವನ್ನುಂಟು ಮಾಡುವುದು.

ವೈದ್ಯಕೀಯ ರಂಗದ ಎಲ್ಲ ಕ್ಷೇತ್ರಗಳಲ್ಲೂ ಕ್ರಾಂತಿಯ ಕಹಳೆ ಊದಿತ್ತು. ಆದರೆ, ಎಲುಬು ಶಾಸ್ತ್ರ ಮಾತ್ರ ಅಪ್ಪ ನೆಟ್ಟ ಆಲದ ಮರಕ್ಕೆ ಜೋತು ಬಿದ್ದಿತ್ತು. ಏನಾದರೂ ಮಾಡ ಬೇಕೆಂದು ಎಲಿಜಾರೋವ್ ಚಿಂತಿಸು ವಾಗ, ತೋಟಗಾರ ಹೇಳಿದ್ದು ನೆನಪಾಯಿತು. ''ಸತ್ಯದ ಸಂಶೋಧನೆಯಲ್ಲಿ ನಿಸರ್ಗದತ್ತ ನೋಡು'' ಎಂಬ ಹಿಪ್ಪೊಕ್ರೆಟಿಸ್‌ರ ವಾಣಿ ಎಲಿಜಾರೋವ್ ಅವರಿಗೆ ಸ್ಫೂರ್ತಿಯ ಸೆಲೆಯಾಯಿತು. ಅವರು ಇಡೀ ಜೀವನವನ್ನು ಒಂದು ಸಮಸ್ಯೆಯ ಸುತ್ತ ಕೇಂದ್ರೀಕರಿಸಿದರು. ಆಕರಗ್ರಂಥಗಳನ್ನು ಓದಿದರು. ಕೊನೆಗೊಂದು ಹೊಸ ಉಪಕರಣವನ್ನು ತಯಾರಿಸಿದರು. ಇದು ರಿಂಗು, ಸೂಜಿಗಳ, ನಟ್, ಬೋಲ್ಟುಗಳ ಅಸೆಂಬ್ಲಿಯಾಗಿತ್ತು. ಶಸ್ತ್ರಚಿಕಿತ್ಸಕರಿಗೆ ಇದೊಂದು ಬಹುಪಯೋಗಿ ಉಪಕರಣ ವಾಗಿದ್ದು, ಮುರಿದ ಎಲುಬಿನ ತುಂಡುಗಳ ಮೇಲೆ ಸಂಪೂರ್ಣ ನಿಯಂತ್ರಣ ಸಾಧಿಸಲು ಸಹಾಯಕವಾಗುವುದಲ್ಲದೆ, ಚರ್ಮ, ಅಂಗಾಂಗ, ಅಂಗಾಂಶಗಳಿಗೆ ಅಲ್ಪಸ್ವಲ್ಪ ಹಾನಿಯನ್ನುಂಟು ಮಾಡುವುದು. ಈ ಚಿಕಿತ್ಸೆಯಲ್ಲಿ ಅಡಗಿರುವ ತತ್ವ: ಕನಿಷ್ಠ ಕಿರುಕುಳದಿಂದ ಗರಿಷ್ಠ ಗಳಿಕೆ'' ಎಲುಬನ್ನು ಉದ್ದ ಮಾಡಲು, ಅಂಕುಡೊಂಕುಗಳನ್ನು ಸರಿಪಡಿಸಲು ಸಮರ್ಥವಾಗಿ ಈ ತಂತ್ರವನ್ನು ಬಳಸಬಹುದು. ಈ ಉಪಕರಣದ ಬಳಕೆಯಿಂದ ಎಲುಬು ಕೀಲುಗಳ ಪ್ರತಿಶತ ೬೫ರಷ್ಟು ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬಹುದಾಗಿದೆ. ಇದಕ್ಕೆ ತಜ್ಞರ ಅನುಭವ; ಚಾಣಾಕ್ಷತನ ಅಗತ್ಯ. ಆದರೆ, ಇದನ್ನು ಮುಖ್ಯವಾಗಿ ಎಲುಬಿನ ಉದ್ದ ಹೆಚ್ಚಿಸಲು ಬಳಸಲಾಗುತ್ತಿದೆ.

ಮೂಳೆ ಅಥವಾ ಯಾವುದೇ ಅಂಗ ಭಾಗ ಸಹಜ ಬೆಳವಣಿಗೆಯ ಹಂತದಲ್ಲಿರುವಾಗ ಹುರುಪಿನಿಂದ ಬೆಳವಣಿಗೆಯಾಗುತ್ತಿರುವಂತೆ, ಮುಂದೆ ಬೆಳವಣಿಗೆಯಾದ ಮೂಳೆಯನ್ನು ನಿಧಾನ ಗತಿಯ ಎಳೆತಕ್ಕೆ ಒಳಪಡಿಸಿದಾಗಲೂ ''ಎಳೆತದ ಊತಕ ಜನನ'' ಎಂಬ ಸರ್ವ ಸಾಮಾನ್ಯ ಮೂಲತತ್ವಾಧಾರದಂತೆ ನವಚೈತನ್ಯ ಪಡೆದು ಹೊಸಬೆಳವಣಿಗೆಗೆ ನಾಂದಿ ಹಾಡುತ್ತದೆ. ಈ ತತ್ವದ ಅರಿವಿದ್ದ ಎಲಿಜಾರೋವ್ ಪ್ರಾಣಿಗಳಲ್ಲಿ ನಡೆಸಿದ ಪ್ರಯೋಗಗಳಿಂದ ಎಳೆತದಿಂದುಂಟಾಗುವ ಒತ್ತಡದ ಪ್ರಭಾವ ಈ ತರಹದ ಬೆಳವಣಿಗೆಗೆ ಪ್ರೇರಣೆ ನೀಡುತ್ತದೆಂಬುದನ್ನು ಕಂಡುಕೊಂಡರು. ಇದೇ

ತತ್ವವನ್ನು ಸಹಜ ಅಳತೆಗಿಂತ ಗಿಡ್ಡಾಗಿದ್ದ ಕೈಕಾಲುಗಳ ಮೂಳೆಗಳನ್ನು ಉದ್ದ ಮಾಡುವುದಕ್ಕೂ ಬಳಸಿಕೊಂಡರು.

ಸಾಮಾನ್ಯವಾಗಿ ಮೂಳೆಗಳಲ್ಲಿ ಬೆಳವಣಿಗೆ ಸಂಭವಿಸುತ್ತಿರುವ ಭಾಗದ ಕೆಳಗಡೆ ಮೂಳೆಯನ್ನು ಸೂಕ್ಷ್ಮ ರೀತಿಯ ಶಸ್ತ್ರಚಿಕಿತ್ಸೆಗೊಳಪಡಿಸಿ ಎರಡು ತುಂಡುಗಳಾಗುವಂತೆ ಮಾಡಿದರು. ಅವೆರಡೂ ತುಂಡುಗಳ ಮೂಲಕ ತಂತಿಗಳನ್ನು ತೂರಿಸಿ, ಕೈಕಾಲುಗಳನ್ನು ಆವರಿಸಿಕೊಳ್ಳುವ ಚಕ್ರದ ಸಾಧನವೊಂದಕ್ಕೆ ಸೇರಿಸಿ, ಸ್ಕ್ರೂಗಳನ್ನು ತಿರುವಿ ಬಿಗಿಗೊಳಿಸಿದರು. ಅನಂತರ ಆ ಎರಡೂ ತುಂಡುಗಳು ನಿಧಾನಗತಿಯಲ್ಲಿ ಒಂದರಿಂದ ಇನ್ನೊಂದು ಬೇರ್ಪಡುವಂತೆ ಮಾಡಿದರು. ಹಾಗೆ ಬೇರ್ಪಟ್ಟ ಅಂತರದ ಜಾಗದಲ್ಲಿ ಮೂಳೆಯ ಜೀವಕೋಶಗಳು "ಎಳೆತದ ಊತಕ ಜನನ" ತತ್ವದ ರೀತಿಯಲ್ಲಿ ವೃದ್ಧಿಯಾಗಲಾರಂಭಿಸಿದುವು. ಎಳೆತವನ್ನು ಸಾಕಷ್ಟು ಸಮಯ ಮುಂದುವರಿಸುತ್ತ ಹೋದರೆ ಮೂಳೆಯು ಉದ್ದವಾಗುತ್ತದೆಂಬುದು ಸಹ ಪ್ರಯೋಗಗಳಿಂದ ಖಚಿತಪಟ್ಟಿದೆ.

ಮೊದಲನೆಯ ರೋಗಿಗೆ ಚಿಕಿತ್ಸೆ ನೀಡಿದಾಗ ಅಚ್ಚರಿ ಕಾದಿತ್ತು. ಶಸ್ತ್ರಚಿಕಿತ್ಸೆಗೊಳಗಾಗಿ ಸುಧಾರಣೆಯಾಗದೇ ಬಗಲಲ್ಲಿ ಬಡಗಿ ಹಿಡಿದು ೧೫ ವರ್ಷ ಅಸಹಾಯಕಳಾಗಿ ಅಡ್ಡಾಡಿದವಳು, ಎಲಿಜಾರೋವ್ ತಂತ್ರದ ಚಿಕಿತ್ಸೆ ಪಡೆದ ಬಳಿಕ ಕೇವಲ ಮೂರೇಮೂರು ದಿನಗಳಲ್ಲಿ ಆಸರೆಯಿಲ್ಲದೇ ಅಡ್ಡಾಡಿದಳು! ಈ ಸುದ್ದಿ ನಾಡಿನುದ್ದಕ್ಕೂ ಹರಡಿ, ಸಾವಿರಾರು ಮಂದಿ ಚಿಕಿತ್ಸೆ ಪಡೆಯಲು ಮುಂದಾದರು. ಚಿಕಿತ್ಸೆ ಪಡೆದು ಗುಣಮುಖರಾದರು. ಎಲಿಜಾರೋವ್ ಚಿಕಿತ್ಸೆಯ ಯಶಸ್ಸನ್ನು ಸಾರಿ ಹೇಳುವ ಸಾಕ್ಷಿದಾರರಾದರು. ಎಲಿಜಾರೋವ್ ಈ ಹೊಸ ಚಿಕಿತ್ಸೆಯ ಫಲಿತಾಂಶಗಳನ್ನೊಳಗೊಂಡ ಪ್ರಬಂಧವನ್ನು ೧೯೫೧ರಲ್ಲಿ ಅಂತಾರಾಷ್ಟ್ರೀಯ ವೈದ್ಯಕೀಯ ಸಮ್ಮೇಳನದಲ್ಲಿ ಮಂಡಿಸಿದರು. ಯುವ ವೈದ್ಯರ ಮೆಚ್ಚುಗೆ ಗಳಿಸಿದರು. ಹಳಬರ, ಘಟಾನುಘಟಿಗಳ ಟೀಕೆ ಟಿಪ್ಪಣಿಗಳಿಗೆ ಗುರಿಯಾದರು. ಕಾಲೇಜ್ ಪ್ರಾಧ್ಯಾಪಕರು ಪ್ರಭಾವಿತರಾಗಲಿಲ್ಲ. ಅವರ ಮಿದುಳಿಗೆ ಇದು ಮೇವಾಗಲಿಲ್ಲ. ಹೀಗಾಗಿ ರಷ್ಯಾ ದೇಶದ ಇತರ ಆಸ್ಪತ್ರೆಗಳಲ್ಲಿ ಈ ಪದ್ಧತಿ ಜಾರಿಗೆ ಬರಲಿಲ್ಲ.

ಇದರಿಂದ ಎಲಿಜಾರೋವ್ ವಿಚಲಿತರಾಗಲಿಲ್ಲ. ಉತ್ಸಾಹ ಉಡುಗಲಿಲ್ಲ. ಛಲ ಬಿಡದ ತ್ರಿವಿಕ್ರಮನಂತೆ ಚಿಕಿತ್ಸೆ ಮುಂದುವರಿಸಿದರು. ನಾಡಿನ ಮೂಲೆ ಮೂಲೆಯಿಂದ ರೋಗಿಗಳು ಬಂದರು. ರೋಗಿ ಸಮೂಹದಲ್ಲಿ ಅಪಾರ ಜನಪ್ರಿಯತೆ ಗಳಿಸಿದರು. ದೇಶದ ಆರೋಗ್ಯ ಇಲಾಖೆಯನ್ನು ಎದುರು ಹಾಕಿಕೊಂಡರು. ಸಿಗುತ್ತಿದ್ದ ಧನ ಸಹಾಯ ಕಳೆದುಕೊಂಡರು. ಇದು ರೋಗಿಗಳಿಗೆ ಗೊತ್ತಾದಾಗ ಅವರೇ ಇವರಿಗೆ ಬೇಕಾಗುವ ಸಾಧನ ಸಲಕರಣೆಗಳನ್ನು ಪೂರೈಸಿದರು. ಹೀಗಾಗಿ ಎಲಿಜಾರೋವ್ ಚಿಕಿತ್ಸಾ ಕಾರ್ಯ ಎಂದಿನಂತೆ ಹುರುಪು ಹುಮ್ಮಸ್ಸುಗಳೊಂದಿಗೆ ಮುಂದುವರಿಯಿತು. ರೋಗಿಯೊಬ್ಬನ ಕಾಲಿನ ಮೂಳೆಯನ್ನು ೧೦ ಅಂಗುಲಗಳಷ್ಟು ಉದ್ದವಾಗಿಸಿದ ಪರಿಣಾಮವನ್ನು ಎಲಿಜಾರೋವ್ ೧೯೬೦ರಲ್ಲಿ ಪ್ರಕಟಿಸಿದರು. ಆಳರಸರ ಗುಂಪಿನ ಕೆಲವರಲ್ಲಿ ಅಸೂಯೆಯ ಕಿಚ್ಚು ಹೆಚ್ಚಾಯಿತು. ಕುರ್ಗಾನ್ ಮಾಂತ್ರಿಕನ ಕಾರ್ಯ ಪರಿಶೀಲನೆ ಮಾಡಲು ಪರಿಣತ ವೈದ್ಯ ವ್ಲಾದಿಮಿರ್ ಗೋಲ್ಯಾಕೊವಸ್ಕಿಯೆಂಬವರನ್ನು ಕುರ್ಗಾನ್‌ಗೆ ಕಳುಹಿಸಿದರು. ಅವರು ಕುರ್ಗಾನ್‌ನಲ್ಲಿ ಎರಡು ತಿಂಗಳು ಉಳಿದರು. ಎಲಿಜಾರೋವ್ ನಡೆಸುತ್ತಿದ್ದ ಚಿಕಿತ್ಸೆಯ ತಾಂತ್ರಿಕತೆ, ಚತುರತೆಗಳನ್ನು ಕೂಲಂಕಷವಾಗಿ ಪರಿಶೀಲಿಸಿದರು. ಅವರ ಕೆಲಸದ ಯಶಸ್ಸು ಮತ್ತು ಉಪಯುಕ್ತತೆಯ ಬಗ್ಗೆ ಸುದೀರ್ಘ

ವರದಿ ಮಾಡಿದರು. ಆದರೆ, ಪೂರ್ವಗ್ರಹ ಪೀಡಿತ ಆರೋಗ್ಯ ಇಲಾಖೆ ತನ್ನ ಜಡತೆಯ ಚಿಪ್ಪಿನಿಂದ ಹೊರಗೆ ಬರಲೇ ಇಲ್ಲ! ವ್ಲಾದಿಮಿರ್ ವರದಿಗೆ ಧೂಳು ಮೆತ್ತಿತು. ಅದನ್ನು ಯಾರೂ ಜಾಡಿಸಲೇ ಇಲ್ಲ!!

೧೯೬೮ರಲ್ಲಿ ಎಲಿಜಾರೋವ್ ತಮ್ಮ ನೂತನ ಚಿಕಿತ್ಸಾ ತಂತ್ರದ ಮಹಾಪ್ರಬಂಧಕ್ಕೆ ಡಾಕ್ಟರೇಟ್ ಪದವಿಯ ಪುರಸ್ಕಾರ ಸಿಕ್ಕಿತು. ಆದರೆ, ಸರಕಾರದಿಂದ ಸಹಾಯ ಸಹಕಾರ ಸಿಗಲಿಲ್ಲ. ಇವರಿಗೆ ಒಡ್ಡಿದ ಅಡ್ಡಿ ಆತಂಕಗಳಿಗೆ ಎಂದೂ ಎದೆಗುಂದಲಿಲ್ಲ. ಚಿಕಿತ್ಸೆ ಪಡೆದ ರೋಗಿಗಳೆಲ್ಲ ಇವರಿಂದ ಸಾಕಷ್ಟು ಪ್ರಭಾವಿತರಾಗಿದ್ದರು. ನಾಡಿನುದ್ದಗಲಕ್ಕೂ ಪ್ರಸಿದ್ಧರಾಗಿದ್ದರು. ಈ ಪ್ರಸಿದ್ಧಿಯೇ ಅನೇಕರ ಅಸೂಯೆಗೆ ಕಾರಣವಾಗಿತ್ತು. ಎತ್ತರ ಜಿಗಿತದ ಒಲಿಂಪಿಕ್ ಸ್ಪರ್ಧಾ ವಿಜೇತ ವಲೇರಿ. ಬ್ರೂಮೆಲ್ ಮೋಟರ್ ಸೈಕಲ್ ಅಪಘಾತದಲ್ಲಿ ಎಡಗಾಲಿನ ಎರಡೂ ಮೂಳೆಗಳನ್ನು ಮುರಿದುಕೊಂಡಿದ್ದ. ವಿಶ್ವದ ಹಲವಾರು ಹೆಸರಾಂತ ಶಸ್ತ್ರಚಿಕಿತ್ಸಾ ತಜ್ಞರಿಂದ ಹದಿಮೂರು ಸಾರಿ ಶಸ್ತ್ರಚಿಕಿತ್ಸೆ ಮಾಡಿಸಿಕೊಂಡಿದ್ದರು. ಅಂಗವಿಕಲನ ಪಟ್ಟಗಟ್ಟಿಗೊಂಡಿತ್ತು. ಅವನು ಚಿಕಿತ್ಸೆಗಾಗಿ ಗೋಲ್ಯಾಕ್ವೋವಸ್ಕಿ ಅವರಲ್ಲಿಗೆ ಬಂದಾಗ ಬ್ರೂಮೆಲ್‌ನ ಎಡಗಾಲು ೧೨ ಸೆಂ.ಮೀ ಕಿರಿದಿರುವುದನ್ನು ಗಮನಿಸಿದರು. ಚಿಕಿತ್ಸೆಗಾಗಿ ಎಲಿಜಾರೋವ್ ಅವರಲ್ಲಿಗೆ ಕಳಿಸಿದರು. ಕೂರ್ಗಾನ್ ಮಾಂತ್ರಿಕನ ಚಿಕಿತ್ಸೆಗೊಳಗಾದ ಒಂದೇ ವರ್ಷದಲ್ಲಿ ಬ್ರೂಮೆಲ್‌ನ ಅಂಗವಿಕಲತೆ ಮಾಯವಾಗಿದ್ದಲ್ಲದೇ, ಮರುವರ್ಷವೇ ಎತ್ತರ ಜಿಗಿತ ಜಿಗಿಯಲು ಪ್ರಾರಂಭಿಸಿದ. ಎರಡು ಮೀಟರ್ ಎತ್ತರ ಜಿಗಿಯುವಲ್ಲಿ ಯಶಸ್ವಿಯಾದ!

ಈ ಸುದ್ದಿ ಪ್ರಪಂಚದ ಪ್ರಮುಖ ಪತ್ರಿಕೆಗಳಲ್ಲಿ ಮುಖಪುಟದ ಸುದ್ದಿಯಾದಾಗ, ಎಲಿಜಾರೋವ್ ಪ್ರಪಂಚಕ್ಕೆ ಪರಿಚಿತರಾದರು. ಅವರಲ್ಲಿ ಚಿಕಿತ್ಸೆ ಪಡೆದ ಇತರ ತಾರೆಗಳೆಂದರೆ, ಇಟಲಿಯ ಪರ್ವತಾರೋಹಿ ಕೋರಿಕೆ ಮೌರಿ ಹಾಗೂ ಸಂಗೀತ ಸಂಯೋಜಕ ಸೊಸ್ತಾಕೋವಿಚ್. ಇದರಿಂದ ಎಲಿಜಾರೋವ್ ಅವರಿಗೆ ಹಿಡಿದಿದ್ದ ಗ್ರಹಣ ಬಿಟ್ಟಿತು. ಈಗ ರಷ್ಯಾದ ಅವನ ವಿರೋಧಿಗಳು ವಿಧಿಯಿಲ್ಲದೇ ಹಿಂದೆ ಸರಿದರು. ಸರಕಾರವೂ ಅವರಿಗೆ ಸಹಾಯ ಸಹಕಾರ ನೀಡಲು ಮುಂದೆ ಬಂತು. ಅವರಿಗೆ ಬೇಕಾದ ಅನುಕೂಲತೆಗಳನ್ನು ಒದಗಿಸಿತು. ಸರಕಾರ ಕುರ್ಗಾನ್‌ನಲ್ಲಿ ೧೦೦೦ ಹಾಸಿಗೆಗಳ ಅಸ್ಥಿ ಸಂಬಂಧ ಆಸ್ಪತ್ರೆಯನ್ನು ನಿರ್ಮಿಸಿ, ಎಲಿಜಾರೋವ್ ಅವರನ್ನು ಅದರ ನಿರ್ದೇಶಕರನ್ನಾಗಿ ನೇಮಿಸಿತು. ದೇಶ ವಿದೇಶಗಳ ಎಲುಬು ಕೀಲು ತಜ್ಞರು ಕುರ್ಗಾನ್‌ಕ್ಕೆ ಕಲಿಯಲು ಬಂದರು. ಎಲಿಜಾರೋವ್ ತಂತ್ರವಿದ್ಯೆ ಗಳಿಸಿಕೊಂಡು ಅವರವರ ದೇಶದಲ್ಲಿ ಅದನ್ನು ಅನುಷ್ಠಾನಕ್ಕೆ ತಂದರು.

ಈ ತಂತ್ರ ಬಳಸಿ ವಿಕಲತೆ ನಿವಾರಿಸುವುದೇ ಒಂದುನಯ ನಾಜೂಕಿನ ಕಾರ್ಯ ವಿಕಲಾಂಗ ಸಂಜಾತವಾಗಿರಬಹುದು. ಹಕ್ಕಿಕಡಪಿನ ರೋಗದ (ರಿಕೆಟ್ಸ್) ಪರಿಣಾಮವಾಗಿರಬಹುದು, ಪೋಲಿಯೊದಿಂದಾಗಿರಬಹುದು, ಎಲುಬಿನ ಸೋಂಕಿನಿಂದಾಗಿರಬಹುದು, ಮುರಿದ ಮೂಳೆಗಳ ತುಂಡುಗಳು ಅಂಕುಡೊಂಕಾಗಿ ಬೆಸೆದುಕೊಳ್ಳುವುದರಿಂದಾಗಿರಬಹುದು. ಕಾರಣ ಏನೇ ಇದ್ದರೂ, ಸರಿಪಡಿಸುವ ಚಿಕಿತ್ಸೆ ಒಂದೇ; ಅದೇ ಎಲಿಜಾರೋವ್ ತಂತ್ರ.

ಎಲುಬು ಉದ್ದವಾಗುವುದು ರಾತ್ರಿ ಬೆಳಗಾಗುವುದರೊಳಗಾಗಿ ಆಗುವುದಿಲ್ಲ. ಅದು ಹಲವು ಹಂತಗಳನ್ನು ಹೊಂದಿರುತ್ತದೆ. ಎಲಿಜಾರೋವ್ ಎಕ್ಸ್‌ಟರ್ನಲ್ ರಿಂಗ್ ಅಳವಡಿಸಿದ ೭-೧೦ ದಿನ ಪೂರ್ತಿ ವಿಶ್ರಾಂತಿ ಪಡೆಯಬೇಕು. ಇದಕ್ಕೆ ಕಾಯುವ ಕಾಲ ಎನ್ನುವರು. ಇದು ನೈಸರ್ಗಿಕವಾಗಿ ಗಾಯ ಮಾಯುವ ಕ್ರಿಯೆಗೆ

ಚಾಲನೆ ನೀಡುವುದು. ಎರಡನೆ ಹಂತದಲ್ಲಿ ಒತ್ತಡ ಹಾಕಿ ಜಗ್ಗುವ ಮೂಲಕ ಎಲುಬಿನ ತುಂಡುಗಳ ನಡುವಿನ ಅಂತರವನ್ನು ನಿಧಾನವಾಗಿ ಹೆಚ್ಚಿಸುವುದರಿಂದ ಊತಕ ಉಂಟಾಗುವುದು. ಸಾಮಾನ್ಯವಾಗಿ ದಿನಕ್ಕೆ ೧ಮಿ.ಮಿ. ನಷ್ಟು ಎಳೆಯಲಾಗುವುದು. ಇದನ್ನು ಸಹ ಒಮ್ಮೆಲೆ ಮಾಡದೇ ೬ ತಾಸಿಗೊಮ್ಮೆ ೦.೨೫ ಮಿ.ಮಿ.ನಷ್ಟು ಉದ್ದವಾಗುವಂತೆ ಜಗ್ಗಲಾಗುವುದು. ಹೀಗೆ ಎಳೆಯುವ ಮೂಲಕ ಎಲುಬುಗಳ ತುಂಡುಗಳ ನಡುವೆ ಉಂಟಾಗುವ ಅಂತರವನ್ನು ಉತ್ಪತ್ತಿಯಾಗುವ ಹೊಸ ಎಲುಬು ತುಂಬಿಕೊಳ್ಳುವುದು. ಬೇಕಾದ ಉದ್ದ ಆಗುವವರೆಗೆ ನಿತ್ಯ ೧ಮಿ.ಮಿ.ನಷ್ಟು ಹಿಗ್ಗಿಸಲಾಗುವುದು. ಒಮ್ಮೆ ನಿಶ್ಚಿತ ಗುರಿ ತಲುಪಿದ ಮೇಲೆ ಮೂರನೇ ಹಂತ ಪ್ರಾರಂಭವಾಗುವುದು. ಇದು ಎರಡನೇ ಹಂತದ ಇಮ್ಮಡಿ ಕಾಲಾವಧಿ ಹೊಂದಿರುತ್ತದೆ. ಈ ಹಂತದಲ್ಲಿ ನಟ್ ಬೋಲ್ಟುಗಳ ಮೂಲಕ ಯಾವುದೇ ಬದಲಾವಣೆ ಮಾಡಲಾಗುವುದಿಲ್ಲ. ಹೊಸದಾಗಿ ಉತ್ಪತ್ತಿಯಾದ ಎಲುಬು ಗಟ್ಟಿಗೊಳ್ಳಲು, ಪಕ್ವವಾಗಲು ಇದು ಅನುಕೂಲವಾಗುವುದು. ಸಾಮಾನ್ಯವಾಗಿ ೧ ಸೆಂ.ಮಿ. ಎಲುಬಿನ ಉದ್ದ ಹೆಚ್ಚಿಸಲು ಒಂದು ತಿಂಗಳ ಕಾಲಾವಧಿ ಬೇಕಾಗುವುದು. ಮೂಳೆ ಬೆಳೆಯುವುದು ನಿಧಾನ. ಆದ್ದರಿಂದ ರೋಗಿಗೆ ಮುಖ್ಯವಾಗಿ ಬೇಕಾಗಿರುವುದು ತಾಳ್ಮೆ.

ಅಸ್ಥಿ ಸಂಬಂಧ ಕಾಯಿಲೆಗಳ ಚಿಕಿತ್ಸೆಯಲ್ಲಿ ಕ್ರಾಂತಿಕಾರಿ ಬದಲಾವಣೆಗಳನ್ನುಂಟು ಮಾಡಿದ ಈ ವಿಧಾನದಿಂದ ಇನ್ನೂ ಅನೇಕ ಪ್ರಯೋಜನಗಳನ್ನು ಪಡೆಯಬಹುದಾಗಿದೆ. ಆದರೆ ಇಂದು, ಈ ವಿಧಾನದ ಸೌಲಭ್ಯ ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಮಾತ್ರ ಲಭ್ಯವಿದೆ. ಹೀಗಾಗಿ ಹಳ್ಳಿಗರಿಗೆ ಇದು ಇನ್ನೂ ಗಗನ ಕುಸುಮವೇ ಆಗಿದೆ! ಸರಕಾರ ಹೆಚ್ಚು ಹೆಚ್ಚು ತಜ್ಞರಿಗೆ ಈ ವಿಧಾನದ ತರಬೇತಿ ನೀಡಿ, ಬಡವರ ಕೈಗೂ ಇದು ಎಟುಕುವಂತಾದರೆ, ಅಂಗವಿಕಲರ ಬಾಳಲ್ಲೂ ಬೆಳದಿಂಗಳು ಚೆಲ್ಲೀತು!!

ಲೇಖಕರಿಗೆ ಸೂಚನೆ

ಗ್ರಾಮೀಣ ವಾಚಕರನ್ನು ಉದ್ದೇಶಿಸಿ ಬರೆಯುವ ವೈಚಾರಿಕ ಮತ್ತು ಸೃಜನಾತ್ಮಕ ಲೇಖನಗಳಿಗೆ ಸ್ವಾಗತ. 'ರೀಡರ್ಸ್ ಡೈಜೆಸ್ಟ್'ನ ತೀರ ಈಚೆಗಿನ ಸಂಚಿಕೆಗಳಿಂದ ಭಾವಾನುವಾದಿಸಲಾದ ಲೇಖನಗಳಿಗೆ ಆದ್ಯತೆ. ಅನುವಾದಕರು ಮೊದಲಾಗಿಯೇ ನಮಗೆ ತಾವು ಆಯಬೇಕೆಂದಿರುವ ಡೈಜೆಸ್ಟ್-ಲೇಖನದ ಶೀರ್ಷಿಕೆ, ಸಂಚಿಕೆ ಮುಂತಾದ ವಿವರಗಳನ್ನು ತಿಳಿಸಿದರೆ ಒಂದೇ ಲೇಖನವನ್ನು ಹಲವರು ಅನುವಾದಿಸಬಹುದಾದ ವೃಥಾ ಶ್ರಮವನ್ನು ನಿವಾರಿಸಬಹುದು. ಲೇಖನದ ಮೂಲ ಪ್ರತಿಗಳನ್ನೇ ನಮಗೆ ಕಳಿಸಬೇಕು- ಕಾರ್ಬನ್/ಜೆರಾಕ್ಸ್ ಪ್ರತಿಗಳು ಸ್ವೀಕಾರ್ಯವಲ್ಲ.

-ಸಂ.

ಸಂತೂರ್ ಮಾಂತ್ರಿಕ : ಪಂ. ಶಿವಕುಮಾರ ಶರ್ಮ

ಎ.ಡಿ. ನಂಜುಂಡಸ್ವಾಮಿ
ಮನೆ ನಂ೧೧/ಸಿ,, ೧ನೇ ತಿರುವು
ಕೆ.ಎನ್.ಪುರ, ಉದಯಗಿರಿ,
ಮೈಸೂರು

ಗಾನ ಲೋಕದಲ್ಲಿ ತಂತ್ರೀವಾದ್ಯಗಳಿಗೆ ವಿಶಿಷ್ಟ ಸ್ಥಾನವಿದೆ, ಶ್ರುತಿಯಾಗಿ, ಗಾಯಕರಿಗೆ ಪಕ್ಕವಾದ್ಯವಾಗಿ, ಕಲಾಕಾರನ ಮೀಟಿನಿಂದ ರಾಗ-ತಾನ ಪೊಮ್ಮಿಸಿ ಕೃತಿಗಳ ಅಭಿವ್ಯಕ್ತಿಗೆ ನಾದಸೇತುವಾಗಿ ಸಂಗೀತಪ್ರಿಯರನ್ನು ರಸಲೋಕಕ್ಕೆ ಉತ್ತಾರಣಗೊಳಿಸುವ ಶಕ್ತಿ ಈ ವಾದ್ಯಗಳಿಗಿದೆ. ಇವು ನಮ್ಮ ಸಂಸ್ಕೃತಿ ಪರಂಪರೆಯ ಒಂದು ಭಾಗ. ಭಾರತೀಯ ಅಭಿಜಾತ ಸಂಗೀತದಲ್ಲಿ ವೀಣೆ, ಪಿಟೀಲು, ಸಿತಾರ್ ಇತ್ಯಾದಿ ತಂತ್ರೀವಾದ್ಯಗಳ ಪಾತ್ರ ಹಿರಿದಾದುದು. ಆ ಸಾಲಿನಲ್ಲಿ 'ಸಂತೂರ್'ಗೆ ಸ್ಥಾನ ದೊರಕಿಸಿಕೊಟ್ಟ ಪಂ. ಶಿವಕುಮಾರ್ ಶರ್ಮರ ಸೇವೆ ಅಮೋಘವಾದುದು.

ಕಾಶ್ಮೀರ ಕಣಿವೆಯಲ್ಲಿಯ ಜಾನಪದ ತಂತ್ರೀವಾದ್ಯ ಸಂತೂರ್‌ಗೆ ಅಭಿಜಾತ ಘನತೆಯನ್ನು ತಂದುಕೊಟ್ಟ ಶಿವಕುಮಾರ್ ಶರ್ಮ, ಭಾರತದ ಶ್ರೇಷ್ಠ ಸಂಗೀತ ಕಲಾವಿದರಲ್ಲಿ ಒಬ್ಬರು. ಕಳೆದ ಶತಮಾನದ ಆರಂಭದ ಎರಡು ದಶಕಗಳವರೆವಿಗೆ 'ಶತ ತಂತ್ರೀ ವೀಣಾ' ಎಂದು ಕರೆಯಿಸಿಕೊಂಡಿದ್ದ ಸಂತೂರ್‌ನ್ನು ಸೂಫೀಸಂತರು ತಮ್ಮ ತತ್ತ್ವಪದಗಳ ಗಾಯನ ಸಂದರ್ಭದಲ್ಲಿ ಬಾಜಿಸುತ್ತ ಶ್ರೋತೃಗಳನ್ನು ರಸಲೋಕಕ್ಕೆ ಒಯ್ಯುತ್ತಿದ್ದರು. ಬನರಾಸಿನ ಪಂ. ಬಡೆರಾಮ ದಾಸ್‌ಜಿಯವರ ಶಿಷ್ಯರೂ ಜಮ್ಮುವಿನ ಪ್ರಖ್ಯಾತ ಗಾಯಕರೂ ಆದ ಪಂಡಿತ್ ಉಮಾದತ್ತ ಶರ್ಮ ಸಂತೂರ್‌ನ ಮಾಧುರ್ಯಕ್ಕೆ ಮಾರುಹೋಗಿ ಅದರ ಸತ್ತ್ವವನ್ನು ಗುರುತಿಸಿದರು. ತಮ್ಮ ಏಕಮಾತ್ರ ಪುತ್ರ ಶಿವಕುಮಾರ್ ಶರ್ಮರನ್ನು ಈ ವಾದ್ಯದ ಬೈಠಕ್ಕಿಗೆ ಸಜ್ಜುಗೊಳಿಸಿದ್ದು ಈಗ ಇತಿಹಾಸ.

ಸಂತೂರ್ ವಾದನ ಶಿವಕುಮಾರ್ ಶರ್ಮರಿಗೆ ಸಾಕಷ್ಟು ಅಭಿಮಾನಿಗಳನ್ನು ಜನಪ್ರಿಯತೆಯನ್ನು ಇಂದು ದೇಶ ವಿದೇಶಗಳಲ್ಲಿ ದೊರಕಿಸಿಕೊಟ್ಟಿದೆ. ಆರಂಭದ ದಿನಗಳಲ್ಲಿ ಹತ್ತಾರು ರೇಡಿಯೋ ಕಾರ್ಯಕ್ರಮಗಳಲ್ಲಿ, ಹೆಚ್ಚಿನ ಬೈಠಕ್ಕುಗಳಲ್ಲಿ ಶರ್ಮರು ತೊಡಗಿಸಿಕೊಂಡಾಗ ಗಾನಲೋಕದ ಮಡಿವಂತರು ಮೂಗು ಮುರಿದರು! ೧೯೫೫ರಲ್ಲಿ ಮುಂಬಯಿನಲ್ಲಿ ನಡೆದ ಪಂ. ಶಿವಕುಮಾರ ಶರ್ಮರ ಸಂಗೀತ ಕಾರ್ಯಕ್ರಮ ಒಂದು ಅಪೂರ್ವ ಸಂದರ್ಭ ಹಾಗೂ ಪರಿವರ್ತನೆಯ ಕಾಲ. ಆ ಸಮಯದಲ್ಲಿ ಸಂಗೀತ ಕ್ಷೇತ್ರದ ಮಡಿವಂತರಿಂದ ಶರ್ಮರ ಬಗ್ಗೆ ಸಾಕಷ್ಟು ಟೀಕೆಗಳ ಸುರಿಮಳೆ, ಎದೆಗುಂದಿಸುವ ಪ್ರಸಂಗಗಳು ಎದುರಾದುವು. ಆದರೆ, ಈ ಎಲ್ಲಾ ಟೀಕೆಗಳನ್ನು ಅವರು ಸವಾಲಾಗಿ ಸ್ವೀಕರಿಸಿದರು. ಅಧ್ಯಯನ, ಚಿಂತನೆಗಳಿಂದ ಸಂತೂರ್ ವಾದ್ಯದ ಸುಧಾರಣೆಯ ಅಗತ್ಯವನ್ನು ಶಿವಕುಮಾರ್ ಶರ್ಮ ಮನಗಂಡರು. ತಲಸ್ಪರ್ಶಿಯಾಗಿ ಅಭ್ಯಸಿಸಿ, ವರ್ಣ ಸಮನ್ವಯದ 'ನೋಟ್ಸ್' ಸಿದ್ಧಗೊಳಿಸಿ ತ್ರಿಕಾಲಗಳಲ್ಲಿ ಸಂತೂರ್ ವಾದ್ಯದಿಂದ ತುಂಬುನಾದ ಬರುವಂತೆ ಪರಿವರ್ತಿಸಿದರು. ಪರಿಷ್ಕಾರಗೊಂಡ ಸಂತೂರ್ 'ಶ್ರುತಗಾನ'ಕ್ಕೆ ಸಿದ್ಧವಾಯಿತು.

ಶಿವಕುಮಾರ್ ಶರ್ಮರ ಕೌಶಲದಿಂದ ಪರಿಷ್ಕಾರಗೊಂಡ 'ಸಂತೂರ್'ಗೆ ಈಗ ಒಂದು ಘನತೆ ಬಂದಿದೆ. ಅರ್ಧ ಶತಮಾನ ಮೀರಿದ ಸಂಗೀತ ಕಾರ್ಯಕ್ರಮಗಳ ಮೂಲಕ ಶರ್ಮರು ಕೋಟಿ ಕೋಟಿ ರಸಿಕರನ್ನು ತಮ್ಮ ಈ ಮಾಯಾದಂಡದತ್ತ ಸೆಳೆದಿದ್ದಾರೆ. ಶ್ರೀಮಂತ ಜ್ಞಾನ, ಅಚ್ಚುಕಟ್ಟುತನ, ಸೀಮಾತೀತವಾದ ಸೃಷ್ಟಿಕ್ರಿಯೆ ಶ್ರೋತೃಗಳನ್ನು ಧನ್ಯರಾಗಿಸಿವೆ. ಈ ಎಲ್ಲಾ ಅಪೇಕ್ಷಣೀಯ

•ವಿವಿಧ ಮೂಲಗಳಿಂದ ಸಂಗ್ರಹ

ತಂತ್ರಗಳು ಸಂಗೀತಗಾರರನ್ನು, ವಿದ್ಯಾರ್ಥಿಗಳನ್ನು ಶರ್ಮರ ಬೈಠಕ್ಕಿಗೆ ತುದಿಗಾಲಲ್ಲಿ ನಿಲ್ಲುವಂತೆ ಮಾಡಿರುವುದರಲ್ಲಿ ಅಚ್ಚರಿಯಿಲ್ಲ.

ಸಂಗೀತ ಪರಂಪರೆಯನ್ನು ಜಡವಾಗಿಸಿ, ಅದನ್ನು ಸ್ಥಾಯಿಯಾಗಿ ಉಳಿಸುವುದರ ಬಗ್ಗೆ ಶರ್ಮರಿಗೆ ನಂಬಿಕೆಯಿಲ್ಲ. ತಮ್ಮ ಸಿದ್ಧಿಯನ್ನು ಮುಂದಿನ ತಲೆಮಾರಿಗೆ ರವಾನಿಸುವ ಸಂಚಾರಿ ಭಾವ ಇವರದು. ಶುದ್ಧ ಸಂಗೀತ ಕಾಯ್ದುಕೊಳ್ಳುವ ದೃಷ್ಟಿಯಿಂದ ಯಾವುದೇ ಸಂಸ್ಥೆ, ಸರ್ಕಾರದ ಅಡಿಯಾಳಾಗದೆ, ಭಾರತೀಯ ಗುರು, ಶಿಷ್ಯ ಪರಂಪರೆಯಲ್ಲಿ ಕವಡೆಕಾಸಿನಾಸೆಯಿಲ್ಲದೆ, ತಮ್ಮ ಗಾನವಿದ್ಯೆಯನ್ನು ಹೊಸ ಪೀಳಿಗೆಗೆ ನೀಡುತ್ತಲಿದ್ದಾರೆ. ಹೀಗಾಗಿ, ಭಾರತದ ಬೇರೆ ಬೇರೆ ಪ್ರಾಂತ್ಯಗಳಿಂದಲ್ಲದೆ, ಜಪಾನ್, ಜರ್ಮನಿ, ಆಸ್ಟ್ರೇಲಿಯಾ ಮತ್ತು ಅಮೆರಿಕಾ ಮುಂತಾದ ದೇಶಗಳಿಂದ ಶಿಷ್ಯರು ಶರ್ಮರನ್ನು ಅರಸಿ ಬರುತ್ತಿದ್ದಾರೆ.

ಸಂಗೀತದ ಪರಿಶುದ್ಧತೆಯ ಹೆಸರಿನಲ್ಲಿ ಅದನ್ನು ಜಡವಾಗಿಸುವ ಯಾವುದೇ ರಾಜಮಾರ್ಗಕ್ಕೆ ಸಿದ್ಧರಿರದ ಶರ್ಮ, ತಮ್ಮ ವಿಶಾಲ ಚಿಂತನೆಯ ಫಲಗಳಾದ ಅವರ 'ಕಣಿವೆಯ ಕರೆ' (Call of the Valley) ,'ಭಾವಗಳು' (Feelings) 'ಪರ್ವತ'(Mountain) ಇತ್ಯಾದಿ ಸಂಗೀತದ ಆಲ್ಬಂಗಳಲ್ಲಿ ವ್ಯಕ್ತವಾಗಿರುವುದನ್ನು ಗುರುತಿಸಬಹುದು. ಚಲನಚಿತ್ರ ಕ್ಷೇತ್ರದಲ್ಲಿ, ತಮ್ಮ ಅಪೂರ್ವ ರಾಗಸಂಯೋಜನೆಯಿಂದ ಯಶಸ್ವೀ ಸಂಗೀತ ನಿರ್ದೇಶಕರ ಸಾಲಿನಲ್ಲಿ ಶರ್ಮರು ಒಬ್ಬರು ಎಂಬುದನ್ನು ಮರೆಯುವಂತಿಲ್ಲ. ಇವರ ಪ್ರಯತ್ನದ ಫಲವಾಗಿ ಕಳೆದ ನಾಲ್ಕು ದಶಕಗಳಿಂದ 'ಸಂತೂರ್' ಸಿನಿಮಾ ಸಂಗೀತದ ಅವಿಭಾಜ್ಯ ಅಂಗವಾಗಿದೆ. ಶರ್ಮರು ರಾಗ ಸಂಯೋಜಿಸಿದ 'ಸಿಲ್‌ಸಿಲಾ', ಲಾಮಾಹಿ, ಚಾಂದನಿ, ಡರ್ ಚಿತ್ರಗಳ ಹಾಡುಗಳು ಹೊರನಾಡಿನಲ್ಲಿ ಪ್ರಸಿದ್ಧವಾಗಿವೆ.

ಶಿವಕುಮಾರ್ ಶರ್ಮರ ದೃಷ್ಟಿಯಲ್ಲಿ ಸಂಗೀತ ಆತ್ಮದ ಆಹಾರ, ಸ್ವಾಭಾವಿಕವಾಗಿ ಸಂಗೀತ ಎನ್ನುವುದು ಧ್ಯಾನ ಸ್ಥಿತಿಗೆ ಒಯ್ಯುವ ಒಂದು ಅಪೂರ್ವ ಸಾಧನ. ಪ್ರಾಚೀನ ಭಾರತದ ವೇದಾಂತ ಫಲರೂಪವಾದ ಉಪನಿಷತ್ತಿನ ವಾಣಿಯನ್ನು ಒಂದು ಆಲ್ಬಂನಲ್ಲಿ ಕಾಯ್ದಿಟ್ಟು, ರಸಿಕರಿಗೆ ಒದಗಿಸುವ ಅಭಿಲಾಷೆ ಶರ್ಮರದು. ಕಳೆದ ನಾಲ್ಕು ದಶಕಗಳಿಂದ ದೇಶವಿದೇಶದ ರೆಕಾರ್ಡಿಂಗ್ ಕಂಪನಿಗಳು ನೂರಾರು ಎಲ್.ಪಿ, ಸಿ.ಡಿಗಳಲ್ಲದೆ ಕ್ಯಾಸೆಟ್‌ಗಳಲ್ಲೂ ಶರ್ಮರ ಸಂತೂರ್ ವಾದವನ್ನು ಧ್ವನಿ ಮುದ್ರಿಸಿಕೊಂಡಿವೆ. ತರುಣ ಜನಾಂಗಕ್ಕೆ ತಮ್ಮ ಅಮೋಘ ಗಾನ ವೈಭವವನ್ನು ವೀಡಿಯೋ ಚಿತ್ರೀಕರಿಸಿ ಯಶಸ್ವೀಯಾದವರಲ್ಲಿ ಶಿವಕುಮಾರ ಶರ್ಮ ಒಬ್ಬರು.

ತಮ್ಮ ವಿಶಾಲ ಹಾಗೂ ಬಹುಮುಖ ಸಾಧನೆಯಿಂದ ಕೀರ್ತಿಶಾಲಿಯಾಗಿರುವ ಶರ್ಮರಿಗೆ ರಾಷ್ಟ್ರೀಯ, ಅಂತಾರಾಷ್ಟ್ರೀಯ ಪ್ರಶಸ್ತಿಗಳು ಸಂದಿವೆ. ಅಮೆರಿಕಾದ ಗೌರವ ನಾಗರೀಕ(೧೯೮೫), ಸಂಗೀತ ನಾಟಕ ಅಕಾಡೆಮಿ ಪುರಸ್ಕಾರ (೧೯೮೬), ಮಹಾರಾಷ್ಟ್ರ ಗೌರವ ಪುರಸ್ಕಾರ(೧೯೯೦), ಜಮ್ಮು ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್ (೧೯೯೧), ಪದ್ಮಶ್ರೀ(೧೯೯೧) ಮತ್ತು ಉಸ್ತಾದ್ ಹಾಫೀಜ್ ಅಲೀಖಾನ್ ಪ್ರಶಸ್ತಿ (೧೯೯೮) ಇವನ್ನು ಹೆಸರಿಸಬಹುದಾಗಿದೆ.

೧೯೩೮ರಲ್ಲಿ ಜನಿಸಿದ ಶಿವಕುಮಾರ್ ಶರ್ಮ ಒಬ್ಬ ಶ್ರೇಷ್ಠ ರಾಗ ಸಂಯೋಜಕರಾಗಿ, ಪ್ರಜ್ಞಾವಂತ ನಾಗರಿಕರಾಗಿ, ಕಲಾ ವಿದ್ಯಾರ್ಥಿಗಳಿಗೆ ಅಪರೂಪದ ಕರುಣಾಮೂರ್ತಿಯಾಗಿದ್ದಾರೆ.

ರಸರುಚಿಗಳನು ಕಲಿಸಿ ಪಕ್ವಾನ್ನಗಳ ಪಚಿಸಿ
ರಸನೆಯಲಿ ನೀರಿಳಿಸಿ ಬಿಸಿಯುಸಿರ ಬಿಡಿಸಿ
ದಶದಿಶೆಗಳಿಂ ಮುತ್ತಿ ಬರುವ ಪ್ರಕೃತಿಗದಾರು
ವಶನಾಗದಿಹ ನರನು ? ಮಂಕುತಿಮ್ಮ

ಹೀಗಿವೆ ಸತ್ಯಂ-ಶಿವಂ-ಸುಂದರಂ ಮಧುರ ಪಾಕವಾಗಿರುವ ಶಿವಕುಮಾರ ಶರ್ಮರ ವಿನಿಕೆಯ ಮರ್ಮ ಮತ್ತು ಧರ್ಮ!

''ಏನಾದರೂ ನಿನಗೆ ಬೇಕಾ ?''

ಕೆ. ಸುಕನ್ಯ ಭಟ್
ಮಗೀರಾ ಹೌಸ್
ಕದ್ರಿ ರಾಕ್ ಸೈಡ್
ಮಂಗಳೂರು ೫೭೫ ೦೦೪

''ಒಂದು ಸಾಧಾರಣ ಪ್ರಶ್ನೆ, ತಾಯಿ-ಮತ್ತು ಮಗಳ ನಡುವೆ ಇದ್ದ ಗೋಡೆಯನ್ನು ಕೆಡವಿ ಹಾಕಿತು!''

ಆ ದಿನ ಡಿಸ್ಕೌಂಟ್ ವಟ್ಟಾ ಅಂಗಡಿಯಲ್ಲಿ ಜನಜಂಗುಳಿ ಸೇರಿತ್ತು. ಕಣ್ಣು ಕುಕ್ಕುವಂತಹ ವಿಧ-ವಿಧವಾದ ಸಾಮಾನುಗಳನ್ನು ಬಡುಗಳಲ್ಲಿ ತುಂಬಿಸಿದ್ದರು. ಅಂಗಡಿಯ ಮಧ್ಯ ಭಾಗದಲ್ಲೂ ಉಳಿದ ಸಾಮಾನುಗಳನ್ನು ರಾಶಿ ಹಾಕಿದ್ದರಿಂದ ಅಲ್ಲಿ ಓಡಾಡುವವರಿಗೆ ಕಷ್ಟವಾಗುತ್ತಿತ್ತು. ಆ ಜನದಟ್ಟಣೆಯ ಮಧ್ಯೆಯೂ ನಾನು ನನ್ನ ಗಾಡಿಯನ್ನು ತಳ್ಳಿಕೊಂಡು ಹೊರಟಿದ್ದೆ.

ಇದ್ದಕ್ಕಿದಂತೆ , ಸಣ್ಣ ಹುಲ್ಲುಗಾವಲಿನ ಮೇಲೆ ಕುಳಿತಿದ್ದ ತಾಯಿ-ಮಗುವಿನ ಸುಂದರವಾದ ತೈಲಚಿತ್ರವೊಂದು ನನ್ನ ಕಣ್ಣುಗಳನ್ನು ಸೆರೆ ಹಿಡಿಯಿತು. ಸ್ವಲ್ಪ ದೂರದಲ್ಲಿ ಕುಳಿತಿದ್ದ ಅವರಿಬ್ಬರೂ, ಒಬ್ಬರನ್ನೊಬ್ಬರು ನೋಡುತ್ತಿದ್ದರು. ಹೆಂಗಸಿನ ಮುಖದಲ್ಲಿ ಗಾಂಭೀರ್ಯ ಇದ್ದರೆ, ಮಗಳ ಮುಖದಲ್ಲಿ ಒಂದು ರೀತಿಯ ಕಳವಳ ಎದ್ದು ಕಾಣುತ್ತಿತ್ತು.

ಕಾಲ ಮತ್ತು ಜಾಗೆಯ ಪರಿವೆ ಇಲ್ಲದಂತೆ ನಾನು, ಗಟ್ಟಿಯಾಗಿ ಅಲ್ಲೇ ನಿಂತು ಪರವಶಳಾದವಳಂತೆ ಆ ಚಿತ್ರವನ್ನೇ ನೋಡುತ್ತಿದ್ದೆ. ಒಂದುಕ್ಷಣ ನನಗೆ ಉಸಿರು ಕಟ್ಟಿಸುವಂತಿದ್ದ ಆ ಜಾಗೆ, ಸದ್ದು-ಗದ್ದಲ, ಜನರು, ಎಲ್ಲವನ್ನು ಮರೆತೆ ಮತ್ತು ನಾನೊಂದು ಪ್ರಶಾಂತವಾದ, ಅಲೌಕಿಕ ಲೋಕದೊಳಗೆ ಹೋದ ಹಾಗೆ ಅನಿಸಿತ್ತು.

ಏಕೆ ಹಾಗೆ ಆಯಿತೆಂದು ನಿಜಕ್ಕೂ ನನಗರಿವಾಗದಿದ್ದರೂ.... ಆ ಭಾವಚಿತ್ರವನ್ನು ಖರೀದಿಸಿದ್ದೆ. ಅದನ್ನು ಮನೆಗೆ ತೆಗೆದುಕೊಂಡು ಹೋಗಿ, ''ತಾಯಿ-ಮಗಳು'' ಎಂದು ಆ ಚಿತ್ರಕ್ಕೆ ಹೆಸರಿಟ್ಟೆ. ಮೊದ-ಮೊದಲು ದಿನದಲ್ಲಿ ಅನೇಕ ಸಲ ಅದನ್ನು ಗಮನಿಸುತ್ತಿದ್ದೆ, ಪ್ರತಿ ಸರ್ತಿ ನನಗೆ ಆ ಚಿತ್ರ ನೋಡಿದಾಗ, ಹೆಂಗಸಿನ ನಿಷ್ಠುರ ಮುಖ-ಭಾವ ಮತ್ತು ಮಗಳ ತಬ್ಬಿಬ್ಬು ಎದ್ದು ಕಾಣುತ್ತಿತ್ತು.

ಆ ಚಿತ್ರ ತಂದಿಟ್ಟುಕೊಂಡ ಎರಡು ತಿಂಗಳುಗಳು ಕಳೆದುವು. ಆಗ ಮೊದಲ ಬಾರಿಗೆ ನಾನು ಗರ್ಭಿಣಿಯಾಗಿದ್ದೆ. ಆನಂದಪರವಶಳಾದೆ. ಗರ್ಭಿಣಿ ಹೆಂಗಸು ಮಾಡುವಂತಹ ಎಲ್ಲ ಕೆಲಸಗಳನ್ನು ಮಾಡುವುದರಲ್ಲಿ ನಾನು ಖುಷಿ ಪಡುತ್ತಿದ್ದೆ. ಕೆಲಸಗಳನ್ನು ಕಡಿಮೆ ಮಾಡುತ್ತಿದ್ದೆ ಮತ್ತು ಸಮತೂಕದ ಆಹಾರ ಸೇವಿಸುತ್ತಿದ್ದೆ. ಮಗುವಿನೊಡನೆ ಪ್ರತಿದಿನ ಮಾತಾಡುತ್ತಿದ್ದೆ. ಭ್ರೂಣಾವಸ್ಥೆಯಲ್ಲಿ ಮಗು ಇರುವುದೆಂದು ಅಲ್ಟ್ರಾಸೌಂಡ್‌ನಲ್ಲಿ ಕಂಡಿದ್ದರೂ, ನನ್ನ ಮಟ್ಟಿಗೆ ಮಗುವಿಗೆ ಆತ್ಮವಿತ್ತು. ಆರು ತಿಂಗಳ ಅನಂತರ ಮತ್ತೊಮ್ಮೆ ವೈದ್ಯರನ್ನು ಕಾಣಲು ಹೋಗಿದ್ದೆ.

''ಅಭಿನಂದನೆಗಳು! ಹೆಣ್ಣುಮಗು'' -ಎಂದು ಅಲ್ಟ್ರಾಸೌಂಡ್ ಮಾಡಿ ಪರೀಕ್ಷಿಸಿದ ವೈದ್ಯ ಹೇಳಿದ್ದ.

''ಹೆಣ್ಣುಮಗು -ಎಂಬ ಸುದ್ದಿ ಕೇಳಿ ನನಗೆ ಅಳುಬರುವಂತೆ ಆದದ್ದು ನನಗೇ ಅಚ್ಚರಿ ತಂದಿತ್ತು.

ಅನೇಕ ವರ್ಷಗಳಿಂದ ನಾನು ಹೇಳಿಕೊಳ್ಳುತ್ತಿದ್ದೆ.... ನನಗೆ ಹೆಣ್ಣು ಅಥವಾ ಗಂಡು ಮಗು, ಇಬ್ಬರಲ್ಲಿ ಯಾವುದು ಹುಟ್ಟಿದರೂ ನಾನು ಸಂತಸ ಪಡುತ್ತೇನೆ ಎಂದು. ತನಗೂ ಹೆಣ್ಣು ಮಗುವೇ ಇಷ್ಟ ಎಂದು ನನ್ನ ಗಂಡನೂ ತಿಳಿಸಿದ್ದ. ಯಾಕೆ ಇದ್ದಕ್ಕಿದ್ದಂತೆ ನನಗಷ್ಟು ಬೇಜಾರಾಯಿತೆಂದು ನನಗೇ ಗೊತ್ತಾಗಲಿಲ್ಲ!

೨೦೦೦ದ ಏಪ್ರಿಲ್ ತಿಂಗಳ ರೀಡರ್ಸ್ ಡೈಜೆಸ್ಟ್‌ನಲ್ಲಿ ಪ್ರಕಟವಾದ ಸ್ಕಿಂಗ್ ಫ್ಲಾನ್ ರವರ ''ಎನಿಥಿಂಗ್ ಯೂ ಸೀಡ್'' ಎಂಬ ಲೇಖನದ ಅನುವಾದ

ಕೆಲವು ದಿನಗಳ ಬಳಿಕ ನನ್ನ ತಾಯಿಯನ್ನು ಕಾಣಲು ಹೋಗಿದ್ದೆ. ಊಟದ ಮೇಜಿನ ಬಳಿ ಕುಳಿತು, ತಾಯಿ ನನಗಾಗಿ ವಿಶೇಷವಾದ ಆಹಾರ ತಯಾರಿಸುವುದನ್ನು ನೋಡುತ್ತಿದ್ದೆ. ಒಂದು ಬದಿಯಲ್ಲಿ ನಾನು ಕುಳಿತಿದ್ದುದರಿಂದ ಕೆಲಸ ಮಾಡುತ್ತಿದ್ದ ತಾಯಿಯ ಬೆನ್ನು ಮಾತ್ರ ನನಗೆ ಕಾಣುತ್ತಿತ್ತು. ಅದಂತೂ ನನಗೆ ಚಿರಪರಿಚಿತವಾದ ದೃಶ್ಯವೂ ಆಗಿತ್ತು.

ಹೆಚ್ಚು ಎತ್ತರವಿಲ್ಲದ ಮಣೆಯಲ್ಲಿ ಕುಳಿತು ತಾಯಿ ಬಟ್ಟೆ ತೊಳೆಯುತ್ತಿದ್ದುದನ್ನು ನಾನು ಚಿಕ್ಕವಳಿದ್ದಾಗ ನೋಡುತ್ತಿದ್ದುದನ್ನು ನೆನಪಿಸಿಕೊಂಡೆ. ಹವಾಮಾನ ೧೦ ಡಿಗ್ರೀ ಇದ್ದಾಗಲೂ, ಅವಳು ಬಗ್ಗಿ ಎರಡು ಕೈಗಳನ್ನು ನೀರಿನಲ್ಲಿ ಅದ್ದಿ ಬಟ್ಟೆ ತಿಕ್ಕುತ್ತಿದ್ದಳು. ಸಾಬೂನಿನ ಖಾರದಿಂದ ಮತ್ತು ಚಳಿಯಿಂದ ಅವಳ ಕೈಗಳು ಜಡ್ಡು ಕಟ್ಟಿದ್ದುವು.

ಮತ್ತೆ ಕೆಲವು ಸಲ, ಮನೆಯಲ್ಲೇ ಅವಳು ತನ್ನ ಪಾರ್ಟ್‌ಟೈಮ್ ಕೆಲಸಗಳನ್ನು ಅಂದರೆ, ಕೈಚೀಲಗಳನ್ನು ಹೊಲಿಯುವುದು, ಎಲೆಕ್ಟ್ರಾನಿಕ್ ಉಪಕರಣಗಳ ಸೋಲ್ಡರಿಂಗ್ ಮತ್ತು ಚಿತ್ರದ ಬುಟ್ಟಿಗಳ ಹೆಣಿಗೆ ಮಾಡುವುದರಲ್ಲಿ ಮಗ್ನಳಾಗಿರುತ್ತಿದ್ದುದನ್ನು ನಾನು ನೋಡುತ್ತಿದ್ದೆ. ಅವಳು ಮಾಡುವ ಕೆಲಸಗಳನ್ನೆಲ್ಲ ನಾನು ಬದಿಯಲ್ಲಿ ಕುಳಿತು ತದೇಕಚಿತ್ತಳಾಗಿ ನೋಡುತ್ತಿದ್ದೆ.

ನನ್ನ ಸಲುವಾಗಿ ಕಷ್ಟಪಟ್ಟು ದುಡಿಯುತ್ತಿದ್ದ ತಾಯಿಯ ಮೇಲೆ ನನಗೆ ಅಭಿಮಾನವಿತ್ತು. ಅವಳ ಮೇಲೆ ನನಗಿದ್ದ ಒಂದೇ ಒಂದು ದೂರು ಎಂದರೆ-ನನ್ನ ಇಷ್ಟಾನಿಷ್ಟಗಳ ಬಗ್ಗೆ ಅವಳ ನಿರ್ಲಕ್ಷ್ಯ. ನಾನು ಬೆಳೆಯುತ್ತಿದ್ದಂತೆ ನನ್ನ ಇಷ್ಟಗಳು (ಬೇಕು-ಬೇಡಗಳು) ಮತ್ತು ಅವಳು ನನಗಾಗಿ ಮಾಡುತ್ತಿದ್ದುದರಲ್ಲಿ ಅಜಗಜಾಂತರವಿರುತ್ತಿತ್ತು. ನಮ್ಮಿಬ್ಬರ ಭಾವನೆಗಳ ಮಧ್ಯೆ ಇರುತ್ತಿದ್ದ ಕಂದಕದ ಅರಿವೇ ಅವಳಿಗಿರುತ್ತಿರಲಿಲ್ಲ. ಅವಳೆಂದಿಗೂ ''ನಿನಗೇನು ಬೇಕು?'' ಎಂದು ಕೇಳುತ್ತಿರಲಿಲ್ಲ. ಅದರ ಬದಲಿಗೆ ತನಗಿಷ್ಟವಾದುದನ್ನು ನನಗೆ ಬಲಾತ್ಕಾರವಾಗಿ ಕೊಡುತ್ತಿದ್ದಳು. ನನಗಿಷ್ಟವಿಲ್ಲದ ಆಹಾರ ನಾನು ತಿನ್ನಬೇಕಿತ್ತು. ಬಟ್ಟೆ ಮತ್ತು ಶೂಗಳು ಕೂಡ ನನಗೆ ಸರಿಹೊಂದದಿದ್ದರೂ ಹಾಕಿಕೊಳ್ಳಬೇಕಾಗುತ್ತಿತ್ತು. ಅವಳಿಗಿಷ್ಟವಾದ ರೀತಿಯಲ್ಲೇ ನಾನು ಜಡೆ ಕಟ್ಟಿಕೊಳ್ಳಬೇಕಾಗುತ್ತಿತ್ತು.

ನಾನು ಚಿಕ್ಕವಳಿದ್ದಾಗ, ಅಸೌಖ್ಯವಾದಾಗೆಲ್ಲ ತಾಯಿ ಬಹಳ ಮುತುವರ್ಜಿಯಿಂದ ಗಿಡಮೂಲಿಕೆಗಳ ಕಷಾಯಮಾಡಿ ಕುಡಿಯಲು ಕೊಡುತ್ತಿದ್ದಳು. ಆದರೆ ನಾನದರ ಒಗರು ರುಚಿಗಾಗಿ, ನುಂಗದೆ ಉಗಿದುಬಿಟ್ಟಾಗ, ತಾಯಿ ತನ್ನ ಪ್ರಯತ್ನ ಫಲಕಾರಿಯಾಗದಿದ್ದುದಕ್ಕೆ ಬೇಸರಪಟ್ಟರೂ ಅದನ್ನು ತೋರಿಸಿಕೊಳ್ಳದೆ, ಒಳಗೇ ಬೇಸರ ನುಂಗಿಕೊಳ್ಳಬೇಕಾಗುತ್ತಿತ್ತು.

ನಾನು ದೊಡ್ಡವಳಾದಮೇಲೆ, ನನಗಿಷ್ಟ ಬಂದಂತೆ ಮಾಡುವುದಾಗಿ ಹಟಹಿಡಿಯುತ್ತಿದ್ದೆ. ಅದು ತಾಯಿ ಹೃದಯ ಚೂರಾಗಿಸಿತ್ತು. ನಾನವಳನ್ನು ತಿರಸ್ಕರಿಸುತ್ತಿದ್ದೇನೆಂದು ಅವಳು ತಿಳಿಯುತ್ತಿದ್ದಳು.

ಕ್ರಮೇಣ ನಾವಿಬ್ಬರೂ ಭಾವನಾತ್ಮಕವಾಗಿ ಬೇರೆ ಆದೆವು. ತಾಯಿಯನ್ನು ಹಿಂದಿನಿಂದಲೇ ಗಮನಿಸುವ ಅಭ್ಯಾಸವನ್ನಿಟ್ಟುಕೊಂಡಿದ್ದೆ. ನಮ್ಮಿಬ್ಬರ ಮಧ್ಯೆ ಏರ್ಪಡುತ್ತಿದ್ದ ದೂರಕ್ಕೆ ಹೊಂದಿಕೊಳ್ಳುತ್ತಿದ್ದೆ. ಆದರೆ ಈ ರೀತಿಯ ಸಂಬಂಧ ನನಗಿಷ್ಟವಿತ್ತೆ? ಅದರ ಬಗ್ಗೆ ನಾನು ಹೆಚ್ಚು ತಲೆಕೆಡಿಸಿಕೊಳ್ಳಲಿಲ್ಲ. ಅವಳೂ ನನ್ನನ್ನರ್ಥಮಾಡಿಕೊಳ್ಳಲು ಪ್ರಯತ್ನಿಸುತ್ತಿರಲಿಲ್ಲ. ಅವಳಿಗೆ ಎಂದೂ ನನ್ನತ್ತ ತಿರುಗಿ, ''ಮಗಳೆ... ನಿನಗೇನು ಬೇಕು?'' ಎಂದು ಕೇಳಬೇಕೆನಿಸಲೇ ಇಲ್ಲ.

ಈಗ ವಯಸ್ಕಳಾಗಿ ತಾಯಿಯನ್ನು ಕಾಣಲು ಹೋದಾಗಲೂ, ಅಲ್ಲಿ ಏನೂ ಬದಲಾವಣೆಯಾಗಿರಲಿಲ್ಲ. ರಾತ್ರಿ ಊಟಕ್ಕೆ ಅವಳು ಚೈನೀಸ್ ಏಂಜಲಿಕ ಚಿಕನ್ ನನಗೆ

ತುಂಬಾ ಇಷ್ಟವಿರಬಹುದು ಎಂದು, ತಾನೇ ಊಹಿಸಿಕೊಂಡು ತಯಾರಿಸುವುದರಲ್ಲಿ ಮಗ್ನಳಾಗಿದ್ದಳು. ಗರ್ಭಿಣಿಯಾಗಿದ್ದ ನನಗೆ ಮಾತ್ರ, ಹಸಿವೂ ಇಲ್ಲದೆ ಇದ್ದುದರಿಂದ ವಾಂತಿ ಬರುವಂತಾಗುತ್ತಿತ್ತು. ನಾನು ತಿನ್ನಲು ಬೇಡವೆಂದು ತಿರಸ್ಕರಿಸಿದರೆ, ಅವಳನ್ನೆ ತಿರಸ್ಕರಿಸಿದ್ದೇನೆಂದು ಅವಳು ತಿಳಿದುಕೊಳ್ಳುತ್ತಾಳೆ. ಅವಳೇ ನನ್ನ ಮೇಲಿನ ಸಿಟ್ಟಿನಿಂದ ಪೂರಾ ಚಿಕನ್ ತಾನೇ ಹೇಗಾದರೂ ಮಾಡಿ ನುಂಗುತ್ತಾಳೆ. ಮತ್ತೆ ಊಟ ಬಿಟ್ಟದ್ದಕ್ಕಾಗಿ ಗದರಿಸುತ್ತಾಳೆ. ಅನೇಕ ದಿನಗಳವರೆಗೆ ಮಾತೂ ಬಿಡುತ್ತಾಳೆ. ನನ್ನ ಒಳಿತನ್ನೇ ಬಯಸುವ ತಾಯಿ ನನ್ನ ಬೇಕು-ಬೇಡಗಳನ್ನು ನಿರ್ಲಕ್ಷಸಿದ್ದಕ್ಕಾಗಿ ನನಗೆ ಆಶಾಭಂಗವಾಗಿತ್ತು. ಆದರೆ ಅವತ್ತು ಮತ್ತೊಮ್ಮೆ ಮಮತೆ ಕೈ ಮಿಗಿಲಾಯಿತು.

ತಾಯಿ ನನಗಾಗಿ ತಯಾರಿಸಿದ್ದ ಚಿಕನ್‌ನ ಕಾಲನ್ನು ಪ್ರಯಾಸದಿಂದ ತಿಂದು ಅವಳ ಶ್ರಮಕ್ಕೆ ಗೌರವ(ಬೆಲೆ) ಕೊಟ್ಟೆ. ರಾತ್ರಿ ಹಾಸಿಗೆಯಲ್ಲಿ ಮಲಗಿದಾಗ ಹೊಟ್ಟೆ ತೊಳಸಿದಂತೆ ಆಗುತ್ತಿತ್ತು. ನಿದ್ರಾಭಂಗ ಆಗಾಗ ಆಗುತ್ತಿದ್ದರೂ ಕನಸಿನ ಲೋಕಕ್ಕಿಳಿದಿದ್ದೆ. ಅಜ್ಜಿಯ ಮನೆಯ ಅಂಗಳದ ದೃಶ್ಯ ನನ್ನ ಕಣ್ಣ ಮುಂದೆ ಬಂದಂತಾಯ್ತು.

ಚಿಕ್ಕದಾಗಿ ಕತ್ತರಿಸಿದ ತಲೆಗೂದಲು, ಪುಟ್ಟ ಫರ್‌ಕೋಟ್ ಧರಿಸಿದ್ದ ನನ್ನ ತಾಯಿ ಅಳುತ್ತ ಒಂದು ಹೆಂಗಸಿನ ಅಂಗಿ ಹಿಡಿದೆಳೆಯುತ್ತಿದ್ದುದ್ದನ್ನ ನಾನು ಕಂಡೆ. ಬೆನ್ನು ತೋರಿಸುತ್ತ ನಿಂತಿದ್ದ ಆ ಹೆಂಗಸು ತಲೆ ತಿರುಗಿಸಿದಾಗ ನನಗೆ ಚಿರಪರಿಚಿತವಾದ ಅವಳ ಮುಖ ಕಂಡಿತ್ತು. ಅದು ನನ್ನ ಅಜ್ಜಿಯದ್ದಾಗಿತ್ತು. ಗಲಿಬಿಲಿ ಮತ್ತು ಗಾಬರಿಗೊಂಡ ನಾನು ಆಗ ನಿದ್ದೆಯಿಂದ ಎದ್ದುಬಿಟ್ಟೆ.

ನನ್ನ ಜೀವನ ಪೂರ್ತಿ, ತಾಯಿ, ''ನಿನಗೇನು ಬೇಕು?'' ಎಂದು ಕೇಳಬಹುದು ಎಂದು ನಾನು ಕಾದಿದ್ದೆ. ಆಸೆ-ನಿರಾಸೆಯಾಗಿತ್ತು. ಆಶಾಭಂಗ ಕೂಡಾ ಆಗಿತ್ತು. ಹತಾಶೆ ಕ್ರಮೇಣ ನಿರ್ಲಕ್ಷ್ಯವಾಗಿ ಮಾರ್ಪಾಟಾಗಿತ್ತು. ಅದು ನಮ್ಮಿಬ್ಬರ ಮಧ್ಯೆ ಒಂದು ಗಟ್ಟಿಯಾದ ಗೋಡೆಯಂತಾಗಿತ್ತು. ತಾಯಿ-ಮಗಳ ನಡುವೆ ಒಂದು ಕಂದಕದ ನಿರ್ಮಾಣವಾಗಿತ್ತು.

ನನ್ನಂತೆ ನನ್ನ ತಾಯಿಯೂ ತನ್ನನ್ನು ಯಾರಾದರೂ ''ನಿನಗೇನು ಬೇಕು''?-ಎಂದು ಕೇಳುತ್ತಾರೇನೊ ಎಂದು ಇಷ್ಟು ದಿನ ಕಾದಿರಬಹುದು ಎಂದು ನನಗಾಗ ಅನಿಸ ತೊಡಗಿತು.

ಪುನಃ ನಿದ್ದೆಗೆ ಜಾರಿದಾಗ, ತಾಯಿ ಪುನಃ ಕಣ್ಮುಂದೆ ಬಂದಳು. ಮೊದಲಿದ್ದಂತೆ ತನ್ನ ಬೆನ್ನನ್ನು ನೆಟ್ಟಗೆ (ಗೋಡೆಯಂತೆ) ಮಾಡಿ ನಿಂತಿರದೆ ಬಾಗಿದ್ದಳು. ಅನೇಕ ವರ್ಷಗಳ ದುಡಿತ ಅವಳ ಬೆನ್ನನ್ನು ಬಾಗಿಸಿದೆ ಅನಿಸಿತು. ಆರು ವರ್ಷದವಳಿದ್ದಾಗ ನನಗೆ, ಅನಿಸುತ್ತಿದ್ದಂತೆ ಈಗ ಅನಿಸಲೇ ಇಲ್ಲ. ನಮ್ಮಿಬ್ಬರ ಮಧ್ಯೆ ಏರ್ಪಟ್ಟ ಕಂದಕವನ್ನು ದೊಡ್ಡವಳಾದ ನಾನೀಗ ಸುಲಭವಾಗಿ ದಾಟಬಲ್ಲೆ ಎನಿಸಿತು.

ರಾತ್ರಿ ಬಹಳವಾಗಿದ್ದರೂ ಎದ್ದು ನಾನವಳ ಕೋಣೆಗೆ ಹೋದೆ. ಆವಳಾಗ ಎಚ್ಚರದಿಂದ ಇದ್ದಳು. ಅಲ್ಲೇ ನಾನು ಕುಳಿತು ಹರಟೆ ಹೊಡೆಯುತ್ತ ಅಮ್ಮನ ಜೀವನದ ಬಗ್ಗೆ ವಿಚಾರಿಸಿದೆ. ಅವಳೂ ತಲೆ ತಗ್ಗಿಸಿ ಹೇಳತೊಡಗಿದಳು. ಬಹಳ ಹಿಂದೆ ಕಾರ್ಖಾನೆಯಲ್ಲಿ ನಡೆದಿದ್ದ ನನಗೆ ಇದುವರೆಗೂ ತಿಳಿಯದಿದ್ದ ಘಟನೆಗಳನ್ನು ಹೇಳಿದ್ದಳು. ಅವಳೂ, ಇಷ್ಟು ಕಾಲ, ತನ್ನನ್ನು ಯಾರಾದರೂ ಕೇಳಲಿ ಎಂದು ಕಾದಿರಬಹುದು ಎಂದು ಆಗ ನನಗನಿಸಿತ್ತು.

ಬೆಳಗಾಗುವವರೆಗೂ ಮಾತು ಮುಂದುವರಿಸಿದ್ದೆವು. ''ಅಮ್ಮಾ...ನಿನಗೆ ಇದುವರೆಗೆ ಏನಾದರೂ ಬೇಕು ಎಂದು ಅನಿಸಲೇ ಇಲ್ವಾ''? ಎಂದು ನಾನು ಕೇಳಿದ್ದೆ.

ಅವಳಾಗ, ಚಿಕ್ಕ ಹುಡುಗಿಯ ಮುಗ್ಧ ನಗು ನಕ್ಕಳು. ಅದೇ ನನ್ನ ಪ್ರಶ್ನೆಗೆ ಉತ್ತರವಾಗಿತ್ತು.

ಒಂದು ಸಲ ಯಾರೋ... ನಿನ್ನ ಆಂಟಿಗೆ ಬಹಳ ನುಣುಪಾದ, ಬಿಳಿ ಇದ್ದ ಪೌಡರ್ ಮುಖಕ್ಕೆ ಹಚ್ಚಲು ಕೊಟ್ಟಿದ್ದರು. ಮುಖದ ಮೇಲೆ ಹಚ್ಚಿದಾಗ ಬಹಳ ಚೆಂದ ಕಾಣ್ತಿತ್ತು "-ಎಂದೂ ಅಮ್ಮ ಹೇಳಿದ್ದಳು.

"ನಿನಗಾಗಿ ನಾನು, ಅಂತಹ ಪೌಡರ್ ಹುಡುಕುತ್ತೇನೆ" ಎಂದಾಗ ಅವಳು "ಅದರ ಆವಶ್ಯಕತೆ ಇಲ್ಲ" ಎಂದಳು. "ನನ್ನ ಆಸೆಗಳನ್ನು ಪೂರೈಸುವುದಿರಲಿ, ನಿನಗೇನು ಬೇಕೆಂದು ಇದುವರೆಗೂ ನನ್ನನ್ನಾರೂ ಕೇಳಿಯೇ ಇಲ್ಲ" ಎಂದು ಬಿಟ್ಟಳು. ಸೂರ್ಯನಷ್ಟು ಪ್ರಕಾಶಮಾನವಾಗಿತ್ತು ಅವಳು ಅಂದು ನಕ್ಕನಗು ಮತ್ತು ಆರು ವರ್ಷದ ಹುಡುಗಿಯ ಮುಗ್ಧತೆಯೂ ಆ ನಗುವಿನಲ್ಲಿತ್ತು.

ನಾನು ತಾಯ್ನಾಡಿಗೆ ಹಿಂತಿರುಗಿದೊಡನೆ ಬಿಳಿ ಪೌಡರನ್ನು ಖರೀದಿಸಿ ಅಮ್ಮನಿಗೆ ಕಳಿಸಿದ್ದೆ.

ಎರಡು ದಿನಗಳಲ್ಲಿ ದೂರವಾಣಿಯ ಮುಖಾಂತರ ತಾಯಿ ಕಳಿಸಿದ ಸಂದೇಶದಲ್ಲಿ -"ಧನ್ಯವಾದಗಳು ನನ್ನ ಮಗಳೇ" ! ಪೌಡರು ಬಹಳ ಚೆನ್ನಾಗಿದೆ. ಬಹಳ ಖರ್ಚು ಆಗಿರಬಹುದು. ನಾನು ನಿನಗೆ ಹಣ ಕಳಿಸುತ್ತೇನೆ", ಎಂದು ತಿಳಿಸಿದ್ದಳು. ಅವಳಾಡಿದ ಧ್ವನಿಯಲ್ಲಿ ಸಂತಸ ತುಂಬಿ ತುಳುಕುತ್ತಿತ್ತು.

ಓದುತ್ತಿದ್ದಾಗ ನಾನು "ಹತ್ತು ವರ್ಷ" ಮತ್ತು ಮದುವೆಯಾದ ಅನಂತರ 'ಏಳು ವರ್ಷ' ಅವಳಿಂದ ದೂರವಿದ್ದೆ. ತಂದೆಯು ಕಾರಿನ ಅಪಘಾತಕ್ಕೀಡಾದಾಗ ಮಾತ್ರ ಅವಳು ಎರಡು ಸಲ ನನಗೆ ಫೋನ್ ಮಾಡಿದ್ದಳು. ತರುವಾಯ ಮಾಡಿರಲೇ ಇಲ್ಲ. ಇದೇ ಸಲ ಅವಳಾಗಿ ನನಗೆ ಫೋನ್ ಮಾಡಿದ್ದು.

ಅವಳು ಕಳಿಸಿದ ಸುದ್ದಿ ಕೇಳಿದಾಗ ನಾನು ಅತ್ತಿದ್ದೆ. ಇಷ್ಟು ವರ್ಷಗಳ ನಿರ್ಲಕ್ಷ್ಯ ಮತ್ತು ಆಶಾಭಂಗವನ್ನೆಲ್ಲ ನನ್ನ ಕಣ್ಣೀರು ತೊಳೆದು ಹಾಕಿತ್ತು. ಅನಂತರವೇ ನಾನು ತಲೆ ಎತ್ತಿದ್ದೆ ಮತ್ತು ಗೋಡೆಯ ಮೇಲಿದ್ದ ತಾಯಿ-ಮಗಳ ಭಾವಚಿತ್ರ ಗಮನಿಸಿದೆ. ಏನೋ ವಿಚಿತ್ರವೆನಿಸಿತು. ತಾಯಿಯ ಮುಖದಲ್ಲಿ ನಾನು ಕಂಡಿದ್ದ ಕಾಠಿಣ್ಯ ಮರೆಯಾಗಿ ಮೃದುತ್ವ ಅಲ್ಲಿ ಕಂಡರೆ ಮಗಳ ಮುಖದಲ್ಲಿ ಪೂರ್ತಿ ಅಚ್ಚರಿ! ಮೊದಲು ನನಗೆ ಆ ಚಿತ್ರದಲ್ಲಿ ತಾಯಿ-ಮಗಳ ನಡುವಿದ್ದ ಅಂತರ ಮಾತ್ರ ಕಾಣುತ್ತಿತ್ತು. ಆದರೀಗ (ನನ್ನ ಮನಃ ಪರಿವರ್ತನೆಯಾದ ನಂತರ) ಅವರಿಬ್ಬರ ಅಂತರ ಮರೆಯಾಗಿ ಅವರಿಬ್ಬರೂ ಒಂದೇ ಎಂಬಂತೆ ತೋರಿತು.

ಇದಾದ ಎರಡು ತಿಂಗಳ ನಂತರ, ಅಂದರೆ ಹೆರಿಗೆಗೆ ಒಂದು ತಿಂಗಳ ಮೊದಲು ಅಮ್ಮ ನನ್ನನ್ನು ದೂರವಾಣಿ ಮೂಲಕ ಸಂಪರ್ಕಿಸಿ -"ಮಗಳೇ... ನಿನಗೇನು ಬೇಕು" ? ಎಂದು ಕೇಳಿದ್ದಳು.

ನಾನಾಗ "ನನಗೇನೂ ಬೇಡ ಅಮ್ಮ" ಎಂದಿದ್ದೆ. ಅವಳು ಆ ರೀತಿ ನನಗೆ ಕೇಳಿದ್ದು ಬಹಳ ಖುಷಿ ಕೊಟ್ಟಿತ್ತು. ನಾನು ಏನೂ ಬೇಡ ಎಂದರೂ, ನನ್ನ ಅಮ್ಮ ತನ್ನ ಮಧ್ಯಾಹ್ನದ ಮೇಲಿನ ಸಮಯವನ್ನೆಲ್ಲಾ ಮಕ್ಕಳ ಸಾಮಾನು ಮಾರುವ ಅಂಗಡಿಗಳಿಗೆ ಸುತ್ತುವುದರಲ್ಲೆ ಕಳೆದಿದ್ದಳು.

ನನಗಾಗಿ ಅಮ್ಮ ರಾಶಿ-ರಾಶಿ ಮಗುವಿನ ಬಟ್ಟೆ ಮತ್ತು ಸಾಮಾನುಗಳನ್ನು ತಂದಿದ್ದಳು. ೪೦ ಕೆ.ಜಿಯಷ್ಟು ರೈಸ್‌ವೈನ್ ಕೂಡ ಖರೀದಿಸಿದ್ದಳು. ಜತೆಗೆ ಹತ್ತಿಯ ದುಪ್ಪಟಿಗಳನ್ನೂ, ೩೦ ಡೋಸ್‌ಗಳಷ್ಟು ಟಾನಿಕ್ ಔಷಧಿಯನ್ನು ತಂದಿದ್ದಳು.

ಹಿಂದೆ ನಾನು ಬೇಸರ ಪಡುತ್ತಿದ್ದಂತೆ ಈಗ ಬೇಸರಿಸದೆ ಅವುಗಳನ್ನೆಲ್ಲಾ ಖುಷಿಯಿಂದ ಸ್ವೀಕರಿಸಿದೆ. ಆಗ ಅವಳು ಟಾನಿಕ್ ತೋರಿಸಿ "ಇಷ್ಟು ಟಾನಿಕ್ ಕುಡಿದು ಮುಗಿಸಲು ಆದೀತೆ ಎಂದು ನೀನು ತಲೆಕೆಡಿಸಿಕೊಳ್ಳುವುದೂ ಬೇಡ"-ಎಂದೂ ಹೇಳಿಬಿಟ್ಟಳು ನನ್ನಮ್ಮ.

ದುಡ್ಡಿಲ್ಲದೆ ದೇಶಾಟನ

ಜಯಾ ಶೇಖರ್
೨೫೭, ಕೆ.ಎಚ್.ಬಿ.ಕಾಲನಿ,
ಕೋರಮಂಗಲ
ಬೆಂಗಳೂರು -೫೬೦ ೦೯೫

ಬೆಳಗಿನ ಮಂಪರು ನಿದ್ದೆಯಲ್ಲಿ ಕೆಲವೊಮ್ಮೆ ಕ್ರಿಯಾತ್ಮಕ ಯೋಚನೆಗಳು ಹೊಳೆಯುವುದುಂಟು. ನಗದುಹಣ ಮತ್ತು ಕ್ರೆಡಿಟ್ ಕಾರ್ಡ್‌ನ ಆಸರೆಯಿಲ್ಲದೆ ಬರಿಗೈಯಿಂದ ಬ್ರಿಟನ್‌ನಲ್ಲಿ ೮೦೦ ಕಿ.ಮೀ. ನಷ್ಟು ದೂರವನ್ನು ಕಾಲ್ನಡಿಗೆಯಲ್ಲಿ ಕ್ರಮಿಸಿದರೆ ಹೇಗೆ?! ಎಂಬ ಯೋಚನೆಯು ಒಂದು ಮುಂಜಾನೆಯ ನಿದ್ದೆಯ ಮಬ್ಬನ್ನು ಹರಿಯುವಂತೆ ನನ್ನಲ್ಲಿ ಉದಿಸಿತು. ಆದರೆ ಆಲಸ್ಯವನ್ನು ಪ್ರಚೋದಿಸುವ ಒಂದು ಸ್ವರವು ಮನದೊಳಗೆ, "ಅಯ್ಯಾ, ನೀನೊಬ್ಬ ಮೂರ್ಖ, ೫೪ ವರ್ಷದ ನೀನು ಬಹಳ ವಿವೇಕಶಾಲಿಯಾಗಿರಬೇಕಾದುದು ಅಪೇಕ್ಷಣೀಯ. ನಿನ್ನ ವಯಸ್ಸಿಗೆ ತಕ್ಕುದಾದ ಯೋಜನೆಯನ್ನು ಹಾಕಿಕೋ. ಈಗ ನಿನಗೆ ಹೊಳೆದಿರುವಂಥಾ ಸಾಹಸಕಾರ್ಯವನ್ನು ಬಹಳ ಹಿಂದೆಯೇ ಮಾಡಿ ಮುಗಿಸಬೇಕಿತ್ತು" ಎಂದು ಸಾಕಷ್ಟು ಶಕ್ತಿಯುತವಾಗಿಯೇ ಅರಚಿತು. ಆ ಸ್ವರಕ್ಕೆ ಶ್ರಮವಹಿಸಿ ನಿರ್ಲಕ್ಷ್ಯವನ್ನು ತೋರಿ, ನನ್ನ ಯೋಚನೆಯು ಬೇರೂರುವಂತೆ ಮಾಡಿದೆ. ನನಗೆ ತಿಳಿದ ಮಟ್ಟಿಗೆ ಹಿಂದೆ ಯಾರೂ ಇಂಥಾ ಪ್ರಯತ್ನವನ್ನು ಕೈಗೊಂಡಿದ್ದಿರಲಿಲ್ಲ. ಇದೊಂದು ಹೆಮ್ಮೆ ನನಗೆ.

ಈ ಯೋಜನೆ ತಿಳಿದ ನನ್ನ ಸ್ನೇಹಿತೆಯೋರ್ವಳು ಆಕೆಯ ಏಳು ವರ್ಷದ ನಾಯಿ ಸ್ಯಾಮನ್ನು ಈ ಸಾಹಸ ಯಾತ್ರೆಯಲ್ಲಿ ನನ್ನ ಸಹಯಾತ್ರಿಯಾಗಿರಲು ನೀಡಿದಳು. ಸ್ಯಾಂ ಎಷ್ಟೇ ದೂರವನ್ನೂ ಕ್ರಮಿಸಬಲ್ಲಂಥಾ ನಾಯಿಯಂತೆ. ಮುದ್ದಾದ ಈ ಸ್ಯಾಂನಿಂದ ನನ್ನ ಏಕಾಂಗಿತ್ವದ ಬೇಸರವು ಕಳೆಯಬಹುದು. ಚಳಿಯಿದ್ದಾಗ ಅಪ್ಪಿಕೊಳ್ಳಲೂ ಇದೊಂದು ಆಸರೆಯಾದೀತು ಎಂಬ ದೂರದೃಷ್ಟಿಯಿಂದ ಗೆಳತಿಯ ಕೊಡುಗೆಯನ್ನು ಅಂಗೀಕರಿಸಿದೆ.

ಸ್ವಇಚ್ಛೆಯಿಂದಾಯ್ದ ಅಲೆಮಾರೀ ತಿರುಕನ ಪಾತ್ರಕ್ಕೆ ಪೋಷಕವಾಗುವಂಥ ಅಂಶಗಳನ್ನು ಸಂಗ್ರಹಿಸಲು ಬೌದ್ಧ ಭಿಕ್ಷುಗಳನ್ನು ಭೇಟಿಯಾದೆ. ಒಂದು ಛತ್ರಿ ಹಾಗೂ ತುಪ್ಪಳದ ಕಾಲ್ಗವಸುಗಳನ್ನು ಒಯ್ಯುವಂತೆ ಅವರು ಸಲಹೆಯಿತ್ತರು. "ಆರಂಭದಲ್ಲಿ ಕಾಲ್ನಡಿಗೆ ಕಷ್ಟವೆನಿಸಿ, ಕೈಗೊಂಡ ಕಾರ್ಯವನ್ನು ಮುಗಿಸುವೆನೆ ಎಂದು ನಿನಗನಿಸಬಹುದು. ಆದರೆ ಕಾಲಕ್ರಮೇಣ ನಡಿಗೆಯು ಶಕ್ತಿಯುತವಾಗುತ್ತದೆ. ಕಾಲ್ನಡಿಗೆಯ ಈ ಯಾತ್ರೆಯು ನಿನ್ನ ಜೀವನದ ಅವಿಭಾಜ್ಯ ಅಂಗವೆಂದೆಣಿಸಿ ಧೃತಿಗೆಡದೆ ಮುನ್ನಡೆ" ಎಂದು ಓರ್ವ ಭಿಕ್ಷು ಆಶೀರ್ವದಿಸಿದ.

ನನ್ನ ಸುದೀರ್ಘ ಸಾಹಸಯಾನಕ್ಕೆ ಜುಲೈ ೨೬, ೧೯೯೮ರ ಭಾನುವಾರ ಬೆಳಿಗ್ಗೆ ೯.೩೫ಕ್ಕೆ ಸ್ಯಾಂನೊಂದಿಗೆ ನಾಂದಿ ಹಾಡಿದೆ. ಪ್ಲೈಮೌತ್‌ನಿಂದ ಎಡಿನ್‌ಬರೋಗೆ ಪಯಣಿಸುವವನಿದ್ದೆ. ಗುರುತು ಇರದ ಪ್ರಪಂಚಕ್ಕೆ ಅಡಿಯಿರಿಸಿದ್ದೆ. ಹೊಟ್ಟೆಯಲ್ಲಿ ಭಯದ ಚಿಕ್ಕ ಗಂಟೊಂದು ಕುಳಿತಿತ್ತು. ಪ್ಲೈಮೌತ್‌ನ ಹೊರವಲಯದಲ್ಲಿಯ ಹೆದ್ದಾರಿಯಲ್ಲಿ ೧೪ ಕಿ.ಮೀ.ನಷ್ಟು ದೂರವನ್ನು ವಾಹನದಟ್ಟಣೆಯಿಂದಾಗಿ ಆತಂಕದಿಂದಲೇ ಕ್ರಮಿಸಿದೆವು. ಒಂದು ಉಪಾಹಾರ ಗೃಹವನ್ನು ವಿಶ್ರಾಂತಿಗೋಸ್ಕರ ಹೊಕ್ಕೆ. ಸ್ಯಾಂನನ್ನು ಸಹಜವಾಗಿಯೇ ಒಳಕೊಂಡೊಯ್ದೆ. ಸ್ವಾಗತಕಾರ್ತಿಯು ತನ್ನ ಸಹಾಯಬೇಕೇ ಎಂದು ಪ್ರಶ್ನಿಸಿದಳು. ನಾನು ಅವಳಿಗುತ್ತರಿಸದೇ ಸುತ್ತಲೂ ನೋಡಿದೆ. ಅಲ್ಲಿ ನೆರೆದಿದ್ದ ಮಂದಿ ರಜಾ ದಿನದ ಮಜಾವನ್ನು ಸಂಪೂರ್ಣವಾಗಿ ಭೋಗಿಸು

ಏಪ್ರಿಲ್ ೨೦೦೦ದ ರೀಡರ್ಸ್ ಡೈಜೆಸ್ಟ್‌ನಲ್ಲಿ ಪ್ರಕಟವಾದ ಪೀಟರ್ ಮಾರ್ಟಿಮರ್‌ರ 'ಮೈ ಪೆನ್ನಿಲೆಸ್ ಜರ್ನಿ' ಎಂಬ ಲೇಖನದ ಅನುವಾದ

ತ್ತಿದ್ದರು. ಆಮೋದ ಪ್ರಮೋದಗಳು ವಿಜೃಂಭಣೆಯಿಂದ ಸಾಗಿದ್ದುವು. ಅಲ್ಲಿನ ಗಾಳಿಯಲ್ಲಿ ಕೇವಲ ಖಾದ್ಯಗಳ ಪರಿಮಳದ ಮೇಲಾಟ ನಡೆದಿತ್ತು. ಕೆಲಕ್ಷಣ ಆ ವಾತಾವರಣದ ಪ್ರಭಾವದಿಂದಾಗಿ ನನ್ನ ಪಾತ್ರ ವಿಸ್ಮೃತನಾಗಿ ಬೇರ್‌ಗೆ ಆದೇಶಿಸುವವನಿದ್ದೆ. ಆದರೆ ಸದ್ಯ! ಈ ಸ್ಥಳದಲ್ಲಿ ಏನೇನು ವೈಭೋಗಗಳು ಸೂರೆ ಹೋಗುತ್ತಲಿವೆಯೋ, ಸದ್ಯಕ್ಕೆ ಅದು ನನ್ನ ಪಾಲಿಗೆ ಕನ್ನಡಿಯೊಳಗಿನ ಗಂಟು ಎಂಬುದು ನೆನಪಾಗಲು ಬಹಳ ಹೊತ್ತಾಗಲಿಲ್ಲ.

ಸ್ಯಾಮುನಿಗಾಗಿ ಸ್ವಾಗತಕಾರಳ ಬಳಿ ಒಂದಷ್ಟು ನೀರು ಕೇಳಿದೆ. ಆಕೆ ಒಂದು ಬೋಗುಣಿಯಲ್ಲಿ ನೀರನ್ನು ತುಂಬಿ ನೆಲಕಂಬಳಿಯ ಮೇಲಿಟ್ಟಳು. ಲೊಚಲೊಚನೆ ನೀರು ಹೀರಿದ ಸ್ಯಾಮುನ ಹೊಟ್ಟೆಯು ತಣಿಯಿತು. ಪ್ಲೈಮೌತ್‌ನ ಹೋಟೆಲ್‌ನಲ್ಲಿ ಬೆಳಗಿನ ಉಪಾಹಾರವೆಂದು ಸೇವಿಸಿದ ಬ್ರೆಡ್ ಟೋಸ್ಟ್ ಹಾಗೂ ಬೆಣ್ಣೆಯಲ್ಲಿ ಎರಡು ತುಂಡುಗಳನ್ನು ಉಳಿಸಿಕೊಂಡಿದ್ದೆ. ಅದನ್ನೇ ಸ್ಯಾಂ ಹಾಗೂ ನಾನು ಹಂಚಿಕೊಂಡು ತಿಂದೆವು. ಇದರಿಂದ ನಮ್ಮ ಹಸಿವಿಗೆ ತೇಪೆ ಹಚ್ಚಿದಂತಾಯಿತು ಆ ಉಪಾಹಾರ ಗೃಹದಿಂದ ಹೊರಟಿದ್ದ ಮಧ್ಯವಯಸ್ಕ ದಂಪತಿಯ ಲಕ್ಷ್ಯವನ್ನು ನನ್ನತ್ತ ಸೆಳೆದು ಸ್ವಲ್ಪ ದೂರದವರೆಗಾದರೂ ಅವರ ವಾಹನದಲ್ಲಿ ಜಾಗ ದೊರಕಿಸಿಕೊಳ್ಳಲು ವಿಫಲಯತ್ನ ನಡೆಸಿದೆ. ಅವರು ತೂರಿದ ಅಸಡ್ಡೆಯ ನೋಟ ನನ್ನ ಮುಖವನ್ನು ತಿವಿಯಿತು, ಮನಸ್ಸನ್ನು ಇರಿಯಿತು. ಆದರೆ ನಾನು ಸಂಪೂರ್ಣವಾಗಿ ನಿರಾಶನಾಗಬೇಕಿರಲಿಲ್ಲ. ಲೋಕದಲ್ಲಿರುವುದೇ ಇಂಥವರೆಂಬ ಅವಸರದ ತೀರ್ಮಾನಕ್ಕೆ ಬರಬೇಕಿಲ್ಲವೆಂಬುದು ಮುಂದೆ ತಿಳಿಯಿತು.

ಮುಂದಿನ ಹಾದಿಗುಂಟ ಹೆಜ್ಜೆ ಹಾಕಿದ ನನ್ನ ದೃಷ್ಟಿಗೆ ಪಾದ್ರಿಯೋರ್ವರು ತಮ್ಮ ಹುಲ್ಲುಹಾಸನ್ನು ಹಸನುಗೊಳಿಸುತ್ತಿರುವುದು ಕಾಣಿಸಿತು. ಸ್ಯಾಂನಿಗಾಗಿ ನಾನು ಅವರಲ್ಲಿ ನೀರು ಕೇಳಿದೆ. ನನ್ನ ಮಾತಿನಿಂದಾಗಿ ಅವರ ಏಕಾಗ್ರತೆಗೆ ಭಂಗ ಬಂದರೂ ಅವರದನ್ನು ತೋರ್ಪಡಿಸದೆ ನನ್ನನ್ನು ಸೂಕ್ಷ್ಮಾವಲೋಕಿಸಿ, ''ನಿಮ್ಮ ನಾಯಿಗೆ ನೀರಷ್ಟೆ ಸಿಕ್ಕರೆ ಸಾಕೆ?'' ಎಂದು ಪ್ರಶ್ನಿಸಿದರು. ''ನೀವು ಬೇರೇನಾದರೂ ಕೊಟ್ಟಲ್ಲಿ ಅದು ವ್ಯರ್ಥವಾಗದು'' ಎಂದು ನಾನು ತೊದಲಿದೆ. ಮನೆಯ ಮುಂಬಾಗಿಲತ್ತ ಅವರಿಟ್ಟ ಹೆಜ್ಜೆಯನ್ನು ನಾನು ಅನುಸರಿಸಲೆಳಸಿದಾಗ ಸರ್ರನೆ ನನ್ನತ್ತ ತಿರುಗಿ, ''ಒಳಬರಬೇಡ'' ಎಂದು ಗದರುವಂತೆ ಹೇಳಿ, ಹೂದೋಟದಲ್ಲಿರುವ ಆಸನವೊಂದರಲ್ಲಿ ಆಸೀನನಾಗಲು ಸೂಚಿಸಿದರು. ಕೆಲಕ್ಷಣಗಳಲ್ಲಿ ಮನೆಯಿಂದ ಹೊರ ಬಂದ ಅವರ ಕೈಯಲ್ಲಿ ಸ್ಯಾಂಗೆ ನೀರು, ನನಗಾಗಿ ಚಹಾ ಮತ್ತು ಚಾಕಲೇಟು ಬಿಸ್ಕತ್ತುಗಳು ತುಂಬಿದ ತಟ್ಟೆಯಿತ್ತು. ನನ್ನ ಹೃತ್ಪೂರ್ವಕ ಕೃತಜ್ಞತೆಗಳನ್ನು ಅವರಿಗೆ ಸಲ್ಲಿಸಿ, ಅವರನ್ನು ಹಿಂಬಾಲಿಸಿ ಒಳನುಗ್ಗಲು ಹೊರಟದ್ದಕ್ಕೆ ಕ್ಷಮೆ ಕೋರಿದೆ.

''ಓಹ್! ಇಲ್ಲಿ ಹಿಂದೆ ಏನು ನಡೆದಿತ್ತೆಂಬುದು ನಿಮಗೆ ತಿಳಿದರೆ...'' ಎಂದು ಅಷ್ಟಕ್ಕೆ ಮಾತು ನಿಲ್ಲಿಸಿ ಅವರು ಒಳಹೋಗಿಬಿಟ್ಟರು. ನನಗೆ ಆಗ ಅವರ ವರ್ತನೆ ಒಗಟಿನಂತೆ ತೋರಿದರೂ ಆದರ ಕಾರಣ ಅನಂತರ ತಿಳಿಯಿತು.

ರಾತ್ರಿ ೭.೩೦ಕ್ಕೆ ನಾವೊಂದು ಪಟ್ಟಣದ ಒಳಹೊಕ್ಕೆವು. ಆ ಪಟ್ಟಣವು ನಿರ್ಜೀವ ಕಳೆಯಿಂದ ನೀರಸವಾಗಿರುವಂತೆ ತೋರುತ್ತಿತ್ತು. ಅಲ್ಲಿಯ ಮನೆಗಳ ಕದಗಳು ಎಂದೂ ತೆರೆದಿರಲಿಲ್ಲವೆಂಬಂತೆ ಒಂದನ್ನೊಂದು ಭದ್ರವಾಗಿ ಅಪ್ಪಿ ಹಿಡಿದಿದ್ದುವು. ನನ್ನ ಚಿಕ್ಕ ಛತ್ರಿಯ ಮೇಲೆ ಮಳೆಯು ಏಕತಾನದಲ್ಲಿ ಹುಯ್ಯುತ್ತಿತ್ತು. ಮಳೆಯಿಂದ ರಕ್ಷಿಸುವಂಥ ವಸ್ತ್ರಗಳು ಒಯ್ಯಲು ಭಾರವಾಗುವುದವೆಂದು ನಾನವನ್ನು ಹೊಂದಿಸಿಕೊಂಡಿರಲಿಲ್ಲ. ಸ್ಯಾಂ ತನ್ನ ಕಂದು ಕಣ್ಣುಗಳನ್ನರಳಿಸಿ ''ನಾವೀಗ ಏನು ಮಾಡೋಣ?'' ಎಂಬಂತೆ ನನ್ನತ್ತ ಪ್ರಶ್ನಾರ್ಥಕ ದೃಷ್ಟಿಯನ್ನು ಬೀರುತ್ತಿತ್ತು.

ಅಲ್ಲಿಯ ನೀರವ ವಾತಾವರಣವನ್ನು ಭೇದಿಸಿಕೊಂಡು ದೊಡ್ಡ ಚರ್ಚೊಂದರ ಮೂಲಕ ಹಾಡು ಹೊರಹೊಮ್ಮಿ ಅನುರಣಿಸಿತು. ನಾವು ಆ ಹಾಡಿನ ಜಾಡನ್ನು ಹಿಡಿದು ಮುನ್ನಡೆದೆವು. ಆ ಚರ್ಚಿನಲ್ಲಿ ಮಹತ್ತಾದ ಸಮಾರಂಭವೊಂದು ನಡಯುತ್ತಿತ್ತು. ಕರುಣೆ, ಕ್ಷಮೆ,ಪ್ರೇಮಭಾವವನ್ನು ಉದ್ದೀಪಿಸುವಂಥಾ ಹಾಡುಗಳನ್ನು ಅಲ್ಲಿ ನೆರೆದಿದ್ದವರು ಏಕಕಂಠದಲ್ಲಿ ಹಾಡುತ್ತಿದ್ದಾಗ ಸ್ಯಾಂ ಹಾಗೂ ನಾನು, ಅಲ್ಲಿ ಹಿಂಭಾಗದಲ್ಲಿ ಮಳೆಯಿಂದ ತೊಯ್ದು ರಾಡಿಯಾಗಿ ನಿಂತಿದ್ದೆವು. ಗಾಯನಸೇವೆ ಮುಗಿದು ಎಲ್ಲರೂ ಚದರುತ್ತಿದ್ದಂತೆ ನಾನವರಲ್ಲಿ ಕೆಲವರ ಬಳಿ ಸಾರಿ, ಆ ರಾತ್ರಿಗೆ ಸ್ವಲ್ಪ ಆಹಾರ ಮತ್ತು ತಲೆಯ ಮೇಲೊಂದು ಸೂರು ಒದಗಿಸಲು ಸಾಧ್ಯವೇ?'' ಎಂದು ವಿನಂತಿಸಿದೆ. ನನ್ನ ಬೇಡಿಕೆ ಅವರಿಗೆಲ್ಲ ಮುಜುಗರವನ್ನುಂಟು ಮಾಡಿರಬೇಕು. ಅವರು ಬೇಡಿಕೆಗೆ ಕಿವಿಗೊಟ್ಟಂತೆ ತೋರಲಿಲ್ಲ. ಸ್ವಲ್ಪ ಹೊತ್ತಿಗೆ ಮುನ್ನ ಅಂಥಾ ಹಾಡುಗಳಲ್ಲಿ ಭಾವತುಂಬಿ, ಜೀವತುಂಬಿ ಹಾಡಿದ ಇವರ ನಡವಳಿಕೆ ಅಚ್ಚರಿ ತರಿಸಿದರೂ ಚರ್ಚಿನ ಮೇಲ್ವಿಚಾರಕ, ಗಡ್ಡಧಾರಿ, ಸ್ನೇಹ ಸೂಸುವ ಮೊಗದ ಒಡೆಯ ಜಾನ್ ರಾಲಿಂಗ್ಸ್‌ನಿಂದ ಕಾರಣ ತಿಳಿಯಿತು. ''ನಾವು ಯಾವಾಗಲೂ ಇನ್ನೊಬ್ಬರಿಗೆ ನೆರವು ನೀಡುವುದನ್ನು ಪ್ರೀತಿಸುತ್ತೇವೆ. ಆದರೆ ಈ ರಾತ್ರಿ ನಮ್ಮ ಮನೆಗಳಲ್ಲಿ ಗಾಯನ ತಂಡದ ಸದಸ್ಯರು ಉಳಿದುಕೊಳ್ಳುತ್ತಾರೆ' ಎಂದು ಆತ ಸಂಕೋಚದಿಂದಲೇ ಅಂದಾಗ ನನಗೇ ಇರಿಸು ಮುರಿಸುಂಟಾಯಿತು. 'ನನ್ನ' ಅಸ್ತಿತ್ವದ ಬಗ್ಗೆಯೇ ಸಂದೇಹ ಮೂಡಲಾರಂಭಿಸಿತು. ನಾನು ಪೀಟರ್ ಮಾರ್ಟಿಮರ್ ಎಂಬ ಲೇಖಕನಲ್ಲ. ಓರ್ವ ಭಿಕ್ಷುಕ ಅದಕ್ಕೇ ಜನರಿಗೆ ನನ್ನ ಬಗ್ಗೆ ಕಿರಿಕಿರಿಯಾಗುತ್ತಿದೆ ಎಂದು ಭಾವಿಸಿದೆ. ಸ್ವಾನುಕಂಪದಿಂದಾಗಿ ಇನ್ನೇನೇನು ಭಾವಿಸಲಿದ್ದೆನೋ ಏನೋ, ಅಷ್ಟರಲ್ಲಿ ''ಓ, ಅವರು ನಾನು ವಾಹನಗಳನ್ನಿರಿಸುವ ಕೋಣೆಯಲ್ಲಿ ಮಲಗಬಹುದು'' ಎಂಬ ಆಶಾದಾಯಕ ನುಡಿಗಳು ಕೇಳಿದುವು. ಆಶ್ರಯ ಕಾಣದೆ ಬೆಪ್ಪುಬಡಿದಂತಾಗಿದ್ದ ನನಗೆ ಆಶ್ರಯದಾಣದ ಭರವಸೆ ನೀಡಿದ ವ್ಯಕ್ತಿ ಜಾಫ್ರೆ ಬೌಚರ್, ಈತ ಪಾದ್ರಿಯ ಸಹಾಯಕರು, ತರುಣರು. ಅವರೊಂದಿಗೆ ವಾಹನದಲ್ಲಿ ಕುಳಿತು ಹೋಗುತ್ತಿದ್ದಾಗ ನನ್ನ ಪ್ರಯಾಣದ ರೂಪುರೇಷೆಗಳನ್ನವರಿಗೆ ತಿಳಿಸಿದೆ. ಹಾಗೇ ನನ್ನ ಹಿಂದಿನ ಅನುಭವದಲ್ಲಿ ಪಾದ್ರಿ 'ಒಳಬರಬೇಡ' ಎಂದು ಗದರಿದುದನ್ನೂ ಹೇಳಿದೆ. ಅದಕ್ಕೆ ಬೌಚರ್‌ರವರು ಹಿಂದೊಮ್ಮೆ ನನ್ನ ಹಾಗೇ ಆಶ್ರಯ ಕೇಳಿ ಬಂದಿದ್ದ ಓರ್ವವ್ಯಕ್ತಿ ತಮ್ಮನ್ನು ಆದರದಿಂದ ಒಳಬರಮಾಡಿಕೊಂಡ ಆ ಪಾದ್ರಿಯನ್ನು ಬಹಳವಾಗಿ ಥಳಿಸಿದುದಾಗಿ ಹೇಳಿದರು. ಹಿಂದಿನ ಅನುಭವದಿಂದ ಭೀತರಾಗಿರುವ ಪಾದ್ರಿಯು ಅಪರಿಚಿತರನ್ನು ಉಪಚರಿಸುವುದರಲ್ಲಿ ಹಿಂದೆಜ್ಜೆ ಇಡದಿದ್ದರೂ ಅವರನ್ನು ಅಷ್ಟು ಸುಲಭವಾಗಿ ಮನೆಯ ಒಳಬರಬಿಡುವುದಿಲ್ಲವೆಂಬುದು ಸ್ಪಷ್ಟವಾಯಿತು.

ಜಾಫ್ರೆಧಾಮದಲ್ಲಿ ಸ್ಯಾಂನನ್ನು ಸಂತೈಸಿ ಉಣಿಸಿದೆ, ನನ್ನ ಹಸಿವೂ ತಣಿಯಿತು. ನನ್ನ ಬೆನ್ನಿನ ಚೀಲದಿಂದ ಕ್ಯಾಮೆರಾ, ಮಲಗುವ ಚೀಲ ಹೀಗೆ ಹಲವು ವಸ್ತುಗಳನ್ನು ಹೊರತೆಗೆದು ಮಲಗುವ ಸಿದ್ಧತೆಯನ್ನು ಮಾಡಿಕೊಂಡೆ. ನಾನೇನೋ ಬಳಲಿ ಬೆಂಡಾಗಿದ್ದೆ. ಆದರೆ ಮಲಗಿದ ಕ್ಷಣ ನಿದ್ದೆ ಹತ್ತಿರ ಸುಳಿಯಲಿಲ್ಲ, ಬದಲಾಗಿ ಕತ್ತಲಿನ ಗಹ್ವರದಿಂದ ಸಂಶಯಗಳು ನನ್ನ ಮೇಲೆ ಧಾಳಿಯಿಟ್ಟವು. ಹಣವಿಲ್ಲದೆ ಕೈಗೊಂಡ ಈ ಯಾತ್ರೆ ನನ್ನಿಂದ ಪೂರೈಸುವುದೇ ಅಂದು ಈ ಯೋಚನೆ ಹೊಳೆದಾಗ ಮನದ ಮೂಲೆಯೊಂದು ಬಲ ವಾಗಿ ವಿರೋಧ ವ್ಯಕ್ತ ಪಡಿಸಿದುದನ್ನು ನೆನಪಿಸಿ ಕೊಂಡು, ಈ ಹುಚ್ಚುಸಾಹಸಕ್ಕೆ ಬೆಳಗಾದೊಡನೆ ಅಂತಿಮ ತೆರೆ

ಎಳೆಯುವುದಾಗಿ ನಿರ್ಧರಿಸಿಯೇ ನಿದ್ರಾವಶನಾದೆ.

ಬೆಳಗ್ಗೆ ಏಳುವವರೆಗೆ ಉಲ್ಲಸಿತನಾಗಿಯೇ ಎದ್ದೆ. ಹಿಂದಿನ ರಾತ್ರಿಯ ನನ್ನ ಜಡಯೋಚನೆಗಳಿಗೆ ಇಂದಿನ ಬೆಳಗು ಉತ್ತರ ನೀಡಿತ್ತು. ಸ್ಯಾಂನಲ್ಲಿಯೂ ಲವಲವಿಕೆ ಮೂಡಿತ್ತು. ಸ್ಯಾಂನ ಬಳಿ ''ನಾವು ನಮ್ಮ ಹೆಜ್ಜೆಯನ್ನು ಹಿಂದಕ್ಕಿಡೆವು. ಅಪಹಾಸ್ಯಕ್ಕೆ ಈಡಾಗೆವು'' ಎಂದು ಹೇಳಿಕೊಂಡೆ. ಆದರೆ ನನ್ನ ಹೊಟ್ಟೆಯಲ್ಲಿದ್ದ ಭಯದ ಗಂಟು ಪೂರ್ಣವಾಗಿ ಕರಗಿರಲಿಲ್ಲ.

ನಮ್ಮ ಆತಿಥೇಯ ಜಾಫ್ರೆಯುವರ ಔದಾರ್ಯದ ಪರಿಚಯವು ನನಗಾಯಿತು. ನಮ್ಮ ಇಂದಿನ ರಾತ್ರಿ ಕಳೆಯಲು ಅವರಾಗಲೇ ವ್ಯವಸ್ಥೆಯನ್ನು ಮಾಡಿಬಿಟ್ಟಿದ್ದರು. ನಾವು ಮುನ್ನಡೆದಾಗ ಸಿಗುವ ಉಪಾಹಾರಗೃಹವೊಂದರ ಮಾಲೀಕ ಅಲೆಕ್ಸ್ ವಾರ್ನ್‌ಗೆ ಅವರಾಗಲೇ ದೂರವಾಣಿಸಿದ್ದರು. ಅವರಿಗೆ ಸೇರಿದ ಲಾಯವೊಂದರಲ್ಲಿ ನಾವು ತಂಗಬಹುದೆಂದು ವಾರ್ನ್ ಇವರಿಗೆ ತಿಳಿಸಿದ್ದರು.

ಜಾಫ್ರೆಯವರಿಗೆ ಕೃತಜ್ಞತೆಯನ್ನು ಸಲ್ಲಿಸಿ ವಿದಾಯ ಹೇಳುತ್ತಿರುವಂತೆ ಅವರು ನನ್ನೆಡೆಗೆ ಹತ್ತು ಪೌಂಡುಗಳ ನೋಟನ್ನು ಚಾಚಿ, ''ನೀವು ಹಣವನ್ನು ಇಟ್ಟುಕೊಳ್ಳದೇ ಪಯಣಿಸಬೇಕೆಂಬ ಉದ್ದೇಶವನ್ನು ಹೊಂದಿರುವಿರಿ, ಅದನ್ನು ಗೌರವಿಸುತ್ತೇನೆ. ಆದರೆ ತುರ್ತುಪರಿಸ್ಥಿತಿಯೇನಾದರೂ ಎದುರಾದಲ್ಲಿ ನಿಮ್ಮ ಧೈರ್ಯಕ್ಕಿರಲಿ ಎಂದು ಇದನ್ನು ನೀಡುತ್ತಿದ್ದೇನೆ'' ಎಂದು ನನ್ನನ್ನು ಔದಾರ್ಯದ ಉರುಳಿನಲ್ಲಿ ಬಂಧಿಸಿಬಿಟ್ಟರು. ಈ ಉರುಳನ್ನು ಅಷ್ಟು ಸುಲಭವಾಗಿ ಕಳಚಿಕೊಳ್ಳಲು ನನ್ನ ಮನ ಒಪ್ಪಲಿಲ್ಲ. ನಾನು ಅದನ್ನು ತೆಗೆದುಕೊಂಡೆ. ಪರಸ್ಪರ ಕೈಕುಲುಕಿ, ಆಲಂಗಿಸಿ ಬೀಳ್ಕೊಂಡೆವು. ಸ್ಯಾಂ ಹಾಗೂ ನನ್ನ ಹಿಂದಿನ ದಿನದ ನಿಸ್ತೇಜತೆಯನ್ನು ಜಾಫ್ರೆ ಬೌಚರ್ ಅಳಿಸಿಹಾಕಿದರು.

ಸಮ್ಮಿಶ್ರ ಪ್ರತಿಕ್ರಿಯೆ : ಹಾಡುವುದರ ಮೂಲಕ ನಾನು ತಮ್ಮ ಊಟದ ಋಣದಿಂದ ಮುಕ್ತನಾಗುತ್ತೇನೆ ಎಂದು ನಾನು ಅಲೆಕ್ಸ್ ವಾರ್ನ್‌ಗೆ ಹೇಳಲು ಆತ ಒಪ್ಪದೇ ನಾನು ಕುಂಚ ಹಿಡಿಯಬೇಕೆಂದರು. ಆತನ ಲಾಯದ ಹೊರಗೆ ಮೂರು ಗಂಟೆಗಳಷ್ಟು ಹೊತ್ತು ನಿಂತು ಡಾಮರಿನಂಥಾ ದ್ರವದಿಂದ ಚಿತ್ರ ಬಿಡಿಸಿದೆ. ಅನಂತರವಷ್ಟೇ ನರೆತ ಗಡ್ಡ ಮತ್ತು ಅರೆ ನರೆತ ತಲೆಗೂದಲ ಅಲೆಕ್ಸ್ ನನಗೆ ಸ್ನಾನಮಾಡುವ ಅವಕಾಶವನ್ನೊದಗಿಸಿ ಆ ದಿನದ ಮೊದಲ ಬಿಸಿ ಆಹಾರವಾದ ಕೋಳಿಮಾಂಸವನ್ನು ನೀಡಿದರು. ಲಾಯದೊಳಗೆ, ಬೈಹುಲ್ಲಿನ ಮಧ್ಯೆ ಬೆಚ್ಚನೆ ಮಲಗುವ ಕಲ್ಪನೆಯ ಸುಖದಲ್ಲಿಯೇ ನಾನು ಊಟ ಮುಗಿಸಿದೆ. ಆದರೆ ಅಲೆಕ್ಸ್‌ನ ಲಾಯದ ನೆಲವೋ ಬರಿದೋ ಬರಿದಾಗಿತ್ತು. ಬರಡಾಗಿ ಚಿತ್ತಲಾಗಿತ್ತು. ಸಿಮೆಂಟಿನ ನಗ್ನನೆಲದ ಮೇಲೆ ನನ್ನ ನಿದ್ರಾಚೀಲದೊಳಗೆ ಬಿಸುಪನ್ನರಸುತ್ತಾ ಸುಖನಿದ್ರೆಯ ನಿರೀಕ್ಷೆಯಲ್ಲಿ ಅತ್ತಿಂದಿತ್ತ ಹೊರಳಾಡುತ್ತಿದ್ದೆ. ಹೀಗೇ ಅರ್ಧರಾತ್ರಿ ಕಳೆದ ನಂತರ ಚಳಿಯಿಂದ ಪರಿಹಾರೋಪಾಯವಾಗಿ ಸ್ಯಾಂನನ್ನು ಚೀಲದೊಳಕ್ಕೆಳೆದುಕೊಂಡು ಅಪ್ಪಿ ಮಲಗಿದೆ. ಅದಕ್ಕೂ ಇದು ಹಿತವಾಗಿರಬೇಕು.

ಮೂರನೇ ದಿನ : ಇಂದು ರಾತ್ರಿಯನ್ನು ಎಲ್ಲಿ ಕಳೆಯಬಹುದೆಂಬ ನಿಶ್ಚಿತ ಅಭಿಪ್ರಾಯವನ್ನು ನಾನು ಹೊಂದಿರಲಿಲ್ಲ. ಹವಾಮಾನವು ಪ್ರತಿಕೂಲವಾಗಿತ್ತು. ಮಂಜಿನ ತೇವದ ಮಬ್ಬುತೆರೆ ವಾತಾವರಣಕ್ಕೆ ಮುಸುಕಿತ್ತು. ವೇಗವಾಗಿ ನಮ್ಮನ್ನು ದಾಟಿ ಹೋಗುತ್ತಿದ್ದ ಪ್ರತೀ ವಾಹನವೂ ನಮ್ಮ ಮೇಲೆ ನೀರನ್ನು ಧಾರಾಳವಾಗಿ ಸಿಂಪಡಿಸುತ್ತಿತ್ತು. ಹೆಚ್ಚಿನ ವಾಹನಗಳಲ್ಲಿ ಓರ್ವ ವ್ಯಕ್ತಿ ಮಾತ್ರ ಇರುತ್ತಿದ್ದುದು. ನಮ್ಮನ್ನು ಹಸನ್ಮುಖದಿಂದ ಸ್ವಾಗತಿಸುವ ವ್ಯಕ್ತಿ ಹಾಗೂ ಒಂದಷ್ಟು ವಿಶ್ರಾಂತಿಗಾಗಿ ನಾನು ತಪಿಸುತ್ತಿದ್ದೆ. ನನ್ನ ಆಕಾಂಕ್ಷೆಯನ್ನು ಸ್ಯಾಂನ ಬಳಿ ಹೇಳಿಕೊಂಡೆನು. ನನ್ನ ನಿರೀಕ್ಷೆ ಬಂಗಲೆಯೊಂದರಲ್ಲಿ ಫಲಿಸಿತು.

ಕ್ಲಿಫ್ ಬ್ರಿಂಬ್ಲ್‌ಕೊಂಬ್ ಎಂಬ ಸೇಬಿನ ರಸದ ವ್ಯಾಪಾರಿಯು ತಮ್ಮ ಕ್ಯಾರವಾನ್ ನೊಳಗೆ ಮಲಗುವ ಅವಕಾಶ ನೀಡಿದರು. ಆತನ ಹಿಂದೆ ಕಾಣಿಸಿಕೊಂಡ ಆತನ ಪತ್ನಿ ಎವ್ಲಿನ್ ಕ್ಷಮಾಯಾಚನೆಯ ದನಿಯಲ್ಲಿ ತನಗೊಂದು ಸಭೆಗೆ ಹೋಗಬೇಕಿರುವುದಾಗಿಯೂ ಆದರೆ ಹೋಗುವ ಮುನ್ನ ಬೇಗನೇ ನಮಗೆ ಊಟ ತಯಾರಿಸುವುದಾಗಿಯೂ ಹೇಳಿದರು. ಬಹುಶಃ ಈ ಸ್ಥಳಕ್ಕೆ ಪ್ರತಿದಿನ ಆತನ ವಸನಾರ್ಥಿಗಳಾಗಿ ಯಾತ್ರಾರ್ಥಿಗಳು ಬರುತ್ತಿರಬೇಕು ಮತ್ತು ಅವರನ್ನು ತಣಿಸುವುದು ಈ ದಂಪತಿಗೆ ಅಷ್ಟೇ ಸಹಜವಾಗಿರಬೇಕು. ಮುಂದಿನ ಕೆಲಗಳಿಗೆಯಲ್ಲಿ ಬಾಯೊಳಗೆ ಬಿಸಿಮಾಂಸದ ಕಡುಬನ್ನು ಆಲೂಗೆಡ್ಡೆಯೊಂದಿಗೆ ತುರುಕಿಕೊಳ್ಳುತ್ತಾ ನಾನು ಅವರು ತೋರಿದ ಬಂಡಿಯೊಂದ ರೊಳಗೆ ಪ್ರವೇಶಿಸಿದೆ. ಸ್ಯಾಂ ಆತನಿಗೆಂದೇ ಇರುವ ವಿಶೇಷ ಆಹಾರವನ್ನು ಸವಿಯುತ್ತಿದ್ದ.

ನಾಲ್ಕನೇ ದಿನ : ನನ್ನ ಬಾಳಸಂಗಾತಿ ಕಿಟ್ಟಿಯು ವಿದ್ಯಾರ್ಥಿನಿ ಜೀವನವನ್ನು ಕಳೆದ ಹಳ್ಳಿಯೊಂದರತ್ತ ಇಂದು ಹೊರಟಿದ್ದೆ. ಹೊರಡುವ ಮುನ್ನ ಮುಖಕ್ಷೌರ ಮಾಡಿಕೊಳ್ಳಲು ಮರೆಯಲಿಲ್ಲ. ಗಡ್ಡ ಹೆರೆದ ಅನಂತರ ಹಚ್ಚಿಕೊಳ್ಳುವ ದ್ರವವೊಂದಕ್ಕೆ ರೂಪದರ್ಶಿಯಾಗುವ ೨೧ರ ಹರೆಯದ ತರುಣನ ಮೋರೆಯ ಮೇಲೆ ಕುರುಚಲು ಗಡ್ಡವು ಶೋಭಿಸಬಹುದು, ಆದರೆ ನನ್ನ ಈ ವಯಸ್ಸಿನಲ್ಲಿ ಕುರುಚಲುಗಡ್ಡವು ಕುಡುಕನ ಚಹರೆಯನ್ನೊದಗಿಸುತ್ತದೆ ಎಂದು ನನ್ನ ಅಭಿಪ್ರಾಯ. ಆದುದರಿಂದ ಪ್ರತಿದಿನವೂ ಮುಖಕ್ಷೌರ ಮಾಡಿಕೊಳ್ಳುತ್ತಿದ್ದೆನಾದರೂ ನನ್ನ ಸೌಂದರ್ಯವೇನೂ ಹೆಚ್ಚಲಿಲ್ಲ.

ಇಂದು ಹೋದ ಹಳ್ಳಿಯಲ್ಲಿ ಮೂವತ್ತು ವರ್ಷಗಳ ತರುವಾಯ ನಮ್ಮ ಸ್ನೇಹಿತ ಟಾಂ ಕೋಲ್ಮನ್ ಹಾಗೂ ಅವರ ಪತ್ನಿ ಜೇನಳ ಭೇಟಿಯಾಯಿತು. ಇದೊಂದು ಸಂತೋಷದಾಯೀ ಪುನರ್ಮಿಲನ. ಅಂದಿನಂತೆ ಇಂದೂ ಅವರು ತಮ್ಮ ತೋಟದ ಮನೆಯಲ್ಲಿಯೇ ವಾಸಿಸುತ್ತಿದ್ದರು. ನಮ್ಮ ಭೇಟಿಯಾದ ಕ್ಷಣ ಒಂದು ಬಟ್ಟಲು ಚಹಾ ಸೇವನೆಯಾಯಿತು. ರಾತ್ರಿಗೆ ಬಹು ಸುಂದರವಾದ ಶಯ್ಯೆಯು ಸಿದ್ಧವಾಯಿತು. ಸ್ಯಾಂ ಒಲೆಯ ಬಳಿ ನಿದ್ರಿಸಿತು. ಆದರ ಸದಾ ಸೋರುತ್ತಿದ್ದ ಕಣ್ಣು ನನಗೊಂದು ಸಮಸ್ಯೆಯಾಗಿದ್ದರೂ ಅದಕ್ಕೆ ಬಾಧೆಯಾದಂತೆ ಕಾಣಲಿಲ್ಲ. ಆದರೆ ನಾನದನ್ನು ದಿನಾ ಸ್ವಚ್ಛಗೊಳಿಸುತ್ತಿದ್ದೆ.

ಮರುದಿನ ಮತ್ತೆ ಹೆದ್ದಾರಿಯ ಬದಿ ನಿಂತು ನಕ್ಷೆ ನೋಡುತ್ತಾ ಎಲ್ಲಿಗೆ ಹೋಗಲಿ ಎಂದು ಅನಿಶ್ಚತತೆಯಿಂದ ಆಲೋಚಿಸುವುದೇ ಆಗಿತ್ತು. ನನ್ನ ಮೊದಲದಿನದ ಅನುಭವವು ಕಲಿಸಿದ ಪಾಠದಿಂದಾಗಿ ದೊಡ್ಡ ಪಟ್ಟಣಗಳಿಗೆ ಹೋಗುವುದನ್ನು ಹಾಗೂ ಮುಖ್ಯರಸ್ತೆಗಳ ಬಳಕೆಯನ್ನು ಆದಷ್ಟೂ ತಡೆಗಟ್ಟಬೇಕೆಂದು ತೀರ್ಮಾನಿಸಿದ್ದೆ. ಕಾಲ್ದಾರಿಯಲ್ಲಿಯ ನಡಿಗೆಯಿಂದಾಗಿ ಪ್ರಯಾಣವು ಸುದೀರ್ಘವಾಗುತ್ತಿತ್ತಾದರೂ ಹೆದ್ದಾರಿಯಲ್ಲಿರುವ ವಾಹನ ಸಾಂದ್ರತೆಯನ್ನು ನಾನು ದ್ವೇಷಿಸುತ್ತಿದ್ದೆ ಮತ್ತು ಕೈಯಲ್ಲಿ ಹಣವಿಲ್ಲದಿದ್ದಾಗ ಪಟ್ಟಣಗಳು ವ್ಯಕ್ತಿಯಲ್ಲಿ ಖಿನ್ನತೆಯನ್ನು ಹುಟ್ಟುಹಾಕುತ್ತವೆ ಎಂದು ಸ್ವತಃ ಕಂಡುಕೊಂಡಿದ್ದೆ. ಹೀಗೆ ನಿರ್ಧಾರಗಳಿಗೆ ಬದ್ಧನಾಗಿ ಹೊರಟವನಿಗೆ ಸ್ಟೇಪ್ಲ್ ಪಿಟ್ಸ್‌ಪೇನ್ ಎಂಬ ಹಳ್ಳಿಯ ಹೆಸರು ಆಪ್ಯಾಯಮಾನವಾಗಿ ತೋರಿತು. ಆ ಹಳ್ಳಿಯಲ್ಲಿನ ಪಾನಗೃಹವೊಂದರ ಒಳಸಾರಿ, ಕಾಸಿಲ್ಲದ ವ್ಯಕ್ತಿಯೊಬ್ಬನ ಬಳಿಯಿರಬಹುದಾದಂಥಾ ಸ್ಥೈರ್ಯವನ್ನೆಲ್ಲಾ ಒಗ್ಗೂಡಿಸಿ ಅಲ್ಲಿಯ ತರುಣ ನೌಕರವೃಂದಕ್ಕೆ ನನ್ನ ಪ್ರಯಾಣದ ಬಗ್ಗೆ ತಿಳಿಸಿದೆ. ಆದರೆ ನನಗೆ ಯುಕ್ತ ತಂಗುದಾಣವನ್ನು ಹೆಸರಿಸಲು ಅವರಿಗೆ ತೋಚಲಿಲ್ಲ. ನಿರಾಶನಾಗಿ ಸ್ಯಾಂನೊಂದಿಗೆ ಅಲ್ಲಿಂದ ಕಾಲೆಳೆದುಕೊಂಡು ಹೊರಡ

ಬೇಕೆನ್ನುವಷ್ಟರಲ್ಲಿ ನನಗೆ ಅಂದಿನ ಅದೃಷ್ಟದ ಬಾಗಿಲು ತೆರೆಯಿತು.

ತೆರೆಸಾ ಹರ್ಲಿ ಮತ್ತು ಡೇವಿಡ್ ಟೀಕ್ಲೀ ಎಂಬ ಯುವದಂಪತಿಗಳಿಂದ ನನಗೆ ಆಹ್ವಾನ ದೊರಕಿತು. ''ನಾವು ವಾಸಿಸುವ ಫ್ಲಾಟ್ ಚಿಕ್ಕದು, ಆದರೆ ನಿಮ್ಮನ್ನು ಸ್ವಾಗತಿಸುತ್ತೇವೆ'' ಎಂದು ತೆರೆಸಾ ನುಡಿದಳು. ಅವರಿಬ್ಬರ ಮೂರುವರ್ಷದ ಪುಟ್ಟಮಗಳು ಲೆವಾನ್ನಾ ತನ್ನ ಅರಳುಕಂಗಳಿಂದ ಸುತ್ತಲೂ ಗಮನಿಸುತ್ತಿದ್ದಳು. ಅವರಿಂದ ಆಹ್ವಾನ ಸಿಕ್ಕಿದುದಕ್ಕೆ ನೆಮ್ಮದಿಯಿಂದ ನಾನೊಮ್ಮೆ ಗಟ್ಟಿಯಾಗಿ ನಕ್ಕೆ.

ಡೇವಿಡ್‌ನ ಹಳೆಯ ಮುರುಕು ಕಾರಿನಲ್ಲಿ ಕೆಲವು ಕಿ.ಮೀ.ಗಳಷ್ಟು ದೂರದ ಅವರ ಮನೆಗೆ ಹೋದೆವು. ಅವರು ಆರ್ಥಿಕವಾಗಿ ಉತ್ತಮ ಸ್ಥಿತಿಯಲ್ಲಿರಲಿಲ್ಲ. ಮೂವತ್ತೊಂಬತ್ತು ವರ್ಷದ ಡೇವಿಡ್‌ಗೆ ಕಟ್ಟಡಗಳ ಕಾವುಗಾರಿಯ ಕೆಲಸವಿತ್ತಾದರೂ ಅದು ನಿಶ್ಚಿತವಾದುದಾಗಿರಲಿಲ್ಲ.

''ಕೆಲವೊಮ್ಮೆ ನಮ್ಮ ಆರ್ಥಿಕ ಪರಿಸ್ಥಿತಿ ಎಷ್ಟು ಹದಗೆಡುತ್ತದೆಂದರೆ ನಮ್ಮಲ್ಲಿ ಬಾಡಿಗೆ ಕಟ್ಟಲೂ ಹಣವಿರುವುದಿಲ್ಲ. ಆದರೆ ಸಹಜವಾದ ಸಾಂಸಾರಿಕ ಜಂಜಡಗಳು ನಮ್ಮ ನಡುವಿನ ಪ್ರೀತಿಯನ್ನು ಮುಸುಕಿಲ್ಲ. ನಾವಿಬ್ಬರೂ ಪರಸ್ಪರರನ್ನು ಬಹಳ ಪ್ರೀತಿಸುತ್ತೇವೆ'' ಎಂದು ತೆರೆಸಾ ಹೇಳಿದಳು. ಅವರ ಮನೆ ಹಗರಣಗಳ ಸಂತೆಯಾಗಿತ್ತು. ನನಗೆ ನಾನು ನನ್ನ ಮನೆಯಲ್ಲಲ್ಲದೆ ಬೇರೆಡೆ ಇದ್ದೇನೆ ಎಂದು ಅನಿಸಲೇ ಇಲ್ಲ. ನಾವು ಪಿಜ್ಜಾ ತಿಂದು, ಬೀರು ಹೀರಿ, ಪದಬಂಧವನ್ನು ರಚಿಸುವಂಥಾ ಆಟ ಆಡಿದೆವು. ಮಗು ಲೆವಾನ್ನಾ ಬಾಲ್ಯಸಹಜ ಮುಗ್ಧತೆಯಿಂದ ನನಗೆ ಆಕೆಯ ಕತ್ತಿನ ಆಭರಣವನ್ನು ನೀಡಿ ಧರಿಸಲು ಒತ್ತಾಯಿಸಿದಳು. ಸ್ಯಾಂ ತನ್ನೊಂದಿಗೆ ಮಲಗದಿದ್ದರೆ ತಾನೂ ಮಲಗುವುದಿಲ್ಲವೆಂದು ಹಠ ಹಿಡಿದಳು. ಅವಳ ಹಠ ಫಲಿಸಿತು, ನಾನು ಆರಾಮಾಸನದಲ್ಲಿ ಪವಡಿಸಿದೆ.

ಮರುದಿನ, ಇವರಿಂದ ಬೀಳ್ಕೊಳ್ಳಬೇಕಲ್ಲಾ ಎಂಬ ವಿಷಾದ ಭಾವದೊಂದಿಗೆ ಪ್ರಯಾಣ ಸನ್ನದ್ಧನಾಗುತ್ತಿದ್ದಾಗ ತೆರೆಸಾಳು ''ನಿಮಗೆ ತುಸು ವಿಶ್ರಾಂತಿಯ ಆವಶ್ಯಕತೆಯಿದೆ, ಇಂದಿಲ್ಲೇ ಉಳಿಯಿರಿ. ಇದು ನಮ್ಮಿಬ್ಬರ ಅಭಿಪ್ರಾಯವೂ ಹೌದು !'' ಎಂದಾಗ ಆಕೆ ಹೇಳುವುದು ಸರಿಯೆಂದು ನನಗೂ ಅನಿಸಿತು. ೧೩೦ ಕಿ.ಮೀ. ನಷ್ಟು ಪಯಣಿಸಿದ್ದ ನನಗೆ ಒಂದು ದಿನದ ವಿಶ್ರಾಂತಿಯ ಅಗತ್ಯವಿತ್ತು. ಅದನ್ನು ಗಮನಿಸಿದ ಈ ಯುವದಂಪತಿಯಲ್ಲಿ ನಾನು ನೈಜ ಸ್ನೇಹವನ್ನು ಕಂಡೆ . ಅವರ ಆಹ್ವಾನವನ್ನು ಗೌರವಿಸಿ ಅಂದು ಅಲ್ಲಿ ಉಳಿದೆ. ಲೆವಾನ್ನಾಳಿಂದ ಸ್ಯಾಮನಿಗೆ ಅಭ್ಯಂಜನದ ಭಾಗ್ಯ ದೊರಕಿತು. ನಾನು ಆಕೆಯನ್ನು ಮಕ್ಕಳ ಕೂಟಕ್ಕೆ ಕರೆದೊಯ್ದೆ. ಆ ಮಕ್ಕಳು ನನ್ನನ್ನು ಆಕೆಯ ಅಜ್ಜನೆಂದೇ ತಿಳಿದರು. ಅಲ್ಲಿಂದ ಮನೆಗೆ ಹಿಂದಿರುಗುತ್ತಿರುವಾಗ ಆಕೆ ಇದ್ದಕ್ಕಿದ್ದ ಹಾಗೆ ನನ್ನ ಕುತ್ತಿಗೆಯನ್ನಪ್ಪಿ, ''ನೀವು ಮತ್ತು ಸ್ಯಾಂ ಇನ್ನೂ ತುಂಬಾ ದಿನ ನಮ್ಮಲ್ಲಿರಬೇಕು'' ಎಂದು ಬಾಲಭಾಷೆಯಲ್ಲಿ ಹೇಳಿದಳು.

ಆರ್ಥಿಕವಾಗಿ ಸ್ಥಿತಿವಂತರಲ್ಲದಿದ್ದರೂ ಹೃದಯಶ್ರೀಮಂತರಾದ ಈ ಯುವದಂಪತಿಗೆ ಕೊಡಲು ನನ್ನಲ್ಲಿ ಹಣವಿರಲಿಲ್ಲ ! ಒಂದು ದಿನವಿಡೀ ಅವರಲ್ಲಿ ಉಳಿಯದಿದ್ದಲ್ಲಿ ನಾನು ಕ್ರಮಿಸಬಹುದಾಗಿದ್ದ ದೂರವನ್ನು ಅವರು ಅವರ ಕಾರಿನಲ್ಲಿ ನಮ್ಮನ್ನು ಕರೆದೊಯ್ಯುವುದರ ಮೂಲಕ ಭರ್ತಿಮಾಡಿಕೊಟ್ಟಾಗಲೂ ಅವರ ಪೆಟ್ರೋಲಿನ ಖರ್ಚನ್ನು ತುಂಬಿಕೊಡುವಷ್ಟು ಹಣವೂ ನನ್ನಲ್ಲಿರಲಿಲ್ಲ. ಹಿಂದಿನ ಸೀಟಿನಲ್ಲಿ ಸ್ಯಾಂ ಮತ್ತು ಲೆವಾನ್ನಾರೊಂದಿಗೆ ನಾನು ಕುಳಿತಿದ್ದೆ. ಲೆವಾನ್ನಾಳ ನೀಲಕಂಗಳು ನನ್ನನ್ನೇ ದಿಟ್ಟಿಸುತ್ತಿದ್ದವು. ಮಗು ಬೇಸರದಿಂದ ಮೌನವಾಗಿತ್ತು. ನಾವಿಳಿಯಬೇಕಾಗಿದ್ದ ಜಾಗ ಹತ್ತಿರವಾಗುತ್ತಿದ್ದಂತೆ ನನ್ನ ಹೃದಯ ಭಾರವಾಯಿತು. ಸುಮಾರು ೬೫ ಕಿ.ಮೀ.ನಷ್ಟು

ದೂರ ಕ್ರಮಿಸಿದ ಬಳಿಕ ಕಾರು ನಿಂತಿತು. ನಾವು ಕೆಳಗಿಳಿದೆವು. ರಸ್ತೆಯ ಬದಿಯಲ್ಲಿ ನಿಂತು ಕಾರು ಹೋಗುವುದನ್ನೇ ವೀಕ್ಷಿಸುತ್ತಿದ್ದೆ. ಲಿವಾನ್ನಾಳು ತನ್ನ ಮುಗ್ಧಮುಖವನ್ನು ಕಾರಿನ ಹಿಂದಿನ ಕಿಟಕಿಗೆ ಅಂಟಿಸಿ ತನ್ನ ಪುಟ್ಟ ಶ್ವೇತವರ್ಣದ ಕೈಗಳನ್ನು ವಿದಾಯ ಹೇಳುವಂತೆ ಆಡಿಸುತ್ತಿದ್ದಳು. ಈ ಅಗಲುವಿಕೆಯಿಂದ ನನ್ನೆದೆ ಭಾರವಾಯಿತು. ಆದರೆ ಇದನ್ನು ಮರೆಸುವ ಏಕೈಕ ಔಷಧಿಯೆಂದರೆ ನನ್ನ ಕಾರ್ಯದಲ್ಲಿ ಮಗ್ನತೆ-ಮತ್ತೆ ನಡಿಗೆ.

ಮುಂದಿನ ಸಮಸ್ಯೆಯು ನನ್ನ ಪಾದಗಳ ರೂಪದಲ್ಲಿ ಓಡೋಡಿ ಬಂದೇ ಬಂದಿತು. ದೈಹಿಕವಾಗಿ ಬಲಶಾಲಿಯೇ ಆಗಿದ್ದ ನಾನು ಈ ಸಾಹಸ ಯಾತ್ರೆಗೆ ಯಾವ ಪೂರ್ವಭಾವೀ ತಾಲೀಮು ನಡೆಸಿರಲಿಲ್ಲ. ಈಗ ನನ್ನ ಪಾದಗಳಲ್ಲಿ ಗುಳ್ಳೆಗಳು ಮೂಡಿ ನೋವಾಗುತ್ತಿತ್ತು. ಈ ನೋವಿನೊಂದಿಗೇ ಹಳ್ಳಿಯೊಂದಕ್ಕೆ ಪಾದಾರ್ಪಣ ಮಾಡಿ ಅಲ್ಲಿ 'ಶಾಕ್ಲಿನಿಕ್' ಎಂಬ ಹೆಸರಿದ್ದ ದೊಡ್ಡ ಕಲ್ಲಿನ ಕಟ್ಟಡದೊಳಹೊಕ್ಕು ಕದ ತಟ್ಟಿದೆ. ಚಿಕಿತ್ಸಾಲಯದ ಮಾಲಿಕ ಬಿಳಿಕೋಟು ಧರಿಸಿದ್ದ ದಟ್ಟಕಪ್ಪುಕೂದಲ ಒಡತಿ ಶೆಯ್‌ಲಾ ಕಾರ್ಟರ್ ನನ್ನ ಕರೆಗೆ ಓಗೊಟ್ಟಳು. ಆಕೆಯ ಪರೀಕ್ಷಾತ್ಮಕ ದೃಷ್ಟಿಯು ನನ್ನ ಮೇಲೆ ಹರಿದಾಡಿತು. ತುಸುಹೊತ್ತು ಆಕೆಯ ಸೂಚನೆಯಂತೆ ಕುಳಿತು ವಿಶ್ರಾಂತನಾದೆ.

ಪಾದತಜ್ಞೆ ಶೆಯ್‌ಲಾಳ ಮೃದುವಾದ ಕೈಗಳು ನನ್ನ ಪಾದಗಳ ಪರೀಕ್ಷೆ ನಡೆಸಿದ್ದಂತೆಯೇ ನನ್ನ ಬಳಿ ಹಣವಿಲ್ಲ ಎಂದು ನಾನು ಮೊದಲೇ ಎಚ್ಚರಿಕೆ ನೀಡುವ ರೀತಿ ಆಕೆಗೆ ತಿಳಿಸಿದೆ. ನನ್ನ ಹೇಳಿಕೆಗೆ ಆಕೆ ಗಮನವಿತ್ತಂತೆ ತೋರಲಿಲ್ಲ. ''ನಿಮ್ಮ ಪಾದಗಳು ಬಹಳಷ್ಟು ಘಾಸಿಗೊಂಡಿವೆ. ತುಂಬಾ ಬಾಧೆಯಿರುವ ಸ್ಥಳದ ಒತ್ತಡವನ್ನು ಕಮ್ಮಿ ಮಾಡುವ ಪ್ರಯತ್ನವನ್ನು ನಾನು ಮಾಡುತ್ತೇನೆ'' ಎನ್ನುತ್ತಾ ಆಕೆ ನನ್ನ ಅಂಗುಷ್ಠಕ್ಕೆ ಕಲಾತ್ಮಕವಾಗಿ, ಕುಶಲತೆಯಿಂದ ಮೃದುವಾದ ದುಂಡನೆಯ ಪಟ್ಟಿಗಳನ್ನು ಕಟ್ಟಿದ್ದು ಮಾತ್ರವಲ್ಲದೇ ತನ್ನ ಕಾರಿನಲ್ಲಿ ನೆರೆರಾಜ್ಯಕ್ಕೆ ಸೇತುವಾದ ಹೆದ್ದಾರಿಯ ತನಕ ನಮ್ಮನ್ನು ಕರೆದೊಯ್ದಳು.

ರಾತ್ರಿ ಏಳುಗಂಟೆಯ ವೇಳೆಯಲ್ಲಿ ಅಂದಿನ ಪ್ರಯಾಣಕ್ಕೆ ಮುಕ್ತಾಯವನ್ನೊದಗಿಸುವ ನೂರೊಂದರ ಅನ್ವೇಷಣೆಯಲ್ಲಿ ಸ್ಯಾಂ ಹಾಗೂ ನಾನು ರಸ್ತೆಯುದ್ದಕ್ಕೂ ಸಾಗುತ್ತಿದ್ದೆವು. ಬೆಟ್ಟವೊಂದರ ಬದಿಯಲ್ಲಿರುವ ಹಳ್ಳಿಯು ನಮಗೆದುರಾಯಿತು. ಆ ಹಳ್ಳಿಯಲ್ಲಿ ಒಂದು ಕಟ್ಟಡವು ಅಂಗಡಿಯಾಗಿ ಹಾಗೂ ಅಂಚೆ ಕಛೇರಿಯಾಗಿ ಏಕಕಾಲಕ್ಕೆ ಕಾರ್ಯನಿರ್ವಹಿಸುತ್ತಿದ್ದ ಸ್ಥಳಕ್ಕೆ ಪ್ರವೇಶಿಸಬೇಕೆನ್ನುವಷ್ಟರಲ್ಲಿ ಮಧ್ಯವಯಸ್ಕ ಮಹಿಳೆಯೋರ್ವಳು ಒರಟುದನಿಯಲ್ಲಿ ''ನಾಯಿಗಳಿಗೆ ಪ್ರವೇಶವಿಲ್ಲ'' ಎಂದು ಗದರುವಂತೆ ಹೇಳಿದಳು. ಸ್ಯಾಂನನ್ನು ಹೊರಗೆ ಸರಪಳಿಯ ಬಂಧನಕ್ಕೊಳಪಡಿಸಿ ಒಳಬಂದಾಗ ನನಗಡ್ಡವಾಗಿ ನಿಂತ ಆ ಮಹಿಳೆಯು ನನ್ನಲ್ಲಿ ಹಣವಿಲ್ಲ ಎಂಬುದನ್ನು ಗುರುತಿಸಿ ಹಣವಿಲ್ಲದಿದ್ದರೆ ಎಲ್ಲಿಯೇ ಆದರೂ ತಂಗಲು ಹೇಗೆ ಸಾಧ್ಯ ಎಂದು ಪ್ರಶ್ನೆಯನ್ನೆಸೆದು ನನ್ನ ಉತ್ತರದತ್ತ ಆಸಕ್ತಿ ತೋರದೇ ಅಂಗಡಿಯ ಹಿಂಭಾಗಕ್ಕೆ ಹೋದಳು. ಬಂದದಾರಿಗೆ ಸುಂಕವಿಲ್ಲವೆಂಬಂತೆ ಅಲ್ಲಿಂದ ನಾನು ಮದ್ಯಾಲಯವೊಂದರತ್ತ ಹೋದೆ. ಅಲ್ಲಿಯ ನೌಕರಳು ನನ್ನತ್ತ ಸ್ನೇಹಪರ ವರ್ತನೆಯನ್ನು ಬೀರಿ ''ವರ್ಣ ಚಿಕಿತ್ಸಾ ವಿದ್ಯಾಲಯದಲ್ಲಿ ವಸತಿಗಾಗಿ ಪರೀಕ್ಷಿಸಿ'' ಎಂಬ ಅನಿರೀಕ್ಷಿತ ಸಲಹೆಯನ್ನು ನೀಡಿದಳು. ಈ ಸಲಹೆಯು ನನ್ನಲ್ಲಿ ಕುತೂಹಲವನ್ನು ಕೆರಳಿಸಿತು.

ಪಚ್ಚೆಸ್ನಾನದ ಇಂದ್ರಜಾಲ : ಮದ್ಯಾಲಯದ ಪರಿಚಾರಕಿಯ ಸಲಹೆಯಂತೆ ಮುನ್ನಡೆದ ನಮ್ಮನ್ನು ವರ್ಣಚಿಕಿತ್ಸಾ ವಿದ್ಯಾಲಯದ ಮಾಲಿಕ, ತೆಳು ನೀಳಕಾಯದ ಆಕರ್ಷಕ ವ್ಯಕ್ತಿತ್ವದ ಕಾರ್ಮೆಲ್ ಗಿಂಬಲಾ ಎಂಬ ಐರಿಷ್

ಮಹಿಳೆ ಆತ್ಮೀಯವಾಗಿ ಸ್ವಾಗತಿಸಿದಳು. ''ನೀವು ನಮ್ಮಲ್ಲಿ ನಿರಾತಂಕವಾಗಿ ಉಳಿಯಿರಿ, ನಮ್ಮ ಕೈಲಾದ ಉಪಚಾರ ಮಾಡುತ್ತೇವೆ'' ಎಂಬ ಭರವಸೆಯನ್ನು ನೀಡಿದಳು. ಆಕೆಯ ಮಾತುಗಳಲ್ಲಿ ಹಕ್ಕಿಯ ಮೃದುತ್ವವಿತ್ತು. ಆಕೆ ಮತ್ತು ಆಕೆಯ ಪತಿ ಥಿಫಿಲಸ್ ಸೇರಿ ''ಹೈಜಿಯ'' ಎಂಬ ಈ ವಿದ್ಯಾಲಯವನ್ನು ಸಂಚಾಲಿಸುತ್ತಿದ್ದರು. ಅಲ್ಲಿ ಹದಿನೇಳು ವಿದ್ಯಾರ್ಥಿಗಳಿಗೆ ಆಗಷ್ಟೇ ವರ್ಣ ಹಾಗೂ ಬೆಳಕಿನ ಸಂಯೋಜನೆಯ ಔಷಧೀಯ ಮಹತ್ವದ ಬಗ್ಗೆ ಒಂದು ವರ್ಷದ ತರಬೇತಿ ನೀಡಿದ್ದರು.

ಆ ದೊಡ್ಡ ಜಾಲಾಮಾಲವಾಗಿ ಮೈಚಾಚಿದಂತಿದ್ದ ಕಟ್ಟಡವು ೧೯ನೇ ಶತಮಾನಕ್ಕೆ ಸೇರಿದುದಾಗಿತ್ತು. ಕಾರ್ಮೆಲ್‌ಳು ಸ್ಯಾಂ ಹಾಗೂ ನನ್ನನ್ನು ನೀಲ ಕೋಣೆಗೆ ಕರೆದೊಯ್ದಳು. ಅಲ್ಲಿದ್ದ ಒಂದೇ ಒಂದು ದೀಪವು ನೀಲವರ್ಣವನ್ನು ತುಂಬಿಕೊಂಡು ಮಿನುಗುತ್ತಿತ್ತು. ''ನೀವು ಸಿದ್ಧರಾಗಿ ನಮ್ಮೊಂದಿಗೆ ಸಂಗೀತ ಕೊಠಡಿಗೆ ಬಂದು ಪಾನೀಯವನ್ನು ಸ್ವೀಕರಿಸಿ'' ಎಂದು ಹೇಳಿ ಆಕೆ ತನ್ನ ಕಾಮನ ಬಿಲ್ಲಿನ ಮೆರುಗಿನ ಉಡುಪಿನ ಹೊಳಪನ್ನು ಹೊಮ್ಮಿಸುತ್ತಾ ಹೊರನಡೆದಳು.

ನಾನು ಆರಾಮಾಸನದಲ್ಲಿ ಒರಗಿ ದ್ರಾಕ್ಷಾರಸವನ್ನು ಹೀರಿದೆ. ಕಾರ್ಮೆಲ್ ನನ್ನ ಪಾದವನ್ನು ಪರೀಕ್ಷಿಸಿದಳು. ಶಿಯ್‌ಲಾ ಕಾರ್ಟರ್ ಪಟ್ಟಿ ಕಟ್ಟಿದ್ದ ಸ್ಥಳವನ್ನು ಹೊರತುಪಡಿಸಿ ಉಳಿದ ಭಾಗವನ್ನು ನಯವಾಗಿ ಸವರಿದಳು. ಹಾಗೆ ಪರೀಕ್ಷಿಸುತ್ತಲೇ ಆಕೆ ನನ್ನನ್ನು ಅಚ್ಚರಿಯಿಂದೆಂಬಂತೆ, ''ನಿಮ್ಮ ಸ್ವರವು ಬಿಗುವಾಗಿದೆಯಲ್ಲಾ, ನಿಮ್ಮೊಳಗಿರುವ ಭಯವೇನು ?'' ಎಂದು ಪ್ರಶ್ನಿಸಿದಳು.ನಾನು ಆಕೆಗೆ ನನ್ನ ಪ್ರಯಾಣದ ಬಗ್ಗೆ, ಅದು ಸಾಧಿತವಾಗುವುದರ ಕುರಿತು ನನಗಿರುವ ಸಂಶಯದ ಬಗೆ ವಿವರಿಸಿದೆ. ಆಕೆ ನನ್ನ ಮಾತು ಕೇಳುತ್ತಾ ಮಸಾಜನ್ನು ಮುಂದುವರೆಸಿದ್ದಳು. ಇದ್ದಕ್ಕಿದ್ದಂತೆ ನಾನು ಕೆಮ್ಮಿದೆ. ನಾನು ಕೆಮ್ಮುತ್ತಿದ್ದುದೇ ಅಪರೂಪ. ಈಗ ಕೆಮ್ಮಿದ್ದಕ್ಕೆ ಅವಳು ''ಚಿಂತಿಸಬೇಡಿ, ನಿಮ್ಮೊಳಗಿನ ಭಯ ಬಿಡುಗಡೆಯಾಗುತ್ತಿದೆ'' ಎಂದಳು. ಅಷ್ಟರಲ್ಲಿ ಊಟ ಬಂದಿತು. ಹಬೆಯಾಡುತ್ತಿದ್ದ ಕೋಳಿಮಾಂಸದ ದಪ್ಪ ತುಂಡುಗಳು, ದನದ ಮಾಂಸದಿಂದ ತಯಾರಿಸಿದ ಬಗೆಬಗೆಯ ತಿನಿಸುಗಳು ಅವಕ್ಕಷ್ಟು ವ್ಯಂಜನಗಳು ಬಂದುವು. ಹಸಿದ ತೋಳದ ತೆರದಲಿ ಅವೆಲ್ಲವನ್ನೂ ಕಬಳಿಸಿದೆ.

ಕಾರ್ಮೆಲ್‌ಳ ಪತಿ ಎಪ್ಪತ್ತೆಂಟು ವರ್ಷದ ಥಿಫಿಲಸ್ ೧೯೪೬ರಲ್ಲಿ ಬ್ರಿಟನ್ನಿಗೆ ಬಂದವರು. ೨ನೇ ಮಹಾಯುದ್ಧದ ಕಾಲದಲ್ಲಿ ಅವರಿಗೆ ಜೈಲುಶಿಕ್ಷೆ ವಿಧಿಸಲಾಗಿತ್ತು. ಕೆಲವರ್ಷ ಏಕಾಂಗಿಯಾಗಿ ಕತ್ತಲಿನಲ್ಲಿ ತುರಂಗವಾಸವನ್ನನುಭವಿಸಿದ್ದರು. ಈ ಶಿಕ್ಷೆಯು ಆತನ ಮೇಲೆ ಧನಾತ್ಮಕ ಪರಿಣಾಮವನ್ನೇ ಬೀರಿ ಮುಂದೆ ವರ್ಣಗಳ ಅಂತಃಸತ್ವದ ಕುರಿತು ಬೋಧಿಸುವಂಥಾ ಮನೋಶಕ್ತಿಯನ್ನೊದಗಿಸಿತು. ಥಿಫಿಲಸ್ ತಮ್ಮ ವಿದ್ಯಾಲಯದ ಪ್ರಾರ್ಥನಾಮಂದಿರದಲ್ಲಿ ನನ್ನ ಹಾಗೂ ಸ್ಯಾಂನ ಪ್ರಯಾಣದ ಯಶಸ್ಸಿಗಾಗಿ ಪ್ರಾರ್ಥಿಸಿ ಕ್ಯಾಂಡಲ್ ಉರಿಸಿದರು. ಅನಂತರ ಕಾರ್ಮೆಲ್‌ಳಿಂದ ಸಲಹೆ ಬಂದಿತು. ''ನಿಮ್ಮ ಮಾನಸಿಕ ಸ್ಥಿತಿಗೆ ಪಚ್ಚೆಬಣ್ಣ ಬೆರೆಸಿದ ನೀರಿನಲ್ಲಿಯ ಸ್ನಾನ ಸ್ವಲ್ಪಮಟ್ಟಿಗೆ ಉಪಶಮನಕಾರಿಯಾದೀತು'' ನಾನು ಸ್ನಾನಿಸುವ ನೀರಿಗೆ ನೈಸರ್ಗಿಕವಾಗಿ ತಯಾರಿಸಿದ ನೀಲ ಹಾಗೂ ಹಸುರಿನ ಬಣ್ಣದ ಹನಿಗಳನ್ನು ಬೆರೆಸಲಾಯಿತು. ಐಂದ್ರಜಾಲಿಕನ ಮಾಯಾವಿದ್ಯೆಯ ಚಳಕವೋ ಎಂಬಂತೆ ನೀರು ಹೊಳಪಾದ ಪಚ್ಚೆವರ್ಣವನ್ನು ತಾಳಿತು. ಪಾದಗಳಿಗೆ ಹಚ್ಚಿದ್ದ ಕಟ್ಟುಗಳಿಗೆ ಧಕ್ಕೆ ಬಾರದಂತೆ ಜಾಗ್ರತೆ ವಹಿಸಿ ಮೀಯ ತೊಡಗಿದೆ. ಮೈಗೆ ಹಿತವಾದ ನೀರಿನ ಸ್ಪರ್ಶ ಸುಖವನ್ನನುಭವಿಸುತ್ತಾ , ಆಹಾರ , ದ್ರಾಕ್ಷಾರಸ, ಸ್ನಾನ, ಶಯ್ಯೆ ಎಲ್ಲವನ್ನೂ

ಉಚಿತವಾಗಿ ನೀಡಿ ಔದಾರ್ಯವು ಅತ್ಯಂತ ಸಹಜವಾಗಿ ಪ್ರಪಂಚದಲ್ಲಿ ಅಡಕವಾಗಿದೆಯೆಂಬಂತೆ ನನ್ನನ್ನುಪಚರಿಸಿದ ಈ ದಂಪತಿಗೆ ಕಣ್ಣು ಮುಚ್ಚಿ ಮನಸಾ ಶುಭ ಕೋರಿದೆ.

ಹದಿಮೂರನೇ ದಿನ : ನಾವು ಈ ತನಕ ೩೭೦ ಕಿ.ಮೀ. ನಡೆದಿದ್ದೆವು. ೬೦ ನಿಮಿಷ ನಡಿಗೆ, ೩೦ ನಿಮಿಷ ವಿಶ್ರಾಂತಿ ಎಂಬ ಕ್ರಮ ಅಳವಡಿಕೆ ಆಗಿತ್ತು. ವಿರಮಿಸುವಾಗ ನಾನು ಬೂಟು ಹಾಗೂ ಕಾಲುಚೀಲಗಳನ್ನು ಕಳಚಿ ಸಣ್ಣ ನಿದ್ದೆ ಮಾಡುತ್ತಿದ್ದೆ. ಬಳಿಕ ಚೀಸ್ ಹಾಗೂ ಬಿಸ್ಕತ್ತೊಂದನ್ನು ತಿಂದು ನಡಿಗೆ ಮುಂದುವರೆಯುತ್ತಿತ್ತು.

ನಾವು ಅತಿಯಾಗಿ ಬಳುಕಿದ್ದ ಅಪಾಯಕಾರಿ ಹಾದಿಯಲ್ಲಿ ನಡೆಯುತ್ತಿದ್ದೆವು. ಯಾರಾದರೂ ವಾಹನವಂತರು ನಮ್ಮನ್ನೊಂದಷ್ಟು ದೂರ ಕರೆದೊಯ್ದರೆ ಚೆನ್ನಿತ್ತು ಎಂದು ಆಶಿಸಿದೆ. ತಮ್ಮ ವಾಹನದಲ್ಲಿ ಕುಳಿತು ಸ್ಯಾಂಡ್‌ವಿಚ್ ಮೆಲ್ಲುತ್ತಿದ್ದ ಮಧ್ಯವಯಸ್ಕ ದಂಪತಿಯ ಬಳಿಹೋಗಿ ನನ್ನೀ ಆಶಯವನ್ನರುಹಿದೆ. ''ನಮ್ಮ ಕಾರಿನಲ್ಲಿ ಸ್ಥಳ ಭರ್ತಿಯಾಗಿದೆ, ಹಿಂದುಗಡೆ ನಮ್ಮ ನಾಯಿಗೆ ಸ್ಥಳಬೇಕು'' ಎಂದು ಗಂಡಸಿನಿಂದ ಉತ್ತರ ಸಿಕ್ಕಿತು. ವಾಹನದ ಹಿಂದಿನ ಸೀಟಿನಲ್ಲಿ ಕೈಚೀಲದಷ್ಟು ಪುಟ್ಟ ನಾಯಿ ಮುದುಡಿ ಕುಳಿತಿತ್ತು. ಅಲ್ಲಿ ಚಲಿಸುತ್ತಿದ್ದ ಲಾರಿಗಳ ಚಾಲಕರೂ ಉದಾರತೆಯನ್ನು ತೋರಿಸಲಿಲ್ಲ. ಅವರ ಈ ಪರಿಯ ಔದಾಸೀನ್ಯಕ್ಕೆ ಕಾರಣ ಅದಾವುದು ? ನನ್ನ ನಿರಾಕರ್ಷಕ ನಿಲುವೇ, ಸ್ಯಾಮನೇ ? ಇನ್ನು ಮುಂದೆ ಸಾಧ್ಯವಾಗುವುದಾದರೆ ನಾನು ರಾತ್ರಿ ಉಳಿಯುವಲ್ಲಿಂದಲೇ ನನ್ನ ಮುಂದಿನ ಪ್ರಯಾಣಕ್ಕೆ ವಾಹನಾನುಕೂಲತೆ ಒದಗುವುದೋ ಎಂದು ನೋಡಿಕೊಳ್ಳಬೇಕು ಇಲ್ಲವೇ ಹಾಗೇ ಸುಧಾರಿಸಬೇಕೇ ವಿನಾ ಈ ರೀತಿ ಗಿಂಜಬಾರದೆಂದುಕೊಂಡೆ. ಅಂದು ಸಂಜೆಯಾಗುತ್ತಿದ್ದಂತೇ ಒಂಟಿ ಮನೆಯೊಂದರತ್ತ ಹೋಗಿ ನನಗೆ ಅಲ್ಲಿಯ ವಾಸ್ತವ್ಯದ ಯೋಗವಿದೆಯೇ ಎಂದು ಪರೀಕ್ಷಿಸಿದೆ.

ಬಾಗಿಲು ತೆರೆದ ವ್ಯಕ್ತಿ ನನ್ನೆಡೆ ನೋಡಿ ಮುಗುಳ್ನಕ್ಕ, ಮುಗುಳ್ನಗುತ್ತಲೇ ನನ್ನ ಅಹವಾಲನ್ನು ಕೇಳಿ, ಅದೇ ಮಾಸದ ಮುಗುಳ್ನಗೆಯೊಂದಿಗೆ ತಾನು ಸಹಾಯ ಮಾಡಲಾರೆ, ಸ್ಕೌಟ್‌ಕ್ಯಾಂಪ್‌ನಲ್ಲಿ ಬೇಕಾದರೆ ಪ್ರಯತ್ನಿಸಿ ಎಂಬ ಸಲಹೆಯನ್ನೂ ನೀಡಿದ.

ಒಂದು ಕಿ.ಮೀ.ನಷ್ಟು ದೂರ ಕ್ರಮಿಸಿದ ನಂತರ ಮೂವತ್ತು ಹೆಕ್ಟೇರ್‌ನಷ್ಟು ವಿಸ್ತಾರವಾದ ವನರಾಜಿಯ ಮಧ್ಯೆ ಮೈಚಾಚಿದ್ದ ಸ್ಕೌಟ್‌ಕ್ಯಾಂಪಿನ ಪ್ರವೇಶದ್ವಾರ ಸಿಕ್ಕಿತು. ಕ್ಯಾಂಪಿನ ಮೇಲ್ವಿಚಾರಕನೊಬ್ಬ ತರುಣ, ಆದರೆ ತರುಣಿಯರಂತೆ ನೀಳವಾದ ಜುಟ್ಟು ಬೆಳೆಸಿದ್ದ. ನನ್ನ ಬಗ್ಗೆ ಅವನಿಗೆ ವಿಶದವಾಗಿ ಹೇಳಿ ಆತನ ಕರುಣೆಗೆ ಭಾಜನನಾದೆ. ''ಅತಿಥಿಗಳನ್ನು ನಾವು ಉಳಿಸಿಕೊಳ್ಳುವ ನಿಯಮವಿಲ್ಲ . ಆದರೆ ನಿಮ್ಮ ಮುಖದ ಮೇಲಿರುವ ಪ್ರಾಮಾಣಿಕತೆಯ ವರ್ಚಸ್ಸಿನಿಂದ ಮತ್ತು ನೀವು ಬಹಳ ದೂರದಿಂದ ಬಂದಿರುವಿರೆಂಬ ಕಾರಣಕ್ಕಾಗಿ ನಾವು ನಿಮಗಿಲ್ಲಿ ಉಳಿಯಲು ಅನುವು ಮಾಡಿಕೊಡುತ್ತೇವೆ'' ಎಂಬ ಕರ್ಣಾನಂದಕರವಾದ ನುಡಿಗಳು ಆತನಿಂದ ಹೊಮ್ಮಿದುವು. ನಮ್ಮ ಉಪಯೋಗಕ್ಕೆಂದೇ ಪ್ರತ್ಯೇಕವಾಗಿ ಒಂದು ಸರಳವಾದ, ಆದರೆ ಆರಾಮವಾಗಿ ಮಲಗಲು ಅನುಕೂಲವಾಗುವಂತೆ ಸಣ್ಣ ಹಾಸಿಗೆಗಳಿದ್ದ ಕೊಠಡಿಯೊಂದನ್ನು ನೀಡಲಾಯಿತು.

ರಾತ್ರಿಯ ನಿದ್ದೆಗೆ ಯುಕ್ತ ಸ್ಥಳ ದೊರೆತ ನಂತರ ಹೊಟ್ಟೆಯಲ್ಲಿ ಹಸಿವಿನ ಮೊನಚಾದ ಮುಳ್ಳುಗಳು ನಿಮಿರಿ ಕರುಳನ್ನೇ ಭೇದಿಸುವಂತೆ ನರ್ತನಗೈಯ್ಯಲಾರಂಭಿಸಿದವು. ಕಾಡಿನಲ್ಲಿ ಬೀಡುಬಿಟ್ಟಿದ್ದ ವಿವಿಧ ಸ್ಕೌಟ್ ತಂಡಗಳ ನಡುವೆ ಕಾಲು[illegible]'' [illegible]ಂತೆ ಕ್ರಮಿಸುತ್ತಾ

ಆಹಾರಕ್ಕಾಗಿ ವಿನಂತಿಸಲು ಧೈರ್ಯವನ್ನು ಒಗ್ಗೂಡಿಸತೊಡಗಿದೆ. ತಂಡವೊಂದರ ನಾಯಕಿಯು ಬಿಸಿಬಿಸಿಯಾದ ಅಡುಗೆಯನ್ನು ಧಾರಾಳವಾಗಿ ಹಂಚುತ್ತಿದ್ದುದನ್ನು ಕಂಡು, ಆಕೆಯ ಬಳಿಸಾರಿ ನನ್ನ ಪ್ರವರವನ್ನೆಲ್ಲಾ ಒದರಿ, ನನಗೂ ಪಾಲು ಸಿಗಬಹುದೆ ಎಂದು ಕೇಳಲು, ಆಕೆ ನನ್ನನ್ನು ಸಂಶಯದಿಂದ ಆಪಾದಮಸ್ತಕ ಪರ್ಯಂತ ದಿಟ್ಟಿಸಿ "ಇಲ್ಲಿ ಆಹಾರದ ಸರಬರಾಜು ಅದಕ್ಕೆಂದೇ ಪೂರ್ವನಿಗದಿತ ಹಣಕ್ಕನುಸಾರವಾಗಿ ಮಾತ್ರ ನಡೆಯುತ್ತದೆ. ಆದರೆ ತಿನ್ನುವ ಬಾಯಿಗಳು ಜಾಸ್ತಿಯಾಗುತ್ತವೆಯೇ ವಿನಾ ಹೊಣೆಗಾರಿಕೆಯನ್ನು ಹಂಚಿಕೊಳ್ಳುವವರಿಲ್ಲ" ಎಂದು ಗೊಣಗಿದಂತೆ ಹೇಳಿದಳು.

ಆಕೆಯ ಮಾತುಗಳು ನನ್ನನ್ನು ನಾನು ಹೊಸಬೆಳಕಿನಲ್ಲಿ ಅವಲೋಕಿಸುವಂತೆ ಮಾಡಿದುವು. ಅಲ್ಲಿ ತರುಣರ ನಡುವೆ ಅಡ್ಡಾಡುತ್ತಿದ್ದ ನಾನು ಆ ಪರಿಸರಕ್ಕೆ ಭಿನ್ನನಾಗಿ ತೋರುತ್ತಿದ್ದೆ, ಸಂಶಯಾಸ್ಪದ ವ್ಯಕ್ತಿಯಾಗಿದ್ದೆ. ನಾನು ಬಂಧಿತನಾಗದೇ ಇದ್ದುದು ಅದೃಷ್ಟವೆಂದೇ ಹೇಳಬಹುದು. ನನ್ನ ಗಮನವು ಸ್ವತಂತ್ರವಾಗಿ ನಿರ್ಮಿಸಲ್ಪಟ್ಟಿದ್ದ ಡೇರೆಯೊಂದರತ್ತ ಹೊರಳಿತು. ಅಲ್ಲಿದ್ದವರು ಓರ್ವ ಗಂಡಸು, ಮತ್ತೋರ್ವ ಮಹಿಳೆ ಹಾಗೂ ಇಬ್ಬರು ಹುಡುಗರು. ಅವರು ಸ್ಕೌಟ್ ತಂಡಕ್ಕೆ ಸೇರಿದವರಾಗಿರಲಾರರೆಂದು ಗ್ರಹಿಸಿದೆ. ಅವರ ಬಳಿ ಲೋಹದ ಒಲೆಯಿತ್ತು. ಅವರ ಬಳಿ ಹೋಗಿ "ನಾನು ಬಹಳಷ್ಟು ಹಸಿದಿದ್ದೇನೆ, ನೀವೇನು ತಿನ್ನುತ್ತೀರೋ ಅದರಲ್ಲಿ ಸ್ವಲ್ಪ ಪಾಲನ್ನು ನನಗಾಗಿ ಕೊಡಲೊಪ್ಪುವಿರಾ ?" ಎಂದು ಪ್ರಶ್ನಿಸಿದೆ. ಆ ಕುಟುಂಬದ ಯಜಮಾನನಿಂದ "ಖಂಡಿತವಾಗಿ" ಎಂಬ ಉತ್ತರ ಬಂದುದು ನನಗೆ ಅಭಯಹಸ್ತದಂತೆ ತೋರಿತು. ಆ ಕುಟುಂಬದ ಯಜಮಾನ ಡೀನ್ ಕಾಫೀಲ್ಡ್ ಮೊದಲು ಸ್ಕೌಟ್ ಶಿಕ್ಷಕನಾಗಿದ್ದು, ಈಗ ಬಣ್ಣದ ಎರಚುಗಾರನಾಗಿದ್ದರು. ಆತನೊಂದಿಗೆ ಆತನ ಪತ್ನಿ ಶಾರುನ್ ಹಾಗೂ ಅವರಿಬ್ಬರ ಹನ್ನೆರಡು ವರ್ಷದ ಮಗ ಜಾನ್ ಮತ್ತು ಜಾನನ ಸ್ನೇಹಿತ ಜೇಮ್ಸ್ ಸಟ್ರನ್ ಅಲ್ಲಿದ್ದರು. ಡೀನ್ ಕಾಫೀಲ್ಡ್ "ನಮ್ಮ ಬಳಿ ಹೆಚ್ಚೇನೂ ಇಲ್ಲ, ಇರುವುದನ್ನು ಹಂಚಿ ಕೊಳ್ಳೋಣ" ಎಂಬ ಔಪಚಾರಿಕ ನುಡಿಗಳನ್ನಾಡಿದರು. ಹುರುಳೀಕಾಯಿ, ಬೆಳ್ಳುಳ್ಳಿಯ ರೊಟ್ಟಿ, ಮಾಂಸದ ತುಣುಕುಗಳನ್ನು ಬೆಂಕಿಯ ಸುತ್ತ ಕುಳಿತು ಅದರ ಹಿತವಾದ ಸುಖವನ್ನನುಭವಿಸುತ್ತಾ ಸವಿದೆವು.

ನಾನಲ್ಲಿಂದ ಹೊರಡಲೆಂದು ಎದ್ದು ನಿಂತಾಗ ಶಾರುನ್ ನನ್ನ ಕೈಗೆ ಪ್ಲಾಸ್ಟಿಕ್ ಚೀಲವೊಂದನ್ನು ನೀಡಿ, "ಇದು ನಿಮ್ಮ ನಾಳೆ ಬೆಳಗಿನ ಉಪಾಹಾರಕ್ಕಾಗಿ" ಎಂದಳು. "ನೀವು ಹೊರಡುವ ಮುನ್ನ ವಿದಾಯ ಹೇಳಲು ಇಲ್ಲಿಗೆ ಬನ್ನಿ" ಎಂದು ಆಹ್ವಾನಿಸಲು ಮರೆಯಲಿಲ್ಲ. ಒಂದು ಗಂಟೆಯ ಮುನ್ನವಷ್ಟೆ ನಾನು ಹಸಿವಿನಿಂದ ಈ ರಾತ್ರಿ ಹಾಗೂ ಮರುದಿನದ ಬೆಳಗನ್ನು ಕಳೆಯಬೇಕಾಗಬಹುದೆಂದು ಭೀತನಾಗಿದ್ದೆ. ಆದರೆ ಈಗ ಈ ಕುಟುಂಬವು ಆಹಾರದ ಮೂಲಕ ಪ್ರೀತಿಯನ್ನೇ ಉಣಬಡಿಸಿದ್ದರು. ಈ ರಾತ್ರಿಗೆ ನಾನು ಕ್ರಮಿಸಬೇಕಿದ್ದ ದೂರದ ಅರ್ಧ ಭಾಗ ಮುಗಿದಿತ್ತು.

ಹದಿನೆಂಟನೇ ದಿನ: ಇಂದು ಬಹಳ ಹುರುಪಿನಿಂದ ದೊಡ್ಡ ದೊಡ್ಡ ಹೆಜ್ಜೆಗಳನ್ನು ಹಾಕಿದೆ. ನಾನು ಈ ಪ್ರಯಾಣವನ್ನಾರಂಭಿಸುವ ಮುನ್ನ ಭೇಟಿಯಾದ ಬೌದ್ಧ ಭಿಕ್ಷುಗಳು ಹೇಳಿದ ಮಾತು ಈಗ ಅನುಭವಕ್ಕೆ ಬಂದಿತ್ತು. ನಡಿಗೆಯಲ್ಲಿ ಕಸುವು ತುಂಬಿತ್ತು, ಶಕ್ತಿ ಬಂದಿತ್ತು, ವೇಗ ವರ್ಧಿಸಿತ್ತು. ಸ್ಯಾಂ ಮತ್ತು ನಾನು ದಿನದಲ್ಲಿ ಹನ್ನೊಂದು ಘಂಟೆ ನಡೆದು ಮೂವತ್ತೆಂಟು ಕಿ.ಮೀ. ನಷ್ಟು ದೂರ ಕ್ರಮಿಸುತ್ತಿದ್ದೆವು.

ಹತ್ತೊಂಬತ್ತನೇ ದಿನ : ನನ್ನ ಪ್ರಯಾಣಕ್ಕೊಂದು ಪ್ರಮುಖ ತಿರುವು ಬಂದ ದಿನ. ಹಳೆ ಸ್ನೇಹಿತರಾದ ಟಿಂ ಮತ್ತು ಜ್ಯೂಡ್ ಟ್ರೈಬರಲ್ಲಿಗೆ ಭೇಟಿ ನೀಡಿದೆ. ಜ್ಯೂಡಳು ಸ್ಯಾಂನ ಕಣ್ಣುಗಳನ್ನು ಪರೀಕ್ಷಾತ್ಮಕವಾಗಿ ನೋಡಿ, ಅದಕ್ಕೆ ಚಿಕಿತ್ಸೆಯ

ಆವಶ್ಯಕತೆಯಿದೆಯೆಂದೂ ಪಕ್ಕದಲ್ಲೇ ಇರುವ ಪಶುವೈದ್ಯರನ್ನು ಕಾಣಬೇಕೆಂದೂ ಅಭಿಪ್ರಾಯ ಪಟ್ಟಳು. ಅಂತೆಯೇ ಕ್ರಿಸ್ಟೀನ್ ಮ್ಯಾಕ್ ಕೊಮ್ಯಾಕ್ ಎಂಬ ಪಶುವೈದ್ಯೆಯ ಬಳಿ ಸ್ಯಾಂನ ಪರೀಕ್ಷೆ ಮಾಡಿಸಿದಾಗ ಆಕೆ ಹೇಳಿದ ವಿಚಾರ ಆಘಾತಕಾರಿಯಾಗಿತ್ತು. ಸ್ಯಾಂನ ಕಣ್ಣಿನಲ್ಲಿ ಆಳವಾದ ಹುಣ್ಣಾಗಿತ್ತು. "ನಾನೇನೋ ಸದ್ಯದ ಉಪಶಮನಕ್ಕಾಗಿ ಮುಲಾಮನ್ನು ಕೊಡಬಹುದಾದರೂ ಅದಕ್ಕೆ ಹೆಚ್ಚಿನ ಚಿಕಿತ್ಸೆ ಹಾಗೂ ವಿಶ್ರಾಂತಿಯ ಆವಶ್ಯಕತೆಯಿದೆ" ಎಂದು ವೈದ್ಯೆಯು ಹೇಳಿದಾಗ ನಾನು ಸ್ಯಾಂನ ಮುಖ ನೋಡಿದೆ. ಅದು ನನ್ನ ದೃಷ್ಟಿಗೆ ತನ್ನ ದೃಷ್ಟಿಯನ್ನು ಸೇರಿಸಿತ್ತು. ನನ್ನನ್ನು ಅಪರಾಧಿ ಪ್ರಜ್ಞೆ ಕಾಡಿತು. ಸ್ಪಾನಿಯಲ್ ಜಾತಿಯ ನಾಯಿಗಳಿಗಿಂತ ವೇಗವಾಗಿ ಕ್ರಮಿಸಬಲ್ಲ ನಾಯಿಗಳ ತಳಿಗಳು ಬಹಳಷ್ಟಿವೆ. ಆದರೆ ಸ್ಯಾಂನ ಪುಟ್ಟಕಾಲುಗಳು ನನ್ನೊಂದಿಗೆ ಆರುನೂರು ಕಿ.ಮೀ.ನಷ್ಟು ನಡೆದಿದ್ದುವು. ನನಗೋಸ್ಕರ ಅದನ್ನು ಸಾಕಷ್ಟು ಬಳಲಿಸಿದ್ದೆ. ಅದರ ಮಾಲಕಿ ಸಾರಾ ಡೇವಿಡ್‌ಸನ್‌ಳು ಅದನ್ನು ಅಲ್ಲಿಂದ ಕರೆದೊಯ್ಯುವಂತೆ ವ್ಯವಸ್ಥೆ ಮಾಡಿದೆ. ಮಲಗಿದ ಸ್ಯಾಂನ್ನೇ ದಿಟ್ಟಿಸಿ ನೋಡುತ್ತಾ ನಿಂತಿದ್ದ ನನ್ನಲ್ಲಿ ಮುಖ್ಯವಾದ ಸಂಬಂಧವೊಂದು ಕೊನೆಗೊಳ್ಳುವುದರಲ್ಲಿದೆ ಎನಿಸಿತು. ಸ್ಯಾಮನಿಲ್ಲದೆ ಈ ಪ್ರಯಾಣವನ್ನೆದುರಿಸುವುದು ಹೇಗೆಂಬ ಪ್ರಶ್ನೆ ಮುಂದಿತ್ತು. ಸ್ಯಾಮನಿಲ್ಲದ ಈ ಮಹಾಯಾತ್ರೆ ನನಗೆ ಅಪರಿಚಿತ ಎನಿಸುತ್ತಿತ್ತು. ಈ ಪ್ರಯಾಣದಲ್ಲಿ ಭೇಟಿಯಾದ ಜನರಿಗೆಲ್ಲ ಸ್ಯಾಂ ಕೇಂದ್ರಬಿಂದುವಾಗಿತ್ತು. ಸ್ಯಾಮನ ಪ್ರತೀ ಚಲನವಲನಕ್ಕೂ ನನ್ನದೊಂದು ಭಾಷ್ಯವಿರುತ್ತಿತ್ತು.

"ಸುಮ್ಮನೇ ಹೊರಡು, ಅದೇ ಸರಿಯಾದ ದಾರಿ" ಎಂದಳು ಜ್ಯೂಡ್. ನಾನು ಹೊರಟೆ. ಏಕಾಕಿಯಾಗಿ ಹೊರಟ ವ್ಯಕ್ತಿ ವೇಗವಾಗಿ ಪ್ರಯಾಣಿಸುತ್ತಾನೆಂಬ ಹೇಳಿಕೆಯಿದೆ. ಈ ಹೇಳಿಕೆಯ ಸತ್ಯತೆ ಈಗ ಅರಿವಿಗೆ ಬರತೊಡಗಿತ್ತು. ಪ್ರಯಾಣದ ನಡುವೆ ಸ್ಯಾಮನ ತುಡುಗುತನವನ್ನು ನಿಭಾಯಿಸಬೇಕಾದ ದರ್ದು ಇನ್ನು ನನ್ನ ಮುಂದಿರಲಿಲ್ಲ. ಹಿಂದೆ ಪ್ರಯಾಣದಲ್ಲಿ ಸ್ಯಾಮನೊಂದಿಗೆ ಸಾಕಷ್ಟು ಮಾತಾಡುತ್ತಿದ್ದೆ. ವಾದವಿವಾದಗಳನ್ನು ನಡೆಸಿ ನಾನೇ ಗೆಲ್ಲುತ್ತಿದ್ದೆ. ಹಿಂದೆ ಅದರೊಂದಿಗೆ ನಡೆಸುತ್ತಿದ್ದಂಥ ಸಂಭಾಷಣೆಗಳನ್ನು ಈಗ ಒಬ್ಬಂಟಿಯಾಗಿ ಪಯಣಿಸಬೇಕೆಂದು ನಿರ್ಧರಿಸಿದೆ. ನನ್ನನ್ನು ಯಾರಾದರೂ ಭ್ರಮಿಷ್ಟನೆಂದು ಗ್ರಹಿಸಿದರೂ ಚಿಂತಿಸಬೇಕಾಗಿಲ್ಲವೆಂದು ಭಾವಿಸಿದೆ.

ಇಪ್ಪತ್ತನೇ ದಿನ: ಒಂದು ಹಳ್ಳಿಗೆ ಬಂದು ಸೇರಿದೆ. ಅಲ್ಲಿನ ದೊಡ್ಡದೊಂದು ಕಲ್ಲಿನ ಮನೆಯಿಂದ ಸ್ವರಗಳ ಮೇಳನ ಕೇಳಿ ಬರುತ್ತಿತ್ತು. ಉದ್ಯಾನವನದ ಗೋಡೆಯ ಅಂಚಿನಿಂದ ಇಣುಕಿದೆ. ಸಂಜೆ ೪.೩೦ರ ಆ ಸಮಯದಲ್ಲಿ ಅಲ್ಲಿನ ಜನರು ಹಬ್ಬದ ವಾತಾವರಣದಲ್ಲಿದ್ದರು. ಅಂದು ಅಲ್ಲಿ ಜೋಡಿ ಉತ್ಸವಗಳು ನಡೆಯುತ್ತಿದ್ದವು. ಮನೆಯೊಡೆಯ ಬ್ರಿಯಾನ್ ಸ್ಪೆರ್ರಿಂಗ್‌ನ ೫೬ನೇ ಜನ್ಮದಿನವಾಗಿತ್ತು. ಆತನ ಸಂಗಾತಿ ಡೊರೊವಿಗೆ ಮರುದಿನ ೫೦ ವರ್ಷ ತುಂಬುವುದರಲ್ಲಿತ್ತು. ನನ್ನ ನೀರಿನ ಕುಪ್ಪಿಯನ್ನು ಭರ್ತಿಮಾಡುವಂತೆ ನಾನು ಅಲ್ಲಿದ್ದ ಕೆಲವರನ್ನು ಕೇಳಿದಾಗ ಅವರು ನನ್ನನ್ನು ಸತ್ಕರಿಸಿ ಚಹಾ ಕುಡಿಯಲು ಆಗ್ರಹಪಡಿಸಿದರು. ನನ್ನ ವಾಸ್ತವ್ಯಕ್ಕೆ ತಕ್ಕ ಸ್ಥಳ ಸೂಚಿಸಲು ಅವರಲ್ಲಿ ವಿನಂತಿಸಿದೆ. "ನೀವು ರೈತ ಹಗೀಬರ್ಡ್‌ನಲ್ಲಿ ಹೋಗಿ ಮತ್ಸ್ಯಕನ್ಯೆ ಹಾಗೂ ಮೂಷಿಕರಾಜ ನಿಮ್ಮನ್ನು ಕಳಿಸಿರುವುದಾಗಿ ಹೇಳಿ" ಎಂದರವರು.

ಹಗೀ, ೬೦ವರ್ಷದ ಬಲಿಷ್ಠ ರೈತ ನನ್ನನ್ನು ತುಂಬಾ ಆತ್ಮೀಯ ರೀತಿಯಲ್ಲಿ ಬಹಳ ಸಮಯದ ತರುವಾಯ ಭೇಟಿಯಾಗುತ್ತಿರುವ ಬಂಧುವೊಬ್ಬರನ್ನು ಸ್ವಾಗತಿಸುವಂತೆ ಸ್ವಾಗತಿಸಿದರು. ದೊಡ್ಡ ಪಾತ್ರೆಯಲ್ಲಿ ಚಹಾ ಮತ್ತು ಕಡುಬು ನೀಡಿ ಹಸಿವನ್ನು ತಣಿಸಿದರು. ನನ್ನನ್ನು ಅಲ್ಲಿಗೆ ಕಳಿಸಿದವರು ಯಾರೆಂದು ತಿಳಿಸುತ್ತಲೇ ಆತನಿಗೆ

ಬಹಳ ನಗು ಬಂದಿತು. ನಾನು ಮಲಗಲು ಹೊಲದಲ್ಲಿರುವ ಕ್ಯಾರವಾನನ್ನು ಬಳಸಿಕೊಳ್ಳಲು ಸೂಚಿಸಿದರು.

ನಸುಕು ಹರಿದಮೇಲೆ ಎಂದಿನಂತೆ ಬೇಗ ಪ್ರಯಾಣವನ್ನಾರಂಭಿಸಬೇಕು ಎಂದುಕೊಂಡೆ. ಆದರೆ ಹಗೀಯಲ್ಲಿ ತನ್ನ ತೋಟವನ್ನು - ತನ್ನ ಜೀವದ ಜೀವವನ್ನು ನನಗೆ ತೋರಿಸಬೇಕೆಂಬ ತೀವ್ರ ಅಭಿಲಾಷೆಯಿತ್ತು. ''ಇಂದು ಬೆಳಗ್ಗೆ ಉಳಿಯಿರಿ, ನೀವು ಕ್ರಮಿಸಬಹುದಾಗಿದ್ದ ದೂರವನ್ನು ನಾನು ವಾಹನದಲ್ಲಿ ಕರೆದೊಯ್ದು ತುಂಬಿಕೊಡುತ್ತೇನೆ'' ಎಂದು ಕೇಳಿಕೊಂಡರು. ಅವರು ಪ್ರೀತಿಪೂರ್ವಕವಾಗಿ ನೀಡಿದ ಈ ಆಮಂತ್ರಣವನ್ನು ನಾನು ತಿರಸ್ಕರಿಸಲಾಗಲಿಲ್ಲ. ಮಣಿದೆ. ಅವರ ಬಳಿಯಿದ್ದ ತೊಂಬತ್ತು ಕರೆಯುವ ಹಸುಗಳನ್ನು ನೋಡಿ ಮೆಚ್ಚುಗೆ ವ್ಯಕ್ತಪಡಿಸಿದೆ. ನನ್ನನ್ನು ೩೬ ಮೀ. ಉದ್ದ, ೧೨ ಮೀ ಅಗಲದ, ಕಿಟಕಿಗಳಿಲ್ಲದ ಕೊಠಡಿಯೊಂದಕ್ಕೆ ಕರೆದೊಯ್ದರು. ನೆಲದಮೇಲೆ ೨ವಾರಗಳ ಪ್ರಾಯದ ಸುಮಾರು ಒಂಭತ್ತು ಸಾವಿರ ಕೋಳಿಮರಿಗಳು ರತ್ನಗಂಬಳಿಯಂತೆ ಹರಡಿದ್ದವು. ಆದೊಂದು ಅದ್ಭುತ ದೃಶ್ಯ ನಾನೀಗ ಅಕ್ಷರಶಃ ಕುಕ್ಕುಟ ಕುಂಜದಲ್ಲಿದ್ದೆ. ಒಳಗಿನ ತೇವಭರಿತ ಮಂಕು ವಾತಾವರಣವು ಯಾವುದೋ ಪ್ರತಿಭಟನಾ ಸಭೆಗೆ ನೆರೆದಿದ್ದೇವೆಂಬಂತೆ ಗದ್ದಲ ನಡೆಸಿದ್ದ ಕೋಳಿಮರಿಗಳ ಕಚಪಿಚಿ ರವದಿಂದಾಗಿ ಜೀವಕಳೆಯನ್ನು ತುಂಬಿಕೊಂಡಿತ್ತು. ಆ ಕೋಳಿಗೂಡನ್ನು ಚೊಕ್ಕಟಗೊಳಿಸಲು ಹಗೀ ಸಾಕಷ್ಟು ಶ್ರಮ ವಹಿಸುತ್ತಿದ್ದುದು ಎದ್ದು ಕಾಣುತ್ತಿತ್ತು.

ಹಗಿಯಲ್ಲಿದ್ದ ಧಾರಾಳತನವು ಔತಣ ಮೇಜಿನಲ್ಲಿ ವ್ಯಕ್ತಗೊಂಡಿತು. ಹಗೀಯ ಪತ್ನಿ ಜೋಸಲು ಹಂದಿಮಾಂಸದ ದೊಡ್ಡ ದೊಡ್ಡ ಹಲಗೆಗಳನ್ನೇ ಪೇರಿಸಿಟ್ಟಿದ್ದಳು. ನಾವು ಅವುಗಳನ್ನು ಕಬಳಿಸಿದಂತೆಲ್ಲ ಮತ್ತಷ್ಟು, ಇನ್ನಷ್ಟು ತುಂಡುಗಳು ನಮ್ಮ ಜಹ್ವೆಯನ್ನು ತಣಿಸಲು ಸಿದ್ಧವಾಗುತ್ತಿದ್ದುವು. ತಾಜಾ ಬ್ರೆಡ್, ಬೆಣ್ಣೆ ರೊಟ್ಟಿಗಳೂ ನಮ್ಮ ಹಸಿವಿನ ತಣಿವಿಗೆ ಪೂರಕವಾದುವು. ನಾವು ತಿಂದೆವು ಹರಟಿದೆವು. ಮನಸಾರೆ ನಕ್ಕೆವು. ಬಳಿಕ, ಮೊದಲೇ ಹೇಳಿದ್ದಂತೆ ಹಗೀಯು ತನ್ನ ವಾಹನದಲ್ಲಿ ನನ್ನನ್ನು ಕರೆದೊಯ್ದರು. ನನಗೆ ಉಣಬಡಿಸಿ, ವಸತಿ ಕಲ್ಪಿಸಿ, ಮನರಂಜನೆಯೊಂದಿಗೆ ವಿಷಯ ಸಂಗ್ರಹಣೆಗೂ ಅನುವು ಮಾಡಿಕೊಟ್ಟ ಹಗೀಯು ಚಿರಕಾಲ ನನ್ನ ನೆನಪಿನಲ್ಲುಳಿಯುತ್ತಾರೆ.

ಫ್ರಾಸ್ಟರ್ಲೀ ಎಂಬ ಊರಿನಲ್ಲಿ ದೊರಕಿದ ಪ್ರಾಥಮಿಕ ಆಸ್ವಾಗತದಿಂದಾಗಿ ನನಗೊಂದಿಷ್ಟು ಉತ್ಸಾಹಭಂಗವಾಯಿತು. ಮೊದಲೆರಡು ಮನೆಗಳಿಗೆ ನಾಯಿಗಳ ಪ್ರಬಲ ಯಜಮಾನಿಕೆಯಿಂದಾಗಿ ಪ್ರವೇಶಿಸಲಾಗಲಿಲ್ಲ. ಮೂರನೆಯದಾಗಿ ಒಂದು ಸಣ್ಣ ಮನೆ ಕಂಡಿತು. ನಾನು ಅದರ ಬಾಗಿಲು ತಟ್ಟಲು, ಹೆಣ್ಣು ದನಿಯೊಂದು ತಾರಶ್ರುತಿಯಲ್ಲಿ ''ಯಾರದು? ಏನು ಬೇಕಾಗಿತ್ತು?'' ಎಂದು ಗಡುಸಾಗಿ ಕೇಳಿತು. ಆ ದನಿಯ ಒಡತಿ ಭದ್ರವಾಗಿ ಕಿಟಕಿ ಬಾಗಿಲುಗಳನ್ನು ಮುಚ್ಚಿ ಕುಳಿತಿದ್ದಳು. ನಾನೂ ಕಿರುಚುವ ದನಿಯಲ್ಲಿ ಕ್ಷಮೆಕೇಳಿ ಬಂದ ದಾರಿಗೆ ಸುಂಕವಿಲ್ಲವೆಂಬಂತೆ ಅಲ್ಲಿಂದ ಹೊರಟೆ. ಹಗೀ ಬರ್ಡ್‌ರವರಲ್ಲಿ ಅಥವಾ ಕ್ಲಿಫ್ ಬ್ರಿಂಬ್ಲ್‌ಕೊಂಬ್‌ರ ಬಳಿಯಿದ್ದಂತೆ ಕ್ಯಾರವಾನ್ ಯಾರಲ್ಲಿದೆಯೋ ಆ ಮನೆಯ ಬಾಗಿಲು ತಟ್ಟಿದರೆ ಒಳ್ಳೆಯ ಸ್ವಾಗತ ಸಿಗಬಹುದೆಂದುಕೊಂಡೆ, ಅವರಿಬ್ಬರೂ ಅಲೆಮಾರಿಯಾದ ನನಗೆ ವಸತಿಯೊದಗಿಸಿದರು. ಆದರೆ ಆ ಬಗ್ಗೆ ಗರ್ವದಿಂದ ನಾನು ತಂಗಿದ್ದಲ್ಲಿಗೆ ಬಂದು ಮೆರೆಯಲಿಲ್ಲ.

ಫ್ರಾಸ್ಟರ್ಲೀಯಲ್ಲಿ ನಾನೆಲ್ಲಿ ಕ್ಯಾರವಾನನ್ನು ಹುಡುಕಲಿ? ಹಳ್ಳಿಯ ಉದ್ದಗಲ ಜಾಲಾಡಿದ ಮೇಲೊಂದು ಪುಟ್ಟ ಕುಟೀರ ಕಾಣಿಸಿತು. ಅದರ ಮಗ್ಗುಲಲ್ಲಿ ಕ್ಯಾರವಾನ್ ಸಹಾ ಇತ್ತು. ಮುಂಬಾಗಿಲ ಕರೆಗಂಟೆಯನ್ನೊತ್ತಿದೆ. ಮುಂದೆ

ದೊರಕುವ ಪುಷ್ಕಳ ಆತಿಥ್ಯದ ಸರಣಿಗೆ ಓನಾಮ ಇಲ್ಲಿತ್ತು. ಬಾಗಿಲು ತೆರೆದ ಜೋಯ್ಸ್ ಕ್ರೋಸಿಯರ್ ನನ್ನ ಅವಸ್ಥೆಯನ್ನು ನೋಡಿ ನಗುತ್ತಾ ಆತ್ಮೀಯ ಸ್ವಾಗತ ನೀಡಿದಳು. ಆಕೆ ಹಾಗೂ ಆಕೆಯ ಓರಗಿತ್ತಿ ಜೋನ್ ಭಾರತೀಯ ಆಹಾರವನ್ನು ತರಲು ಹೊರಹೋಗಿದ್ದ ತಮ್ಮ ಪತಿಯಂದಿರ ನಿರೀಕ್ಷೆಯಲ್ಲಿದ್ದರು. ಅವರು ಬರುವ ಮುನ್ನ ನಾನು ಸ್ವಲ್ಪ ದ್ರಾಕ್ಷಾರಸವನ್ನು ಸೇವಿಸಿದೆ. ಆ ಮನೆಯ ಮುಖ್ಯಸ್ಥರಾದ ರಾನ್ ಹಾಗೂ ಬ್ಯಾರಿ ಹಿಂದಿರುಗಿದಾಗ ಅಲ್ಲಿದ್ದ ಬಡಪಾಯಿ ಯಾದ ನನ್ನನ್ನು ಕಂಡು ಕೋಪಗೊಳ್ಳದೆ ಉಪಚಾರ ಮಾಡಿದರು. ಇದು ಅದೃಷ್ಟವೆಂದೇ ತಿಳಿದೆ. ಅಂದು ರಾತ್ರಿ ತಿನ್ನಲು ಚಿಕನ್ ಕೊರ್ಮಾ, ಒರಗಲು ಕ್ಯಾರವಾನ್ ದೊರಕಿತು.

ಮರುದಿನ ಪಯಣದ ಬಳಿಕ ಮನೆಯೊಂದರ ಹಿತ್ತಿಲಲ್ಲಿದ್ದ ಕ್ಯಾರವಾನ್ ಗೋಚರಿಸಿತು. ನನ್ನ ಕರೆಗೆ ಓಗೊಟ್ಟು ಮನೆಬಾಗಿಲು ತೆಗೆದ ಎರ್ನಿ ಓರಿಮಾ ಬಲಾಢ್ಯವ್ಯಕ್ತಿ ಎಂಬುದನ್ನು ಆಢ್ಯತೆಯಿಂದ ಮೆರೆಯುತ್ತಿದ್ದ ಆತನ ಮೀಸೆಯೇ ಹೇಳುತ್ತಿತ್ತು. ನಾನು ''ಆ ಕ್ಯಾರವಾನ್‌ನಲ್ಲಿ ಈ ರಾತ್ರಿ ಕಳೆಯಬಹುದೇ?'' ಎಂದು ಕೇಳಿದ್ದಕ್ಕೆ ಆ ಬಲಿಷ್ಠನು ಸರಳತೆಯೇ ನುಡಿವೆತ್ತಂತೆ ನಿಮ್ಮ ಸಾಮಾನುಗಳನ್ನೆಲ್ಲ ಅಲ್ಲಿರಿಸಿ ಮನೆಗೆ ಬನ್ನಿ ಎಂದು ಉತ್ತರಿಸಿದರು. ಅಡುಗೆಮನೆಯ ಮೇಜಿನಲ್ಲಿ ಎರ್ನಿಯ ಪತ್ನಿ ವಿವಿಯನ್ ನನಗೆ ತಿನಿಸನ್ನು ನೀಡುತ್ತಿರುವಾಗ ಎರ್ನಿಯು ತನ್ನ ೪೫೦ ಕುರಿಮಂದೆಯ ಕುರಿತು ವಿವರಿಸುತ್ತಿದ್ದರು.

೨೪ ನೇ ದಿನ: ಮುಳ್ಳಿನ ಪೊದೆ ತುಂಬಿದ ಕಾಡಹಾದಿಯಲ್ಲಿ ಸಾಗಿದ ಇಂದಿನ ನಡಿಗೆಯು ಕಠಿಣವಾಗಿತ್ತು. ಮೂವತ್ತು ಕಿ.ಮೀ. ನಡೆದಾದ ಮೇಲೆ ಚಳಿಯು ಹನಿ ಹನಿಯಾಗಿ ನನ್ನ ಬಟ್ಟೆಗಳೊಳಗೆ ಪ್ರವೇಶಿಸುತ್ತಿತ್ತು. ಬಾಡಿ ಬಸವಳಿದ ದೇಹವು ನಿಂತು ವಿಶ್ರಮಿಸಿಕೊಂಡು ಮುನ್ನಡೆ ಎನ್ನುತ್ತಿದ್ದರೂ ಮನಸ್ಸು ಇನ್ನೂ ಸ್ವಲ್ಪ ನಡೆದು ಅನಂತರ ವಿಶ್ರಾಂತಿ ಪಡೆಯಲು ಪ್ರೇರೇಪಿಸುತ್ತಿತ್ತು. ಸಂಜೆ ೬ ಗಂಟೆಗೆ ಸಂಚಾರೀ ಉಪಾಹಾರ ಗೃಹವೊಂದರ ಒಳಹೊಕ್ಕೆ. ಅದರ ಮೇಲ್ವಿಚಾರಕನ ಬಳಿ ''ನಾನು ಪ್ಲೈಮೌತ್‌ನಿಂದ ಇಲ್ಲಿಯವರೆಗೂ ಹಣವಿಲ್ಲದೇ ಪಯಣಿಸಿ ಬಂದಿದ್ದೇನೆಂದರೆ ನೀವು ನನ್ನನ್ನು ಒಂದು ಲೋಟ ಚಹಾಕ್ಕೆ ಯೋಗ್ಯನನ್ನಾಗಿಸುತ್ತೀರಾ?'' ಎಂದು ಸವಾಲೆಸೆದೆ. ''ಓಹೋ ಖಂಡಿತಾ'' ಎಂದು ಆತನುತ್ತರಿಸಿದ ಧ್ವನಿ, ಆತನುತ್ತರವನ್ನು ಹಿಂಬಾಲಿಸಿ ಬಂದ ಬಿಸಿಬಿಸಿಯಾದ ಚಹಾ ನನ್ನನ್ನು ಮತ್ತೆ ಉಲ್ಲಸಿತನನ್ನಾಗಿಸಿದುವು. ಅಂದು ಮಲಗಲು ಬರ್ನಾರ್ಡ್ ವೈಟ್ಲೆ ಎಂಬವರ ಕ್ಯಾರವಾನ್ ದೊರಕಿತು. ಮಲಗಿದ ಕ್ಷಣದಲ್ಲಿ ನಿದ್ದೆ ಆವರಿಸಿತು. ಮರುಬೆಳಿಗ್ಗೆ ಅಡುಗೆಮನೆಯಲ್ಲಿ ಉಪಾಹಾರವನ್ನು ಸ್ವೀಕರಿಸುವಾಗ ಯೋಚಿಸತೊಡಗಿದೆ. 'ನನಗೆ ಹೋದೆಡೆಯಲ್ಲೆಲ್ಲಾ ಸ್ವಾಗತ ಸಿಕ್ಕುವುದು, ಅದನ್ನನುಭವಿಸುವುದು ಹಕ್ಕೆಂದು ಭಾವಿಸಿದ್ದೇನೆಯೇ ? ಜನರು ನನ್ನೆಡೆಗೆ ಉದಾರರಾಗಲಿ ಎಂದುಆಶಿಸುತ್ತಾ ಪರಾವಲಂಬಿಯಾಗುತ್ತಿರುವೆನೆ? ನನ್ನ ಯೋಚನೆಗೆ ಭಂಗ ಬರುವಂತೆ ಹೊರಗೇನೋ ಸದ್ದಾಯಿತು. ಕಿಟಕಿಯಿಂದ ದೃಷ್ಟಿಸಿದಾಗ ಬರ್ನಾರ್ಡ್ ಕೆಲವು ನಾಯಿಗಳಿಗೆ ವ್ಯಾಯಾಮ ಮಾಡಿಸುತ್ತಿದ್ದುದು ಕಾಣಿಸಿತು. ಅಂದು ಅಲೆಕ್ಸ್ ವಾರ್ನ್‌ನಿಂದ ಆಹಾರವನ್ನು ಸಂಪಾದಿಸಿಕೊಳ್ಳಲು ಡಾಮರಿನಿಂದ ಚಿತ್ರ ಬಿಡಿಸಿದ ಅನುಭವದ ಬಳಿಕ ರಾತ್ರಿಯೂಟವನ್ನು ನಾನು ಒಂದಷ್ಟು ಗಾಯನದ ಮೂಲಕ ಗಳಿಸುತ್ತಿದ್ದೆ. ಬರ್ನಾರ್ಡ್‌ರ ಕಾರ್ಯವನ್ನು ಗಮನಿಸಿದಾಗ ನನಗೊಂದು ಆಲೋಚನೆ ಬಂದಿತು, ತಡಮಾಡಲಿಲ್ಲ. ಹೊರಗೆ ಧಾವಿಸಿ ನನ್ನಿಂದ ಸಹಾಯಬೇಕೇ ಎಂದು ಪ್ರಶ್ನಿಸಿದೆ. ವೈಟ್ಲೆ ದಂಪತಿ ಶ್ವಾನಪಾಲನಾ ಗೃಹವೊಂದನ್ನು ನಡೆಸುತ್ತಿದ್ದು, ಹಲವರು ರಜಾದಿನಗಳಲ್ಲಿ ತಮ್ಮ ಪ್ರೀತಿಪಾತ್ರವಾದ ನಾಯಿಗಳನ್ನು ಈ ಗೃಹದ ಉಸ್ತುವಾರಿಗೊಪ್ಪಿಸಿ ವಿಹಾರ ಹೊರಡು

ತ್ತಿದ್ದರು. ಈ ನಾಯಿಗಳು ಮಾತ್ರವಲ್ಲದೆ ವೈಟ್ಲೀ ದಂಪತಿಯ ಬಳಿ ಅವರ ಸ್ವಂತದ ಶುನಕ ಪರಿವಾರವೂ ಇದ್ದಿತು. ತಮ್ಮಲ್ಲಿರುವ ಶುನಕ ಪರಿವಾರಕ್ಕೆ ವ್ಯಾಯಾಮ ಒದಗಿಸುವ ಕೆಲಸಕ್ಕೆ ನಾನು ಸಹಾಯ ಹಸ್ತ ಚಾಚಿದುದಕ್ಕೆ ಬರ್ನಾರ್ಡ್‌ರ ಮುಖ ಬೆಳಗಿತು. ನನಗೊಂದು ಅಚ್ಚರಿಯ ಕೆಲಸವನ್ನು ಒದಗಿಸಿದರು. ''ನಿಮಗೆ ಹಸ್ಕಿ ಜಾತಿಯ ನಾಯಿಗಳನ್ನು ನಿಭಾಯಿಸಿದ ಅನುಭವ ಇದೆಯೇ ?'' ಎಂದು ಪ್ರಶ್ನಿಸಿದರು. ನನ್ನದು ಋಣಾತ್ಮಕ ಪ್ರತಿಕ್ರಿಯೆಯಾಗಿತ್ತು. ಆದರೂ ಅವರು ಶೋಲ್ಕ್ ಹಾಗೂ ವ್ಯಾಜ ಎಂಬೆರಡು ನಾಯಿಗಳನ್ನು ನನ್ನ ವಶಕ್ಕೊಪ್ಪಿಸಿ ಅವುಗಳ ಸ್ವಭಾವವನ್ನು ತಿಳಿಯಪಡಿಸಿದರು. ರಾಕೆಟ್‌ನ ವೇಗದಲ್ಲಿ ಓಟಕಿತ್ತ ಆ ನಾಯಿಗಳ ಹಿಂದೆ ನಾನು ಧಾವಿಸಿದೆ.

ಇನ್ನೆರಡು ರಾತ್ರಿಗಳುಳಿದರೆ ನನ್ನ ಯಾತ್ರೆಯು ಮುಕ್ತಾಯಗೊಳ್ಳುತ್ತಿತ್ತು. ಅವುಗಳಲ್ಲಿ ಮೊದಲ ರಾತ್ರಿಯು ಎಡಿನ್‌ಬರೋನಿಂದ ೮೦ ಕಿ.ಮೀ ದೂರದಲ್ಲಿರುವ ವಾಲ್ಟರ್ ಇಂಗ್ಲಿಯವರ ಹೊಲಮನೆಯಲ್ಲಿ ಕಳೆಯಿತು. ಕೊನೆಯ ರಾತ್ರಿಯನ್ನು ಕಡೇ ಪಕ್ಷ ಒಂದು ಚರ್ಚು ಸಹಾ ಇರದ ಹೆರಿಯಟ್ ಎಂಬ ಅತಿ ಚಿಕ್ಕ ಹಳ್ಳಿಯಲ್ಲಿ ಕಳೆಯುವುದಿತ್ತು.

ಆ ಚಿಕ್ಕ ಹಳ್ಳಿಯ ಹಾದಿಬದಿಯ ಪುಟ್ಟ ಉಪಾಹಾರಗೃಹವೊಂದರ ಒಡತಿ ಗಿಲಿಯನ್ ಟೋರಿಯು ಹೋಟೆಲ್‌ಗೆ ಅಂಟಿಕೊಂಡಂತಿದ್ದ ಕೋಣೆಯತ್ತ ಕೈತೋರಿ ''ಆ ಕೋಣೆಯಲ್ಲಿ ಸೌಲಭ್ಯಗಳಿಲ್ಲ, ನಿಮಗೊಪ್ಪಿಗೆಯಾದರೆ ಇಳಿದು ಕೊಳ್ಳಬಹುದು, ಸ್ವಾಗತ ಕೋರುತ್ತೇನೆ'' ಎಂದಳು.

ಆಗಸ್ಟ್ ೨೧, ಶುಕ್ರವಾರ : ಪ್ಲೈಮೌತ್ ಬಿಟ್ಟ ಇಪ್ಪತ್ತೇಳು ದಿನಗಳಲ್ಲಿ ೮೫೦ ಕಿ.ಮೀ. ಕ್ರಮಿಸಿ ಎಡಿನ್‌ಬರೋ ನಗರವು ತಲೆಯೆತ್ತಿ ನಿಂತಿರುವ ಸಮತಟ್ಟಾದ ಭೂಭಾಗಕ್ಕೆ ಬಂದು ತಲುಪಿದ್ದೆ. ಈಗ ನಾನು ನಡೆಯುವ ಯಂತ್ರವಾಗಿದ್ದೆ. ನಡಿಗೆಯ ವೇಗವು ವೃದ್ಧಿಸಿ, ಗಂಟೆಗೆ ಐದೂವರೆ ಕಿ.ಮೀನಷ್ಟು ನಡೆಯ ಬಲ್ಲವನಾಗಿದ್ದೆ. ನನ್ನ ಮನದಲ್ಲಿದ್ದ ಭಯದ ಗಂಟು ಯಾವತ್ತೋ ಕರಗಿಹೋಗಿತ್ತು. ಏಕಾಕಿ ರಸ್ತೆಗಳು ಹಿಂದೆ ಉಳಿದಿದ್ದುವು. ಈಗ ನಾನು ಬೇರೆಯೇ ಲೋಕದಲ್ಲಿರುವೆನೇನೋ ಅನ್ನಿಸುವಂತೆ ವಾಹನದಟ್ಟಣೆ, ಮೊಬೈಲ್ ದೂರವಾಣಿ ಹೊಂದಿದ್ದ ಸೂಟುಧಾರೀ ಪುರುಷರು, ನವನವೀನ ರೀತಿಯ ಹೋಟೆಲುಗಳು, ಅಂಗಡಿ, ಆಫೀಸು ಕಟ್ಟಡಗಳು ನನ್ನೆದುರಿಗೆ ಕಾಣಿಸುತ್ತಿದ್ದುವು.

''ನ್ಯೂಸ್ ಪೇಪರ್ ಬೇಕೇ?'' ಎಂದು ಪೇಪರ್ ಮಾರುವ ತರುಣ ನನ್ನನ್ನು ಪ್ರಶ್ನಿಸಿದ. ''ಕ್ಷಮಿಸಿ, ನನ್ನಲ್ಲಿ ಹಣವಿಲ್ಲ'' ಎಂದೆ. ಆತ ನಸುನಕ್ಕ. ಇಂಥಾ ಮಾತನ್ನು ಆತ ನೂರಾರು ಬಾರಿ ಕೇಳಿರಬಹುದು.

ಮರಳಿ ಮನೆಗೆ: ಮನೆಗೆ ಬಂದು, ಸಂಗಾತಿ ಕಿಟ್ಟಿ ಹಾಗೂ ಮಗ ಡೈಲಾನ್‌ರೊಂದಿಗೆ ಪುನರ್ ಮಿಲನವಾಯಿತು. ಜಾಫ್ರಿ ಚಾಚರ್ ನನಗೆ ಕೊಟ್ಟ ಹತ್ತು ಪೌಂಡುಗಳ ನೋಟನ್ನು ಹಿಂದಿರುಗಿಸಿದೆ. ನನ್ನನ್ನು ನಂಬಿ ಆದರಿಸಿದ ಪ್ರತಿಯೊಬ್ಬರಿಗೂ ಕೃತಜ್ಞತಾ ಪತ್ರ ಬರೆದೆ.

''ನೀವು ಸ್ನೇಹಾದರಗಳನ್ನು ತೋರುವುದರಲ್ಲಿ ಉತ್ತರ-ದಕ್ಷಿಣ ಎಂಬ ಪ್ರಾದೇಶಿಕ ಭಿನ್ನತೆಯನ್ನು ಗುರುತಿಸಿದ್ದೀರಾ ?'' ಎಂದು ಕೆಲವರು ನನ್ನನ್ನು ಪ್ರಶ್ನಿಸಿದರು. ಖಂಡಿತವಾಗಿಯೂ ಇಲ್ಲ. ನಾನು ಹೋದೆಡೆಯಲ್ಲೆಲ್ಲ ನನಗೆ ಆದರದ ಆತಿಥ್ಯ ಹಾಗೂ ಅನಪೇಕ್ಷಿತ ವ್ಯಕ್ತಿಯೆಂಬ ತಾತ್ಸಾರ ಸಮ್ಮಿಳಿತವಾಗಿಯೇ ಸಿಕ್ಕಿವೆ. ನನ್ನ ಮೇಲೆ ಅಪನಂಬಿಕೆಯನ್ನು ತೋರಿದ ವ್ಯಕ್ತಿಗಳೂ ಇಲ್ಲದಿರಲಿಲ್ಲ. ವಸತಿ ಹಾಗೂ ಆಹಾರ ನೀಡಿದ್ದವರು ಹಸನ್ಮುಖರಾಗಿಯೇ ನೀಡಿದ್ದರು. ಮುಕ್ತ ಮನಸ್ಸಿನಿಂದ ತಮ್ಮ ಮನೆಯ ಬಾಗಿಲನ್ನು ತೆರೆದು ಸ್ವಾಗತಿಸಿದ್ದರು.

ಹಳ್ಳಿಗಾಡಿನಲ್ಲಿ ಸಂಚರಿಸಿದಾಗ ನಿಚ್ಚಳವಾದ

ಸರಳ ಸತ್ಯವು ಸ್ವಯಂವೇದ್ಯವಾಯಿತು. ಮಾನವನಿರ್ಮಿತ ಕೃತಕ ಪರಿಸರವು ಸುಸ್ತು, ಉದ್ವೇಗವನ್ನು ಹುಟ್ಟುಹಾಕಿ ನಮ್ಮನ್ನು ದಣಿಸುತ್ತವೆ, ನಿಸರ್ಗಸಹಜವಾದುವು ತಣಿಸುತ್ತವೆ ಎಂದು.

ನಾನಾಯ್ದುಕೊಂಡಿದ್ದ ಧನಶೂನ್ಯ ವಿತ್ತರಾಹಿತ್ಯ ನನ್ನನ್ನು ಸಾಮಾಜಿಕ ಪರಿಸರ ದಿಂದ ಹೊರಹಾಕಿದೆ ಎಂದು ಮೊದ ಮೊದಲು ಅನಿಸುತ್ತಿತ್ತು. ಈ ಅನಿಸಿಕೆಯು ನನ್ನ ಪ್ರತಿಯೊಂದು ಕ್ರಿಯೆ, ಪ್ರತೀ ನಿರ್ಧಾರದ ಮೇಲೂ ತನ್ನ ಪ್ರಭಾವವನ್ನು ಬೀರಿ ನನ್ನ ಜೀವನ ದೃಷ್ಟಿಯೇ ಬದಲಾಯಿತು. ನಮ್ಮಲ್ಲಿ ಬಹಳಷ್ಟು ಜನರೂ ಅದೃಷ್ಟವಂತರೇ. ಈ ಲೋಕದ ಕಡುಕಷ್ಟಗಳ ಪರಂಪರೆಯು ತಾಕದಂತೆ ರಕ್ಷಾವಲಯದ ಮಧ್ಯೆ ಇದ್ದೇವೆ. ನಮ್ಮಲ್ಲಿ ಬಹುಮಂದಿ ಇಂದು ರಾತ್ರಿ ಎಲ್ಲಿ ನಿದ್ರಿಸಬೇಕೆಂದು ವ್ಯಾಕುಲರಾಗಿ ಚಿಂತಿಸ ಬೇಕಿಲ್ಲ. ಹಸಿವನ್ನು ತಾತ್ಕಾಲಿಕವಾಗಿ ಚಾಕಲೇಟಿನ ತುಣುಕೊಂದರಿಂದ ಅಡಗಿಸಿ ಕೊಂಡು ಮುಂದಿನ ಊಟ ಸಿಗುವುದೋ ಇಲ್ಲವೋ ಎಂದು ಕ್ರಾಂತರಾಗಿ ಇರಬೇಕಿಲ್ಲ. ಇಷ್ಟೆಲ್ಲಾ ನೆಮ್ಮದಿ ನಮ್ಮ ಪಾಲಿಗಿದ್ದರೂ ನಮಗಿನ್ನಾವುದೋ ಅತೀ ಅಗತ್ಯವಾದ ಭೋಗವು ಲೋಪವಾಗಿದೆ ಎಂದು ವ್ಯಥಿತರಾಗುತ್ತೇವೆ. ನಮ್ಮ ಅನಿಶ್ಚಿತತೆ, ತಳಮಳಗಳಿಗೆ 'ದೇಶನೋಡು, ಕೋಶ ಓದು' ಎಂಬ ನಾಣ್ಣುಡಿಯಂತೆ, ಪ್ರವಾಸವು ಉತ್ತರ ದಾಯಿಯಾಗಬಹುದೆಂದು ಕಂಡುಕೊಂಡಿ ದ್ದೇನೆ. ಅದಕ್ಕಾಗಿಯೇ ಹಿಂದೂ ಸಂಸ್ಕೃತಿ ಯಲ್ಲಿ ೫೦ವರ್ಷ ತುಂಬಿದ ಬಳಿಕ ತೀರ್ಥ ಯಾತ್ರೆ ಹೋಗುವ ಪದ್ಧತಿಯಿದೆ. ನಾವೆಲ್ಲಾ ದೈಹಿಕವಾಗಿ ಬಲಶಾಲಿಗಳಾಗಿ ಜೀವನ ಒಡ್ಡುವ ಸವಾಲುಗಳನ್ನೆದುರಿಸುವ ಶಕ್ತಿ ಹೊಂದಿದವ ರಾಗಿದ್ದರೂ ನನ್ನಿಂದೇನೂ ಸಾಧ್ಯವಿಲ್ಲವೆಂಬಂತೆ ನಿವೃತ್ತರಾಗಬಯಸುತ್ತೇವೆ. ಜೀವನ ಕಲಿಸಿದ ಹಿಂದಿನ ಅನುಭವಗಳ ನೆರವಿನಿಂದ ಮುಂದಿನ ಜೀವನವನ್ನು ಸವಾಲಿನಂತೆ ಎದುರಿಸಬೇಕು. ಹಿಂದೆ ಕ್ರಮಿಸಿದ ಹಾದಿಗಿಂತ ಮುಂದಿರುವ ಹಾದಿ ಹಿರಿದು.

ಹಿಂದಿನ ದಿನಗಳಿಗೆ ಹೋಲಿಸಿದರೆ ಈ ದಿನಗಳಲ್ಲಿ ನಿಜವಾದ ಪ್ರವಾಸಕ್ಕೆ ಹೊರಡು ವವರು ಬಹಳ ಕಮ್ಮಿ ಮಂದಿ, ಮಾಧ್ಯಮಗಳ ಮೂಲಕ ಒಂದಷ್ಟು ಪ್ರವಾಸೀ ಧಾಮಗಳ ಮಾಹಿತಿ ಸಂಗ್ರಹಿಸಿ ಕೇವಲ ಆ ಸ್ಥಳವನ್ನು ಸೇರುವುದೇ ಗುರಿಯಾಗಿಸಿ ಪ್ಯಾಕೇಜ್ ಟೂರ್ ಎಂದು ವಾಹನಗಳಲ್ಲಿ ಹೊರಟು, ದಾರಿಯಲ್ಲಿ ಕಾಲಕಳೆಯುವ ಮಾರ್ಗವೆಂದು ತೋರಿಸುವ ವೀಡಿಯೋ ನೋಡುತ್ತಲೋ ಮಿನಿಟೇಪ್ ರೆಕಾರ್ಡ್‌ರಿನ ಎರಡು ನಳಿಕೆಗಳನ್ನು ಕಿವಿಗೆ ತುರುಕಿ ಪಯಣಿಸುವವರೇ ಬಹುಮಂದಿ. ನನ್ನ ಅನುಭವದ ಪ್ರಕಾರ ಇದು ಪ್ರವಾಸವೇ ಅಲ್ಲ. 'ಅ' ಅಕ್ಷರದಿಂದ 'ಆ' ಅಕ್ಷರದತ್ತ ಸಾಗುವ ಪ್ರಯಾಣವಿದು. ಇಲ್ಲಿ ಕುತೂಹಲ ಕೆರಳು ವುದಿಲ್ಲ. ನಿಸರ್ಗನಿರ್ಮಿತ ಅದ್ಭುತಗಳು ಅಂತಃದೃಷ್ಟಿಗೆ ಕಾಣುವುದಿಲ್ಲ.

ನಿಜವಾದ ಪ್ರವಾಸದಲ್ಲಿ ಭೋಗಕ್ಕೆಡೆ ಯಿಲ್ಲ, ಐಷಾರಾಮಗಳ ನಿರೀಕ್ಷೆ ಇರುವುದಿಲ್ಲ. ಎದುರಾಗುವ ಅನುಭವಗಳನ್ನೆಲ್ಲ ಬಗಲಿಗೇರಿಸಿ ಕೊಳ್ಳುವ ಛಲವಿರುತ್ತದೆ, ಮುಕ್ತತೆಯಿರುತ್ತದೆ.

ಹುಲಿ ಮತ್ತು ಜೇಡನ ಕಥೆ

ಭಾರತಿ ಭಟ್
೧೩೫, ಡಿ-ಬ್ಲಾಕ್, ೨೨ನೇ
ಕ್ರಾಸ್ ವಿಜಯನಗರ
೩ನೇ ಹಂತ,
ಮೈಸೂರು-೫೭೦ ೦೧೭

ಒಂದಾನೊಂದು ಕಾಲದಲ್ಲಿ ಒಂದು ಹುಲಿ ಕಾಡಿನ ರಾಜನಾಗಿತ್ತು. ಎಲ್ಲಾ ಪ್ರಾಣಿಗಳೂ ಅದು ಹೇಳಿದಂತೆ ಕೇಳುತ್ತಿದ್ದುವು. ಶಕ್ತಿಶಾಲಿಯಾದ ಗೋರಿಲ್ಲಾ ಕೂಡ ಹುಲಿಯ ಗರ್ಜನೆ ಕೇಳಿದೊಡನೆ ಅದಕ್ಕೆ ಮರ್ಯಾದೆ ಕೊಟ್ಟು ಸುಮ್ಮನಿರುತ್ತಿತ್ತು.

ಕಾಡಿನಲ್ಲಿ ಅತಿ ಕಡಿಮೆ ಶಕ್ತಿಯಿರುವ ಪ್ರಾಣಿಯೆಂದರೆ ಅನಾನ್ಸಿಯೆಂಬ ಜೇಡ. ಒಂದು ದಿನ ಅದು ಹುಲಿಯ ಬಳಿಗೆ ಬಂದು ಹೇಳಿತು, ''ಹುಲಿಯೇ, ನೀನು ಕಾಡಿನಲ್ಲಿ ತುಂಬಾ ಶಕ್ತಿ ಉಳ್ಳವನಾಗಿರುವಿ. ಎಲ್ಲಾ ಪ್ರಾಣಿಗಳೂ ನಿನ್ನನ್ನು ಕಂಡರೆ ಭಯಗೊಂಡು ಸುಮ್ಮನಿರುತ್ತವೆ. ಆದರೆ ನನಗೆ ಶಕ್ತಿಯಿಲ್ಲ. ಹಾಗಾಗಿ ನನ್ನ ಮೇಲೆ ಯಾರೂ ಆಸಕ್ತಿ ತೋರಿಸುವುದಿಲ್ಲ. ನೀನು ನನಗೆ ಸಹಾಯ ಮಾಡುತ್ತೀಯಾ?''

ಇದರ ಮಾತನ್ನು ಕೇಳಿ ಎಲ್ಲಾ ಪ್ರಾಣಿಗಳು ನಗಾಡಿದವು. ಈ ಅನಾನ್ಸಿ ಹುಲಿಯ ಹತ್ತಿರ ಸಹಾಯ ಕೇಳುತ್ತಿರುವುದನ್ನು ನೋಡಿ ಅವುಗಳಿಗೆ ಆಶ್ಚರ್ಯವಾಯಿತು. ಆದರೆ ಹುಲಿ ಮಾತನಾಡಲಿಲ್ಲ. ಅದು ಬಾಲ ಅಲ್ಲಾಡಿಸುತ್ತಾ ಕಣ್ಣನ್ನು ಅರ್ಧ ಮುಚ್ಚಿ ಮಲಗಿತ್ತು. ಅನಾನ್ಸಿ ಇನ್ನೊಮ್ಮೆ ಕೇಳಿಕೊಂಡಾಗ ಹುಲಿ ನಿನಗೆ ಏನು ಬೇಕೆಂದು ಕೇಳಿತು.

''ಎಲ್ಲಾ ವಸ್ತುಗಳಿಗೂ ನಿನ್ನ ಹೆಸರು ಇಡುತ್ತಾರೆ. ಶಕ್ತಿಶಾಲಿಯಾದ ನಿನಗೆ ಎಲ್ಲರೂ ತುಂಬಾ ಮರ್ಯಾದೆ ಕೊಡುತ್ತಾರೆ. ನಿನ್ನ ಹೆಸರಿನಲ್ಲಿ ತುಂಬಾ ಕಥೆಗಳಿವೆ. ಆದರೆ ನನ್ನ ಹೆಸರಿನಲ್ಲಿ ಏನೂ ಇಲ್ಲ. ಹುಲಿಯ ಕಥೆಯಿದ್ದಂತೆ ಅನಾನ್ಸಿಯ ಕಥೆಯೂ ಇದ್ದು ನನ್ನ ಹೆಸರೂ ಕೂಡ ನಿನ್ನಂತೆ ಪ್ರಸಿದ್ಧಿಯಾಗುವ ಹಾಗೆ ಮಾಡುತ್ತೀಯಾ ? '' ಎಂದು ಅನಾನ್ಸಿ ಕೇಳಿತು.

ಕಾಡಿನ ಎಲ್ಲಾ ಪ್ರಾಣಿಗಳೂ ಇವುಗಳ ಸಂಭಾಷಣೆಯನ್ನು ಕೇಳುತ್ತಾ ಕುಳಿತಿದ್ದುವು. ಸ್ವಲ್ಪ ಹೊತ್ತು ಸುಮ್ಮನಿದ್ದು ಆಲೋಚಿಸಿದ ಹುಲಿ ಹೇಳಿತು, ''ನಾನು ನಿನಗೆ ಎರಡು ಪಂದ್ಯ ಹೇಳುತ್ತೇನೆ. ಇವನ್ನು ನೀನು ಮಾಡಬಲ್ಲೆಯಾ''?

''ಎಂತಹ ಪಂದ್ಯ?'' ಎಂದು ಅನಾನ್ಸಿ ಕೇಳಿತು.

''ಮೊದಲನೆಯದಾಗಿ ನೀನು ಒಂದು ಸೋರೆ ಬುರುಡೆ ತುಂಬಾ ಜೀವಂತವಿರುವ ಜೇನುನೊಣಗಳನ್ನು ತುಂಬಿಸಿ ತರಬೇಕು. ಇದು ನೀನು ನನಗೆ ಮಾಡಿತೋರಿಸಬೇಕಾದ ಮೊದಲನೆಯ ಕೆಲಸ. ಎರಡನೆಯದಾಗಿ ನದಿಯ ಬಳಿಯಿರುವ ಬಿದಿರಿನ ಮರಗಳ ಮಧ್ಯೆ ವಾಸಿಸುತ್ತಿರುವ ಒಂದು ಜೀವಂತ ಹಾವನ್ನು ನನ್ನ ಬಳಿಗೆ ತೆಗೆದುಕೊಂಡು ಬರಬೇಕು. ಈ ಎರಡು ಕೆಲಸಗಳನ್ನು ನೀನು ಏಳು ದಿವಸದ ಒಳಗೆ ಮಾಡಿ ಮುಗಿಸಬೇಕು. ಹೀಗೆ ಮಾಡಿದಲ್ಲಿ ನಿನ್ನ ಹೆಸರಿನಲ್ಲೂ ಕಥೆಯಿದೆಯೆಂದು ನಾನು ಒಪ್ಪುತ್ತೇನೆ.'' ಎಂದಿತು ಹುಲಿ.

''ನೀನು ಹೇಳಿದ ಈ ಎರಡು ಕೆಲಸಗಳನ್ನು ನಾನು ಮಾಡುತ್ತೇನೆ'' ಎಂದು ಅನಾನ್ಸಿ ಹೇಳಿತು. ಅನಾನ್ಸಿಗೆ ಮಾಡಲು ಅಸಾಧ್ಯವಾದಂತಹ ಪಂದ್ಯವನ್ನು ತಾನು ಅದಕ್ಕೆ ಕೊಟ್ಟಿರುವೆನೆಂದು ಹೆಮ್ಮೆ ಪಡುತ್ತಾ ಹುಲಿ ಕಾಡಿನೊಳಗೆ ಹೋಗಿ ಕಣ್ಮರೆಯಾಯಿತು. ಪ್ರಾಣಿಗಳೆಲ್ಲ ಅನಾನ್ಸಿಯನ್ನು ನೋಡಿ ನಗತೊಡಗಿದವು.

ವೆಸ್ಟ್ ಇಂಡೀಸ್‌ನ ಒಂದು ಜಾನಪದ ಕಥೆ

ಅವುಗಳ ನಗುವನ್ನು ಮನಸ್ಸಿಗೆ ಹಚ್ಚಿಕೊಳ್ಳದೆ ಅನಾನ್ಸಿ ತನ್ನ ಮನೆಗೆ ಹೋಯಿತು.

ಮೊದಲನೆಯ ಪಂದ್ಯ : ಹೂಜಿ ತುಂಬಾ ಜೇನುನೊಣಗಳು

ಸೋಮವಾರ ಬೆಳಿಗ್ಗೆ ಅನಾನ್ಸಿ ಬೇಗನೆ ಎದ್ದಿತು. ಒಂದು ಖಾಲಿ ಸೋರೆ ಬುರುಡೆಯನ್ನು ತೆಗೆದುಕೊಂಡು ಕಾಡಿಗೆ ಹೋಯಿತು. ದಾರಿಯಲ್ಲಿ ಹೋಗುತ್ತಿರುವಾಗ ಇದರಲ್ಲಿ ಎಷ್ಟು ಹಿಡಿಸಬಹುದು, ಇದರಲ್ಲಿ ಎಷ್ಟು ಹಿಡಿಸಬಹುದು ಎಂದು ಬಾಯಲ್ಲಿ ಹೇಳುತ್ತಾ ಹೋಯಿತು. ಇದನ್ನು ನೋಡಿದ ಇರುವೆ ''ಯಾಕೆ ನೀನು ಖಾಲಿ ಸೋರೆ ಬುರುಡೆಯನ್ನು ಹಿಡಿದುಕೊಂಡು ನಿನ್ನಷ್ಟಕ್ಕೇ ಮಾತನಾಡುತ್ತಾ ಹೋಗುತ್ತಿರುವೆ?'' ಎಂದು ಕೇಳಿತು. ಅನಾನ್ಸಿ ಅದಕ್ಕೆ ಯಾವ ಉತ್ತರವನ್ನೂ ಕೊಡದೆ ಮುಂದೆ ಹೋಯಿತು.

ಹೀಗೆ ಮುಂದೆ ಹೋಗುತ್ತಿರುವಾಗ ರಾಣಿ ಜೇನುನೊಣ ಎದುರಾಯಿತು. ''ಅನಾನ್ಸಿ, ನೀನು ಯಾಕೆ ಖಾಲಿ ಸೋರೆ ಬುರುಡೆಯನ್ನು ತೆಗೆದುಕೊಂಡು ಹೋಗುತ್ತಿರುವೆ?'' ಎಂದು ಕೇಳಿತು.

''ನಾನು ಹುಲಿಯ ಜತೆ ಒಂದು ಪಂದ್ಯ ಕಟ್ಟಿದ್ದೇನೆ, ಆದರೆ ಈ ಪಂದ್ಯದಲ್ಲಿ ನಾನು ಸೋಲುವ ಹಾಗೆ ಕಾಣಿಸುತ್ತದೆ. ಒಂದು ಸೋರೆ ಬುರುಡೆಯಲ್ಲಿ ಎಷ್ಟು ಜೇನುನೊಣಗಳು ಹಿಡಿಸುತ್ತವೆಯೆಂದು ನನ್ನಿಂದ ಹೇಳಲು ಸಾಧ್ಯವಿಲ್ಲವೆಂದು ಅದು ಹೇಳುತ್ತಿದೆ. ರಾಣಿ ಜೇನುನೊಣವೇ, ನಾನು ಅದಕ್ಕೆ ಏನೆಂದು ಉತ್ತರ ಹೇಳಲಿ?'' ಎಂದು ಅನಾನ್ಸಿ ಕೇಳಿತು.

''ಇದೊಂದು ತುಂಬಾ ಸುಲಭದ ಪಂದ್ಯವೆಂದು ನೀನು ಅದಕ್ಕೆ ಹೇಳು'' ಎಂದು ರಾಣಿನೊಣ ಹೇಳಿತು.

''ಹಾಗಿದ್ದರೆ ನೀನು ನನಗೆ ಸಹಾಯ ಮಾಡುತ್ತೀಯಾ?'' ಎಂದು ಅನಾನ್ಸಿ ಕೇಳಿತು.

''ಆದರೆ ಒಂದು ಸೋರೆ ಬುರುಡೆಯಲ್ಲಿ ಎಷ್ಟು ಜೇನುನೊಣಗಳು ಹಿಡಿಸುತ್ತವೆಯೆಂದು ನನಗೆ ಸರಿಯಾಗಿ ತಿಳಿಯದಿರುವಾಗ ನಾನು ನಿನಗೆ ಹೇಗೆ ಹೇಳಲಿ ?'' ಎಂದು ಹೇಳುತ್ತಾ ರಾಣಿಜೇನುನೊಣ ಅಲ್ಲಿಂದ ಹಾರಿ ಹೋಯಿತು.

ಅನಾನ್ಸಿ ಸೋರೆ ಬುರುಡೆಯನ್ನು ತೆಗೆದುಕೊಂಡು ಮನೆಗೆ ಹಿಂದಿರುಗಿತು. ಸಾಯಂಕಾಲ ಅದು ಇನ್ನೊಮ್ಮೆ ಕಾಡಿಗೆ ಹೋಗಿ ಎತ್ತರವಾದ ಮರಗಳ ಬಳಿ ಬಂತು. ಆ ಮರಗಳಲ್ಲಿ ತುಂಬಾ ಹಳದಿ ಬಣ್ಣದ ಹೂಗಳು ಅರಳಿ ಸಿಹಿ ಪರಿಮಳ ಬರುತ್ತಿತ್ತು. ಮತ್ತು ಜೇನುನೊಣಗಳ ಹಾರಾಟದ ಸದ್ದು ಕೇಳಿಸುತ್ತಿತ್ತು. ಆಗ ಅಲ್ಲಿಗೆ ರಾಣಿ ಜೇನುನೊಣ ತನ್ನ ಕುಟುಂಬದ ಎಲ್ಲಾ ಜೇನುನೊಣಗಳ ಜತೆ ಬಂತು. ಅದಕ್ಕೆ ಅಲ್ಲಿ ಅನಾನ್ಸಿ ಕಾಣಿಸಿತು. ಅದರ ಮೇಲೆ ಕರುಣೆ ತೋರಿದ ರಾಣಿ ನೊಣ ಹೇಳಿತು ''ಅಲ್ಲೇ ನಿಲ್ಲು ಅನಾನ್ಸಿ. ನಿನಗೆ ನಾನು ಸಹಾಯ ಮಾಡುತ್ತೇನೆ''.

''ತುಂಬಾ ಸಂತೋಷ. ಇಡೀ ದಿವನ ನಾನು ಈ ಪ್ರಶ್ನೆಗೆ ಉತ್ತರ ಹುಡುಕುತ್ತಿದ್ದೆ'' ಎಂದು ಅನಾನ್ಸಿ ಹೇಳಿತು.

ರಾಣಿ ಜೇನುನೊಣ ಹೇಳಿತು, ''ನೀನು ಸೋರೆ ಬುರುಡೆಯ ಮುಚ್ಚಳ ತೆಗೆದು ಸೂರ್ಯನಿಗೆದುರಾಗಿ ಹಿಡಿ. ನಾವು ಒಬ್ಬೊಬ್ಬರಾಗಿ ಅದರೊಳಗೆ ಹೋಗುತ್ತೇವೆ. ನಾವು ಒಳಗೆ ಹೋದಂತೆ ನೀನು ಲೆಕ್ಕ ಮಾಡುತ್ತ ಹೋಗು. ಸೋರೆಬುರುಡೆ ತುಂಬಿದ ನಂತರ ನಾವು ಹೊರಗೆ ಹಾರಿ ಹೋಗುತ್ತೇವೆ. ಈ ರೀತಿ ಮಾಡಿದರೆ ನಿನಗೆ ಲೆಕ್ಕ ಸರಿಯಾಗಿ ಸಿಗಬಹುದು''.

''ಆಯಿತು'' ಎನ್ನುತ್ತಾ ಅನಾನ್ಸಿ ಸೋರೆ ಬುರುಡೆಯನ್ನು ಸೂರ್ಯನಿಗೆದುರಾಗಿ ಹಿಡಿಯಿತು. ನಿಧಾನವಾಗಿ ಜೇನುನೊಣಗಳು ಒಂದೊಂದಾಗಿ ಒಳಗೆ ಹೋಗತೊಡಗಿದವು. ಅನಾನ್ಸಿ ಒಂದು, ಎರಡು, ಮೂರು ಎಂಬು

ದಾಗಿ ಎಣಿಸುತ್ತಾ ಹೋಯಿತು. ಹೀಗೆ ನೂರ ಐವತ್ತನಾಲ್ಕು ಆಗಿ ಕಟ್ಟಕಡೆಯ ಜೇನುನೊಣ ಒಳಗೆ ಹೊಕ್ಕಾಗ ಸೋರೆ ಬುರುಡೆ ತುಂಬಿತು. ಒಳಗಿನಿಂದ ಜೇನುನೊಣಗಳ ಗುಯಿಂ, ಗುಯಿಂ ಸದ್ದು ಕೇಳಿಸುತ್ತಿತ್ತು. ಅನಾನ್ಸಿ ಕೂಡಲೇ ಸೋರೆ ಬುರುಡೆಯ ಬಾಯಿಯನ್ನು ಬಿರಡೆಯಿಂದ ಮುಚ್ಚಿ ಓಡುತ್ತಾ ಕಾಡಿನಲ್ಲಿ ಇತರ ಪ್ರಾಣಿಗಳ ಮಧ್ಯೆ ಕುಳಿತಿದ್ದ ಹುಲಿಯ ಬಳಿಗೆ ಹೋಯಿತು.

''ನೋಡು ಹುಲಿರಾಜ, ಸೋರೆ ಬುರುಡೆಯಲ್ಲಿ ೧೫೪ ಜೇನುನೊಣಗಳನ್ನು ತುಂಬಿಸಿ ತಂದಿದ್ದೇನೆ. ಇನ್ನು ನಾನು ಹಾವನ್ನು ತರಬೇಕೆ, ಅಥವಾ ಇಷ್ಟೇ ಸಾಕಾಗುತ್ತದೆಯೋ?'' ಎಂದು ಕೇಳಿತು.

ಇದನ್ನು ನೋಡಿ ಕೋಪಗೊಂಡ ಹುಲಿಗೆ ಆ ಕ್ಷಣದಲ್ಲಿ ಅನಾನ್ಸಿಯನ್ನು ಜಜ್ಜಿ ಪುಡಿ ಮಾಡಬೇಕೆಂದೆನಿಸಿತು. ಅದು ಇತರ ಪ್ರಾಣಿಗಳ ಜತೆ ತಾನು ಎಷ್ಟು ಕಷ್ಟದ ಪಂದ್ಯವನ್ನು ಅನಾನ್ಸಿಗೆ ಹೇಳಿದ್ದೇನೆಂದು ಜಂಬ ಕೊಚ್ಚಿಕೊಳ್ಳುತ್ತಿತ್ತು. ಇನ್ನೊಂದು ಪಂದ್ಯದಲ್ಲಿ ಅನಾನ್ಸಿಗೆ ಗೆಲ್ಲಲು ಖಂಡಿತ ಸಾಧ್ಯವಿಲ್ಲವೆಂದು ಸಮಾಧಾನಗೊಂಡ ಹುಲಿ ಹೇಳಿತು, ''ನಾನು ಹೇಳಿದ ಒಂದು ಪಂದ್ಯದಲ್ಲಿ ನೀನು ಗೆದ್ದೆ. ಈ ದಿನ ಸೋಮವಾರ ಸಾಯಂಕಾಲ. ಇನ್ನು ಶನಿವಾರ ಬೆಳಗ್ಗಿನವರೆಗೆ ನಿನಗೆ ಸಮಯವಿದೆ. ಅದರೊಳಗೆ ನೀನು ನಾನು ಹೇಳಿದ ಇನ್ನೊಂದು ಕೆಲಸವನ್ನು ಮಾಡಿ ಮುಗಿಸಬೇಕು''.

ಇದನ್ನು ಕೇಳಿದ ಇತರ ಪ್ರಾಣಿಗಳು ನಗಾಡಿದವು. ಆದರೆ ಬುದ್ಧಿವಂತನಾದ ಗೂಬೆ ನಗಾಡಲಿಲ್ಲ. ಅದು ಮರದಲ್ಲಿ ಕುಳಿತುಕೊಂಡು ಅನಾನ್ಸಿಗೆ ಇದೂ ಸಾಧ್ಯವಾಗುತ್ತದೆಯೋ ಏನೋ ಎಂದು ತನ್ನಲ್ಲೇ ಹೇಳಿಕೊಂಡಿತು.

ಎರಡನೆಯ ಕೆಲಸ: ಹಾವನ್ನು ತರುವುದು

ಮಂಗಳವಾರ ಬೆಳಗ್ಗೆ ಅನಾನ್ಸಿ ಬೇಗನೆ ಎದ್ದಿತು. ಬಾಳೆಹಣ್ಣಿನ ಮೂಲಕ ಹಾವನ್ನು ಸೆರೆಹಿಡಿಯಬಹುದು ಎಂದು ಅದು ಆಲೋಚಿಸಿತು. ಹಾವುಗಳು ಮನುಷ್ಯರಂತೆ ದಿನಾ ಬೆಳಗ್ಗೆ ಸಮಯಕ್ಕೆ ಸರಿಯಾಗಿ ಎದ್ದು ನದಿಗೆ ನೀರು ಕುಡಿಯಲು ಹೋಗುತ್ತವೆ. ಸಾಯಂಕಾಲ ತಮ್ಮ ಆಹಾರವನ್ನು ತಿಂದು ಅನಂತರ ಸೂರ್ಯ ಮುಳುಗಿದೊಡನೆ ನಿದ್ರಿಸುತ್ತವೆಯೆಂದು ಅನಾನ್ಸಿಗೆ ತಿಳಿದಿತ್ತು.

ಅದು ಒಂದು ಹಗ್ಗವನ್ನು ತೆಗೆದುಕೊಂಡು ಕುಣಿಕೆ ತಯಾರಿಸಿ ಅದರಲ್ಲಿ ಎರಡು ಬಾಳೆಹಣ್ಣುಗಳನ್ನು ಇಟ್ಟು ಅದನ್ನು ಹಾವು ನದಿಗೆ ಹೋಗುವ ದಾರಿಯಲ್ಲಿರಿಸಿ ಕುಣಿಕೆ ಕಾಣಿಸದಂತೆ ಮೇಲೆ ತರಗೆಲೆಗಳನ್ನು ಹರಡಿತು. ಹಾವು ಬಾಳೆಹಣ್ಣಿಗೆ ಬಾಯಿಹಾಕಿದೊಡನೆ ಹಗ್ಗವನ್ನು ಎಳೆದರೆ ಹಾವು ಕುಣಿಕೆಯಲ್ಲಿ ಸಿಕ್ಕ ಬೀಳುತ್ತದೆ. ಈ ರೀತಿಯಾಗಿ ಬೋನು ತಯಾರಿಸಿಟ್ಟು ಅನಾನ್ಸಿ ಅಲ್ಲೇ ಪಕ್ಕದ ಮರದ ಪೊದೆಯಲ್ಲಿ ಹಗ್ಗದ ಇನ್ನೊಂದು ತುದಿಯನ್ನು ಹಿಡಿದುಕೊಂಡು ಅಡಗಿ ಕುಳಿತಿತು.

ಹಾವು ಎಂದಿನಂತೆ ತೆವಳುತ್ತ ಬರುತ್ತಿರುವಾಗ ಅದಕ್ಕೆ ಬಾಳೆಹಣ್ಣು ಕಾಣಿಸಿತು. ಅದು ಹಗ್ಗದ ಬಳಿಗೆ ಬಂದು ಬಾಳೆಹಣ್ಣನ್ನು ತಿಂದಿತು. ಅನಾನ್ಸಿ ಹಗ್ಗವನ್ನು ಎಳೆಯಲು ಪ್ರಯತ್ನಿಸಿತು. ಆದರೆ ಹಾವು ತುಂಬಾ ಬಾರವಿದ್ದುದರಿಂದ ಅದನ್ನು ಎಳೆಯಲು ಅನಾನ್ಸಿಗೆ ಸಾಧ್ಯವಾಗಲಿಲ್ಲ. ಬಾಳೆಹಣ್ಣು ತಿಂದನಂತರ ಹಾವು ನದಿಗೆ ನೀರು ಕುಡಿಯಲು ಹೋಯಿತು.

ಆ ದಿನ ಮಂಗಳವಾರವಾಗಿತ್ತು. ಅನಾನ್ಸಿ ತನ್ನ ಮನೆಗೆ ಹಿಂದಿರುಗಿತು. ಅದರ ಮನಸ್ಸಿನಲ್ಲಿ ''ಹೇಗೆ ಹಾವನ್ನು ಹಿಡಿಯುವುದು, ಹೇಗೆ ಹಾವನ್ನು ಹಿಡಿಯುವುದು'' ಎಂಬುದೇ ಚಿಂತೆಯಾಗಿತ್ತು. ಅಷ್ಟರಲ್ಲಿ ಅದಕ್ಕೆ ಇನ್ನೊಂದು ಆಲೋಚನೆ ಹೊಳೆಯಿತು. ಹಾವು ಸರಿ

ದಾಡುವ ಜಾಗದಲ್ಲಿ ಅನಾನ್ಸಿ ಒಂದು ಆಳವಾದ ತೂತು ಮಾಡಿತು. ಅದರ ಬದಿಗೆ ಸ್ವಲ್ಪ ಎಣ್ಣೆ ಉಜ್ಜಿ ಜಾರುವಂತೆ ಮಾಡಿ ಅದರ ತಳದಲ್ಲಿ ಒಂದು ಅವಕಾಡೊ ಹಣ್ಣನ್ನು ಇರಿಸಿತು. ನಂತರ ಅದು ಪೊದೆಯ ಬಳಿ ಅಡಗಿ ಕುಳಿತಿತು.

ಹಾವು ತೆವಳುತ್ತಾ ತೂತಿನ ಬಳಿಗೆ ಬಂತು. ಅದಕ್ಕೆ ಬಾಳೆಹಣ್ಣು ಇಷ್ಟವಾಗಿರುವಂತೆ ಅವಕಾಡೊ ಹಣ್ಣು ಕೂಡ ತುಂಬಾ ಇಷ್ಟವಾಗಿತ್ತು. ಆದರೆ ತೂತಿನ ಬದಿಯನ್ನು ನೋಡಿದಾಗ ಅದರ ಒಳಭಾಗವೆಲ್ಲ ಜಾರುತ್ತಿರುವಂತೆ ಕಾಮಿಸಿದುದರಿಂದ ಅದು ಒಂದು ಉಪಾಯ ಮಾಡಿತು. ಅದು ತನ್ನ ಬಾಲದಿಂದ ಪಕ್ಕದ ಮರವನ್ನು ಸುತ್ತಿಕೊಂಡಿತು. ಅನಂತರ ತನ್ನ ಶರೀರವನ್ನು ಮೆಲ್ಲಗೆ ತೂತಿನೊಳಗಿಳಿಸಿ ಅವಕಾಡೊ ಹಣ್ಣನ್ನು ತಿಂದು ಅನಂತರ ತನ್ನ ಶರೀರವನ್ನು ಮೇಲಕ್ಕೆಳೆದುಕೊಂಡಿತು. ಅನಂತರ ಅದು ನದಿಯ ಕಡೆಗೆ ಹೋಯಿತು. ಅನಾನ್ಸಿ ಬಾಳೆಹಣ್ಣು ಮತ್ತು ಅವಕಾಡೊ ಹಣ್ಣುಗಳೆರಡನ್ನೂ ಕಳೆದುಕೊಂಡಿತ್ತು.

ಬುಧವಾರ ಅನಾನ್ಸಿ ಇನ್ನೊಂದು ಉಪಾಯ ಕಂಡುಹಿಡಿಯಿತು. ಒಂದು ಕುಣಿಕೆ ತಯಾರುಮಾಡಿ ಎಳೆಯದಾದ ಸುಲಭದಲ್ಲಿ ಬಗ್ಗುವಂತಿರುವ ಬಿದಿರಿನ ಮರದ ತುದಿಗೆ ಕಟ್ಟಿ ಕುಣಿಕೆಯಲ್ಲಿ ಒಂದು ತತ್ತಿಯನ್ನು ಇರಿಸಿತು. ಹಾವಿಗೆ ತತ್ತಿಯೆಂದರೆ ತುಂಬಾ ಇಷ್ಟವೆಂದು ಅನಾನ್ಸಿಗೆ ತಿಳಿದಿತ್ತು. ಆದರೆ ಹಾವು ಬಿದಿರಿನ ಮೇಲೆ ಹತ್ತಿ ಮೆಲ್ಲಗೆ ತನ್ನ ತಲೆಯನ್ನು ಬಗ್ಗಿಸಿ ಕುಣಿಕೆಯನ್ನು ಮುಟ್ಟದೆ ತತ್ತಿಯನ್ನು ತೆಗೆದುಕೊಂಡು ಬಿದಿರಿನ ಗುಂಪಿನ ಮಧ್ಯೆ ಕುಳಿತು ತಿನ್ನ ತೊಡಗಿತು. ಅನಾನ್ಸಿ ತನ್ನ ಬಳಿಯಿದ್ದ ಒಂದೇ ಒಂದು ತತ್ತಿಯನ್ನೂ ಕಳೆದುಕೊಂಡಿತು.

ಶನಿವಾರದ ದಿನ ಬೆಳಗ್ಗೆ ಬೇಗನೆ ಎದ್ದ ಅನಾನ್ಸಿ ಚಾಕುವನ್ನು ತೆಗೆದುಕೊಂಡು ಹಾವಿನ ಬಿಲವಿರುವ ದಾರಿಯಲ್ಲಿ ನದಿಯ ಕಡೆಗೆ ಹೊರಟಿತು. ಹಾವು ಎಂದಿನಂತೆ ಎದ್ದು ತನ್ನ ಬಿಲದಲ್ಲಿ ತಲೆ ಹೊರಹಾಕಿ ಸೂರ್ಯನ ಬಿಸಿಲಿಗಾಗಿ ಕಾದು ಕುಳಿತಿತ್ತು. ಮೂರು ಬಾರಿ ಹಾವಿಗೆ ಕಾಣಿಸದಂತೆ ಮೆಲ್ಲಗೆ ಕುಂಟುತ್ತಾ, ದೂರ ಹೋಗಲು ಪ್ರಯತ್ನಿಸಿತು. ಆದರೆ ಹಾವು ಅದನ್ನು ತಡೆದು ''ಅನಾನ್ಸಿ ನಿಲ್ಲು'' ಎಂದು ಹೇಳಿತು.

''ಗುಡ್ ಮಾರ್ನಿಂಗ್, ಏನು ನೀನು ತುಂಬಾ ಕೋಪದಲ್ಲಿರುವಂತೆ ಕಾಣಿಸುತ್ತದೆ'' ಎಂದು ಅನಾನ್ಸಿ ಕೇಳಿತು.

''ಹೌದು, ನನಗೆ ನಿನ್ನ ಮೇಲೆ ತುಂಬಾ ಕೋಪವಿದೆ. ನಿನ್ನನ್ನು ನಾನೀಗಲೇ ತಿಂದು ಬಿಡುತ್ತೇನೆ. ನನ್ನನ್ನು ಹಿಡಿಯಲು ನೀನು ಮೂರುಬಾರಿ ಪ್ರಯತ್ನಿಸಿದಿಯಲ್ಲವೆ? ನನ್ನನ್ನು ಹಿಡಿಯಲು ನೀನು ಯಾಕೆ ಪ್ರಯತ್ನ ಮಾಡುತ್ತಿರುವೆ ?'' ಎಂದು ಹಾವು ಕೇಳಿತು.

''ನಾನು ಹುಲಿಯ ಜತೆ ಒಂದು ಪಂದ್ಯ ಕಟ್ಟಿದ್ದೇನೆ. ನೀನು ಈ ಜಗತ್ತಿನಲ್ಲಿರುವ ಪ್ರಾಣಿಗಳಲ್ಲಿ ಎಲ್ಲರಿಗಿಂತಲೂ ಉದ್ದವಾಗಿ ರುವೆ. ನದಿಯ ಬಳಿಯಿರುವ ಉದ್ದವಾದ ಬಿದಿರಿಗಿಂತಲೂ ಉದ್ದವಾಗಿರುವೆ ಎಂದು ನಾನು ಹುಲಿಗೆ ಹೇಳಿದ್ದೇನೆ'' ಎಂದು ಅನಾನ್ಸಿ ಹೇಳಿತು.

''ಹೌದು. ಬೇಕಿದ್ದರೆ ಅದು ಸತ್ಯವೆಂದು ನಾನೇ ತೋರಿಸಿಕೊಡುತ್ತೇನೆ. ಬಿದಿರಿನ ಮರವೇ ನನ್ನಿಂದ ಉದ್ದವಿದೆ ಎಂದು ಹುಲಿಗೆ ಹೇಳಲು ಸಾಧ್ಯವಿಲ್ಲದಂತೆ ಮಾಡುತ್ತೇನೆ'' ಎಂದು ಹಾವು ಗಟ್ಟಿಯಾಗಿ ಹೇಳಿತು.

''ನೀನೇ ತುಂಬಾ ಉದ್ದವಾಗಿರುವಿ. ಆದರೆ ನಿನ್ನನ್ನು ಬಿದಿರಿನ ಮರದೊಂದಿಗೆ ಹೋಲಿಸಿ ನೋಡುವಾಗ ಬಿದಿರಿನ ಮರ ನಿನ್ನಿಂದ ಅರ್ಧ ಅಡಿಯಷ್ಟಾದರೂ ಜಾಸ್ತಿ ಉದ್ದವಿರುವಂತೆ

ಕಾಣಿಸುತ್ತದೆ. ಹಾಗೇನಾದರೂ ಆದಲ್ಲಿ ಹುಲಿ ಗೆಲ್ಲಬಹುದು'' ಎಂದು ಅನಾನ್ಸಿ ಹೇಳಿತು.

ಕೋಪಗೊಂಡ ಹಾವು ಬೊಬ್ಬಿಟ್ಟು ಹೇಳಿತು ''ಬಿದಿರಿನ ಮರವನ್ನು ಕಡಿದು ಹಾಕಿ ನನ್ನ ಬಳಿ ಇಡು . ಅನಂತರ ಅಳತೆ ಮಾಡಿ ನೋಡು. ನೀನು ಪಂದ್ಯದಲ್ಲಿ ಖಂಡಿತ ವಾಗಿಯೂ ಗೆಲ್ಲುತ್ತಿ''.

ಅನಾನ್ಸಿ ಅಲ್ಲಿದ್ದ ಬಿದಿರುಗಳಲ್ಲಿ ಅತ್ಯಂತ ಉದ್ದವಾದ ಒಂದ ಬಿದಿರನ್ನು ಕಡಿದು ಕೆಳಗೆ ಬೀಳಿಸಿ ಅದರ ಕಣೆಗಳನ್ನೆಲ್ಲಾ ತೆಗೆಯಿತು. ಅನಂತರ ಆ ಬಿದಿರನ್ನು ಹಾವಿನ ಬದಿಯ ಲ್ಲಿಟ್ಟು ಹೇಳಿತು ''ಹಾವೇ, ನೀನು ತುಂಬಾ ಉದ್ದವಿರುವೆ. ಆದರೆ ತಲೆಯ ಬದಿಯಲ್ಲಿ ನಿನ್ನನ್ನು ನೋಡಿದ ನಂತರ ನಾನು ನಿನ್ನ ಕಾಲ ಬಳಿ ಬಂದಾಗ ನೀನು ಸ್ವಲ್ಪ ಬಾಗಿದರೆ ಅಳತೆ ಮಾಡಲು ಸಾಧ್ಯವಾಗದು. ಆದುದರಿಂದ ಬಿದಿರಿಗೆ ಸರಿಯಾಗಿ ನಿನ್ನನ್ನು ಅಳತೆ ಮಾಡಬೇಕಿದ್ದರೆ ನನಗೆ ಸಹಾಯಕ್ಕೆ ಇನ್ನೊಬ್ಬರು ಯಾರಾದರೂ ಇದ್ದರೆ ಒಳ್ಳೆಯದಲ್ಲವೆ?''

''ನನ್ನ ಬಾಲವನ್ನು ಬಿದಿರಿಗೆ ಕಟ್ಟು. ಹೀಗೆ ಅಲ್ಲಲ್ಲಿ ನನ್ನ ಶರೀರವನ್ನು ಕಟ್ಟುತ್ತಾ ಹೋಗು. ನಾನು ನನ್ನಿಂದ ಸಾಧ್ಯವಾದಷ್ಟು ನನ್ನ ಶರೀರವನ್ನು ಚಾಚುತ್ತಾ ಹೋಗುತ್ತೇನೆ. ಆಗ ಬಿದಿರಿಗಿಂತ ನಾನೇ ಉದ್ದವೆಂದು ತಿಳಿಯ ಬಹುದು'' ಎಂದು ಹಾವು ಹೇಳಿತು.

ಹಾವು ಸಾಧ್ಯವಾದಷ್ಟು ತನ್ನ ಶರೀರವನ್ನು ಚಾಚಿ ಬಿದಿರಿನ ಪಕ್ಕದಲ್ಲಿ ಮಲಗಿತು. ಅನಾನ್ಸಿ ಒಂದು ತುದಿಯಿಂದ ಇನ್ನೊಂದು ತುದಿಯ ತನಕ ಹಾವನ್ನು ಅಲ್ಲಲ್ಲಿ ಬಿದಿರಿಗೆ ಕಟ್ಟುತ್ತಾ ಹೋಯಿತು. ಹಾವು ತನ್ನಿಂದಾದಷ್ಟು ಶರೀರವನ್ನು ಚಾಚಿ ಮಲಗಿದರೂ ಬಿದಿರು ಅದರಿಂದ ಕೆಲವು ಇಂಚುಗಳಷ್ಟು ಉದ್ದವಾಗಿತ್ತು. ಸ್ವಲ್ಪ ಹೊತ್ತು ವಿರಾಮದ ನಂತರ ಹಾವು ಇನ್ನೊಮ್ಮೆ ಶಕ್ತಿ ಹಾಕಿ ತನ್ನ ಶರೀರವನ್ನು ಮುಂದಕ್ಕೆ ಚಾಚಿತು. ಆಗ ಅನಾನ್ಸಿ ಹಾವಿನ ತಲೆಯನ್ನು ಬಿದಿರಿನ ತುದಿಗೆ ಕಟ್ಟಿತು. ಹಾವು ಬಿದಿರಿನಷ್ಟೇ ಉದ್ದವಾಗಿತ್ತು. ನಂತರ ಅನಾನ್ಸಿ ಹಾವನ್ನು ಕಟ್ಟಿರುವ ಬಿದಿರನ್ನು ಹುಲಿಯ ಬಳಿಗೆ ತೆಗೆದುಕೊಂಡು ಹೋಯಿತು. ಎಲ್ಲಾ ಪ್ರಾಣಿಗಳೂ ಸುಮ್ಮಗೆ ನಿಂತು ಇದನ್ನು ನೋಡುತ್ತಿದ್ದುವು. ಪಂದ್ಯದಲ್ಲಿ ಗೆದ್ದ ಅನಾನ್ಸಿಯ ಕಥೆಯೂ ಅಂದಿನಿಂದ ಹುಲಿಯ ಕಥೆಯಂತೆ ಪ್ರಸಿದ್ಧಿ ಪಡೆಯಿತು.

ನಮ್ಮ ಮನಸು ಶುದ್ಧವಾಗಿದ್ದರೆ ಜಗತ್ತು ಶುಚಿಯಾಗಿದೆ ಎನಿಸುತ್ತದೆ. ನಮ್ಮ ಮನಸ್ಸು ಅಶುದ್ಧವಾಗಿದ್ದರೆ ಜಗತ್ತು ಹುಳಿಯಾಗಿದೆ ಎನಿಸುತ್ತದೆ.

-ಜವಹರಲಾಲ್ ನೆಹರು

ಚಂದ್ರನ ಮೇಲೊಂದು ನಗರ!

ಡಾ. ಬಿ.ಎಸ್.ಶೈಲಜಾ
ಜವಹರಲಾಲ್ ನೆಹರು ತಾರಾಲಯ
ಬೆಂಗಳೂರು

ಸಂಶೋಧನಾ ಪ್ರಬಂಧವೊಂದರ ಶೀರ್ಷಿಕೆ ಇದು- ''ಚಂದ್ರನ ಮೇಲೊಂದು ನಗರ' ಅನೇಕ ಪುಟಗಳಷ್ಟು ದೀರ್ಘವಾಗಿದ್ದ ಈ ಲೇಖನದಲ್ಲಿ ಮೂರು ಭಾಗಗಳು- ಮೊದಲನೆಯದರಲ್ಲಿ ಚಂದ್ರನ ಮೇಲ್ಮೈಯ ಸಸ್ಯ ಸಂಪತ್ತಿನ ಬಗ್ಗೆ ವಿವರಣೆಗಳಿದ್ದುವು. ಎರಡನೆಯ ಭಾಗದಲ್ಲಿ ಪ್ರಾಣಿಗಳ ವಿವರಣೆ ಇದ್ದಿತು. ಮೂರನೆಯ ಭಾಗದಲ್ಲಿ ಕೃತಕವಾದ (ಉದಾಹರಣೆಗೆ ಮಾನವ ನಿರ್ಮಿತ ಕಟ್ಟಡಗಳು, ಇತ್ಯಾದಿ) ರಚನೆಗಳ ವಿವರಣೆ ಇತ್ತು. ಅಂದರೆ ಚಂದ್ರನ ಮೇಲೆ ನಾಗರಿಕ ಜಗತ್ತೊಂದು ಜಾಗೃತವಾಗಿದೆ ಎಂದಾಯಿತಲ್ಲವೇ?

ಇದು ಕ್ರಿ.ಶ. ೨೧೦೦ರ ಮಾತಲ್ಲ. ಈ ಲೇಖನ ಪ್ರಕಟವಾಗಿದ್ದು ೧೮೨೪ರಲ್ಲಿ . ಬರೆದಾತ ಫ್ರಾನ್ಸ್ ಫನ್ ಪಾಲಾ ಗ್ರುಥ್‌ಸನ್ (೧೭೭೪-೧೮೫೨). ಈತ ಮ್ಯೂನಿಕ್ ವಿಶ್ವವಿದ್ಯಾಲಯದಲ್ಲಿ ಖಗೋಳ ವಿಜ್ಞಾನದ ಪ್ರಾಧ್ಯಾಪಕನಾಗಿದ್ದ. ಈ ಸಂಶೋಧನಾ ಪ್ರಬಂಧಕ್ಕೆ ಆತ ದೊರಕಿಸಿಕೊಂಡ ಮೂಲ ವೀಕ್ಷಣೆಗಳು ಎಲ್ಲಿಂದ ಬಂದುವು? ಈ ಸಂಗತಿ ಸ್ವಾರಸ್ಯ ಪೂರ್ಣವಾಗಿದೆ.

ಜರ್ಮನಿಯ ದಕ್ಷಿಣಭಾಗಕ್ಕೆ ಬವಾರಿಯಾ ಎಂದು ಹೆಸರು . ಅಲ್ಲಿಯ ಹಾಲ್ಬೆನ್‌ಬರ್ಗ್ ಕ್ಯಾಸೆಲ್‌ನಲ್ಲಿ ೧೭೭೪ರ ಮಾರ್ಚ್ ೧೯ರಂದು ಜನಿಸಿದ ಗ್ರುಥ್‌ಸನ್ ಶಿಕ್ಷಣಕ್ಕಾಗಿ ಆಯ್ದುಕೊಂಡಿದ್ದು-ವೈದ್ಯ ವಿಜ್ಞಾನವನ್ನು! ಆಸ್ಟ್ರಿಯ ಮತ್ತು ಟರ್ಕಿ ನಡುವೆ ನಡೆದ ಯುದ್ಧದಲ್ಲಿ ಗಾಯಾಳುಗಳ ಶುಶ್ರೂಷೆಗಾಗಿ ಆತ ತನ್ನ ಹದಿವಯಸ್ಸಿನಲ್ಲಿಯೇ ತೆರಳಬೇಕಾಯಿತು. ಯುದ್ಧ ಭೂಮಿಯಿಂದ ಹಿಂದಿರುಗಿದ ಈ ಯುವಕನಿಗೆ ಉದ್ಯೋಗಾವಕಾಶಗಳು ಹೇರಳವಾಗಿದ್ದುವು. ಉದ್ಯೋಗದ ಜೊತೆಗೆ ವ್ಯಾಸಂಗವನ್ನೂ ಮುಂದುವರೆಸಿ ೧೮೦೮ರಲ್ಲಿ 'ಡಾಕ್ಟರ್ ಆಫ್ ಜನರಲ್ ಮೆಡಿಸಿನ್' ಎಂಬ ಪದವಿ ಪಡೆದ. ಅಧ್ಯಾಪಕನಾಗಿ ಭೌತವಿಜ್ಞಾನ, ರಸಾಯನ ವಿಜ್ಞಾನ, ಪ್ರಾಣಿವಿಜ್ಞಾನ ಇವೆಲ್ಲವನ್ನೂ ಬೋಧಿಸುತ್ತಿದ್ದ.

ಅಂದಿನ ಜನಜೀವನದಲ್ಲಿ ಖಗೋಳಜ್ಞಾನ ಹಾಸುಹೊಕ್ಕಾಗಿ ಬೆರೆತಿತ್ತು. ಆದ್ದರಿಂದ ತನ್ನ ಚಿಕ್ಕಂದಿನಲ್ಲೇ ಖಗೋಳ ವೀಕ್ಷಣೆಯಲ್ಲಿ ಆತ ಆಸಕ್ತಿಯನ್ನು ಬೆಳೆಸಿಕೊಂಡಿದ್ದ. ಚಂದ್ರನ ಮೇಲ್ಮೈಯ ವಿವರಗಳನ್ನು ಚೆನ್ನಾಗಿ ತಿಳಿದುಕೊಂಡಿದ್ದ. ಖ್ಯಾತ ಖಗೋಳಜ್ಞರಾದ ಜೆ.ಬಿ. ರಿಕೋಲಿ ಮತ್ತು ಜೆ.ಹೆವಿಲಿಯಸ್ ಇವರು ದೂರದರ್ಶಕಗಳನ್ನು ಉಪಯೋಗಿಸಿ ತಯಾರಿಸಿದ ಚಂದ್ರನ ನಕ್ಷೆಗಳು ಆಗಲೇ ಬಳಕೆಯಲ್ಲಿದ್ದುವು. ಈ ನಕ್ಷೆಗಳನ್ನು ಆತ ಮನದಟ್ಟು ಮಾಡಿಕೊಂಡಿದ್ದ.

ಅಂದಿನ ದಿನಗಳಲ್ಲಿ ಗಾಜನ್ನು ಪರಿಷ್ಕರಿಸಿ, ದೊಡ್ಡಗಾತ್ರದ ಮಸೂರಗಳನ್ನು ತಯಾರಿಸುವ ಪ್ರಯತ್ನ ನಡೆಯುತ್ತಿತ್ತು. ಖ್ಯಾತ ವಿಜ್ಞಾನಿ ಜೋಸೆಫ್ ಫ್ರಾನ್‌ಹಾಫರ್ ಜೊತೆ ಸೇರಿದ ಪಿಯರಿ ಲೂಯಿ ಗೈನಾಂಡ್ ಶ್ರೇಷ್ಠದರ್ಜೆಯ ಮಸೂರಗಳನ್ನು ತಯಾರಿಸಿದ್ದ. ಗ್ರುಥ್‌ಸನ್ ವೀಕ್ಷಣೆ ನಡೆಸಲು ಎರಡು ಮಸೂರಗಳನ್ನು ತಂದ. ಚಂದ್ರನ ಮೇಲ್ಮೈಯ ವಿವರಗಳನ್ನು ಜೆ.ಎಚ್.ಶ್ರೋಟರ್ ಎಂಬ ವಿಜ್ಞಾನಿ ಆಗಿಂದಾಗ್ಗೆ ಪ್ರಕಟಿಸಿದ್ದ. ಗ್ರುಥ್‌ಸನ್ ತನ್ನ ವೀಕ್ಷಣೆ ಗಳನ್ನು ಇನ್ನೂ ನಿಖರವಾಗಿ ನಡೆಸಲು ಪ್ರಯತ್ನಿಸಿ ಯಶಸ್ವಿಯಾದ. ಚಂದ್ರನ ಮೇಲಿನ ಕಣಿವೆಗಳು, ಸರೋವರಗಳು, ತೆಳ್ಳನೆಯ ವಾತಾವರಣ ಇವೆಲ್ಲವನ್ನೂ ಆತ ವಿವರವಾಗಿ ಗುರುತಿಸಿದ. ದೂರದರ್ಶಕದಿಂದ ಮಂಗಳ ಗ್ರಹವನ್ನು ವೀಕ್ಷಿಸಿದ. ಅಲ್ಲಿಯ ಮನುಷ್ಯರ ಚಟುವಟಿಕೆ,

ಅವರಿಂದ ನಮಗೆ ಒದಗಬಹುದಾದ ಅಪಾಯ ಈ ಬಗ್ಗೆಯೂ ಚರ್ಚಿಸಿ ಲೇಖನಗಳನ್ನು ಪ್ರಕಟಿಸಿದ.

೧೮೨೨ರ ಜುಲೈ೧೨ರಂದು ಆತ ಒಂದು ವಿಚಿತ್ರವಾದ ನೋಟವನ್ನು ಕಂಡು ಹೀಗೆ ಬರೆದ-''ಕ್ಲಾವಿಯಸ್ (ಚಂದ್ರನ ನಕ್ಷೆಯಲ್ಲಿನ ಒಂದು ಹೆಸರು) ಪಶ್ಚಿಮ ಭಾಗದಲ್ಲಿ ನ್ಯೂಟನ್ (ನಕ್ಷೆಯ ಮೇಲಿನ ಇನ್ನೊಂದು ಹೆಸರು) ಇನ್ನೊಂದು ಭಾಗದಲ್ಲಿ ಹಳ್ಳ, ಬೆಟ್ಟ ಮತ್ತು ಸಮುದ್ರಗಳಿವೆ. ಉತ್ತರಭಾಗದಲ್ಲಿ ಗೋಡೆಯೊಂದಿದೆ. ಅಲ್ಲಿ ವ್ಯವಸ್ಥಿತವಾಗಿ ಕಾಣುವ ರಚನೆಯೊಂದಿದೆ.'' ತನ್ನ ಪುಸ್ತಕದಲ್ಲಿ ಇದನ್ನು ಬರೆದು ಆತ ಪಕ್ಕದಲ್ಲೊಂದು ಟಿಪ್ಪಣಿ ಬರೆದಿದ್ದಾನೆ. -''ಓ ಶ್ರೋಟರ್, ನೀನು ಹುಡುಕುತ್ತಿದ್ದುದು ಇದನ್ನೇ ಅಲ್ಲವೇ ? '' ಅಂದಿನ ದಿನಗಳಲ್ಲಿ ಚಂದ್ರನ ಬಗ್ಗೆ ಆತ್ಮವಿಶ್ವಾಸದಿಂದ, ಘಂಟಾಘೋಷವಾಗಿ ಹೇಳಬಲ್ಲ ವ್ಯಕ್ತಿ ಶ್ರೋಟರ್. ಆದ್ದರಿಂದ ಈ ಟಿಪ್ಪಣಿ ಅವನನ್ನು ಹೆಸರಿಸಿತ್ತು.

''ಬೆಟ್ಟದ ಮೇಲಿನಿಂದ ಕೆಳಗಿನ ಕಣಿವೆಯನ್ನು ನೋಡುತ್ತಿರುವ ಅನುಭವ ನನಗಾಯಿತು. ಅಲ್ಲೊಂದು ನಗರವಿದೆ. ವ್ಯವಸ್ಥಿತ ವಸತಿಯಿದೆ. ವಾತಾವರಣ ತಿಳಿಯಾಗಿದೆ'' ಎಂದಾತ ನಮೂದಿಸಿದ್ದಾನೆ.

ಆತ ನೋಡಿದ್ದು ಕುಳಿಯೊಂದನ್ನು-ಎಂದು ನಮಗೀಗ ತಿಳಿದಿದೆ. ಆದರೆ ನೂರೈವತ್ತು ವರ್ಷಗಳ ಹಿಂದೆ ಇಂತಹ ವಿವರಣೆಗಳು ಜನರನ್ನು ರೋಮಾಂಚಗೊಳಿಸಿದ್ದುವು.

ಎರಡು ವರ್ಷಗಳ ಕಾಲ ಆ ಕುಳಿಯನ್ನು ಅಭ್ಯಸಿಸಿದ ಮೇಲೆ ೧೮೨೪ರಲ್ಲಿ ಗ್ರುಥ್‌ಸನ್ ತನ್ನ ಸುದೀರ್ಘ ಲೇಖನವನ್ನು ಪ್ರಕಟಿಸಿದ. ಅನೇಕರು ಇದೇ ಜಾಡಿನಲ್ಲಿ ವೀಕ್ಷಣೆಗಳನ್ನು ಮುಂದುವರೆಸಿದರು. ಎಲ್ಲ ಗ್ರಹಗಳಲ್ಲಿಯೂ ಜನರಿದ್ದಾರೆ ಎಂಬ ದೃಢನಂಬಿಕೆ ಇದ್ದ ಕಾಲ ಅದು ಎಂಬುದನ್ನು ಇಲ್ಲಿ ನೆನಪಿನಲ್ಲಿಟ್ಟುಕೊಳ್ಳಬೇಕು.

ದೊಡ್ಡ ದೊಡ್ಡ ದೂರದರ್ಶಕಗಳು ಸಜ್ಜಾಗಿಬರತೊಡಗಿದಂತೆ ವೀಕ್ಷಣೆಗಳಲ್ಲಿ ಹೆಚ್ಚಿನ ಸೂಕ್ಷ್ಮತೆ ಒದಗಿ ಬಂದಿತು. ಮುಂದಿನ ಪೀಳಿಗೆ ಗ್ರುಥ್‌ಸನ್‌ನ ವರದಿಯನ್ನು ಸಂಶಯ ದೃಷ್ಟಿಯಿಂದ ನೋಡಿತು. ಟಿ.ಡಬ್ಲ್ಯು.ವೆಬ್ ಎಂಬಾತ ೧೮೬೮ರಲ್ಲಿ ಗ್ರುಥ್‌ಸನ್‌ನ ವರದಿ ಯನ್ನು ''ಅಸಂಬದ್ಧ ಬರವಣಿಗೆ'' ಎಂದು ತಳ್ಳಿಹಾಕಿದ. ವಿಜ್ಞಾನಿ ಕಾರ್ಲ್‌ಫ್ರೀಡ್‌ರಿಕ್‌ಗಾಸ್ ''ಹುಚ್ಚನ ಬಡಬಡಿಕೆ'' ಎಂದು ಕರೆದ. ವಿಲ್‌ಹೆಲ್ಮ್ ಓಲ್ಬರ್ಸ್ ಎಂಬ ವಿಜ್ಞಾನಿ, ''ವಿಚಿತ್ರವಾದ ನಂಬಲಸಾಧ್ಯವಾದ ಊಹೆ'' ಎಂದು ಉದ್ಗರಿಸಿದ.

ಹೀಗೆ ಕಟುಟೀಕೆಗೆ ಗುರಿಯಾದ ಗ್ರುಥ್‌ಸನ್‌ನ ವೀಕ್ಷಣೆಯ ವಿವರಗಳು ಮೂಲೆ ಗುಂಪಾದುವು.

ಈಚೆಗೆ ವಿಜ್ಞಾನದ ಇತಿಹಾಸವನ್ನು ಅಭ್ಯಾಸ ಮಾಡುತ್ತಿರುವ ಕೆಲವು ವಿಜ್ಞಾನಿಗಳು ಗ್ರುಥ್‌ಸನ್‌ನ ಬರವಣಿಗೆಗಳನ್ನು ಪುನಃ ಪರಿಶೀಲಿಸುತ್ತಿದ್ದಾರೆ.

ಛಾಯಾಚಿತ್ರಗ್ರಹಣ ಬಳಕೆಯಿಲ್ಲದಿದ್ದ ಅಂದಿನ ದಿನಗಳಲ್ಲಿ, ಖಗೋಳ ವೀಕ್ಷಕನಿಗೆ ಯಥಾವತ್ತಾಗಿ ಚಿತ್ರಬಿಡಿಸುವ ಕಲೆಯೂ ಅವಶ್ಯಕವಾಗಿತ್ತು. ಈ ದೃಷ್ಟಿಯಿಂದ ಆತನ ಚಿತ್ರಗಳು ಕರಾರುವಾಕ್ಕಾಗಿವೆ. ಇಂದಿನ ಛಾಯಾಚಿತ್ರಗಳನ್ನು ಪಕ್ಕದಲ್ಲಿಟ್ಟು ಹೋಲಿಸಬಹುದಾಗಿದೆ. ಅಂದಿನ ಇತರ ವೀಕ್ಷಕರ ದೃಷ್ಟಿಗೆ ನಿಲುಕದೇ ಇದ್ದ ಎಷ್ಟೋ ವಿವರಗಳನ್ನು ಆತ ದಾಖಲಿಸಿರುವುದನ್ನು ಕಂಡು, ಇತಿಹಾಸಕಾರರು ಬೆರಗಾಗಿದ್ದಾರೆ. ಆತನ ದೃಷ್ಟಿ ಶಕ್ತಿಯಲ್ಲೇನಾದರೂ ವಿಶೇಷವಿದ್ದಿರಬಹುದು ಎಂಬ ನಿರ್ಣಯಕ್ಕೆ ಬಂದಿದ್ದಾರೆ. ಈ ಅಪೂರ್ವ ದೃಷ್ಟಿಶಕ್ತಿಯ ಕಾರಣ ಆತ ಅನೇಕ ವಿವರಗಳನ್ನು ದಾಖಲಿಸಿದ್ದಿರಬಹುದು; ಉಳಿದವರಿಗೆ ಇದು ಕಾಣದ್ದರಿಂದ ಪರಿಹಾಸ್ಯ ಮಾಡಿರ

ಬಹುದು ಎಂಬ ಅಭಿಪ್ರಾಯ ಮೂಡುತ್ತಿದೆ.

ಮಂಗಳ ಹಾಗೂ ಶುಕ್ರಗ್ರಹಗಳನ್ನು ವೀಕ್ಷಿಸಿದ ಗ್ರುಥ್‌ಸನ್ ಅವುಗಳ ಚಿತ್ರಗಳನ್ನೂ ರಚಿಸಿದ್ದಾನೆ. ಶುಕ್ರಗ್ರಹದ ಗಾಳಿಯ ರಚನೆ, ಮಂಗಳಗ್ರಹದ ಧ್ರುವ ಪ್ರದೇಶಗಳಲ್ಲಿ ಟೋಪಿಯಂತಿರುವ ಹಿಮಕವಚವನ್ನು ಆತ ಗುರುತಿಸಬಲ್ಲವನಾಗಿದ್ದ. ಆತನ ವೀಕ್ಷಣೆಯ ವಿವರಗಳು, ವಿಶ್ಲೇಷಣೆಗಳನ್ನು ಪಯೊನಿಯರ್ ನೌಕೆ ಕಳುಹಿಸಿದ್ದ ಚಿತ್ರಗಳಿಂದ ಮಾತ್ರಪಡೆಯುವುದು ಸಾಧ್ಯ. ಅಂದಮೇಲೆ ಆತನ ದೃಷ್ಟಿಶಕ್ತಿ ವಿಶೇಷವಾದದ್ದು ಎಂಬುದನ್ನು ಅಲ್ಲಗಳೆಯುವಂತೆಯೇ ಇಲ್ಲ.

ಹಾಗಾದರೆ ಆತನನ್ನು ಪರಿಹಾಸ್ಯ ಮಾಡಿ'ಹುಚ್ಚ' ಎಂದು ಕರೆದದ್ದು ಸರಿಯೇ ಎಂಬ ಪ್ರಶ್ನೆ ಏಳುತ್ತದೆ. ಸಮಕಾಲೀನರ ಈ ಅವಹೇಳನವನ್ನು ಎದುರಿಸಲಾರದೇ ಆತ ೧೮೩೦ರಲ್ಲಿ 'ಚಂದ್ರನಗರ'ದ ಸಿದ್ಧಾಂತವನ್ನು ಹಿಂದಕ್ಕೆ ತೆಗೆದುಕೊಂಡ. ಆ ವರ್ಷ ಚಂದ್ರನ ಕುರಿತು ಹೊಸದೊಂದು ಪ್ರಬಂಧ ಪ್ರಕಟವಾಗಿತ್ತು. ಮಾರ್ಷನ್ ಫನ್ ಬೀಟರ್‌ಸ್ಟೈನ್ ಮತ್ತು ಕಾರ್ಲ್ ಅರ್ಹರ್ನ್‌ಬರ್ಗ್ ಫನ್ ಮಾಲ್ ಎಂಬ ಇಬ್ಬರು ವಿಜ್ಞಾನಿಗಳು ಚಂದ್ರನ ಮೇಲಿರುವುದೆಲ್ಲಾ ಕುಳಿಗಳು ಎಂದು ಮಂಡಿಸಿದರು. ಸುತ್ತಲಿನ ಆಕಾಶದಿಂದ ಬಂದು ಬೀಳುವ ವಸ್ತುಗಳು (ಆಗ ಉಲ್ಕೆಯ ಮೂಲ ತಿಳಿದಿರಲಿಲ್ಲ). ಹೀಗೆ ವೃತ್ತಾಕಾರದ ಕುಳಿಗಳನ್ನು ಉಂಟುಮಾಡಬಲ್ಲವು ಎಂದು ಅವರು ತೋರಿಸಿಕೊಟ್ಟರು. ಗ್ರುಥ್‌ಸನ್ ಈ ಸಿದ್ಧಾಂತವನ್ನು ಅನುಮೋದಿಸಿ ತನ್ನ ''ಚಂದ್ರ ನಗರ'' ಸಿದ್ಧಾಂತವನ್ನು ಹಿಂದಕ್ಕೆ ತೆಗೆದುಕೊಂಡ.

ಕೆಲವೊಂದು ಕುಳಿಗಳ ಆಕಾರ ಮತ್ತು ಗಾತ್ರ ಬದಲಿಸುತ್ತಿವೆ ಎಂದು ಈಚೆಗೆ ನಡೆಸಿದ ವೀಕ್ಷಣೆಗಳಿಂದ ತಿಳಿದುಬಂದಿದೆ. ಉದಾಹರಣೆಗೆ ಪ್ಲೇಟೊ ಎಂಬ ಹೆಸರಿನ ಕುಳಿ ಅಂದು ಲೆಕ್ಕಹಾಕಿದಂತೆ ೧೦ಕಿ.ಮೀ. ವ್ಯಾಸದ್ದಾಗಿತ್ತು. ಗ್ರುಥ್‌ಸನ್ ಮಾತ್ರವಲ್ಲ ಶ್ರೋಟರ್ ಕೂಡ ಈ ಕುಳಿಯನ್ನು ಅಳತೆ ಮಾಡಿದ್ದ. ಅಷ್ಟೇ ಅಲ್ಲ ಈ ಹಳ್ಳದಲ್ಲಿ ಮಂಜು ಮುಸುಕಿದಂತಿದೆ ಎಂಬ ಅಂಶವನ್ನೂ ಗಮನಿಸಿದ್ದ. ಮುಂದಿನ ಅನೇಕ ವೀಕ್ಷಕರೂ ಈ ವಿಷಯವನ್ನು ಗಮನಿಸಿದ್ದರು. ಈಗ ಈ ಕುಳಿಯ ವ್ಯಾಸ ೦.೨೮ ಕಿ.ಮೀ. ಆಗಿದೆ. ಹೀಗೆ ಇದೇಕೆ ಕುಗ್ಗಿತು ? ಚಂದ್ರನ ಮೇಲೆ ಏನು ನಡೆಯುತ್ತಿದೆ ಎಂಬ ಪ್ರಶ್ನೆ ಎದ್ದಿದೆ.

ನೂರೈವತ್ತು ವರ್ಷಗಳಿಗೂ ಹಿಂದೆ, ೧೭೭ ಸಂಶೋಧನಾ ಲೇಖನಗಳನ್ನು ಪ್ರಕಟಿಸಿ, ಮೂರು ಖಗೋಳವಿಜ್ಞಾನ ಗ್ರಂಥಗಳ ಸಂಪಾದಕನಾಗಿದ್ದ ಗ್ರುಥ್‌ಸನ್‌ನ ಕೃತಿಗಳನ್ನು ಈಗ ಹೊರತೆಗೆದು ಪುನಃ ಪರಿಶೀಲಿಸಿರುವುದರಿಂದ ಒಂದುಅಂಶವಂತೂ ರುಜುವಾತಾಗಿದೆ- ಆತನ ವೀಕ್ಷಣೆಗಳ ದಾಖಲೆಯಲ್ಲಿರುವ ಅಚ್ಚುಕಟ್ಟುತನ, ಎದ್ದುಕಾಣುವ ಶಿಸ್ತು ಮತ್ತು ಆತನ ವಿಶೇಷ ದೃಷ್ಟಿ ಶಕ್ತಿ-ಇವು ಪ್ರಶಂಸನಾರ್ಹವಾದವು. ಆತನ ವಿಶ್ಲೇಷಣೆಯಲ್ಲಿ ತಪ್ಪಿರಬಹುದು. ಅದಕ್ಕೆ ಕಾರಣ ಅಂದಿನ ಪರಿಸರ ಮತ್ತು ಸಾಮಾನ್ಯಜ್ಞಾನದ ಮಟ್ಟ. ಇದನ್ನು ಗಮನದಲ್ಲಿರಿಸಿಕೊಂಡು ಆತನ ವೀಕ್ಷಣೆಗಳಿಗೆ ವಿಶೇಷ ಮನ್ನಣೆ ನೀಡಬೇಕು ಎಂಬುದು ಚರಿತ್ರಕಾರರ ಅಭಿಪ್ರಾಯ.

ಕೀಟ ಬಾಧೆಗೆ ಬಹುವಿಧ ತೋಟವೊಂದೇ ಪರಿಹಾರ

ಎ.ಪಿ. ಚಂದ್ರಶೇಖರ
ಇಂದ್ರಪ್ರಸ್ಥ ಜೀವಧಾರಕ ಸಸ್ಯವಾಟಿ
ಕಳಲವಾಡಿ, ಉದ್ಬೂರು ಅಂಚೆ
ಮೈಸೂರು -೫೭೦ ೦೦೮

ಎರಡು ವರ್ಷಗಳ ಹಿಂದೆ (೧೯೯೮) ತೊಗರಿಗೆ ಕಾಯಿಕೊರಕ ಹುಳು ಭೀಕರವಾಗಿ ಕಾಡಿದ್ದು, ಸಾವಿರಾರು ರೈತರು ಸಾಲದ ಹೊರೆ ತಾಳಲಾರದೆ, ಸಾಲು ಆತ್ಮಹತ್ಯೆ ಮಾಡಿದ್ದು, ನಿಮಗೆಲ್ಲಾ ನೆನಪಿರಬಹುದು. ಈ ವರ್ಷ (೨೦೦೦) ತೆಂಗಿಗೆ ನುಸಿರೋಗ ಎಂದು ಪತ್ರಿಕೆಗಳೆಲ್ಲಾ ಸುದ್ದಿ ಮಾಡಿದ್ದು, ನೂರಾರು ಕೋಟಿ ಹಣವನ್ನು ನೀರಿನಂತೆ ಪೋಲು ಮಾಡಿದ್ದು ಕೂಡ ನಿಮಗೆ ತಿಳಿದಿರಬಹುದು. ಇದೀಗ ಹುಣಸೂರಿನ ಸಮೀಪ ಧರ್ಮಾಪುರದಲ್ಲಿ ಹತ್ತಿಗೆ ಭೀಕರವಾಗಿ ಕಾಯಿಕೊರಕ ಹುಳು ಬಾಧಿಸಿದೆಯಂತೆ.

ಹುಣಸೂರಿನ ಔಷಧದ ಅಂಗಡಿಗಳಲ್ಲಿ ಸಿಕ್ಕುವ ಎಲ್ಲಾ ಜಾತಿಯ ಕೀಟನಾಶಕಗಳನ್ನೂ ಸಿಂಪಡಿಸಿ ಆಗಿದೆಯಂತೆ. ಹುಣಸೂರಿನಲ್ಲಿರುವ ಎಲ್ಲಾ ಕೃಷಿ ತಜ್ಞರೂ ಸೋತಿರುವರಂತೆ. ಮೈಸೂರು, ಮಂಡ್ಯ, ಬೆಂಗಳೂರುಗಳಿಂದ ಉನ್ನತ ಹಂತದ ಕುರ್ಚಿಗಳನ್ನು ಹೊಂದಿರುವವರೆಲ್ಲಾ ಹುಣಸೂರಿಗೆ ಬರಲಿದ್ದಾರಂತೆ.

ಹಾಗೆಯೇ ಕಳೆದ ವರ್ಷ ಅಮೃತಾಪುರದಲ್ಲಿ(ತರಿಕೆರೆ) ದಾಳಿ ಮಾಡಿದೆ ಎಂದು ಹೇಳಲಾದ ದೈತ್ಯ ಬಸವನ ಹುಳು ಇದೀಗ ಮೈಸೂರಿನಲ್ಲಿ ಕಾಣಿಸಿಕೊಂಡಿದೆಯಂತೆ. ಆಫ್ರಿಕಾ ಇದರ ಮೂಲವಂತೆ. ಆಫ್ರಿಕಾದ ಈ ದೈತ್ಯನನ್ನು ಕಂಡು ತಜ್ಞರೆಲ್ಲಾ ನಡುಗಲು ಹೊರಟಿದ್ದಾರಂತೆ!

ಅಂದಹಾಗೆ ಆಫ್ರಿಕಾದ ಬಸವನ ಹುಳಗೆ, ಅಮೆರಿಕಾದ ಪಾರ್ಥೇನಿಯಮ್‌ಗೆ, ಆಸ್ಟ್ರೇಲಿಯಾದ ಯುಪಟೋರಿಯಂಗೆ, ಯುರೋಪಿನ ಪ್ಲೇಗಿಗೆ ಯಾವ್ಯಾವುದೋ ದೇಶದ ಸಸ್ಯಗಳಿಗೆ, ಕೀಟಗಳಿಗೆಲ್ಲ ನಮ್ಮಲ್ಲಿ ಏನು ಕೆಲಸ?

ಲಾಭ ಇರುವಲ್ಲಿ ವ್ಯವಹಾರ:

ಯಾವುದೇ ಜೀವಿ ಲಾಭವನ್ನು ಹುಡುಕಿಕೊಂಡು ಹೋಗುವುದು ಸ್ವಾಭಾವಿಕ. ಲಾಭ ಇರುವಲ್ಲಿಗೆ ಎಲ್ಲೆಲ್ಲಿಂದಲೋ ವಿವಿಧ ವೇಷಗಳು ಬರತೊಡಗುತ್ತವೆ. ನಾವು ಪರದೇಶಿಗಳಿಗೆ ಸುಲಭದ ಲಾಭ ಕೊಡಲು ತಯಾರಾದಾಗ, ಅವೆಲ್ಲ ಬರುವುದರಲ್ಲಿ ತಪ್ಪೇನು? ಆಶ್ಚರ್ಯವೇನು?

ಸುಲಭದಲ್ಲಿ ಲಾಭ ಬರಬೇಕಾದರೆ, ಅಲ್ಲಿ ಅನುಕೂಲಕರ ವಾತಾವರಣ ಇರಬೇಕು. ಯಾವುದೇ ತಡೆ ಬೇಲಿ ಇರಬಾರದು. ಯಾರೂ ಅವುಗಳ ನಡೆಯನ್ನು ವಿರೋಧಿಸಲಾಗದು. ಇಂಥಾ ಅವಿರೋಧ ಸ್ಥಿತಿ, ವಿನಾಶಕಾರಿ ಕೀಟಗಳ, ಸಸ್ಯಗಳ ಕುರಿತಾಗಿ ನಮ್ಮ ದೇಶದಲ್ಲಿ ನಿರ್ಮಾಣವಾಗಿದೆ. (ಬಹುರಾಷ್ಟ್ರೀಯ ಕಂಪೆನಿಗಳ ಕುರಿತಾಗಿ ಕೂಡ)

ತೊಗರಿ, ಹತ್ತಿ, ಬತ್ತ, ಅಡಿಕೆ, ತೆಂಗು, ಕಬ್ಬು, ದ್ರಾಕ್ಷಿ, ಬೀನ್ಸು, ಬದನೆ, ಹೀಗೆ ಯಾವುದೇ ಬೆಳೆ ತೆಗೆದುಕೊಳ್ಳಿ, ಅಲ್ಲಿ ಬರುವ ಸ್ವಾಭಾವಿಕ ರೋಗಗಳನ್ನು ಸ್ವಾಭಾವಿಕವಾಗಿಯೇ ನಿಯಂತ್ರಿಸುವ ಪ್ರಕೃತಿ ವ್ಯವಸ್ಥೆಯನ್ನು ನಾಶಮಾಡಿ ಹೇಲು ಬರುವಾಗ ಹಿತ್ತಲು ಹುಡುಕುವ ಪ್ರವೃತ್ತಿ ಅಷ್ಟಕ್ಕೆ ಮಾತ್ರ, ಆದೀತು. ಜೀವನೋತ್ಕರ್ಷಕ್ಕೆ, ಉತ್ಸಾಹಕ್ಕೆ ಸಾಕಾಗಲಾರದು.

ಹತ್ತಿಗೆ ಕಾಯಿ ಕೊರಕದ ದಾಳಿಯಂತೆ. ಬತ್ತಕ್ಕೆ ಸೈನಿಕ ಹುಳುಗಳ ಆಕ್ರಮಣವಂತೆ. ಭೀಮ ಬಸವನಹುಳು ಅಡಿಕೆಯನ್ನೂ ಅರೆಯುವುದಂತೆ.

ಹೊಸ ಹೊಸ ರೋಗ, ಕೀಟಗಳು ಬಂದಾಗಲೆಲ್ಲಾ ತಜ್ಞರು ಎಲ್ಲೆಲ್ಲಿಂದಲೋ ಓಡೋಡಿ ಬರುವುದು, ಏನೆಲ್ಲ ಕೀಟನಾಶಕಗಳನ್ನು ಸಿಂಪಡಿಸುವುದು. ರೈತರನ್ನು ಮತ್ತೆ ಮತ್ತೆ ಬಿಕನಾಸಿಯನ್ನಾಗಿಸುವುದನ್ನು ನೋಡುವಾಗ ನನಗೆ ಹದಿನೇಳು ವರ್ಷಗಳ ಹಿಂದಿನ ಕಥೆ ನೆನಪಾಗುತ್ತದೆ. ನಾನು ಕೃಷಿ ಪ್ರಾರಂಭಿಸಿದ ಮೊದಲ ದಿನಗಳು ಮರುಕಳಿಸುತ್ತವೆ.

ನಾನು ಹೊಸ ಆಸ್ತಿ ಮಾಡಿ ಆರು ತಿಂಗಳು ಕಳೆದಿರಬಹುದು. ಉತ್ಸಾಹದಿಂದ ಕೊಟ್ಟ ಹೊಸ ನೀರು, ಗೊಬ್ಬರಗಳ ಫಲಿತಾಂಶವಾಗಿ ತೆಂಗಿನ ಮರಗಳು ಚೆನ್ನಾಗಿ ಫಲಕಟ್ಟಿದ್ದುವು. ಇನ್ನೇನು ಕಾಯಿಕೊಯ್ಯಬೇಕು, ಹಿಂದಿನ ರಾತ್ರಿ ನೂರಾರು ಕಾಯಿಗಳು ಕಳವಾದುವು.

ಹತ್ತಿ ಫಸಲಿಗೆ ಬಂದಿದೆ. ಕಾಯಿಕೊರಕ ದಾಳಿ ಇಟ್ಟಿದೆ. ರೈತರು ಗೋಳಿಟ್ಟಿದ್ದಾರೆ. ತಜ್ಞರು ಬಂದಿದ್ದಾರೆ. ಏನು ಮಾಡುವುದು ? ಏನು ಪರಿಹಾರ ಕೊಡುವುದು? ಯೋಚಿಸಿಯೋ ಯೋಚಿಸದೆಯೋ ಏನಾದರೊಂದು ಮಾಡುತ್ತಾರಲ್ಲಾ ಅದೇ ಸ್ಥಿತಿ ಅಂದು ನನ್ನದಾಗಿತ್ತು.

ಯಾರೋ ಹೇಳಿದರು ಕಳ್ಳರಿಗೆ ನಾಯಿ ಪರಿಹಾರ : ನಿನ್ನೆ ಕಳ್ಳತನವಾಗಿದೆ. ನಾಳೆ ಆಗಬಾರದು. ಇವತ್ತೇ ನಾನು ತಯಾರಾಗಬೇಕು. ಕಳ್ಳನ ವಾಸನೆಯ ಬೆನ್ನುಹತ್ತುವ ನಾಯಿ ನನಗೆ ಈಗಿಂದೀಗಲೇ ಬೇಕು. ಅದೇ ಅವಸರ. ನನ್ನ ಅಂದಿನ ಅವಸರಕ್ಕೂ ಈಗ ವಿವಿಧ ರೋಗಗಳ ಬಗ್ಗೆ ತಜ್ಞರಿಗೂ ರೈತರಿಗೂ ಇರುವ ಅವಸರಕ್ಕೂ ಏನೂ ವ್ಯತ್ಯಾಸ ಇಲ್ಲ.

ನಾಳೆ ಬರುವ ಕಳ್ಳನನ್ನು ಓಡಿಸಲು ಇವತ್ತು ನನಗೆ ನಾಯಿಕೊಡುವವರು ಯಾರು ? ಭೇ ಭೇ ದುಡ್ಡು ಕೊಟ್ಟರೆ ಏನು ಬೇಕಾದರೂ ಸಿಗುತ್ತದೆ. ನಾಯಿಗೇನು ಕೊರತೆ ? ದುಡ್ಡು ಕೊಟ್ಟು ಭಾರೀ ಭಾರೀ ಕೀಟನಾಶಕಗಳನ್ನು ಕೊಳ್ಳುವ ತಜ್ಞರ ರೈತರ ಪ್ರವೃತ್ತಿ ಅಂದು ನನ್ನಲ್ಲಿ ಕೆಲಸ ಮಾಡಿತು. ದುಡ್ಡಿನಿಂದ ಎಲ್ಲವನ್ನೂ ಸಾಧಿಸಲಾಗದು ಎಂದು ನನಗೆ ತಿಳಿಯದಾಗಿತ್ತು. ಆದರೆ ಸ್ವಲ್ಪ ವಿವೇಕ ಜೊತೆಯಲ್ಲಿ ಉಳಿದಿತ್ತು. ನನಗೆ ಎಷ್ಟೇ ಅವಸರವಿದ್ದರೂ , ಹಣವಿದ್ದರೂ , ಉಗ್ರವಾದ ನಾಯಿಯನ್ನು ಕೊಡುವವರಿದ್ದರೂ, ಎಲ್ಲೋ ಬೆಳೆದ ನಾಯಿ, ದೊಡ್ಡ ನಾಯಿ, ಇನ್ನೊಂದು ಯಜಮಾನನನ್ನು ಅಷ್ಟು ಸುಲಭವಾಗಿ ಸ್ವೀಕರಿಸುವುದಿಲ್ಲ ಎಂಬ ಮಾಹಿತಿ ನನಗೆ ದೊರಕಿತು. ಹಾಗಾಗಿ ಸಾವಿರಾರು ರೂಪಾಯಿ ಉಳಿಯಿತು. ಆದರೂ ನಾಯಿಬೇಕೆಂಬ ವಿಚಾರ ಮಾತ್ರ ಕದಲಿರಲಿಲ್ಲ.

ಕಳ್ಳರನ್ನು ಇಲ್ಲ ಗೋಳಿಸಬೇಕು. (ಹತ್ತಿಯ ಹುಳುಗಳನ್ನು ಸದೆ ಬಡಿಯಬೇಕು) ನನ್ನಲ್ಲಿಲ್ಲದ , ನಾಯಿಯ ರೀತಿ ನನ್ನ ಹಲ್ಲುಗಳು ಕಡಿಯುತ್ತಿದ್ದುವು. ತೀರ ಅವಸರವಾಗಿ ಒಬ್ಬ ನಾಯಿ ವ್ಯಾಪಾರಿಯ ಜಾಲದೊಳಕ್ಕೆ ಹೊಕ್ಕೆ.

ಅಂದಿನ ದಿನಗಳಲ್ಲಿ, ನನ್ನ ಆರ್ಥಿಕ ಮಿತಿಯಲ್ಲಿ ದೊಡ್ಡ ಮೊತ್ತವನ್ನೇ ಕೊಟ್ಟು ಎರಡು ಆಲ್ಸೇಷನ್ ನಾಯಿ ಮರಿಗಳನು ಕೊಂಡು ಕೊಂಡೆ. ಇಲ್ಲಿ ಹಣದ ಪ್ರಶ್ನೆಯಿಲ್ಲ. ವೈರಿಯನ್ನು ದಮನ ಮಾಡುವುದು ಮುಖ್ಯ. (ಕೀಟಗಳನ್ನು ಮುಗಿಸಿ ಬಿಡುವುದು ಮುಖ್ಯ) ಕಳ್ಳನ ಮೇಲಿನ ದ್ವೇಷ ಹೆಚ್ಚುತ್ತಿದ್ದಂತೆ, ನಾಯಿಮೇಲಿನ ಪ್ರೀತಿ ಹೆಚ್ಚುತ್ತಿತ್ತು. ನಾಯಿಗೆ ಅದುಕೊಡಿ, ಇದುಕೊಡಿ, ಹಾಗೆ ಮಾಡಿ, ಹೀಗೆ ಮಾಡಿ ಎಂದು ಹೇಳುವವರೆಲ್ಲಾ ನನಗೆ ತಜ್ಞರಾಗಿ ಕಾಣುತ್ತಿದ್ದರು. ಒಂದೊಂದು ತಜ್ಞನುಡಿಯೂ ನನ್ನಲ್ಲಿ ಕಳ್ಳನನ್ನಡಗಿಸುವ ಭರವಸೆಯಾಗಿ ರೂಪುಗೊಳ್ಳುತ್ತಿದ್ದುವು. (ಹತ್ತಿಯ ಕಾಯಿಕೊರಕಕ್ಕೆ ಬಸವನ ಹುಳುವಿನ ಉಪಟಳಕ್ಕೆ ತಜ್ಞರು ಸೂಚಿಸುವ ಪರಿಹಾರಗಳೆಲ್ಲವೂ ಸಮಾಜದ ಮೇಲೆ ಇದೇ ರೀತಿಯ

ಕೆಲಸ ಮಾಡುತ್ತಿರುವುವು.) ನಾಯಿಗಳ ಆರೈಕೆ ಜೋರಾಗಿ ನಡೆಯಿತು. (ಕೀಟನಾಶಕ ಗಳ ಅನಂತರ ಕೀಟನಾಶಕ ಸಿಂಪಡಣೆ ಯಾಯಿತು.) ನಾಯಿ ಮರಿಗಳಿಗೆ ಐದಾರು ತಿಂಗಳಾಯಿತು. ಈ ಮಧ್ಯೆ ಸಾಕಷ್ಟು ಬಾರಿ ಕಳ್ಳತನವೂ ಆಗಿತ್ತು.

ಆಗ ಬಣ್ಣ ಬಯಲಾಯಿತು. ಅವು ಆಲ್ಸೇಷನ್ ನಾಯಿಗಳಾಗಿರಲಿಲ್ಲ. ಶುದ್ಧ ಬೀದಿನಾಯಿಗಳಾಗಿದ್ದುವು. ಅನ್ನದಂಡ, ಭೂಮಿ ಭಾರವಾಗಿ ಬೆಳೆದುವು. (ಈಗ ಕೀಟನಾಶಕಗಳು ಆಗುತ್ತಿರುವಂತೆ) ಕಳ್ಳನನ್ನು ಹೆದರಿಸುವ ನನ್ನ ಭಾರೀ ಯೋಜನೆ ಭಾರೀ ನಷ್ಟವನ್ನುಂಟು ಮಾಡಿತ್ತು. (ಕೀಟನಾಶದ ಯೋಜನೆಗಳು ಕೂಡ)

ಆತಂಕ ಮತ್ತು ಅವಸರ ಇರುವಲ್ಲಿ ನಾವು ಮೋಸ ಹೋಗುವುದು ಸ್ವಾಭಾವಿಕ. ನಮ್ಮನ್ನು ಮೋಸ ಮಾಡಲು ಇಂಥಾ ಸಂದರ್ಭವನ್ನು ಕಾಯುತ್ತಾ ಜನ ತಯಾರಾಗಿರುತ್ತಾರೆ. ಹೊಸ ಹೊಸ ರೋಗಗಳು ಬಂದಷ್ಟೂ ಕೀಟನಾಶಕ ತಯಾರಕರು ಬಹಳ ಸಂತೋಷಪಡುತ್ತಾರೆ. ನಗು ಮೊಗದಿಂದಲೇ ಅವರು ಕೀಟನಾಶಕ ಗಳನ್ನು ಮಾರುತ್ತಾರೆ. ಕಳ್ಳರಿಗೆ ನಾಯಿ ಮದ್ದು ಎಂದು ಹೇಳುವ ತಜ್ಞರು ರೈತರಿಗೆ ಹಲವಾರು ಉಚಿತ ಸಲಹೆಗಳನ್ನು ಕೊಡುತ್ತಿರುತ್ತಾರೆ. ಕೀಟನಾಶಕ ವ್ಯಾಪಾರಿಗಳಿಗೆ ಸಹಕರಿಸುತ್ತಾರೆ.

ನಾಯಿಯಿಂದ ಕಳ್ಳತನವನ್ನು ತಡೆಯಲು ಎಂದೂ ಸಾಧ್ಯವಿಲ್ಲ ಎಂದು ಹತ್ತಾರು ದೃಷ್ಟಾಂತಗಳಿಂದ ನನಗೆ ದೃಢ ಪಟ್ಟಿತು. (ಹಾಗೆಯೇ ಕೀಟನಾಶಕಗಳಿಂದ ಕೂಡ) ದೂರದೃಷ್ಟಿಯ, ಪ್ರಾಕೃತಿಕ ಪುಷ್ಟಿಯ, ಸಮಷ್ಟಿ ಹಿತ ಸಾಧನೆಯ ಯೋಜನೆಗಳಿಂದ ಮಾತ್ರ ಅವಸರ, ಆತಂಕದ ಕ್ಷಣಗಳು ಬಾರದಂತೆ ನೋಡಿಕೊಳ್ಳಬಹುದೆಂದು ಗೊತ್ತಾಯಿತು.

ನನ್ನ ತೋಟಕ್ಕೆ ಬಹು ಹಂತದ ಬೇಲಿ ಗಳನ್ನು ನಿರ್ಮಿಸಿದೆ. ಮುಳ್ಳುತಂತಿ, ಮುಳ್ಳು ಬೇಲಿ - ಸೀಗೆ ಕಗ್ಗಲಿ, ಕರಂಡೆ, ಬೋಗನ್ ವಿಲ್ಲಾ ಲಿಂಬೆಗಳು ಇಲ್ಲಿ ಸ್ಥಾನ ಪಡೆದುವು. ದಾಸವಾಳ, ರಾತ್ರಿರಾಣಿ, ಅನುಸೋಗೆ, ಲಕ್ಕಿ, ಲಂಟಾನ, ಬೇವು, ಶ್ರೀಗಂಧ, ಮಿಟ್ಲೆ, ಊಲಿ, ಸುಬಾಬುಲ್, ಕಾಲಿಯಾಂಡ್ರ ಹೀಗೆ ನೂರಾರು ಜಾತಿಯ ಗಿಡಗಳು, ಸಾಮಾನ್ಯರು ನಾಲಾಯಕ ವೆಂದು ತಿರಸ್ಕರಿಸುವ ಗಿಡಗಳು ಇಲ್ಲಿ ಮುಖ್ಯ ವಾದುವು. ತೋಟ ಪೂರ್ತಿ ಗಿಡಗಳ ಮೇಲೆ ಗಿಡಗಳು - ಗೆಡ್ಡೆಗಳು, ಬಳ್ಳಿಗಳು, ಕಳ್ಳಿಗಳು, ಮುಳ್ಳುಗಳು, ವೈವಿಧ್ಯಮಯ ಬೆಳೆಗಳು ಬೆಳೆದು ಬಂದುವು. ನನ್ನ ಜೀವನವನ್ನು ಬೆಳಗಲು ಬಂದವು. ಒಂದೊಂದು ಕಳೆಗಳೂ ಇಲ್ಲಿ ಬೆಳೆಗಳೆನಿಸಿದುವು.

ಕಳ್ಳರಿಗೂ ಕೀಟಗಳಿಗೂ ಒಂದೇ ಪರಿಹಾರ: ಅಷ್ಟೇ ಅಲ್ಲ. ನಮ್ಮ ಜೀವನದ ಎಲ್ಲ ಸಮಸ್ಯೆಗಳಿಗೂ ಇರುವುದು ಒಂದೇ ಪರಿಹಾರ-''ಸತ್ಯದರ್ಶನ, ಪ್ರಕೃತಿಯ ಬೃಹತ್ತಿಗೆ ನಮನ'' ಕಳ್ಳರ ತಡೆಗೆ ನಿರ್ಮಿಸಿದ ಬೇಲಿ ನನಗೆ ಕೃಷಿ ನೀತಿಯನ್ನು ಸಾರಿತು. ಕೃಷಿ ಪಾಠವನ್ನು ಹೇಳಿತು. ಬೇಲಿ ಕಳ್ಳರನ್ನು ತಡೆಯಿತು. ತೋಟದಲ್ಲಿರುವ ಕಾಡಿನ ರಚನೆಯೇ ರಾತ್ರಿ ನುಗ್ಗುವವರಿಗೆ ಬೇಲಿಯಾಯಿತು. ಗಿಡಗಿಡಗಳ ಮಧ್ಯೆ ಗೂಡುಕಟ್ಟಿರುವ ಕೆಂಜುಗಗಳು, ಜೇಡಗಳು, ಹಾಗಲ್ಲದೆ ಕಪ್ಪೆಗಳು, ಹಾವುಗಳು ನಮ್ಮ ತೋಟ ಕಾಯುವ ಸಿಪಾಯಿಗಳು, ನಮಗೆ ಇವರೆಲ್ಲ ಸಹಾಯಕರು.

ತೋಟಕ್ಕೆ ಬೇಕಾದ ಗೊಬ್ಬರವನ್ನು, ಹಸುಗಳಿಗೆ ಮೇವನ್ನು ಬೇಲಿಯೇ ನಿರ್ಮಿಸಿ ಕೊಟ್ಟಿತು. ನೂರಾರು ಬೆಳೆಗಳು, ನಮ್ಮ ಜೀವನಾವಶ್ಯಕತೆಗಳನ್ನು ನೇರವಾಗಿ ಪೂರೈಸಿದುವು. ಪೇಟೆಯಿಂದ ಕೊಂಡು ಕೊಳ್ಳುವಾಗ ಸರಕನ್ನು ಕಡಿಮೆಗೊಳಿಸಿದುವು. ನಮ್ಮ ಗಳಿಕೆಗೆ

ಹೆಚ್ಚಿನ ಅರ್ಥಕೊಟ್ಟುವು. ಆತಂಕಕಾರಿ ಆರ್ಥಿಕ ವ್ಯವಸ್ಥೆಯ ವಿರುದ್ಧ ವೈಯುಕ್ತಿಕ ಸಾಮರ್ಥ್ಯ ತುಂಬಿದುವು. ಮಾರುಕಟ್ಟೆ ಬೆಳೆಗಳ ಏರುಪೇರನ್ನು ವೈವಿಧ್ಯಮಯ ಬೆಳೆಗಳು ನಿಭಾಯಿಸಿದುವು. ಕಳ್ಳರಾಗಿ ಬರುವ ಕೀಟಗಳಿಗೆ ಒಂದೊಂದು ಕಳೆಗಿಡವೂ ಬೇಲಿಯಾಯಿತು. (Trap crop ಎಂದು ಇಂಗ್ಲಿಷಿನಲ್ಲಿ ಹೇಳುವುದು ಇದನ್ನೇ). ಒಂದೊಂದು ಕಳೆಯೂ ಇಲ್ಲಿ ಗೊಬ್ಬರವಾಗುತ್ತದೆ. ಔಷಧಿಯಾಗುತ್ತದೆ. ಕೀಟ ನಿಯಂತ್ರಕವಾಗುತ್ತದೆ. ಪ್ರಕೃತಿಯಂತ್ರವನ್ನು ಸುಸ್ಥಿತಿಯಲ್ಲಿಡುವ ತಂತ್ರವಾಗುತ್ತದೆ. ನಟ್ಟು ಬೋಲ್ಟ್‌ಗಳಾಗುತ್ತವೆ. ಕೆಂಜುಗ, ಕಪ್ಪೆಗಳೆಲ್ಲಾ ಕೀಟ ಭಕ್ಷಕಗಳಾಗಿವೆ. ಮೊನೋಕ್ರೊಟೋಫಾಸಿಗಿಂತ ಹೆಚ್ಚು ಸಮರ್ಥವಾಗಿವೆ.

ವಿಶೇಷವೇನೆಂದರೆ ಎಲ್ಲಿಂದಲೋ ಬಂತು. ಹಾಗಾಯಿತು. ಹೀಗಾಯಿತು ಎಂದು ಹೀಗಳೆಯುವ ಪಾರ್ಥೇನಿಯಮ್, ಯುಪಟೋರಿಯಮ್, ಲಂಟಾನಗಳೆಲ್ಲಾ ಉತ್ತಮ ಕೀಟ ವಿಕರ್ಷಕಗಳು. ಉತ್ತಮ ಸಾವಯವ ಗೊಬ್ಬರಗಳು.

ಸತ್ತು ಹೋಗುತ್ತಿರುವ ಪ್ರಕೃತಿಯಲ್ಲಿ ಚಿಂತನೆಗೂ ಸಾವೇ ?

ನಾಯಿಗಳು ಜೀವಧಾರಕ ಪ್ರಕೃತಿಯ ಚಕ್ರದಲ್ಲಿ ಒಂದು ಸಣ್ಣ ಪಾಲು ಮಾತ್ರ. ಸಾಮ, ದಾನ, ಭೇದ, ದಂಡ ಎಂಬ ಚತುರೋಪಾಯಗಳಲ್ಲಿ ಕೀಟನಾಶಕ ಅಂತಿಮ ಅನಿವಾರ್ಯ ಪರಿಹಾರ ಮಾತ್ರ. ಕಳ್ಳತನಕ್ಕೆ ನಾಯಿಯೊಂದೇ ಪರಿಹಾರವೆಂದು ಅಂದು ತಿಳಿದ ನನ್ನ ಮೌಢ್ಯಕ್ಕೂ ಅಂದಿನ ನನ್ನ ಅವಸರಕ್ಕೂ ರೋಗಗಳಿಗೆ ಕೀಟನಾಶಕಗಳಿಂದ ಪರಿಹಾರ ಪಡೆಯುವ ಇಂದಿನ ತಜ್ಞರ ಅವಸರಕ್ಕೂ ಯಾವುದೇ ವ್ಯತ್ಯಾಸ ಇಲ್ಲ. ಒಂದು ನಾಯಿ ಅಥವಾ ಒಂದು ಬೇವು ಅಥವಾ ಒಂದು ಮೊನೋಕ್ರೊಟೋಫಾಸ್, ಅಥವಾ ಒಂದು ಕಾನೂನು ಅಥವಾ ಒಂದು ತಜ್ಞರಿಂದ ಏನನ್ನೂ ಮಾಡಲು ಸಾಧ್ಯವಿಲ್ಲ. ಈ ಸತ್ಯದ ಅರಿವು ಪಡೆಯುವುದು ಇಷ್ಟೊಂದು ಕಷ್ಟವೇ? ಪ್ರತಿ ಬಾರಿಯೂ ಒಂದೇ ತಪ್ಪನ್ನು ಮಾಡುತ್ತಾ ಸೋಲುತ್ತಿರುವ ಕೃಷಿ ವಿಜ್ಞಾನಕ್ಕಿರುವ ಪರ್ಯಾಯ ನಾಮ ತಜ್ಞತೆಯೇ? ಇಂಥಾ ತಜ್ಞರ ಬೆನ್ನುಹತ್ತಿ ಕನಸುಕಾಣುವುದೇ ನಮಗೆ ಜೀವನವೇ?

ಪ್ರಕೃತಿ ಸ್ಪಷ್ಟವಾಗಿ ಹೇಳುತ್ತಿದೆ. ನೀನು ಹೋಗುವ ದಾರಿ ಸರಿ ಇಲ್ಲ. ಕಳ್ಳ ಬರುವಾಗ ನಾಯಿ ಹುಡುಕಿದರೆ ಪ್ರಯೋಜನವಿಲ್ಲ. ನನ್ನ ಮುಂದೆ ನಿನ್ನ ಅಹಂಕಾರ ನಡೆಯುವುದಿಲ್ಲ. ನಿನ್ನ ಅಧಿಕಾರ ಕ್ಷೇತ್ರ ನಿನ್ನ ಕುರ್ಚಿಗಿಂತ ಬಹಳ ಮುಂದೆ ಹೋಗುವುದಿಲ್ಲ. ಮಾರಾಟಕ್ಕಾಗಿಯೇ ಬೆಳೆಯುವುದು ಸಲ್ಲ. ಅಗತ್ಯಕ್ಕಾಗಿ ಬೆಳೆಯುವಷ್ಟೇ ಹಕ್ಕು ಪ್ರಕೃತಿ ನಮಗೆ ಕೊಟ್ಟಿರುವುದು. ತಿಳಿವರಿದು ಬಲು ಸರಳ.

ಬುದ್ಧಿ ಬರದಾದಾಗ ನಡೆನಿಸರ್ಗದ ತಳಕೆ
ಎದ್ದು ಬೀಳುತ್ತಲೊಂದಾಗು ಪ್ರಕೃತಿಯಲಿ ವೈ-
ವಿಧ್ಯವನು ಸವಿದು ಹೊಸತನವ ಪಡೆ ಹಸನಾಗು
ಮೊದ್ದುತನವಳಿಯುವುದು ದಿಟವೆಲ್ಲೈ ಅತ್ರಿಸೂನು

ಮೇಜರ್ ಕುಲಕರ್ಣಿ

ಡಾ. ಸ. ಜ. ನಾಗಲೋಟಿಮಠ
ವೈದ್ಯಕೀಯ ನಿರ್ದೇಶಕರು
ಬ. ವಿ. ವ. ಸಂಘ, ಬಾಗಲಕೋಟೆ-೫೮೭ ೧೦೧

ಮೇಜರ್ ಕುಲಕರ್ಣಿ ವೈದ್ಯಾಧಿಕಾರಿ ಯುವಕ. ಬೆಳಗಾವಿಯ ಮಿಲಿಟರಿ ಆಸ್ಪತ್ರೆಯಲ್ಲಿ ಸೇವೆ ಸಲ್ಲಿಸುತ್ತಿದ್ದ. ಅವನದು ನೋಡಲು ಆಕರ್ಷಕ ವ್ಯಕ್ತಿತ್ವ. ಮೈಕೈ ದುಂಡು ದುಂಡು. ಮುಖವೂ ದುಂಡಗೆ, ಚಿಗುರು ಮೀಸೆ. ಗಿಡ್ಡ ಕಡುಗಪ್ಪು ಕೂದಲು ತಲೆಯ ಮೇಲೆ. ಮುಗುಳು ನಗೆ ಯಾವಾಗಲೂ ಅವನ ಮುಖದಲ್ಲಿ ಇರುತ್ತಿತ್ತು.

ಅವನು ಮೂಲತಃ ಮಹಾರಾಷ್ಟ್ರದವನು. ಮಧ್ಯಮ ವರ್ಗದ ಕುಟುಂಬದಿಂದ ಬಂದವನು. ಗುರು ಹಿರಿಯರಿಗೆ ತನ್ನ ಭಕ್ತಿ ಗೌರವ ತೋರಿಸುತ್ತಿದ್ದ. ಮಿಲಿಟರಿ ಸೇವೆಯಲ್ಲಿ ಸೇರಿಕೊಂಡು ಎರಡು ವರ್ಷಗಳಾದ ಮೇಲೆ ಮದುವೆ ಆದ. ಅವನ ಹೆಂಡತಿ ಎಂ.ಎ. ಕಲಿತವಳು. ಅವಳೂ ಸಹ ಮರಾಠಿ. ಸುಂದರ ಹೆಣ್ಣುಮಗಳು. ಗಂಡಹೆಂಡಿರಿಬ್ಬರು ಅನ್ಯೋನ್ಯವಾಗಿದ್ದರು. ಎಲ್ಲಿ ಹೋದರೂ ಜೊತೆ ಜೊತೆಗೆ ಹೋಗುತ್ತಿದ್ದರು. ಆಕರ್ಷಕ ಜೋಡಿ.

ಬೆಳಗಾವಿಯ ಹವೆ, ನೀರು, ಜನ, ಪರಿಸರ ಅವರಿಗೆ ಹಿಡಿಸಿತ್ತು. ಕುಲಕರ್ಣಿ ಕೇವಲ ಮಿಲಿಟರಿ ಅಧಿಕಾರಿಗಳನ್ನಲ್ಲದೆ ಶಹರದಲ್ಲಿಯ ಹಲವಾರು ಕುಟುಂಬದವರೊಂದಿಗೆ ಸಖ್ಯ ಬೆಳೆಸಿದ್ದ. ಜೀವನ ಸಂತೋಷದಲ್ಲಿ ತೇಲುತ್ತಿತ್ತು. ಅಷ್ಟರಲ್ಲಿ ಕುಲಕರ್ಣಿಯ ಮಡದಿ ಗರ್ಭ ಧರಿಸಿದಳು. ಇದು ಇನ್ನೂ ರುಚಿ. ಮಿಲಿಟರಿ ವೈದ್ಯರ ಹೆಂಡತಿ, ಗಂಡ ಎಲ್ಲ ಕಾಳಜಿ ವಹಿಸಿದ. ಆಕೆಯೂ ವಿದ್ಯಾವಂತೆ. ಬೇಕಾದ ಎಚ್ಚರಿಕೆ ತೆಗೆದುಕೊಂಡಳು. ಬೆಳಗಾವಿಯ ಮಿಲಿಟರಿ ಆಸ್ಪತ್ರೆ ಒಳ್ಳೆಯದಿತ್ತು. ಚೊಚ್ಚಲ ಹೆರಿಗೆ ತವರುಮನೆಯಲ್ಲಿ ಜರಗಬೇಕೆಂಬ ಪದ್ಧತಿಯನ್ನು ಅವರು ದೂರವಿಟ್ಟರು. ಬೆಳಗಾವಿಗೆ ಶ್ರೀಮತಿ ದೇಶಪಾಂಡೆಯ ತಾಯಿ ಬಂದಳು. ದಿನ ತುಂಬಿದುವು. ಹೆರಿಗೆಯ ಬೇನೆ ಕಂಡವು. ತತ್‌ಕ್ಷಣ ಆಸ್ಪತ್ರೆಗೆ ದಾಖಲು ಮಾಡಿದರು. ಯಾವ ತೊಂದರೆಯಿಲ್ಲದೆ ಒಂದು ಗಂಡು ಮಗುವಿಗೆ ಜನ್ಮ ಇತ್ತಳು. ಮಗುವಿನ ತೂಕ ಸರಿಯಾಗಿತ್ತು. ತಾಯಿ-ಮಗು ಒಳ್ಳೆಯ ಆರೋಗ್ಯದಿಂದ ಇದ್ದರು. ಕುಲಕರ್ಣಿ ಎಲ್ಲರಿಗೂ ಸಿಹಿ ಹಂಚಿದರು. ಸಂಬಂಧಿಕರು ಹಾಗೂ ಸ್ನೇಹಿತರು ಸಂತೋಷಪಟ್ಟರು. ಒಂದು ವಾರವಾದ ಅನಂತರ ತಾಯಿ ಮಗು ಮನೆಗೆ ಬಂದರು. ಎಲ್ಲವೂ ಸುಸೂತ್ರವಾಗಿ ನಡೆಯಿತು.

ಸರಿಯಾಗಿ ಒಂದು ತಿಂಗಳ ಮೇಲೆ ಶ್ರೀಮತಿ ಕುಲಕರ್ಣಿ ಅವರು ತಮ್ಮ ಎಡಗಡೆಯ ಮೊಲೆಯಲ್ಲಿ ನೋವು ಕಾಣಿಸಿದೆ ಎಂದರು. ಪತಿಯೋ ವೈದ್ಯರಾಗಿದ್ದರು. ಪರೀಕ್ಷಿಸಿದರು. ಇದು ಸಾಮಾನ್ಯ, ತಾಯಿ ಮಗುವಿಗೆ ಹಾಲು ಉಣ್ಣಿಸುವ ಪ್ರಾರಂಭದಲ್ಲಿ ಹೀಗಾಗಬಹುದು ಎಂದು ಸಮಾಧಾನ ಪಡಿಸಿದರು. ಶ್ರೀಮತಿಯೂ ಸಹ ಅದನ್ನೇ ತಿಳಿದು ಸುಮ್ಮನಾದಳು. ಒಂದುವಾರ ಕಳೆಯಿತು. ನೋವಿನ ಜೊತೆಗೆ ಗಂಟು ಕಾಣಿಸಿತು. ಕುಲಕರ್ಣಿ ಗಡಿಬಿಡಿಯಲ್ಲಿ ಬಿದ್ದರು. ಮತ್ತೆ ಹೆಂಡತಿಯನ್ನು ಆಸ್ಪತ್ರೆಗೆ ಕರೆದುಕೊಂಡು ಹೋದರು. ಮುಖ್ಯ ಸರ್ಜನ್ ತಪಾಸಿಸಿದರು. ಒಂದೆರಡು ಇಂಜೆಕ್ಷನ್ ಕೊಟ್ಟು ನೋಡೋಣ ಎಂದರು. ಇಂಜೆಕ್ಷನ್‌ಗಳನ್ನು ಕೊಟ್ಟಾಯಿತು. ಮೊಲೆಯಲ್ಲಿ ಕಂಡ ಗಂಟು ಕರಗಲಿಲ್ಲ. ಆಪರೇಷನ್ ಮಾಡಿದರು. ಗಂಟನ್ನು ಕೊಯ್ದು ಹೊರತೆಗೆದರು. ಗಂಟು ಪರೀಕ್ಷೆಗೆ ಒಳಪಟ್ಟಿತು. ದುರ್ದೈವದಿಂದ ಶ್ರೀಮತಿ ಕುಲಕರ್ಣಿಯವರಿಗೆ ಸ್ತನ ಕ್ಯಾನ್ಸರ್ ಎಂದು ತಿಳಿಯಿತು. ಮೇಜರ್ ಕುಲಕರ್ಣಿ

ಆಘಾತಕ್ಕೆ ಒಳಗಾದ. ಶ್ರೀಮತಿ [illegible] ಸುಶಿಕ್ಷಿತ ತರುಣಿ. [illegible]ಗೂ ಏನಾಗಿದೆ ಎಂಬುದು ತಿಳಿಯಿತು. ತ[illegible]ಕ್ಷಣ ಉಪಚಾರ ಪ್ರಾರಂಭವಾಯಿತು. [illegible]ಸ್ಕ ವೈದ್ಯರನ್ನೆಲ್ಲ ಸಂಪರ್ಕಿಸಿದರು. ಹೆಚ್ಚಿನ ಮದ್ದುಗಳನ್ನು ಕೊಟ್ಟರು. ಏನೆಲ್ಲ ಮಾ[illegible]ರು. ಆದರೂ ಶ್ರೀಮತಿ ಕುಲಕರ್ಣಿ ನಾಲ್ಕು ತಿಂಗಳಾಗು ವಷ್ಟರಲ್ಲಿ ಮರ[illegible]ದಿದಳು. ಮಗು ಉಳಿಯಿತು.

ಮೇಜರ್ ಕುಲಕರ್ಣಿಯುವರ ಅತ್ತೆ ದುಃಖಿಸುತ್ತ ತಮ್ಮ ಊರಿಗೆ ಹೋದಳು. ಕುಲಕರ್ಣಿಯ ತಾಯಿಯೇ ಮೊಮ್ಮಗನ ತಾಯಿಯಾದಳು. ಕೂಸಿನ ಜವಾಬ್ದಾರಿ ತಾಯಿಯ ಮೇಲೆ ಬಿದ್ದಿತು. ಒಂದು ವರ್ಷ ಕಳೆಯಿತು. ಮೇಜರ್ ಕುಲಕರ್ಣಿಗೆ ಸ್ನೇಹಿತ ರೆಲ್ಲ ಕೂಡಿ ಮರು ಮದುವೆ ಮಾಡಿಕೊಳ್ಳಲು ಸಲಹೆ ಮಾಡತೊಡಗಿದರು. ಕನ್ಯೆ ಹುಡುಕಲು ಪ್ರಾರಂಭವಾಯಿತು. ಹಲವಾರು ಕನ್ಯೆಗಳನ್ನು ಸೂಚಿಸಿದರು. ಅವರೂ ವೈದ್ಯರೇ, ವಯಸ್ಸು ಉಳಿದೆಲ್ಲ ರೀತಿಯಿಂದ ಸರಿ ಎನಿಸುವಂಥ ಕನ್ಯೆಗಳು ಸಿಕ್ಕವು. ಆದರೆ ಮೇಜರ್ ಕುಲಕರ್ಣಿ ನಮ್ರವಾಗಿ ಒಪ್ಪಿಗೆ ಕೊಡುತ್ತಿರಲಿಲ್ಲ. ಬೇಡ ವೆಂದು ಹೇಳುತ್ತಿದ್ದರು. ಕನ್ಯಾ ಸೂಚಿಸುವ ವರಿಗೂ ಬೇಸರ ಬಂದಿತು. ಒಳ್ಳೇ ಮನತನ. ಒಳ್ಳೆ ಕನ್ಯೆ. ವೈದ್ಯೆ, ಬೇಡವೆಂದರು. ಒಳ್ಳೆ ಮನತನ. ಹುಡಗಿ ಸುಂದರ. ಕಲಿತವಳು ಅದಕ್ಕೂ ಬೇಡ. ಅವರ ಮನಸ್ಸಿನಲ್ಲಿ ಏನಿದೆಯೋ ಗೊತ್ತಾಗಲಿಲ್ಲ. ಹಿತಚಿಂತಕರೆಲ್ಲ ಸುಮ್ಮನಾದರು.

ಎರಡು ವರ್ಷಗಳಾದುವು. ಒಂದು ದಿನ ಮೇಜರ್ ಕುಲಕರ್ಣಿಯವರಿಂದ ಆಮಂತ್ರಣ ಪತ್ರಿಕೆ ಬಂದಿತು. ತೆರೆದು ನೋಡಿದರೆ ಅದು ಅವರ ಮದುವೆಯ ಔತಣ. ಎಲ್ಲರಿಗೂ ಆಶ್ಚರ್ಯ ಏನಿದು ? ನಾವೆಲ್ಲ ಹಲವಾರು ಒಳ್ಳೊಳ್ಳೆ ಕನ್ಯಾಮಣಿಗಳನ್ನು ತೋರಿಸಿದ್ದೆವು. ಎಲ್ಲ ಸೂಚನೆಗಳನ್ನು ಈ ಕುಲಕರ್ಣಿ ತಿರಸ್ಕರಿಸಿದ. ನಮಗಾರಿಗೂ ಹೇಳದೆ ಎರಡನೆಯ ಸಂಬಂಧ ಮಾಡಿಕೊಂಡಿರುವನು. ಈ ಕನ್ಯೆಯೇನು ರಂಭೆಯೋ ಊರ್ವಶಿಯೋ ನೋಡಿಯೇ ಬಿಡುವುದೆಂದರು. ತಪ್ಪಿಸದೇ ಮದುವೆಯ ಔತಣಕ್ಕೆ ಹೋಗುವದೆಂದು ನಿಶ್ಚಯಿಸಿದರು. ಎಲ್ಲರಿಗೂ ಇದೊಂದು ಒಡೆಯಲಾರದ ಒಗಟು. ಯಾರೊಡನೆ ಹುಡುಗಿ ನೋಡಲು ಹೋದ ? ಎಲ್ಲಿಯ ಹುಡುಗಿ? ಎಂಬೆಲ್ಲ ಪ್ರಶ್ನೆಗಳು ಎದ್ದು ನಿಂತವು.

ಔತಣವನ್ನು ಒಂದು ಹೊಟೇಲದಲ್ಲಿ ಇಡಲಾಗಿತ್ತು. ಆ ಹೊಟೇಲದವರು ಎಲ್ಲ ವ್ಯವಸ್ಥೆ ಮಾಡಿದ್ದರು. ಮೇಜರ್ ಕುಲಕರ್ಣಿಯ ಹೊಸ ಹೆಂಡತಿ ಹೇಗಿದ್ದಾಳೆ ? ಎಂದು ಜನ ಬಂದರು. ವೇದಿಕೆಯ ಮೇಲೆ ನಿಂತವರು ನಾಲ್ಕು ಜನ. ಮೇಜರ್ ಕುಲಕರ್ಣಿ ತಮ್ಮ ಫುಲ್ ಸೂಟಿನಲ್ಲಿದ್ದಾರೆ. ಕೊರಳಲ್ಲಿ ಹೂವಿನ ಮಾಲೆ ಇದೆ. ಅವರ ಮಗ್ಗುಲಲ್ಲಿ ಓರ್ವ ತರುಣಿ ನಿಂತಿದ್ದಾಳೆ. ಸುಮಾರು ಅದೇ ವಯಸ್ಸಿನವಳು. ಅವಳ ಮಗ್ಗುಲಲ್ಲಿ ಒಂದು ಹೆಣ್ಣು ಮಗು ಹೊಸ ಬಟ್ಟೆ ಹಾಕಿಕೊಂಡು ನಿಂತಿದೆ. ಕುಲಕರ್ಣಿಯ ಮಗ್ಗುಲಲ್ಲಿ ಅವನ ಮಗು ಹೊಸ ಬಟ್ಟೆ ಹಾಕಿಕೊಂಡು ನಿಂತಿದೆ. ನೋಡಿದವರಿಗೆಲ್ಲ ಗಲಿಬಿಲಿ, ವೇದಿಕೆಗೆ ಹೋಗಿ ಕೈ ಕುಲುಕುವಾಗ ಮೇಜರ್ ಕುಲಕರ್ಣಿ ಹೇಳುತ್ತಿದ್ದರು. ಈಕೆ ನನ್ನ ಮಡದಿ. ಆಕೆಯ ಬದಿಯಲ್ಲಿರುವದು ಅವಳ ಮಗಳು. ಗಂಡ ಹೆಂಡಿರಿಬ್ಬರೂ ಸಂತೋಷ ದಲ್ಲಿದ್ದರು. ಔತಣದ ವ್ಯವಸ್ಥೆ ಚೆನ್ನಾಗಿತ್ತು. ಬಂದವರೆಲ್ಲ ಊಟ ಮಾಡಿ, ಶುಭಾಶಯ ಹೇಳಿ ಹೋದರು. ಮರುದಿನ ಮೇಜರ್ ಕುಲಕರ್ಣಿ ಯನ್ನು ಭೇಟಿ ಆದವರೊಬ್ಬರು ಕೇಳಿದರು. "ಏನ್ರಿ ಕುಲಕರ್ಣಿ, ನಮಗೆ ಏನೂ ಗೊತ್ತಾಗ ದಂತೆ ಮದುವೆ ಮಾಡಿಕೊಂಡು ಬಿಟ್ಟಿರಿ. ನಾವು ಒಳ್ಳೊಳ್ಳೆ ಕನ್ಯೆ ತೋರಿಸಿದರೂ ನೀವು ಒಪ್ಪಿರಲಿಲ್ಲ. ಈಕೆಯೋ ಜಾಸ್ತಿ ವಯಸ್ಸಿನವಳು.

ಅದೂ ಅಲ್ಲದೆ ಆಕೆಗೊಂದು ಮಗುವಿದೆ. ನೀವು ಮಾಡಿದುದಾರೂ ಏನು ?''

ಕುಲಕರ್ಣಿ ಉತ್ತರಿಸಿದರು. ''ಯಜಮಾನರೆ, ನೀವು ಹೇಳಿದ್ದು ನಿಜ. ಆಕೆ ನನಗಿಂತ ಒಂದು ವರ್ಷ ದೊಡ್ಡವಳು. ಅವಳು ವಿಧವೆ ಆಗಿದ್ದಳು. ಆಕೆಯ ಪತಿ ಕಳೆದ ವರ್ಷದ ಯುದ್ಧದಲ್ಲಿ ಪ್ರಾಣ ತೆತ್ತಿದ್ದ. ಆಕೆಗೆ ಮೂರು ವರ್ಷದ ಒಬ್ಬ ಮಗಳಿದ್ದಾಳೆ. ಅವರಿಗೆ ಬಡತನ ಬೇರೆ. ನಿಮ್ಮ ಮಾತು ಕೇಳಿ ನಾನು ಒಳ್ಳೆಯ ಕನ್ಯೆಯನ್ನು ಮದುವೆ ಆಗಬಹುದಿತ್ತು. ಆದರೆ ಇಂಥ ವಿಧವೆಯರನ್ನು ಯಾರು ಮದುವೆ ಆಗುವರು ? ನಾವು ಮಿಲಿಟರಿಯಲ್ಲಿ ಇದ್ದವರು. ನಮ್ಮ ಸ್ನೇಹಿತರು ದೇಶಕ್ಕಾಗಿ ಪ್ರಾಣ ತೆತ್ತಾಗ ಅವರ ಮಡದಿಯರು ವಿಧವೆಯರಾಗುತ್ತಾರೆ. ಈ ವಿಧವೆಯರ ಬದುಕು ಕಣ್ಣೀರಿನಲ್ಲಿ ತೇಲುತ್ತದೆ. ನನ್ನ ಕೈಲಾದ ಮಟ್ಟಿಗೆ ದೇಶಕ್ಕೆ ಪ್ರಾಣತೆತ್ತ ಸ್ನೇಹಿತರ ಕುಟುಂಬದವರಿಗೆ ನಾನು ಸಹಾಯ ಮಾಡಬೇಕೆಂಬುದು ಆಸೆ. ಕಾರಣ ಇಂಥ ಓರ್ವ ವಿಧವೆಯನ್ನು ಹುಡುಕುತ್ತಿದ್ದೆ. ಯುದ್ಧದಲ್ಲಿ ಮಡಿದ ಸ್ನೇಹಿತರ ಮನೆಯ ಪತ್ತೆ ತೆಗೆಸಿದೆ. ಓಲೆ ಬರೆದು ಅವರ ಸ್ಥಿತಿಗತಿಗಳ ಬಗ್ಗೆ ವಿಚಾರಿಸಿದೆ. ಈ ವಿಧವೆ ಯುಕ್ತವೆನಿಸಿದಾಗ ಅವರ ಮನೆಗೆ ಹೋದೆ. ಆಕೆಯ ಸಂಬಂಧಿಕರಿಗೆ ಭೇಟಿಯಾಗಿ ನನ್ನ ಇಂಗಿತ ತಿಳಿಸಿದೆ. ಅವರಿಗೆ ಆನಂದವಾಯಿತು. ನನ್ನನ್ನು ಬಹುವಾಗಿ ಆದರಿಸಿದರು. ವಿಧವೆಯನ್ನು ಕೇಳಿದರು. ಆಕೆಗೆ ಆಶ್ಚರ್ಯ. ಏನೂ ಮಾತಾಡಲು ಬಾರದು. ಮಗುವನ್ನು ಅಪ್ಪಿಕೊಂಡು ಅಳಹತ್ತಿದಳು. ನಾನು ಹೇಳಿದೆ. ಗಾಬರಿ ಬೇಡ. ನಾನು ನಿನ್ನನ್ನು ಮದುವೆ ಆದರೆ ನಿನ್ನ ಮಗುವು ನನ್ನ ಮಗುವಾಗುತ್ತದೆ. ಹಾಗೆಯೇ ನಿನಗೊಂದು ಜವಾಬ್ದಾರಿ ಇದೆ. ಅದೆಂದರೆ ನನ್ನ ಹೆಂಡತಿ ಹಡೆದು ಸತ್ತಳು. ಆ ಮಗು ತೀರ ಚಿಕ್ಕದು. ನೀನು ಅದನ್ನು ನಿನ್ನ ಮಗುವೆಂದು ಪಾಲಿಸಬೇಕು.'' ಆಕೆ ಅಳುವನ್ನು ನಿಲ್ಲಿಸಿದಳು. ನನ್ನನ್ನು ದಿಟ್ಟಿಸಿ ನೋಡಿದಳು. ಆಕೆ ಒಪ್ಪುವಳೋ ಇಲ್ಲವೋ ಅನಿಸಿತ್ತು. ತತ್ ಕ್ಷಣ ಎದ್ದು ತನ್ನ ಮಗುವನ್ನು ನನ್ನ ಕೈಯಲ್ಲಿ ಕೊಟ್ಟಳು. ಏನು ಮಾಡುವಳೋ ಎನಿಸಿತ್ತು. ಚಿಕ್ಕಮಗು ಎಲ್ಲಿ ಎಂದಳು. ಮನೆಯಲ್ಲಿದೆ ಎಂದು ಹೇಳಿದೆ. ಆಕೆ ಕುಳಿತು ನನ್ನ ಎರಡು ಕಾಲುಗಳನ್ನು ಹಿಡಿದು ನಮಸ್ಕರಿಸಿದಳು. ಚಿಕ್ಕ ಮಗು ನನಗೆ ಬೇಕು ಎಂದಳು, ಆಯಿತು. ಮದುವೆ ಬಹಳ ಸರಳ ರೀತಿಯಲ್ಲಿ ಅದೇ ಹಳ್ಳಿಯಲ್ಲಿ ಜರುಗಿತು. ಅವಳನ್ನು ಮನೆಗೆ ಕರೆದುಕೊಂಡು ಬಂದೆ. ನನ್ನ ತಾಯಿ ಒಪ್ಪಿದಳು. ನನ್ನ ಅತ್ತೆ ಅನುಮತಿ ಕೊಟ್ಟಳು. ತಂದೆಯವರು ''ನೀನು ಗೆದ್ದಿರುವೆ, ನನ್ನ ಅಭಿನಂದನೆಗಳು'' ಎಂದರು. ಒಂದು ವಾರವಾದ ಮೇಲೆ ಔತಣ ಕೂಟವನ್ನು ಏರ್ಪಡಿಸಿದೆ, ಎಂದು ಮಾತು ಮುಗಿಸಿದರು.

ಕೇಳಿದ ಯಜಮಾನರು ಮೂಕನಾಗಿ ನಿಂತರು. ಮೇಜರ್ ಕುಲಕರ್ಣಿಯ ಮುಂದೆ ತಾನೆಷ್ಟು ಕುಳ್ಳ ಎನಿಸಿತು.

ಆಶಾವಾದಿಗೆ ಸಂಕಟದಲ್ಲೂ ಆಸೆಯ ಬೆಳಕು ಕಾಣುತ್ತದೆ;
ನಿರಾಶಾವಾದಿಗೆ ಆಸೆಯಲ್ಲೂ ದುಃಖವೇ ಕಾಣುತ್ತದೆ.
-ಹೆಮಾಕ್ ಎಲ್ಲಿಸ್

ಮಿದುಳು ಲಕ್ವ

ಡಾ|| ಸಿ.ಎಸ್.ಕಮಲ
೧೪೯೮/೨೪ ''ಶ್ರೀ ಹರಿಕೃಪ''
ರಾಮಯ್ಯರ್ ರಸ್ತೆ, ಕೃಷ್ಣಮೂರ್ತಿಪುರ
ಮೈಸೂರು-೫೭೦ ೦೦೪

ಕುಟುಂಬದಲ್ಲಿ ಮಿದುಳು ಲಕ್ವ ಖಾಯಿಲೆಯ ಮಗುವಿದ್ದರೆ ಹೆತ್ತವರ ಕಷ್ಟ ನಾನಾರೀತಿಯದು. ವೈದ್ಯರು ಈ ಸಂಗತಿ ತಿಳಿಸಿದಾಗ ಆಕಾಶವೇ ಕಳಚಿ ಬಿದ್ದಂತಾಗುತ್ತದೆ. ತಮ್ಮ ಮಗುವಿನ ಬಗ್ಗೆ ಎಷ್ಟೋ ಆಸೆ, ಆಕಾಂಕ್ಷೆಗಳನ್ನು ಹೊತ್ತ ಹೆತ್ತವರಿಗೆ ಈ ಅರಿವು ತಡೆಯಲಾಗದ ಪೆಟ್ಟು. ಮೊದ ಮೊದಲು ನಂಬಲೇ ಆಗುವುದಿಲ್ಲ. ಕ್ರಮೇಣ ಈ ಸತ್ಯ ಮನಸ್ಸಿಗೆ ನಾಟಿದಾಗ ತಾವೇ ತಪ್ಪಿತಸ್ಥರೆಂಬ ಮನೋಭಾವನೆ ಕಾಡುವುದು ಸಾಮಾನ್ಯ.

ತಂದೆತಾಯಿಯರು ಈ ಖಾಯಿಲೆಯ ಬಗ್ಗೆ ಸರಿಯಾದ ಮಾಹಿತಿಗಳನ್ನು ತಿಳಿದುಕೊಂಡು ಚಿಕಿತ್ಸೆಮಾಡಿಸುವುದರಿಂದ ಮಗುವಿನ ಮುಂದಿನ ಜೀವನ ಎಷ್ಟೋ ಫಲದಾಯಕವಾಗುವುದಲ್ಲದೆ, ಮನಸ್ಸಿನ ದುಗುಡ ಕಡಿಮೆಯಾಗಿ ತಮ್ಮ ಮಗುವಿಗೆ ಪ್ರಸ್ತುತ ಲಭ್ಯವಿರುವ ಸಹಾಯ ಕೊಡಿಸಲು ಪ್ರಯತ್ನ ಮಾಡಿದ್ದೇವೆಂಬ ಆತ್ಮ ವಿಶ್ವಾಸ ಕೂಡ ಮೂಡುತ್ತದೆ. ಈಗ ಹಿಂದಿನ ಕಾಲದಂತಲ್ಲದೇ ಇಂಥ ಮಕ್ಕಳ ಚಿಕಿತ್ಸೆಗೆ ಹಲವಾರು ಆಸ್ಪತ್ರೆಗಳು, ಶಿಕ್ಷಣಕೇಂದ್ರಗಳು, ಖಾಯಿಲೆಯ ಉಪದ್ರವವನ್ನು ಕಡಿಮೆಮಾಡುವ ಔಷಧಿಗಳು ಲಭ್ಯವಿವೆ. ಇದರಿಂದ ಇಂಥ ಎಷ್ಟೋ ಮಕ್ಕಳ ಭವಿಷ್ಯ ಸಾಕಷ್ಟು ಮಟ್ಟಿಗೆ ಉತ್ತಮವಾಗಲು ಅನುಕೂಲವಾಗಿದೆ. ಈ ಆಸ್ಪತ್ರೆಗಳಲ್ಲಿ, ಸ್ಪಾಸ್ಟಿಕ್ ಚಿಲ್ಡ್ರನ್ ಸಂಸರ್ಗದಲ್ಲಿ, ಮತ್ತು ಶಿಕ್ಷಣಕೇಂದ್ರಗಳಲ್ಲಿ ಇದೇ ರೀತಿ ತೊಂದರೆಯಿರುವ ಇತರ ಮಕ್ಕಳ ಮತ್ತು ಅವರ ಪೋಷಕರ ಸಂಪರ್ಕ ಹೊಂದಿ ವಿಚಾರ ವಿನಿಮಯಕ್ಕೆ ಅನುಕೂಲತೆ ಉಂಟು. ಹಾಗೆ ಮಾಡುವುದರಿಂದ ತಾವು ಮಾತ್ರವೇ ಅಲ್ಲದೆ ಇತರ ಎಷ್ಟೋ ಮಂದಿ ಇಂಥ ತೊಡಕಿನ ಸನ್ನಿವೇಶ ಎದುರಿಸುವಲ್ಲಿ ಭಾಗಿಗಳಾಗಿದ್ದಾರೆಂಬ ಅರಿವು ಮನಸ್ಸಿಗೆ ಧೈರ್ಯ, ಸ್ಥೈರ್ಯ ಕೊಡುತ್ತವೆ.

ಮನುಷ್ಯನ ವಿವಿಧ ಭಾವಭಂಗಿಗಳಿಗೆ ಮತ್ತು ಚಲನವಲನಗಳಿಗೆ ಮಿದುಳಿನ ಮತ್ತು ಸ್ನಾಯುಗಳ ಕ್ರಮವಾದ ಬೆಳೆವಣಿಗೆ ಮತ್ತು ಕ್ರಿಯಾಶಕ್ತಿ ಅತ್ಯಾವಶ್ಯಕ. ಮಕ್ಕಳ ಮಿದುಳು ಗರ್ಭಾವಸ್ಥೆಯಿಂದ ಹಿಡಿದು ಮಗುವಿಗೆ ೩-೪ ವರ್ಷ ತುಂಬುವ ತನಕವೂ ಬೆಳೆಯುತ್ತಿರುತ್ತದೆ. ಅದರಲ್ಲೂ ಪ್ರಾರಂಭದಲ್ಲಿ ಅತಿತೀವ್ರವೇಗದಿಂದ ಬೆಳೆಯುತ್ತಿದ್ದು ಒಂದು ವರ್ಷ ತುಂಬುವ ಹೊತ್ತಿಗೆ ಶೇ.೬೦ ಭಾಗದಷ್ಟು ಬೆಳೆವಣಿಗೆ ಸಂಪೂರ್ಣವಾಗಿರುತ್ತದೆ. ಹೀಗೆ ವಿಕಾಸಗೊಳ್ಳುತ್ತಿರುವ ಮಿದುಳಿಗೆ ಏನಾದರೂ ಗಾಸಿಯಾದರೆ ಮಗುವಿನ ಸ್ನಾಯುಗಳ ಕ್ರಿಯೆಗಳಿಗೆ ಧಕ್ಕೆಬಂದು ಅದರ ಚಲನವಲನಗಳು ಕುಂಠಿತವಾಗುತ್ತವೆ. ಹಲವು ವೇಳೆ ಈ ನಿಷ್ಕ್ರಿಯತೆಯ ಜೊತೆಗೆ ಮಿದುಳಿನ ಕ್ರಿಯೆಯನ್ನು ಅವಲಂಬಿಸಿರುವ ಇತರ ಬೆಳೆವಣಿಗೆಗಳು ಕೂಡ-ಉದಾ. ಬುದ್ಧಿ ಬೆಳೆವಣಿಗೆ, ವಾಕ್ ಶ್ರವಣ ಸಾಮರ್ಥ್ಯ ಇತ್ಯಾದಿ -ಕುಂಠಿತವಾಗಬಹುದು. ಮಿದುಳುಲಕ್ವ ಇಡೀ ಪ್ರಪಂಚದಲ್ಲೇ ಮಗುವಿನ ದೌರ್ಬಲ್ಯಕ್ಕೆ ಒಂದು ಮುಖ್ಯ ಕಾರಣವಾಗಿದೆ. ಸಾವಿರಕ್ಕೆ ಇಬ್ಬರು ಮಕ್ಕಳಲ್ಲಿ ಈ ಖಾಯಿಲೆ ಕಂಡುಬರುವುದೆಂದು ಅಂದಾಜು ಮಾಡಲಾಗಿದೆ.

ಮಿದುಳು ಲಕ್ವಕ್ಕೆ ಕಾರಣಗಳು: ಇವು ಜೈವಿಕ ಅಥವಾ ಪಾರಿಸರಿಕ ಕಾರಣಗಳಾಗಿರಬಹುದು.

ಜೈವಿಕ ಕಾರಣಗಳು : ಶಿಶುವಿನಲ್ಲಿ ಅಪಕ್ವತೆ, ಮಿದುಳಲ್ಲಿ ರಕ್ತಸ್ರಾವ, ಕಡಿಮೆತೂಕದ ಶಿಶು, ಗರ್ಭದ ಒಳಗೆ ಅಥವಾ ಜನನದ ಅನಂತರ ಆಮ್ಲಜನಕದ ಕೊರತೆ, ಶಿಶುಮಿದುಳಿನ

ವೈರೂಪ್ಯ, ಜೀವರಾಸಾಯನಿಕಗಳ ವೈಪರೀತ್ಯ, ಅತಿಚಿಕ್ಕದಾದ ತಲೆಗಾತ್ರ, ನವಜಾತಶಿಶುವಿನಲ್ಲಿ ಸೆಳವು, ಕಾಮಾಲೆ, ಗರ್ಭಾವಸ್ಥೆಯಲ್ಲಿ ಸೋಂಕುರೋಗಗಳು, ತಾಯಿ ಮಾದಕ ಪದಾರ್ಥಗಳನ್ನು ಉಪಯೋಗಿಸುವುದು. ಕಷ್ಟದ ಹೆರಿಗೆ, ಗರ್ಭಿಣಿಯಲ್ಲಿ ರಕ್ತದ ಒತ್ತಡ ಮತ್ತು ಸಕ್ಕರೆ ಖಾಯಿಲೆಗಳು, ಔಷಧಿಗಳ ದುರುಪಯೋಗ, ಗರ್ಭಾವಸ್ಥೆಯಲ್ಲಿರುವ ತಾಯಿ, ಇಳಿವಯಸ್ಸಿನಲ್ಲಿ ಗರ್ಭ, ತಾಯಿಯಲ್ಲಿ ಬುದ್ಧಿಮಾಂದ್ಯ, ಅನುವಂಶೀಯ ಖಾಯಿಲೆಗಳು, ಮಗುವಿನ ಬಗ್ಗೆ ಅಸಡ್ಡೆಭಾವ.

ಈ ಮೇಲೆ ಸಮೂದಿಸಿರುವ ಯಾವುದೇ ಖಾಯಿಲೆ ಸೂಚಕ ಕಾರಣಗಳ ಹಿನ್ನೆಲೆ ಇಲ್ಲದೇ ಇದ್ದ ಮಕ್ಕಳಿಗೆ ಈ ಖಾಯಿಲೆ ಬರುವುದೇ ಇಲ್ಲವೆಂದು ಹೇಳಲಾಗದಿದ್ದರೂ, ಈ ಹಿನ್ನೆಲೆಯಲ್ಲಿ ಹುಟ್ಟಿ ಬೆಳೆಯುವ ಮಕ್ಕಳಲ್ಲಿ ಇದು ಬರುವ ಸಾಧ್ಯತೆ ಹೆಚ್ಚು. ಈ ಖಾಯಿಲೆಯ ಇಷ್ಟು ಸೂಚ್ಯಕಾರಣಗಳಲ್ಲಿ, ಯಾವುದನ್ನೂ ಒಂದು ಮಗುವಿನ ಈ ಖಾಯಿಲೆಗೆ ನಿರ್ದಿಷ್ಟ ಕಾರಣವೆಂದು ಹೇಳುವುದು ಕೂಡ ಸುಲಭ ಸಾಧ್ಯವಿಲ್ಲ.

ಈ ಖಾಯಿಲೆಯ ವೈಶಿಷ್ಟ್ಯ ಎಂದರೆ ದೌರ್ಬಲ್ಯದ ವಿಸ್ತಾರ ಮತ್ತು ಪ್ರಮಾಣ ಒಮ್ಮೆಲೇ ಗೋಚರಿಸುವುದಿಲ್ಲ. ಮಗುವಿನ ವಯಸ್ಸು ಹೆಚ್ಚಾದಂತೆ ವೇದ್ಯವಾಗುತ್ತ ಬರುತ್ತದೆ. ಉದಾ: ಮಗುವಿಗೆ ಸ್ವಾಭಾವಿಕ ವಾಗಿ ನಿಂತುಕೊಳ್ಳುವ ವಯಸ್ಸಾಗುವ ತನಕ ಕಾಲಿನ ದೌರ್ಬಲ್ಯ ಗೊತ್ತಾಗದೇ ಹೋಗಬಹುದು.

ಮಗುವಿನ ಮಿದುಳುಲಕ್ವದ ದೌರ್ಬಲ್ಯ ಬಹು ಮುಖವಾಗಿರುತ್ತದೆ. ಆಹಾರ ಸೇವನೆಯ ತೊಂದರೆಗಳಿರಬಹುದು, ಏಕಪಾರ್ಶ್ವವಾಯುವಾಗಿರಬಹುದು ಅಥವಾ ಎರಡೂ ಪಾರ್ಶ್ವ ಗಳಿಗೂ ಇರಬಹುದು. ಸ್ನಾಯುಗಳು ಸೆಡೆತಿರಬಹುದು ಅಥವಾ ನಿಸ್ತೇಜವಾಗಿರಬಹುದು ಅಥವಾ ಅಂಗಾಂಗಗಳ ಅನೈಚ್ಛಿಕ ಅಲುಗಾಟವುಳ್ಳದ್ದಾಗಿರಬಹುದು. ಇಲ್ಲವೇ, ಈ ಎಲ್ಲವೂ ಒಂದೇ ರೋಗಿಯಲ್ಲಿ ಕಂಡು ಬರಬಹುದು.

ಮಿದುಳುಲಕ್ವದ ದೌರ್ಬಲ್ಯದ ಜೊತೆಗೆ ಕಾಣಬರುವ ಇತರ ದೌರ್ಬಲ್ಯಗಳು ಹಲವು, ವಿಶೇಷವಾಗಿ ಕಾಣುವುದು ಬದ್ಧಿಮಾಂದ್ಯ. (ಶೇ೫೦-೭೫), ಸೆಳವು(ಶೇ೨೫-೩೫), ವಾಕ್ ಶ್ರವಣ ತೊಂದರೆಗಳು (ಶೇ೧೫-೨೦), ದೃಷ್ಟಿ ತೊಂದರೆಗಳು(ಶೇ೫೦-೭೫) ಮತ್ತು ನಡೆವಳಿಕೆ ಸಂಬಂಧದ ತೊಂದರೆಗಳು.

ಅತ್ಯಂತ ಬಾಲ್ಯವಯಸ್ಸಿನಲ್ಲೇ ಈ ಖಾಯಿಲೆಯನ್ನು ಗುರುತಿಸಿದರೆ ಇದರಿಂದ ಮುಂದೆ ಸಂಭವಿಸಬಹುದಾದ ಅಂಗವಿಕಲತೆ ಮತ್ತು ಇದರೊಡಗೂಡಿ ಬರುವ ಇತರ ತೊಂದರೆಗಳನ್ನು ಬಹಳ ಮಟ್ಟಿಗೆ ಕಡಿಮೆ ಮಾಡಬಹುದು ಮತ್ತು ಇಂಥ ಒಂದು ಪರಿಸ್ಥಿತಿಯಲ್ಲೂ ಅವನ ಗರಿಷ್ಠ ಯೋಗ್ಯತೆಗೆ ಅನುಸಾರವಾಗಿ ಉಪಯುಕ್ತ ಜೀವನ ಕೊಡಲಾಗಬಹುದು.

ಸಾಧಾರಣವಾಗಿ ಮಗುವಿನ ಕುಂಠಿತವಾದ ಬೆಳವಣಿಗೆಯ ಹಂತಗಳೇ ಮಿದುಳುಲಕ್ವ ಇರುವ ಸೂಚನೆಕೊಡುವ ಪ್ರಾರಂಭಲಕ್ಷಣವಾಗಿರುತ್ತದೆ. ತಾಯಿ ತನ್ನ ಮಗುವಿಗೆ ೩ ತಿಂಗಳಾದರೂ ಕತ್ತು ಸಿಂತಿಲ್ಲ ಅಥವಾ ೧೦ ತಿಂಗಳಾದರೂ ಕುಳಿತುಕೊಳ್ಳುವುದಿಲ್ಲ ಎಂಬ ಆತಂಕದಿಂದ ಮಗುವನ್ನು ವೈದ್ಯರ ಬಳಿಗೆ ಕರೆದು ತರುತ್ತಾಳೆ. ಮಕ್ಕಳನ್ನು ತಿಂಗಳಿಗೊಮ್ಮೆ ವೈದ್ಯರಲ್ಲಿ ಪರೀಕ್ಷಿಸಿ ಬೆಳವಣಿಗೆ ಕ್ರಮಬದ್ಧ ವಾಗಿದೆಯೇ ಎಂದು ತಿಳಿಯುವುದು ಒಳ್ಳೆಯದು. ಈ ಖಾಯಿಲೆಯ ವಿಚಾರದಲ್ಲಿ ಪರಿಣಿತರಾದ ತಜ್ಞರುಗಳು ನವಜಾತ ಶಿಶುವಿನಲ್ಲಿ ಅಥವಾ ೧,೨ ತಿಂಗಳಿನ ಮಕ್ಕಳಲ್ಲೂ ಈ ಖಾಯಿಲೆಯನ್ನು ಗುರುತಿಸುವ ಸಾಧ್ಯತೆ ಇದೆ.

ಮಿದುಳುಲಕ್ವ ಸೂಚಕ ಲಕ್ಷಣಗಳು :

೧. ಮಗು ಚಟುವಟಿಕೆಯಿಂದಿಲ್ಲದಿರುವುದು.

೨. ಕೈಕಾಲುಗಳನ್ನು ಸಾಕಷ್ಟು ಆಡಿಸದೇ ಇರುವುದು

೩. ಅಂಗಾಂಗಗಳ ಏಕಪ್ರಕಾರ ಅಲುಗಾಟ

೪. ಅತಿ ಚಿಕ್ಕ ಗಾತ್ರದ ತಲೆ

೫. ೨ ತಿಂಗಳು ತುಂಬಿದ ಮೇಲೂ ಬಿಗಿಮುಷ್ಟಿ ಇರುವುದು.

೬. ಮಗುವಿಗೆ ೨ ತಿಂಗಳು ತುಂಬಿದರೂ ಮುಗುಳ್ನಗದಿರುವುದು.

೭. ಸ್ನಾಯುಗಳ ಸೆಡೆತ.

೮. ತಡವಾದ ಬೆಳೆವಣಿಗೆಯ ಹಂತಗಳು.


೯. ಒಂದೇ ಪಕ್ಕಕ್ಕೆ ದೃಷ್ಟಿ ಇಡುವುದು

೧೦. ನವಜಾತ ಶಿಶುವಿನಲ್ಲಿ ಸೆಳವು, ಇಲ್ಲವೇ ಪದೇ ಪದೇ ಸೆಳವು.

೧೧. ಹಾಲು ಸೇವಿಸಲು, ಉಸಿರಾಡಲು ಕಷ್ಟವಿರುವ ನವಜಾತ ಶಿಶು.

ಮಿದುಳುಲಕ್ವದ ಮಕ್ಕಳಿಗೆ ದೌರ್ಬಲ್ಯ ವಿದ್ದರೂ ಸಾಧ್ಯವಾದಷ್ಟು ಮಟ್ಟಿಗೆ ದೈನಂದಿನ ಆವಶ್ಯಕತೆಗಳನ್ನು ತಾವೇ ಪೂರೈಸಿಕೊಳ್ಳುವಷ್ಟು ಸ್ವಾವಲಂಭಿಗಳನ್ನಾಗಿ ಮಾಡಬೇಕೆಂಬುದೇ ಚಿಕಿತ್ಸಾಕ್ರಮಗಳ ಗುರಿ. ಈ ವಿಶೇಷ ಮಕ್ಕಳಿಗೆ ಮತ್ತು ಅವರ ಕುಟುಂಬಕ್ಕೆ ಸಲಹೆ, ಸೌಲಭ್ಯ ಮತ್ತು ಉತ್ತೇಜನದ ಆವಶ್ಯಕತೆ ಇರುವುದೇ ಹೊರತು, ಅವರಿಗೆ ಬೇಕಾದ್ದು ಒಣ ಕನಿಕರವಲ್ಲ.

ಖಾಯಿಲೆ ಬಹುಮುಖವುಳ್ಳದ್ದಾದರಿಂದ, ಚಿಕಿತ್ಸಾಕ್ರಮಗಳು ಕೂಡ ವಿವಿಧ ವಿಭಾಗ ಶಾಸ್ತ್ರದ ವೈದ್ಯರುಗಳ ಸಲಹೆಯನ್ನು ಅವಲಂಬಿಸುತ್ತವೆ. ಮುಖ್ಯವಾಗಿ ದೈಹಿಕ ಚಿಕಿತ್ಸೆ (ಫಿಸಿಯೋಥೆರಪಿ) ಕಸಬು ಚಿಕಿತ್ಸೆ (ಉದ್ಯೋಗಕ್ಕೆ ಅನುಗುಣವಾದ ಚಿಕಿತ್ಸೆ ಆಕ್ಯುಪೇಶನಲ್ ಥೆರಪಿ) ಎಲ್ಲ ರೋಗಿಗಳಿಗೂ ಆವಶ್ಯವಿರುತ್ತವೆ. ಇದರ ಜೊತೆಗೆ ಒಂದೊಂದು ತರಹ ನ್ಯೂನತೆ ಇರುವ ಮಕ್ಕಳಿಗೆ ಆಯಾ ತಜ್ಞರ ಸಲಹೆ ಬೇಕಾಗುತ್ತದೆ. ಎಲ್ಲ ವೈದ್ಯ ತಜ್ಞರುಗಳ ಸಲಹೆ ಎಲ್ಲ ರೋಗಿಗಳಿಗೂ ಬೇಕಾಗುವುದಿಲ್ಲ. ಕೆಳಗೆ ಈ ಖಾಯಿಲೆ ಚಿಕಿತ್ಸಾಕ್ರಮದ ಸಲಹೆಗೆ ಬೇಕಾಗಬಹುದಾದ ವಿಭಾಗದ ವೈದ್ಯರುಗಳನ್ನು ಸೂಚಿಸಿದೆ.



ಮಗುವನ್ನು ಈ ಖಾಯಿಲೆಯ ಸಂಬಂಧ ಅನುಮಾನ ಬಂದ ಕೂಡಲೇ ಮಕ್ಕಳ ತಜ್ಞರಿಗೆ ತೋರಿಸಬೇಕು. ಮಕ್ಕಳ ವೈದ್ಯರು ಮಗುವನ್ನು ಪರೀಕ್ಷಿಸಿ ಅದಕ್ಕೆ ಇರುವ ತೊಂದರೆಗಳನ್ನು ಗುರುತಿಸುತ್ತಾರೆ. ಅನಂತರ ಅವರೇ ಕೆಲವು ತೊಂದರೆಗಳಿಗೆ ಸಲಹೆ ನೀಡಿ ಉಳಿದವುಗಳಿಗೆ ಯುಕ್ತ ತಜ್ಞರನ್ನು ಸೂಚಿಸುತ್ತಾರೆ. ಹೀಗೆ ಮಗುವಿಗೆ ಈ ಹಲವು ಸಲಹೆಗಳನ್ನೊಳಗೊಂಡ ಸಮಭಾವದ ಚಿಕಿತ್ಸೆ ಲಭಿಸುತ್ತದೆ.

ದೈಹಿಕ ಚಿಕಿತ್ಸೆ : (ಫಿಸಿಯೊಥೆರಪಿ)

ನಿಗಧಿತ, ಕ್ರಮಬದ್ಧ ವ್ಯಾಯಾಮಗಳಿಂದ ಸ್ನಾಯುಗಳ ಸ್ಥಿತಿಯನ್ನು ಸರಿಪಡಿಸಿ ಕೈಕಾಲುಗಳ ಉಪಯೋಗವನ್ನು ಹೆಚ್ಚಿಸುವ ಚಿಕಿತ್ಸಾ ಕ್ರಮ ವಿದು. ಖಾಯಿಲೆಯ ಒಂದು ಅತಿಮುಖ್ಯವಾದ ಚಿಕಿತ್ಸಾಕ್ರಮವೂ ಹೌದು. ನರದೌರ್ಬಲ್ಯದಿಂದ ಸ್ನಾಯುಗಳ ನಿಷ್ಕ್ರಿಯತೆ ಇರುತ್ತದಾದ್ದರಿಂದ, ಯಾವವಿಧವಾದ ಟಾನಿಕ್ಕೂ ಈ ದೌರ್ಬಲ್ಯವನ್ನು ಗುಣಪಡಿಸುವುದಿಲ್ಲ. ದೈಹಿಕ ಚಿಕಿತ್ಸೆಯನ್ನು ಖಾಯಿಲೆಯ ಆದಿಹಂತದಲ್ಲೇ ಪ್ರಾರಂಭಿಸಬೇಕು. ಮಗುವು ೬-೮ ವರ್ಷದ ತನಕವೂ ನಡೆಯದೇ ಇದ್ದರೆ, ಮುಂದೆ ನಡೆಯುವುದು ಅಸಂಭವ. ದೈಹಿಕ ಚಿಕಿತ್ಸೆಯನ್ನು ಆರಂಭದಲ್ಲಿ ಹಲವುದಿನ ತಜ್ಞರಲ್ಲಿ ಕಲಿತುಕೊಂಡು ಅನಂತರ ಮನೆಯಲ್ಲೇ ಮಾಡಿಸಬಹುದು.

ಕಸುಬು ಚಿಕಿತ್ಸೆ :(ಆಕ್ಯುಪೇಶನಲ್ ಥೆರಪಿ)

ಖಾಯಿಲೆ ಇರುವ ಹಲವು ಮಕ್ಕಳಿಗೆ ಆಹಾರಸೇವನೆ, ನುಂಗುವ ಕ್ರಿಯೆ, ಉಡುಪು ಧರಿಸುವುದು, ಮಲವಿಸರ್ಜನೆ ಮುಂತಾದ ದೈನಂದಿನ ಕಾರ್ಯಗಳು ಕಷ್ಟಕರವಾಗಿರುತ್ತದೆ.

ಕಸಬು ಚಿಕಿತ್ಸಾಕ್ರಮದಿಂದ ಈ ಕ್ರಿಯೆಗಳನ್ನು ಕ್ರಮೇಣವಾಗಿ ಕಲಿಸಬಹುದು.

ಔಷಧೋಪಚಾರಗಳು :

ಯಾವ ತರಹದ ಔಷಧಿಯಿಂದಲೂ ಅಥವಾ ಟಾನಿಕ್‌ನಿಂದಲೂ ಈ ಮಿದುಳುಲಕ್ವಾಪೀಡಿತರು ಗುಣವಾಗುವುದಿಲ್ಲವೆಂಬುದನ್ನು ತಿಳಿಯಬೇಕು. ಆದರೆ ಇದರ ಜೊತೆ ಕಾಣಬರುವ ಹಲವು ತೊಂದರೆಗಳನ್ನು ಔಷಧಿಗಳಿಂದ ನಿವಾರಿಸಬಹುದು.

೧. ಸೆಳವು: ಸೆಳವನ್ನು ಆದಷ್ಟು ಮಟ್ಟಿಗೂ ಮತ್ತೆ ಬರದಿರುವಂತೆ ತಡೆಗಟ್ಟುವುದು ಅವಶ್ಯ. ಅದಕ್ಕಾಗಿ ಸೆಳವು ನಿಲ್ಲುವ ಗುಳಿಗೆಗಳು ಮತ್ತು ದ್ರವಔಷಧಿಗಳು ದೊರೆಯುತ್ತವೆ. ಉದಾ. ಫೀನೋಬಾರ್‌ಬಿಟೋನ್, ಕಾರ್ಬಮಸೆಪೀನ್, ಸೋಡಿಯಮ್ ವ್ಯಾಲ್‌ಪ್ರೊಯೇಟ್ ಇತ್ಯಾದಿ. ಮಕ್ಕಳ ವೈದ್ಯರ ಸಲಹೆ ಮೇರೆಗೆ ಮಗುವಿಗೆ ಕೊಡಬೇಕು.

೨. ಮಲವಿಸರ್ಜನೆ : ಈ ಕಾಯಿಲೆಯ ಮಕ್ಕಳಿಗೆ ಪ್ರತಿದಿನ ಮಲವಿಸರ್ಜನೆ ಆಗುವುದು ಕಷ್ಟ. ಇದರ ನಿವಾರಣೆಗೆ ದೈನಂದಿನ ಆಹಾರದಲ್ಲಿ ಹಸುರುತರಕಾರಿ, ಟೊಮೇಟೋ ಮೂಲಂಗಿ, ಹಣ್ಣುಗಳನ್ನು ಉಪಯೋಗ ಮಾಡುವುದು ಒಳ್ಳೆಯದು. ಹಾಗೂ ಸರಿಯಾಗದಿದ್ದಲ್ಲಿ ಪಾರಾಫಿನ್ ದ್ರವ, ಡಲ್‌ಕೋಲಾಕ್ಸ್‌ಗಳನ್ನು ಮಿತಿಯಾಗಿ ಉಪಯೋಗಿಸಬಹುದು.

೩. ಸೆಟೆದ ಸ್ನಾಯುಗಳು : ಸ್ನಾಯುಗಳ ಅತಿಸೆಟೆತ ಕಡಿಮೆಮಾಡಲು ಬೆಕ್ಲೋಫೆನ್, ಡಾಂಟ್ರೋಲಿನ್ ಇತ್ಯಾದಿ ಔಷಧಗಳು ದೊರೆಯುತ್ತವೆ. ಮಿತವಾಗಿ ಉಪಯೋಗಿಸಬಹುದು. ಇತ್ತೀಚೆಗೆ ಬಾಟುಲಿನಮ್ ಟಾಕ್ಸಿನ್ ಎಂಬ ದ್ರವವನ್ನು ಸ್ನಾಯುವಿಗೆ ಚುಚ್ಚುಮದ್ದು ರೂಪದಲ್ಲಿ ಕೊಟ್ಟು ಸೆಟೆತ ಕಡಿಮೆಮಾಡುವ ಸಾಧನೆ ಪ್ರಯೋಗಾವಸ್ಥೆಯಲ್ಲಿದೆ.

೪. ಈ ಮಕ್ಕಳಲ್ಲಿ ಹಲವರಿಗೆ ಅತಿಯಾಗಿ ಜೊಲ್ಲು ಸೋರುವುದುಂಟು. ಇದಕ್ಕಾಗಿ ಕೆಲವು ಔಷಧಿಗಳಿದ್ದರೂ, ಅವುಗಳ ಅವ್ಯಾಹತ ಉಪಯೋಗ ಅಷ್ಟು ಸಮರ್ಪಕವೆನಿಸಿಲ್ಲ.

ಹಲವು ವೈದ್ಯರು ''ಮಿದುಳು ಟಾನಿಕ್'' ಎಂದೆನಿಸಿಕೊಳ್ಳುವ ಔಷಧಗಳ ಉಪಯೋಗದ ಸಲಹೆಕೊಡುವುದುಂಟು. ಇದರ ಉಪಯೋಗಕ್ಕೆ ಯಾವುದೇ ಸಂಶೋಧನೆಯ ನಿರ್ದಿಷ್ಟ ಆಧಾರವಿಲ್ಲ.

ಮಗುವಿಗೆ ೫-೬ ವರ್ಷಗಳು ತುಂಬಿದ ನಂತರ ಅವನ ಶಾಲಾಶಿಕ್ಷಣದ ಬಗ್ಗೆ ಗಮನ ಹರಿಸಬೇಕು. ಮಿದುಳುಲಕ್ವದ ಒಂದೇ ದೌರ್ಬಲ್ಯವಿದ್ದು, ಇದರ ಜೊತೆಗೆ ಕಾಣುವ ಬೇರೆ ತೊಂದರೆಗಳಿಲ್ಲದಿದ್ದರೆ ಈ ಮಕ್ಕಳನ್ನು ಸಾಮಾನ್ಯ ಪಾಠಶಾಲೆಗಳಿಗೆ ಶಿಕ್ಷಣಕ್ಕೆ ಕಳಿಸಬಹುದು. ಇನ್ನೂ ಇತರ ತೊಂದರೆಗಳಿದ್ದ ಪಕ್ಷದಲ್ಲಿ ಅಂಥ ಮಕ್ಕಳಿಗೆ ವಿಶೇಷ ಶಿಕ್ಷಣ ಶಾಲೆಗಳ ಆವಶ್ಯಕತೆ ಇರುತ್ತದೆ.

ಇಂಥ ಮಕ್ಕಳ ಚಿಕಿತ್ಸೆ ಶೀಘ್ರಫಲ ಕೊಡುವುದಿಲ್ಲ. ಬಹಳ ನಿಧಾನವಾಗಿ ಫಲಕಾರಿಯಾಗುವಂಥದು. ಆದ್ದರಿಂದ ಪೋಷಕರಿಗೆ ಅತ್ಯಂತ ಸಹನೆ, ಸಂಯಮ, ಆಸಕ್ತಿ ಇರಬೇಕಾದುದು ಬಹಳ ಅವಶ್ಯ.

ಈ ಕಾಯಿಲೆಗೆ ಚಿಕಿತ್ಸಾ ಸಲಹೆ ದೊರೆಯುವ ಕೆಲವು ಸ್ಥಳಗಳು

೧. ಮೆಡಿಕಲ್ ಕಾಲೇಜಿನ ಆಸ್ಪತ್ರೆಗಳು

೨. ನಿಮ್‌ಹಾನ್ಸ್, ಬೆಂಗಳೂರು

೩. ಜಿಲ್ಲಾ ಪುನಃಸ್ಥಾಪನೆ ಕೇಂದ್ರ (ಡಿಸ್ಟ್ರಿಕ್ ರೀಹ್ಯಾಬಿಟೇಶನ್ ಸೆಂಟರ್), ಪುಲಿಕೇಶಿ ರಸ್ತೆ ತಿಲಕ್‌ನಗರ, ಮೈಸೂರು

೪. ಮಿಶನ್ ಆಸ್ಪತ್ರೆ, ಮೈಸೂರು

೫. ರಾಷ್ಟ್ರೀಯ ವಾಕ್‌ಶ್ರವಣ ಸಂಸ್ಥೆ, ಮೈಸೂರು

೬. ಸ್ಪಾಸ್ಟಿಕ್ ಸೊಸೈಟಿ, ಇಂದಿರಾನಗರ, ಬೆಂಗಳೂರು

೭. ಬೆಂಗಳೂರು ಮಕ್ಕಳ ಆಸ್ಪತ್ರೆ ಮತ್ತು ಸಂಶೋಧನಾಕೇಂದ್ರ, ನಂ೬, ಚಿತ್ರಾಪುರಭವನ, ೮ನೇ ಮುಖ್ಯರಸ್ತೆ, ೧೫ನೇ ಅಡ್ಡರಸ್ತೆ, ಮಲ್ಲೇಶ್ವರಮ್(ಪಶ್ಚಿಮ), ಬೆಂಗಳೂರು.

ಪವಾಡಗಳನ್ನು ನಂಬಬೇಕೆ ?

ಮುಳಿಯ ಸರಸ್ವತೀ
ನಂ.೪, ''ಸ್ವರ್ಣ ವಿಲಾಸ''
೯೨೬,೧ನೇ ಮುಖ್ಯರಸ್ತೆ
ಲಕ್ಷ್ಮೀಪುರಂ, ಮೈಸೂರು-೫೭೦ ೦೦೪.

ನಿಸರ್ಗದಲ್ಲಿ ಪವಾಡಗಳು ___ ಅಂದರೆ ಕಾರ್ಯ-ಕಾರಣ ಸಂಬಂಧ ವಿರದ ಘಟನೆಗಳು___ಸಂಭವಿಸುವುದಿಲ್ಲ. ಕಾರಣ ತಿಳಿಯದಾಗ ಅಥವಾ ಕಾರ್ಯ ಗೋಚರಿಸದಾಗ ಮಾನವನ ಮೂಢಮತಿ ಅಲ್ಲಿ ಪವಾಡಗಳನ್ನು ಸೃಷ್ಟಿಸಿ ತೃಪ್ತಿಪಡುತ್ತದೆ.

ಒಂದು ದಶಕದ ಹಿಂದೆ ಬರ್ನಾಡೆಟ್ ಮ್ಯಾಕೆನ್ಸೀ ಎಂಬ ೧೨ ವರ್ಷ ಪ್ರಾಯದ ಬಾಲೆಗೆ ನೆಟ್ಟಗೆ ನಿಲ್ಲಲೂ ಆಗುತ್ತಿರಲಿಲ್ಲ. ತೀರ ಅಪರೂಪದ ಬೆನ್ನೆಲುಬಿನ ರೋಗದಿಂದ ನರಳುತ್ತಿದ್ದ ಅವಳು ನಿರಂತರವಾಗಿ ನೋವನ್ನು ಅನುಭವಿಸುತ್ತಿದ್ದಳು. ಮೂರು ಬಾರಿ ಶಸ್ತ್ರಚಿಕಿತ್ಸೆ ಮಾಡಿದನಂತರವೂ ಅವಳಿಗೆ ನಿಂತುಕೊಳ್ಳಲು ಸಾಧ್ಯವಾಗುತ್ತಿರಲಿಲ್ಲ. ಆಗ ಅಮೆರಿಕದ ಫಿಲಡೆಲ್ಫಿಯಾ ರಾಜ್ಯದಲ್ಲಿರುವ ಅವಳ ಶಾಲೆಯ ಸನ್ಯಾಸಿನಿಯರು, ಅವರ ಸಂಸ್ಥೆಯ ಸಂಸ್ಥಾಪಕಿಯಾಗಿದ್ದ ದಿವಂಗತ ಮಾತೆ ಫ್ರಾನ್ಸೆಸ್ ಡಿ ಸೇಲ್ಸ್ ಆವಿಯಾಟ್ ಅವರನ್ನು ಬರ್ನಾಡೆಟ್ ಗುಣಮುಖಳಾಗ ಬೇಕೆಂದು ಅವಳ ಪರವಾಗಿ ಭಗವಂತನಲ್ಲಿ ಮಧ್ಯಸ್ಥಿಕೆ ವಹಿಸಲು ಪ್ರಾರ್ಥಿಸಲಾರಂಭಿಸಿದರು. ಮಾತೆ ಫ್ರಾನ್ಸೆಸ್ ಒಬ್ಬ ಸಂತಳೆಂದು ಅವರು ದೃಢವಾಗಿ ನಂಬಿದ್ದರು.

ಅದಾದ ನಾಲ್ಕನೆಯ ದಿನ ಮ್ಯಾಕೆನ್ಸೀ ತನ್ನ ಹಾಸಿಗೆಯ ಬದಿಯಲ್ಲಿ ಮೊಣಕಾಲೂರಿ ''ದೇವರೇ, ನಾನು ಯಾವಜ್ಜೀವವೂ ಹೀಗೆಯೇ ಇರಬೇಕೆಂದು ನಿನ್ನ ಇಚ್ಛೆಯಾದರೆ, ಹಾಗೆಯೇ ಆಗಲಿ. ಆದರೆ ನಾನು ಮತ್ತೆ ಎಲ್ಲರಂತೆ ನೆಟ್ಟಗೆ ನಡೆಯತೊಡಗುತ್ತೇನೆ ಎಂದಾದರೆ ರೇಡಿಯೋದಲ್ಲಿ ಬರುವ ಮುಂದಿನ ಹಾಡು ನನ್ನ ಪ್ರೀತಿಯ 'ಚಿರಯೌವ್ವನ' ಆಗಿರಲಿ'' ಎಂದು ಪರಮಾತ್ಮನನ್ನು ಪ್ರಾರ್ಥಿಸಿದಳು. ಏನಾಶ್ಚರ್ಯ! ರೇಡಿಯೋದಲ್ಲಿ ಬಿತ್ತರಿಸಲ್ಪಟ್ಟ ಮುಂದಿನ ಹಾಡು ಅದೇ ಆಗಿತ್ತು! ಅವಳ ಆನಂದಕ್ಕೆ ಪಾರವಿರಲಿಲ್ಲ. ಕೂಡಲೇ ಜಿಗಿದೆದ್ದು ತನ್ನ ಮನೆಯವರಿಗೆ ಈ ಸುದ್ದಿ ತಿಳಿಸಲು ಓಡಿದಳು. ಅವಳ ಬೆನ್ನು ನೋವು ಸಂಪೂರ್ಣ ಮಾಯವಾಗಿತ್ತು. ವೈದ್ಯರು ಇದೊಂದು ಪವಾಡವೇ ಸರಿ ಎಂದಿದ್ದಾರೆ. ವೈದ್ಯಕೀಯವಾಗಿ ಇದನ್ನು ವಿವರಿಸಲು ಅಸಾಧ್ಯವಾಗಿತ್ತು. 'ವ್ಯಾಟಿಕನ್' ಮೂಲಗಳು ಇದೊಂದು ಪವಾಡ ಹೌದೇ ಅಲ್ಲವೇ ಎಂದು ನಿರ್ಣಯಿಸಲು ಉದ್ಯುಕ್ತರಾಗಿದ್ದಾರೆ.

ದೇವರು ಪ್ರಾರ್ಥನೆಗಳಿಗೆ ನಿಜವಾಗಿಯೂ ಓಗೊಡುತ್ತಾನೆಯೇ? ಅಲ್ಲ, ಇಂಥ ನಿದರ್ಶನಗಳು ಕೇವಲ ಕಾಕತಾಳೀಯವೇ ? ಇತ್ತೀಚೆಗೆ ಈ ವಿಷಯದಲ್ಲಿ 'ನ್ಯೂಸ್ ವೀಕ್' ಪತ್ರಿಕೆಯು ನಡೆಸಿದ ಮತಗಣನೆಯ ಪ್ರಕಾರ ೮೪ ಪ್ರತಿಶತ ಅಮೆರಿಕನ್ನರು ದೇವರು ಪವಾಡಗಳನ್ನೆಸಗುತ್ತಾನೆ ಎಂದು ನಂಬುತ್ತಾರೆ; ೪೮ ಪ್ರತಿಶತ ಜನರು ತಾವು ಸ್ವತಃ ಪವಾಡಗಳನ್ನು ಅನುಭವಿಸಿದ್ದಾಗಿ ಅಥವಾ ಕಂಡದ್ದಾಗಿ ಹೇಳುತ್ತಾರೆ.

ಅಮೆರಿಕದ ಕ್ಯಾಥೋಲಿಕರಲ್ಲಿ ಮುಕ್ಕಾಲು ಪಾಲು ಜನರು, ಇವ್ಯಾಂಜೆಲಿಕಲ್ ಪಂಥದವರಲ್ಲಿ ಪ್ರತಿಶತ ೮೧ ಪ್ರೊಟೆಸ್ಟೆಂಟ್ ಪಂಥದವರಲ್ಲಿ ಪ್ರತಿಶತ ೫೪, ಮತ್ತು ಕ್ರಿಶ್ಚಿಯನ್ ಹಾಗೂ ಯಾವುದೇ ಕೋಮಿಗೆ ಸೇರದವರಲ್ಲಿ ಪ್ರತಿಶತ ೪೩ ಮಂದಿ ತಾವು

ನವೆಂಬರ್ ೨೦೦೦ದ 'ರೀಡರ್ಸ್ ಡೈಜೆಸ್ಟ್'ನಲ್ಲಿ ಪ್ರಕಟವಾದ ಕೆನ್ನೆತ್ ಎಲ್. ವುಡ್‌ವರ್ಡ್ ಅವರ 'ಶುಡ್ ವಿ ಬಿಲೀವ್ ಇನ್ ಮಿರಕಲ್ಸ್?' ಎನ್ನುವ ಲೇಖನದ ಭಾಷಾಂತರ

ಜೀವನದಲ್ಲಿ ಒಮ್ಮೆಯಾದರೂ ಪವಾಡಕ್ಕಾಗಿ ಭಗವಂತನನ್ನು ಬೇಡಿಕೊಂಡದ್ದುಂಟು ಎನ್ನುತ್ತಾರೆ. ಹೆಚ್ಚಿನವರು ತಮ್ಮ ಪ್ರೀತಿಪಾತ್ರರಲ್ಲಿ ಯಾರಾದರೂ ತೀವ್ರ ಅಸ್ವಸ್ಥರಾಗಿದ್ದಾಗ ಅವರು ಗುಣಮುಖರಾಗಲು ಪ್ರಾರ್ಥಿಸಿಕೊಂಡವರು. ವ್ಯಾಟಿಕನ್ ಮಾತ್ರವಲ್ಲ ಒಂದು ಇಸ್ಲಾಮೀ ಪಂಥವೂ ವೈದ್ಯಶಾಸ್ತ್ರಕ್ಕೆ ಸವಾಲಿಕ್ಕಿದಂತಹ ರೋಗೋಪಶಮನದ ವರದಿಗಳ ನೈಜತೆಯನ್ನು ದೃಢೀಕರಿಸುವಂಥ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ.

ಆದರೆ ಪವಾಡಗಳಲ್ಲಿ ನಂಬಿಕೆಯಿರುವವರಿಗೆ ಮುಖ್ಯವಾದುದು ಪವಾಡಗಳ ಸತ್ಯಾಸತ್ಯತೆಯಲ್ಲ ; ಬದಲಾಗಿ ಅವುಗಳ ಮೇಲಿನ ಶ್ರದ್ಧೆ. ಜಗತ್ತಿನ ಎಲ್ಲ ಐದು ಮುಖ್ಯ ಧರ್ಮಗಳಲ್ಲಿ ಪವಾಡಗಳ ಉಲ್ಲೇಖಗಳಿವೆ. ಇಂದಿಗೂ ನಂಬಲಾಗದುದನ್ನು ನಮ್ಮಲ್ಲಿ ಹೆಚ್ಚಿನವರು ಯಾಕೆ ನಂಬುತ್ತಾರೆ ಎನ್ನುವುದಕ್ಕೆ ವಿವರಣೆ ಪ್ರತಿಯೊಂದು ಧರ್ಮದ ಇತಿಹಾಸದಲ್ಲಿರುವುದನ್ನು ಕಾಣಬಹುದು.

೧೯೯೯ರ ಮೇ ತಿಂಗಳಲ್ಲಿ, ೧೫ ವರ್ಷ ವಯಸ್ಸಿನ ಬಾಲಕ, ಟೈಲರ್ ಕ್ಲಾರೆನ್ಸೋ, ದೇವರ ಕೃಪೆಯ ಮೂಲಕ ತನ್ನ ನೋವನ್ನು ಉಪಶಮನಗೊಳಿಸಿಕೊಳ್ಳಲೋಸ್ಕರ, ಅಮೆರಿಕದ ಸ್ಪ್ರಿಂಗ್ ಫೀಲ್ಡ್‌ನಲ್ಲಿರುವ ಚರ್ಚಿನಲ್ಲಿ ದೈವಸ್ಥಾನದೆಡೆಗೆ ಕಾಲೆಳೆಯುತ್ತಾ ಬಂದ. ಅವನ ಮೊಣಕಾಲಿನ ಗಂಟುಗಳು ಬಾತುಕೊಂಡು ತುಂಬ ನೋಯುತ್ತಿದ್ದುವು. ಶಸ್ತ್ರಕ್ರಿಯೆಯಿಂದಲೂ ಯಾವುದೇ ಪರಿಣಾಮ 'ಕಂಡು ಬಂದಿರಲಿಲ್ಲ. ಅವನನ್ನು ಸುತ್ತುಗಟ್ಟಿ ನಾಲ್ವತ್ತು ಜನ ಬಾಲಕರು ಭಗವಂತನನ್ನು ಪ್ರಾರ್ಥಿಸತೊಡಗಿದರು. ನಿಧಾನವಾಗಿ ಅಲ್ಲಿ ನೆರೆದಿದ್ದವರೆಲ್ಲರೂ ಪ್ರಾರ್ಥನೆಯಲ್ಲಿ ಸೇರಿಕೊಂಡರು.

ಸುಮಾರು ಮುಕ್ಕಾಲು ಗಂಟೆಯ ಬಳಿಕ ಪ್ರಾರ್ಥನೆ ನಿಂತು, ಶಾಂತಿ ನೆಲೆಸಿತು. ಚರ್ಚಿನ ಸ್ವಯಂಸೇವಕನೊಬ್ಬ ಪರಮಾತ್ಮನು ಟೈಲರ್‌ನನ್ನು ಗುಣಪಡಿಸಿದ್ದಾನೆ ಎಂದು ಘೋಷಿಸಿದ. ಕ್ಲಾರೆನ್ಸೋ ನಡುಗುತ್ತಾ ಮೆಲ್ಲನೆ ಎದ್ದು ನಿಂತ. ಮಡಚಿದ್ದ ಮೊಣಕಾಲುಗಳು ಅವನಿಗರಿವಿಲ್ಲದಂತೆಯೇ ನೀಟಾದುವು. ಅವನು ತನ್ನ ಕಾಲುಗಳನ್ನು ಅಷ್ಟು ಚೆನ್ನಾಗಿ ಮಡಚಿ ತೆಗೆಯುವುದು ಮಾಡಿ ಹಲವು ವರ್ಷಗಳು ಕಳೆದಿದ್ದುವು! ಈಗ ಅವನು ಓಡಲೂ ಬಲ್ಲ. ''ನಾನು ಕೂಡಾ ರೋಗಿಗಳು ಪವಾಡದಿಂದ ಗುಣಮುಖರಾಗುವುದನ್ನು ಕೇಳಿದ್ದೆ. ಅದು ಬರೀ ತಮಾಷೆ ಎಂದು ಅಂದು ಕೊಂಡಿದ್ದೆ. ಆದರೆ ನನಗೇ ಆ ರೀತಿ ಆಗುವವರೆಗೆ ಪವಾಡಗಳಲ್ಲಿ ಸಂಪೂರ್ಣ ನಂಬಿಕೆ ಇರಲಿಲ್ಲ'' ಎನ್ನುತ್ತಾನೆ ಕ್ಲಾರೆನ್ಸೋ.

ನಾಸ್ತಿಕರನ್ನು ಆಸ್ತಿಕರನ್ನಾಗಿ ಪರಿವರ್ತಿಸಲು ಅಥವಾ ಆಸ್ತಿಕರಿಗೆ ಅವನಲ್ಲಿರುವ ನಂಬಿಕೆಯನ್ನು ದೃಢಪಡಿಸುವುದಕ್ಕಾಗಿ ಏಸು ಕ್ರಿಸ್ತನು ಪವಾಡಗಳನ್ನೆಸಗಿದ್ದರ ಹಲವು ಉಲ್ಲೇಖಗಳು ಬೈಬಲ್ಲಿನಲ್ಲಿವೆ. ರೋಗಿಗಳನ್ನು ರೋಗಮುಕ್ತರನ್ನಾಗಿ ಮಾಡುವುದು ಕ್ರಿಶ್ಚಿಯನ್ನರ ಪವಾಡಗಳ ಮೂಲರೂಪ. ಮರಣ ಹೊಂದಿದ 'ಲಾಜರಸ್'ನನ್ನು ಬದುಕಿಸಿದ ಪವಾಡ ಏಸು ಕ್ರಿಸ್ತನು 'ಸಾವಿ'ನ ಮೇಲೆ ವಿಜಯವನ್ನು ಸಾಧಿಸಿದ್ದು ಮಾತ್ರವಲ್ಲ ಮುಂದೆ ಸ್ವಯಂ ತಾನೇ ಪುನರುಜ್ಜೀವನ ಹೊಂದುವುದರ ಮುನ್ಸೂಚನೆಯಾಗಿತ್ತು.

ಕ್ರಿಸ್ತಶಕದ ಮೊದಲ ಶತಮಾನಗಳಲ್ಲಿ ಕ್ರಿಸ್ತನ ಹೆಸರಲ್ಲಿ ಮರಣ ಹೊಂದಿದವರನ್ನು ಪರಮಾತ್ಮನೊಂದಿಗೆ ಮಧ್ಯಸ್ಥಿಕೆವಹಿಸುವವರೆಂದು ಪರಿಗಣಿಸಲಾಗುತ್ತಿತ್ತು. ಅಂಥ 'ದೇವಮಿತ್ರ'ರ ಸ್ಮಾರಕವಸ್ತುಗಳು ಕೂಡಾ ಆಸ್ತಿಕರ ಪ್ರಾರ್ಥನೆಗಳನ್ನು ಭಗವಂತನಿಗೆ ತಲುಪಿಸುವ ಸಾಧನಗಳು ಎಂದು ನಂಬಲಾಗುತ್ತಿತ್ತು. ಈ ರೀತಿಯ 'ಮಧ್ಯಸ್ಥಿಕೆ ಪವಾಡ'ಗಳನ್ನು ಮಾಡಿದವರು ಮಾತ್ರ ಮರಣಾನಂತರ

ಸಂತಪದವಿಗೆ ಅರ್ಹರಾಗುತ್ತಿದ್ದರು.

ಪ್ರೊಟೆಸ್ಟೆಂಟ್ ಸುಧಾರಕರ ಮುಂದಾಳುಗಳು ಕ್ಯಾಥೋಲಿಕರ 'ಸಂತಪಂಥ' ವನ್ನು ಮಾನ್ಯ ಮಾಡುತ್ತಿರಲಿಲ್ಲ. ಆದರೂ ಆಸ್ತಿಕರಿಗೆ ಭಗವಂತನು ವಿಶೇಷವಾದ ಒಲವನ್ನು ತೋರಿಸುತ್ತಾನೆ ಎಂದು-ಅರ್ಥಾತ್ ಪವಾಡಗಳನ್ನು-ಹಲವಾರು ಪ್ರೊಟೆಸ್ಟೆಂಟರು ನಂಬುತ್ತಾರೆ. ಯೇಸು ಕ್ರಿಸ್ತನು ತಮ್ಮಲ್ಲಿ ಹಾಗೂ ತಮ್ಮ ಮೂಲಕ ಪವಾಡಗಳನ್ನೆಸಗುತ್ತಾನೆ ಎಂದು ನಂಬುವವರು ಇನ್ನು ಕೆಲವರು.

ಶೋಶನಾ ಲೆವಿನ್ ಅವಳ ತಾಯಿ ಕರುಳಿನ ಕ್ಯಾನ್ಸರ್‌ನಿಂದ ಪೀಡಿತಳಾಗಿದ್ದಾಳೆ ಎಂದು ೧೯೯೨ರಲ್ಲಿ ತಿಳಿದು ಬಂತು. ಆಗ ಲೆವಿನ್, ರ‍್ಯಾಬಿ (ಯೆಹೂದ್ಯರ ಧರ್ಮಪ್ರಭು) ಮೆನಾಕೆಮ್ ಮೆಂಡೆಲ್ ಶ್ನೀಯರ್‌ಸನ್ ರವರಲ್ಲಿಗೆ, ಅವರ ಆಶೀರ್ವಾದ ಪಡೆಯಲು ಒಂದು ಪರಿಚಯಪತ್ರದೊಡನೆ ಹೋದಳು. ಅವಳನ್ನು ಅಪರಾಹ್ನದ ವೇಳೆಗೆ ಮರಳಿ ಬರಲು ಹೇಳಲಾಯಿತು. ಈ ಮಧ್ಯಾಂತರ ವೇಳೆಯಲ್ಲಿ ಅವಳು ಮತ್ತು ಅವಳ ಕುಟುಂಬದವರು ಪುಣ್ಯಕೆಲಸಗಳನ್ನು ಮಾಡಬೇಕು ಹಾಗೂ ದೇವಾಲಯದಲ್ಲಿ ದೀಪಗಳನ್ನು ಬೆಳಗಬೇಕು ಎಂದೂ ಹೇಳಲಾಯಿತು.

ಅವರು ಹಾಗೆಯೇ ಮಾಡಿದರು. ರ‍್ಯಾಬಿ ಕೂಡ ಅವಳನ್ನು ಆಶೀರ್ವದಿಸಿದರು. ಮೂರು ದಿನಗಳ ತರುವಾಯ ಮಾಡಿದ 'ಬಯಾಪ್ಸಿ' ಪರೀಕ್ಷೆಯಲ್ಲಿ ಕ್ಯಾನ್ಸರಿನ ಚಿಹ್ನೆಯೇ ಇರಲಿಲ್ಲ! ಅಚ್ಚರಿಗೊಂಡ ವೈದ್ಯರ ಮುಖದಿಂದ ''ಯಾರೋ ಪುಣ್ಯಾತ್ಮರ ಪ್ರಾರ್ಥನೆ ಫಲಿಸಿದೆ'' ಎಂಬ ಉದ್ಗಾರ ಹೊರಟಿತು!

ಅಮೆರಿಕದಲ್ಲಿರುವ ಪ್ರಮುಖ ಧಾರ್ಮಿಕ ಪಂಥಗಳಲ್ಲಿ ನಡೆಸಿದ ಸರ್ವೇಕ್ಷಣೆಯ ಪ್ರಕಾರ, ಪವಾಡಗಳಲ್ಲಿ ಕನಿಷ್ಠ ನಂಬಿಕೆ ಇರುವುದು ಯಹೂದ್ಯರಿಗೆ ಎಂದು ಕಂಡುಬಂದಿದೆ. ಆದರೂ ಈಜಿಪ್ಟ್ ದೇಶದಲ್ಲಿ ಗುಲಾಮಗಿರಿಯಲ್ಲಿದ್ದ ಇಸ್ರೇಲಿಗಳನ್ನು (ಯಹೂದ್ಯರನ್ನು) ಪವಾಡಸದೃಶವಾಗಿ ಬಂಧನದಿಂದ ಪರಮಾತ್ಮನು ವಿಮೋಚನೆ ಮಾಡಿದ್ದು ಯಹೂದಿ ಧರ್ಮದ ಬುನಾದಿಯ ನಂಬಿಕೆ ಎಂದರೆ ತಪ್ಪಲ್ಲ. ಅಷ್ಟೇ ಏಕೆ? ಈ ಜಗತ್ತಿನಲ್ಲಿ ಹುಟ್ಟಿ ಬರುವುದೇ ಒಂದು ಪವಾಡ ಎಂದು ಕಟ್ಟಾ ಯಹೂದ್ಯರು ನಂಬುತ್ತಾರೆ.

ಇಸ್ರೇಲಿನಲ್ಲಿ ಮತ್ತು ಬೇರೆ ಕೆಲವು ಯಹೂದಿಜನಾಂಗಗಳಲ್ಲಿ, ಅವರ ಆಧ್ಯಾತ್ಮಿಕ ಗುರುಗಳನ್ನು ಸಂತರೆಂದೇ ಪರಿಗಣಿಸುತ್ತಾರೆ. ಯಾವುದೇ ಒಂದು ಕಾಯಿಲೆ ಅಥವಾ ಇನ್ನಿತರ ದುರದೃಷ್ಟಕರ ಘಟನೆ ಭಗವಂತನ ಇಚ್ಛೆಯಿಂದಲೇ ಉಂಟಾಗಿದೆ ಎಂದು ಅವರಿಗೆ ಅರಿವಾಗಿದ್ದರೆ, ಅಂಥ ಗುರುಗಳು ಪರಮಾತ್ಮನನ್ನು ಪ್ರಾರ್ಥಿಸಿ, ಅವನ ಮನವೊಲಿಸಿ ಕಾಯಿಲೆಯನ್ನು ಗುಣಪಡಿಸಲು ಶಕ್ತರಾಗಿರುತ್ತಾರೆ ಎಂದು ಆಸ್ತಿಕರು ನಂಬುತ್ತಾರೆ. ಹೆಚ್ಚಾಗಿ ಆ ಗುರುಗಳು ಪರಮಾತ್ಮನನ್ನು ಒಲಿಸಿಕೊಳ್ಳುವ ವಿಧಾನವನ್ನು ತಮ್ಮ ಅನುಯಾಯಿಗಳಿಗೆ ಹೇಳಿಕೊಡುತ್ತಾರೆ. ರ‍್ಯಾಬಿ ಶ್ನೀಯರ್‌ಸನ್ ೧೯೯೪ರಲ್ಲಿ ತೀರಿಕೊಂಡರೂ ಅವರ ಕಛೇರಿ ಹಾಗೂ ಸಮಾಧಿಗೆ ದಿನಾಲೂ ಆಶೀರ್ವಾದಕ್ಕೆಂದು ಸಾವಿರಾರು ಭಕ್ತರು ಬರುತ್ತಾರೆ.

ಸೂಫಿ ಸಂತ, ಹಿಶಾಮ್ ಮಹಮ್ಮದ್ ಕಬ್ಬಾನಿಯು, ಮಹಮ್ಮದ್ ಪೈಗಂಬರನೊಂದಿಗೆ ತನಗೆ ನೇರ ಸಂಬಂಧವಿದೆ ಎಂದು ಪ್ರತಿಪಾದಿಸುವ ಇಸ್ಲಾಮಿನ ನಕ್ಷಬಂದಿ ಪಂಥದ ಮುಖ್ಯಸ್ಥ. ೧೯೯೧ರಲ್ಲಿ ಈ ಪಂಥದ ಧರ್ಮಗುರು ಶೇಖ್ ಮಹಮ್ಮದ ನಾಜೀಮ್ ಅಲ್-ಹಕ್ಕಾನಿ ಲೆಬನಾನಿನಲ್ಲಿರುವ ಕಬ್ಬಾನಿಯ ಮನೆಗೆ ಹೋಗಿ ''ನಿಮ್ಮ ತಂದೆ ಇಂದು ರಾತ್ರಿ ೭ ಗಂಟೆಗೆ ಸರಿಯಾಗಿ ಮರಣ ಹೊಂದುತ್ತಾರೆ ಎಂದು ನಮ್ಮ ಹಿರಿಯರಿಂದ ತಿಳಿದು ಬಂದಿದೆ'' ಎಂದು ಹೇಳಿದರು. ''ನಿನ್ನ ಕುಟುಂಬದ ಸದಸ್ಯರನ್ನೆಲ್ಲಾ ಒಟ್ಟುಗೂಡಿಸು; ಆದರೆ ನಿನ್ನ

ತಂದೆಗೆ ಮಾತ್ರ ಈ ವಿಷಯದ ಸುಳಿವು ಸಿಗದಿರಲಿ'' ಎಂದು ಅವರು (ಅಲ್-ಹಕ್ಕಾನಿ) ಸೂಚನೆಯಿತ್ತರು ಎಂದು ಕಬ್ಬಾನಿ ನೆನಪಿಸಿ ಕೊಳ್ಳುತ್ತಾರೆ. ''ಏಳು ಗಂಟೆಗೆ ೫ ನಿಮಿಷ ಗಳಿದ್ದಾಗ ಗುರುಗಳು ನಮ್ಮ ತಂದೆಯ ಕೋಣೆಯೊಳಕ್ಕೆ ಬಂದರು. ತೀವ್ರ ಎದೆ ನೋವಿನಿಂದ ನರಳುತ್ತಿದ್ದ ನಮ್ಮ ತಂದೆ, ಗಡಿಯಾರ ಸರಿಯಾಗಿ ೭ ಹೊಡೆಯುತ್ತಿದ್ದಂತೆಯೇ ಕೊನೆಯುಸಿರೆಳೆದರು''.

ಪವಿತ್ರವಾದ ಕುರಾನಿನಲ್ಲಿ, ಮಹಮ್ಮದ ಪೈಗಂಬರರಿಗೆ ಪವಾಡಗಳನ್ನು ಮಾಡಿ ತೋರಿಸಬೇಕೆನ್ನುವ ಕೋರಿಕೆಗಳನ್ನು ತಿರಸ್ಕರಿಸಬೇಕು ಎಂದು ಉಲ್ಲೇಖಿಸಿದೆ. ಏಕೆಂದರೆ ಕುರಾನೇ ನಿಜವಾದ ಮುಸಲ್ಮಾನನಿಗೆ ಅಗತ್ಯವಿರುವ ಪವಾಡ ಎಂದು ನಂಬಿಕೆಯಿದೆ. ಆದರೂ ತಮ್ಮ ನಿಜಜೀವನ ದಲ್ಲಿ ಮಹಮ್ಮದ್ ಪೈಗಂಬರರು ತಮ್ಮ ಅನುಯಾಯಿಗಳಿಗೆ ಬೇಕಾದಷ್ಟು ಆಹಾರವನ್ನು ಬಹುಗುಣಗೊಳಿಸುವುದು, ಅಸ್ವಸ್ಥರಾದವರನ್ನು ಗುಣಪಡಿಸುವುದು ಮುಂತಾದ ಪವಾಡಗಳನ್ನು ಮಾಡಿ ತೋರಿಸಿದ ಐತಿಹ್ಯವಿದೆ.

'ಇಸ್ಲಾಮ್' ಎಂದರೆ ಅಲ್ಲಾನ ಮೊರೆ ಹೊಗುವುದು ಎಂದೇ ಅರ್ಥ. ತಮ್ಮ ತನುಮನಗಳನ್ನು ಅಲ್ಲಾನಿಗೆ ಸಮರ್ಪಿಸಿ ಕೊಂಡ ಸೂಫಿ ಸಂತರು, 'ಕರಾಮತ್ತು' ಅಥವಾ ಆಶ್ಚರ್ಯಕರ ಘಟನೆಗಳನ್ನು ಅರ್ಥಾತ್ ಪವಾಡಗಳನ್ನು ಮಾಡುವ ಶಕ್ತಿಸಾಮರ್ಥ್ಯವನ್ನು ಸಿದ್ಧಿಸಿಕೊಂಡಿದ್ದರು. ಅವರು ಆಪತ್ತು-ವಿಪತ್ತುಗಳನ್ನು ಪೂರ್ವ ಭಾವಿಯಾಗಿ ತಿಳಿದುಕೊಳ್ಳಬಲ್ಲರು; ಆಪದ್ಗ್ರಸ್ತರಿಗೆ ಬೇಕಾದ ಸಹಾಯ ಮಾಡಬಲ್ಲರು.

ಭಗವಂತನ ಧ್ಯಾನದಿಂದ ಪೂರ್ವಜನ್ಮದ ಸ್ಮರಣೆ ಹಾಗೂ ಪರಮನ ಪ್ರವೇಶ ಮುಂತಾದ ಪವಾಡಗಳನ್ನು ಗೈಯಬಹುದು ಎಂದು ಪೌರ್ವಾತ್ಯ ಧರ್ಮಗಳಾದ ಹಿಂದೂ ಮತ್ತು ಬೌದ್ಧಮತಗಳು ನಂಬುತ್ತವೆ. ಬೌದ್ಧ ಮತಾನುಯಾಯಿಗಳ ಕಾಯಿಲೆಗಳನ್ನು ಚೀನೀ ಬೌದ್ಧ ಭಿಕ್ಷು ಪೂಜ್ಯ ಹ್ಸುವಾನ್ ಹುವಾ ಅವರು ಗುಣಪಡಿಸುತ್ತಿದ್ದರು ಎಂದು ಪ್ರತೀತಿಯಿದೆ. ದೇವತೆಗಳು ಮಾನವರೂಪದಲ್ಲಿ ಅವತರಿಸುತ್ತಾರೆ ಎಂದು ಹಿಂದೂಗಳು ನಂಬುತ್ತಾರೆ. ಅವರಲ್ಲಿ, ದೈವತ್ವ ಮಾನವತ್ವಗಳ ನಡುವಿನ ಅಂತರ ಪಾಶ್ಚಿಮಾತ್ಯ ದೇಶಗಳಲ್ಲಿರುವಷ್ಟು ಗಾಢವಾಗಿಲ್ಲ.

ಪವಾಡಗಳ ಸತ್ಯಾಸತ್ಯತೆಗಳನ್ನು ಖಚಿತಪಡಿಸುವ ಪ್ರಯತ್ನ ಇತ್ತೀಚೆಗಷ್ಟೇ ನಡೆಯುತ್ತಿದೆ. ಫ್ರಾನ್ಸ್ ದೇಶದ ಲೂರ್ಡ್ಸ್‌ನಲ್ಲಿರುವ ಸಂತ ಮೇರಿಯ ದೇವಾಲಯದಲ್ಲಿ ಪವಾಡ ಮುಖೇನ ರೋಗಗಳನ್ನು ಗುಣಪಡಿಸುವಿಕೆ ಮೊತ್ತಮೊದಲಿಗೆ ೧೮೬೨ರಲ್ಲಿ ದಾಖಲಾಯಿತು. ಆದರೆ ಅಲ್ಲಿ ನಡೆಯಿತೆನ್ನುವ ೬೦೦೦ ಪವಾಡಗಳಲ್ಲಿ ಇದುವರೆಗೆ ಕೇವಲ ೬೬ ವೈದ್ಯಕೀಯವಾಗಿ ದೃಢೀಕರಿಸಲ್ಪಟ್ಟವೆ. ಇರಾನ್ ದೇಶದ ಪವಿತ್ರನಗರಿಯಾದ ಕ್ವಾಮ್ ನಲ್ಲಿರುವ ಜಾಮ್‌ಕರನ್ ಪವಿತ್ರ ಮಸೀದಿ ಸುಮಾರು ೧೦೦೦ ವರ್ಷಗಳಿಂದ ಯಾತ್ರಿ ಗಳನ್ನು ಆಕರ್ಷಿಸುತ್ತಿದೆ. ಇಲ್ಲಿ ನಡೆಯಲ್ಪಟ್ಟಿದೆ ಎಂದು ಜನಜನಿತವಾದ ೩೦೦ ಪವಾಡಗಳಲ್ಲಿ ಎಂಟನ್ನಷ್ಟೇ, ಅದು ೧೯೯೮ರಿಂದ ಈಚೆಗೆ ಮಸೀದಿಯ ಅಧಿಕಾರಿಗಳು ದೃಢೀಕರಿಸಿದ್ದಾರೆ.

''ಈ ಎಲ್ಲ ಕತೆಗಳನ್ನು ಯಾವನು ನಂಬುತ್ತಾನೋ ಅವನು ಮೂರ್ಖ; ಆದರೆ ಯಾವನು ನಂಬುವುದಿಲ್ಲವೋ ಅವನು ಪಾಖಂಡಿ'' ಎಂದು ಒಂದು ಪುರಾತನ ಯಹೂದೀ ಗಾದೆ ಇದೆ. ಎಲ್ಲಾ ಧರ್ಮಗಳಲ್ಲೂ ಆಸ್ತಿಕತ್ವ, ನಾಸ್ತಿಕತ್ವಗಳಿಗೆ ಹೆಚ್ಚಿನ ವ್ಯತ್ಯಾಸವಿಲ್ಲ- ಇದುವೇ ಅವುಗಳ ವಿರೋಧಾಭಾಸ.

ಪ್ರಾಣಿಗಳು ವಾಸ್ತವವಾಗಿ ಏನನ್ನು ಯೋಚಿಸುತ್ತವೆ

ಡಿ.ಎ.ಶಾಮಣ್ಣ
ನಂ.೧೯೯೧,'ಆರಭಿ',೧ನೇ ಮೇನ್,
೩ನೇ ಕ್ರಾಸ್, ಶ್ರೀರಾಂಪುರ ೨ನೇ ಹಂತ
ಮೈಸೂರು-೫೭೦ ೦೨೩

ಅಮೆರಿಕದ ಒಮೂಹ ಮೃಗಾಲಯದಲ್ಲಿರುವ ಮಂಚು ಒರ‍್ಯಾಂಗುಟಾನ್ ಜಾತಿಗೆ ಸೇರಿದ ಕೋತಿ. ಮಂಚು ತನ್ನನ್ನು ರಕ್ಷಿಸಿಟ್ಟಿದ್ದ ಆವರಣದಿಂದ ಮೊದಲ ಬಾರಿ ತಪ್ಪಿಸಿಕೊಂಡಾಗ, ಇದಕ್ಕೆ ಮೃಗಾಲಯದ ಸಿಬ್ಬಂದಿಯ ಅಚಾತುರ್ಯವೇ ಕಾರಣವೆಂದು ತೀರ್ಮಾನಿಸಲಾಯಿತು. ಮೃಗಾಲಯದ ದೊಡ್ಡ ಹೊರ ಆವರಣದಲ್ಲಿ ಕೋತಿಗಳೆಲ್ಲವೂ ಆಟವಾಡುತ್ತಿದ್ದುವು. ಅಂದು ವಾತಾವರಣ ಹಿತಕರವಾಗಿತ್ತು. ಆವರಣದಿಂದ ತಪ್ಪಿಸಿಕೊಂಡ ಮಂಚು ಮತ್ತು ಅದರ ಬಳಗದ ಇತರ ಕೋತಿಗಳು ಆನೆಯ ಆಹಾರವನ್ನು ಶೇಖರಿಸಿದ್ದ ಉಗ್ರಾಣದ ಪಕ್ಕದಲ್ಲಿರುವ ಮರದ ಮೇಲೆ ನೇತಾಡುತ್ತಿದ್ದುದು ಸ್ವಲ್ಪ ಸಮಯದ ಬಳಿಕ ಕಂಡು ಬಂತು. ಕೋತಿಗಳನ್ನು ರಕ್ಷಿಸಿಟ್ಟಿದ್ದ ಆವರಣ ಮತ್ತು ಅದರ ಪಕ್ಕದಲ್ಲಿದ್ದ ಒಲೆಯ ನಡುವಿನ ಕದ ತೆರೆದಿದ್ದುದು ಅನಂತರ ತನಿಖೆಯಿಂದ ತಿಳಿದು ಬಂತು. ಮೇಲ್ವಿಚಾರಕ ಜೆರ್ರಿ ಸ್ಟೋನ್ಸ್ ಮೃಗಾಲಯದ ಸಿಬ್ಬಂದಿಯನ್ನು ಚೆನ್ನಾಗಿ ತರಾಟೆಗೆ ತೆಗೆದುಕೊಂಡರು. ಆದರೆ ಮಂಚು ಮತ್ತೊಮ್ಮೆ ತಪ್ಪಿಸಿಕೊಂಡಿತು- ಅಂದೂ ವಾತಾವರಣ ಹಿತಕರವಾಗಿತ್ತು. ಸ್ಟೋನ್ಸ್ ಸಿಟ್ಟಿಗೆದ್ದರು. ಈ ಬಾರಿ ಯಾರನ್ನಾದರು ಕೆಲಸದಿಂದ ವಜಾ ಮಾಡುವುದಕ್ಕೂ ಸಿದ್ಧನಿದ್ದೆ- ಎಂದು ನೆನಪು ಮಾಡಿಕೊಳ್ಳುತ್ತಾರೆ.

ಮಂಚುವಿನ ಮೇಲೆ ನಿಗಾ ಇಟ್ಟ ಕೆಲಸಗಾರರು, ಅದು ಆವರಣದಿಂದ ತಪ್ಪಿಸಿಕೊಳ್ಳುವ ಪ್ರಯತ್ನದಲ್ಲಿದ್ದಾಗಲೇ ಸ್ಟೋನ್ಸ್‌ನ ಗಮನವನ್ನು ಅದರೆಡೆ ಸೆಳೆದರು. ಒಲೆಯ ಗಾಳಿಕಿಂಡಿಯಿಂದ ಮೆಲ್ಲಗೆ ಕೆಳಗಿಳಿದ ಮಂಚು, ಆವರಣದ ಸುತ್ತಲಿದ್ದ ಕಂದಕದಲ್ಲಿ ಕುಳಿತುಕೊಂಡಿತು. ಒಲೆಯ ಬಾಗಿಲಿನ ಕೆಳಭಾಗವನ್ನು ಹಿಡಿದೆಳೆದು ತಂತಿಯನ್ನು ತೂರಿಸಬಹುದಾದಷ್ಟು ಸಂದಿಯನ್ನು ಮಾಡಿತು. ಸಂದಿಯಿಂದ ತಂತಿಯನ್ನು ತಳ್ಳಿ ಚಿಲಕವನ್ನು ತೆಗೆಯುವುದಕ್ಕೆ ಇದು ಕೋತಿಯು ಮಾಡುತ್ತಿದ್ದ ಉಪಾಯವಾಗಿತ್ತು! ಮಾರನೆಯ ದಿನ ಮಂಚುವಿನ ಬಾಯಿಯಲ್ಲಿ ಹೊಳೆಯುತ್ತಿದ್ದ ವಸ್ತುವೊಂದಿದ್ದುದನ್ನು ಸ್ಟೋನ್ಸ್ ಗಮನಿಸಿದರು- ಚಿಲಕವನ್ನು ತಳ್ಳಿ ಬಾಗಿಲನ್ನು ತೆಗೆಯಲು ಉಪಯೋಗಿಸಬಹುದಾದ ತಂತಿಯೊಂದನ್ನು ಮಂಚು ಬಾಯಿಯಲ್ಲಿ ತುರುಕಿಕೊಂಡಿತ್ತು.

ಈ ರೀತಿ ಮಂಚು ತಪ್ಪಿಸಿಕೊಳ್ಳುತ್ತಿದ್ದದ್ದು. ೧೯೬೮ರಲ್ಲಿ ಸುದ್ದಿ ಮಾಡಿತಾದರೂ, ಮಂಚುವಿನ ಕೈಚಳಕ, ಪ್ರಾಣಿಗಳಲ್ಲಿ ಉನ್ನತ ಮಾನಸಿಕ ಪ್ರಕ್ರಿಯೆಗಳನ್ನು ಹುಡುಕುತ್ತಿದ್ದ ವಿಜ್ಞಾನಿಗಳ ಮೇಲೆ ಅಷ್ಟೇನೂ ಪ್ರಭಾವ ಬೀರಲಿಲ್ಲ. ಇದೇ ಸಮಯದಲ್ಲಿ ಕೋತಿಗಳಿಗೆ ಮನುಷ್ಯರ ಭಾಷೆಯನ್ನು ಕಲಿಸುವ ಪ್ರಯತ್ನವೂ ನಡೆದಿತ್ತು. ೧೯೬೦ರಲ್ಲಿ ಇಬ್ಬರು ಮನೋವಿಜ್ಞಾನಿಗಳು ವಾಷೊ ಎಂಬ ಹೆಣ್ಣು ಗೋರಿಲ್ಲಾಗೆ ಅಮೆರಿಕನ್ ಸಂಕೇತ ಭಾಷೆಯ (ಅಮೆರಿಕನ್ ಸೈನ್ ಲ್ಯಾಂಗ್ವೇಜ್) ಮೂಲಕ ೧೩೦ಕ್ಕೂ ಹೆಚ್ಚು ಪದಗಳನ್ನು ಕಲಿಸಿಕೊಟ್ಟಾಗ, ಈ ದಿಕ್ಕಿನಲ್ಲಿ ಮೊದಲ ಯಶಸ್ಸು ಸಿಕ್ಕಿದಂತಾಯಿತು. ಈ ವಿಜ್ಞಾನಿಗಳ ಕೆಲಸವು ಪ್ರಾಣಿಗಳ ಬುದ್ಧಿಶಕ್ತಿಯ ಸ್ವಭಾವದ ಬಗೆಗೆ ವೈಜ್ಞಾನಿಕ ವಲಯಗಳನ್ನು ಉಗ್ರ ಚರ್ಚೆಯಲ್ಲಿ ತೊಡಗಿಸಿತು. ಆದರೆ ಚಿಂಪಾಂಜಿ ವಾಷೊ ಕೊಳದಲ್ಲಿ ಹಂಸವೊಂದನ್ನು ನೋಡಿ 'ನೀರು ಹಕ್ಕಿ' ಎಂಬ

ಮಾರ್ಚ್ ೨೦೦೦ದ ರೀಡರ್ಸ್ ಡೈಜೆಸ್ಟ್‌ನಲ್ಲಿ ಪ್ರಕಟವಾದ ಯೂಜಿನ್ ಲಿಂಡನ್‌ರವರ 'ವಾಟ್ ಅನಿಮಲ್ಸ್ ರಿಯಲೀ ಥಿಂಕ್' ಎಂಬ ಲೇಖನದ ಕನ್ನಡಾನುವಾದ

ಸಂಕೇತ ಮಾಡಿದಾಗ ಅದು ಏನನ್ನು ಹೇಳಲು ಪ್ರಯತ್ನಿಸುತ್ತಿತ್ತು ಎನ್ನುವುದರ ಬಗ್ಗೆ ವಿಜ್ಞಾನಿಗಳಲ್ಲಿ ಒಮ್ಮತವಿಲ್ಲ- ಅದು 'ನೀರುಹಕ್ಕಿ' ಎಂಬುದಕ್ಕೆ ಪದ ಸಮಾಸವೊಂದನ್ನು ಪ್ರಯತ್ನಿಸುತ್ತಿತ್ತೆ ? ಅಥವಾ ತನ್ನ ಮುಂದೆ ಕಾಣುತ್ತಿದ್ದ ದೃಶ್ಯವನ್ನು ವಿವರಿಸುತ್ತಿತ್ತೆ?

ಪ್ರಾಣಿಗಳ ಬುದ್ಧಿಶಕ್ತಿಯ ಬಗೆಗಿನ ಪ್ರಯೋಗಗಳು ಮತ್ತು ವಿವಾದಗಳ ಬಗ್ಗೆ ಈ ಲೇಖಕ(ಯೂಜಿನ್ ಲಿಂಡನ್) ಹಲವಾರು ವರ್ಷಗಳಿಂದ ಬರೆಯುತ್ತಿದ್ದಾನೆ. ಭಾಷೆ ಮತ್ತು ಮನೋಭಾವದ ವಿನ್ಯಾಸದಂಥ ಸುಲಭವಾಗಿ ಬುದ್ಧಿಗೆ ಎಟುಕದ ವಿಷಯದ ಬಗ್ಗೆ ವಿಚಾರ ಮಾಡಲು ಹೊರಟಾಗ ವಿಜ್ಞಾನಿಗಳು ಎದುರಿಸುವ ಸಮಸ್ಯೆಗಳನ್ನು ಈ ಲೇಖಕ ಬಲ್ಲ. ಪ್ರಾಣಿಗಳಲ್ಲಿ ನಿಜವಾಗಿಯೂ ಆಲೋಚನೆಗಳಿವೆಯೆ? ಪ್ರಜ್ಞೆ ಅಥವಾ ಮನೋಭಾವ ಇದೆಯೆ? ಪ್ರಾಣಿಗಳು ಯೋಚಿಸುವುದೇ ಆದರೆ, ಅವು ಯಾವಾಗ ಯೋಚಿಸುತ್ತವೆ ? - ಯೋಚಿಸುವುದರಿಂದ ಅವಕ್ಕೆ ಅನುಕೂಲವಾದಾಗ ವಿನಾ ವಿಜ್ಞಾನಿಗಳು ಕೇಳಿದಾಗಲಿಲ್ಲ. ಪ್ರಾಣಿ ಬುದ್ಧಿಶಕ್ತಿಯನ್ನು ಪರಿಶೋಧಿಸಲು ಮನುಷ್ಯರಿಗೆ ಅರ್ಥವಾಗುವ ಸಂಕೇತಗಳನ್ನು ಕಲಿಸುವುದಕ್ಕಿಂತ ಉತ್ತಮ ಮಾರ್ಗಗಳಿವೆಯೆ ಎಂದು ಯೋಚಿಸುತ್ತಿದ್ದಾಗ ಈ ವಿಚಾರ ನನಗೆ ಸ್ಪಷ್ಟವಾಯಿತು.

ಪ್ರಾಣಿ ಸಂಶೋಧಕರು, ಪಶು ವೈದ್ಯರು, ಮೃಗಾಲಯ ಪಾಲಕರು-ಇವರೆಲ್ಲರ ಜೊತೆಯಲ್ಲೂ ವಿಚಾರ ಮಾಡಲು ಆರಂಭಿಸಿದೆ. ಇವರುಗಳು ಹೆಚ್ಚಿನ ವೇಳೆ ಪ್ರಾಣಿಬುದ್ಧಿಶಕ್ತಿಯನ್ನು ಅಭ್ಯಾಸಮಾಡದಿದ್ದೂ, ಪ್ರಾಣಿಗಳು ಬುದ್ಧಿವಂತಿಕೆಯಿಂದ ಅಥವಾ ದಡ್ಡತನದಿಂದ ವರ್ತಿಸುವುದನ್ನು ಗಮನಿಸಿದ್ದಾರೆ. ಇವರು ಹೇಳುವ ಕಥೆಗಳು ಪ್ರಾಣಿಗಳ ಬುದ್ಧಿಶಕ್ತಿಯ ಬಗೆಗೆ ಒಂದು ಹೊಸ ಕದವನ್ನೇ ತೆರೆಯುತ್ತವೆ. ಬಂಧನದಲ್ಲಿರುವ ಪ್ರಾಣಿಗಳು ಮನುಷ್ಯನ ಜೊತೆ ವರ್ತಿಸುವಾಗ ತೋರಿಸುವ ಜಾಣತನ ಬೆರುಗೊಳಿಸುವಂಥದ್ದೇ ಸರಿ.

ಉದಾಹರಣೆಗೆ ಕೊಲಂಬಸ್ ಮೃಗಾಲಯದಲ್ಲಿರುವ ಕೊಲೊ ಎಂಬ ಹೆಣ್ಣು ಗೊರಿಲ್ಲದ ವಿಷಯವನ್ನೆ ತೆಗೆದುಕೊಳ್ಳಿ. ಇದೇ ಮೃಗಾಲಯದಲ್ಲಿ ಸ್ತನಿಗಳ ಸಂರಕ್ಷಕಿಯಾಗಿ ಕೆಲಸಮಾಡುತ್ತಿರುವ ಚಾಲ್ಲಿನ್ ಷೆಂಡ್ರಿಗೆ, ಕೊಲೊ ತನ್ನ ಮುಷ್ಟಿಯಲ್ಲಿ ಏನೋ ಪದಾರ್ಥವನ್ನು ಬಚ್ಚಿಟ್ಟುಕೊಂಡಿದೆಯೆಂದು ಗೊತ್ತಾಯಿತು. ಮುಷ್ಟಿಯಲ್ಲಿ ಏನಿದೆಯೆಂದು ತಿಳಿದುಕೊಳ್ಳಲು ಷೆಂಡ್ರಿ ಕೊಲೊಗೆ ಸ್ವಲ್ಪ ಕಡಲೆಕಾಯಿಯನ್ನು ಕೊಡಲು ಪ್ರಯತ್ನಿಸಿದಾಗ, ಅದು ಅವಳ ಕಡೆ ಬರಿಯ ನೋಟ ಬೀರಿತಷ್ಟೆ ಹೊರತು ಮುಷ್ಟಿಯನ್ನು ಸಡಿಲಿಸಲಿಲ್ಲ. ಗೊರಿಲ್ಲ ಏನೋ 'ವ್ಯವಹಾರ ಕುದುರಿ'ಸುವುದಕ್ಕೆ ಪ್ರಯತ್ನಿಸುತ್ತಿರಬಹುದೆಂದು ಅರಿತ ಷೆಂಡ್ರಿ, ಕಡಲೆಕಾಯಿಗಿಂತ ಹೆಚ್ಚು ಆಕರ್ಷಕವಾದ ಅನಾನಸ್ ಚೂರೊಂದನ್ನು ಕೊಲೊಗೆ ತೋರಿಸಿದಾಗ, ದಿಟ್ಟಿಸಿ ನೋಡುತ್ತಿದ್ದಂತೆಯೇ ಮುಷ್ಟಿಯನ್ನು ಸಡಿಲಿಸಿ ಕೈಯಲ್ಲಿದ್ದ ಬೀಗದ ಸರಪಳಿಯನ್ನು ತೋರಿಸಿತು.

ಕೊಲೊವಿನ ಕೈಯಲ್ಲಿದ್ದದ್ದು ಅಪಾಯಕಾರಿಯಾದ ಅಥವಾ ಬೆಲೆಬಾಳುವ ವಸ್ತುವಲ್ಲವೆಂದು ತಿಳಿದು ಸಮಾಧಾನಗೊಂಡ ಷೆಂಡ್ರಿ, ಅದಕ್ಕೆ ಅನಾನಸ್ ಚೂರನ್ನು ಕೊಟ್ಟಳು. ಜಾಣ ವ್ಯಾಪಾರಿಯಾದ ಕೊಲೊ ಸರಪಳಿಯನ್ನು ಮುರಿದು ಒಂದೇ ಒಂದು ಕೊಂಡಿಯನ್ನು ಷೆಂಡ್ರಿಗೆ ಕೊಟ್ಟಿತು. ಅದು ಬಹುಶಃ ಹೀಗೆ ಯೋಚಿಸಿರಬೇಕು:"ಒಂದೊಂದು ಕೊಂಡಿಗೂ ಒಂದು ಚೂರು ಅನಾನಸ್ ಸಿಗುವುದಾದರೆ ಒಂದೇ ಸಾರಿಗೆ ಪೂರ್ತಿ ಸರಪಳಿಯನ್ನು ಅವಳಿಗೇಕೆ ಕೊಡಬೇಕು ?"

ಪದಾರ್ಥಗಳ ವಿನಿಮಯದಲ್ಲಿ ಪ್ರಾಣಿಯೊಂದು ಇಷ್ಟು ಜಾಣತನ ತೋರಿಸುವುದಾದರೆ, ಹಣದ ಬಳಕೆಯನ್ನು ಮಾಡಬಾರದೇಕೆ? ಟೆನ್ನೆಸ್ ವಿಶ್ವವಿದ್ಯಾಲಯದ ಮಾನವ ವಿಜ್ಞಾನಿ ಲಿನ್ ಮೈಲ್ಸ್ ಪ್ರಾಣಿಗಳಿಗೆ ಸಂಕೇತ

ಭಾಷೆಯನ್ನು ಕಲಿಸುವುದರ ಬಗ್ಗೆ ಅಧ್ಯಯನ ಮಾಡುತ್ತಿದ್ದಾಗ, ಒರ್‍ಯಾಂಗುಟಾನ್ ಜಾತಿಗೆ ಸೇರಿದ ಚಾಂಟೆಕ್ ಎಂಬ ಕೋತಿಯು ಹಣದ ಬಳಕೆಯಲ್ಲಿ ಜಾಣತನವನ್ನು ತೋರಿಸಿತು. ಈ ಕೋತಿಗಿದ್ದ ಹಣದ ಅರಿವು ಸರಳ ವ್ಯವಹಾರಗಳಿಗೆ ಸೀಮಿತವಾಗಿರದೆ ಖೋಟ ಹಣ, ಹಣದುಬ್ಬರದ ಕಲ್ಪನೆಯವರೆಗೂ ಚಾಚಿತ್ತು. ಮೊದಮೊದಲು ಸಾಣ್ಯವಾಗಿ ಕಡ್ಡಿಯ ಚೂರುಗಳನ್ನು ಮೈಲ್ಸ್ ಉಪಯೋಗಿಸಿದರು. ಚಾಂಟೆಕ್ ಕಡ್ಡಿಯ ಚೂರನ್ನು ಎರಡು ಭಾಗ ಮಾಡಿ ತನ್ನ ಬಳಿಯಿದ್ದ ಹಣದ ದಾಸ್ತಾನನ್ನು ಹೆಚ್ಚಿಸಿಕೊಳ್ಳಲು ಪ್ರಯತ್ನಿಸಿತು. ಕಡ್ಡಿಯ ಚೂರಿನ ಬದಲು ಬಿಲ್ಲೆಗಳನ್ನು ಉಪಯೋಗಿಸಿದಾಗ, ಚಾಂಟೆಕ್ ತಗಡಿನ ಚೂರುಗಳಿಂದ ಖೋಟ ಬಿಲ್ಲೆಗಳನು ಮಾಡಲು ಪ್ರಯತ್ನಿಸಿತಂತೆ!

ಉಳಿತಾಯ, ಹಂಚಿಕೊಂಡು ತಿನ್ನುವುದು ಮುಂತಾದ ಒಳ್ಳೆಯ ಅಭ್ಯಾಸಗಳನ್ನು ಚಾಂಟೆಕ್‌ಗೆ ಮೈಲ್ಸ್ ಕಲಿಸಿಕೊಡಲು ಪ್ರಯತ್ನಿಸಿದರು. ಅಟ್ಲಾಂಟ ಮೃಗಾಲಯುದಲ್ಲಿರುವ ಚಾಂಟೆಕ್‌ಅನ್ನು ನೋಡಲು ಹೋದಾಗ ಈ ಲೇಖಕನಿಗೆ ಇದರ ಅನುಭವವಾಯಿತು. ದ್ರಾಕ್ಷಿ ಗೊಂಚಲೊಂದನ್ನು ಕೊಟ್ಟು ಅದನ್ನು ತನ್ನೊಡನೆ ಹಂಚಿಕೊಂಡು ತಿನ್ನುವಂತೆ ಚಾಂಟೆಕ್‌ಗೆ ಮೈಲ್ಸ್ ಸೂಚಿಸಿದಾಗ, ಅದು ಅಷ್ಟು ದ್ರಾಕ್ಷಿಯನ್ನೂ ತಿಂದುಬಿಟ್ಟಿತು. ಅನಂತರ ದ್ರಾಕ್ಷಿಯನ್ನು ಹಂಚಿಕೊಂಡು ತಿನ್ನಲು ಸೂಚಿಸಿದ್ದನ್ನು ನೆನಪಿಸಿಕೊಂಡು ಕೈಯಲ್ಲಿ ಉಳಿದಿದ್ದ ಕಾಂಡವನ್ನು ಮೈಲ್ಸ್‌ಗೆ ಕೊಟ್ಟಿತು!

ಪ್ರಾಣಿಗಳು ಮನುಷ್ಯನ ಜೊತೆ ಏಕೆ ಸಹಕರಿಸುತ್ತವೆ? ತಮಗದರಿಂದ ಅನುಕೂಲವಾದಾಗ ಪ್ರಾಣಿಗಳು ಮನುಷ್ಯರಿಗೆ ಸಹಕಾರ ನೀಡುತ್ತವೆಂದು ಪ್ರಾಣಿವರ್ತನಾ ತಜ್ಞರು ಹೇಳುವುದುಂಟು. ಈ ವಿವರಣೆ ನಿಜವಾದರೂ, ಸಂಪೂರ್ಣವಲ್ಲ.

ಪ್ರಾಣಿಗಳ ವರ್ತನೆ ಬಗ್ಗೆ ಸಲಹಾಗಾರ್ತಿಯಾಗಿರುವ ಗೇಲ್‌ಲಾಲಿ ತಮಗೆ ಪರಿಚಯವಿದ್ದ ಆರ್ಕಿ ಎಂಬ ತಿಮಿಂಗಲದ ಬಗ್ಗೆ ಹೀಗೆ ಬರೆಯುತ್ತಾರೆ: ''ನಾನು ಇಲ್ಲಿಯವರೆಗೆ ಜೊತೆಯಾಗಿ ಕೆಲಸಮಾಡಿರುವ ಎಲ್ಲ ಪ್ರಾಣಿಗಳಲ್ಲಿಯೂ ಆರ್ಕಿ ಅತ್ಯಂತ ಬುದ್ಧಿಶಾಲಿ. ಏನನ್ನಾದರೂ ಮಾಡುವುದಕ್ಕೆ ಮುಂಚೆ ಆರ್ಕಿ ಸನ್ನಿವೇಶವನ್ನು ಚೆನ್ನಾಗಿ ವಿವೇಚಿಸಿ ನಿಷ್ಕರ್ಷಿಸುತ್ತಿತ್ತು''.

ಆರ್ಕಿ ತನ್ನ ಮರಿಯನ್ನು ಉಳಿಸಿದ್ದನ್ನೆ ತೆಗೆದುಕೊಳ್ಳಿ. ಆರ್ಕಿಯ ಜೊತೆಗಾತಿ ಮರಿಯನ್ನು ಹಾಕಿತು. ಮರಿಯ ಆರೋಗ್ಯವು ಸರಿಯಿಲ್ಲದಿದ್ದರಿಂದ ಮೃಗಾಲಯ ಪಾಲಕರು ತುರ್ತು ಚಿಕಿತ್ಸೆಗಾಗಿ ಅದನ್ನು ಕೈಮಂಚದ ಮೇಲೆ ಮಲಗಿಸಿ ನೀರಿನಿಂದ ಹೊರಗೆ ತೆಗೆದರು. ಚಿಕಿತ್ಸೆಯ ತರುವಾಯ ಮರಿಯನ್ನು ಮತ್ತೆ ನೀರಿಗೆ ಇಳಿಸುವಾಗ ಇನ್ನೇನು ತಳ ಮುಟ್ಟಬೇಕೆನ್ನುವಾಗ, ಕೈಮಂಚದ ಹಗ್ಗಕ್ಕೆ ಮರಿಯು ಸಿಕ್ಕಿಕೊಂಡು, ಉಸಿರು ಕಟ್ಟಿದಂತಾಗಿ ವಾಂತಿ ಮಾಡಿಕೊಳ್ಳತೊಡಗಿತು. ಎದೆಗೆ ನೀರು ಸೇರಿ, ನ್ಯೂಮೋನಿಯ ಸೋಂಕಿ ಮರಿಯು ಸಾಯಬಹುದೆಂದು ಮೃಗಾಲಯ ಪಾಲಕರು ಹೆದರಿದರು.

ಆದರೆ ಸನ್ನಿವೇಶವನ್ನು ಸರಿಯಾಗಿ ಅರ್ಥಮಾಡಿಕೊಂಡ ಆರ್ಕಿ, ಕೈಮಂಚದ ಕೆಳಗೆ ಮೆಲ್ಲಗೆ ಈಜಿ ಬಂದು, ಕೈಮಂಚವನ್ನು ಇಳಿಸುತ್ತಿದ್ದವರೊಬ್ಬರನ್ನು ತನ್ನ ತಲೆಯ ಮೇಲೆ ಕಾಲಿಟ್ಟು ನಿಲ್ಲಲು ಬಿಟ್ಟಿತು! - ಆರ್ಕಿಗೆ ಈ ರೀತಿ ಮಾಡಲು ಎಂದೂ ತರಬೇತಿ ನೀಡಿರಲಿಲ್ಲ. ಅಷ್ಟೇ ಅಲ್ಲ, ತಲೆಯ ಮೇಲೆ ನಿಂತಿದ್ದ ಮನುಷ್ಯನು ಹಗ್ಗವನ್ನು ಸಡಿಲಿಸಿ, ೧೯೦ ಕಿಲೋ ತೂಕದ ಮರಿಯನ್ನು ಮೆಲ್ಲಗೆ ನೀರಿನೊಳಗಿಳಿಸುವವರೆಗೂ ಬಾಲವನು ಅಲ್ಲಾಡಿಸುತ್ತಾ ನೀರಿನೊಳಗೆ ನಿಂತಲ್ಲೆ ನಿಂತಿತ್ತು.

ಪ್ರಾಣಿಗಳಲ್ಲಿ ಬುದ್ಧಿವಂತಿಕೆಯ ಕುರುಹು ಅವುಗಳ ಕುಟಿಲ ವರ್ತನೆಯಿಂದ ಕೆಲವೊಮ್ಮೆ ಕಾಣುವುದುಂಟು. ಪ್ರಾಣಿ ತಜ್ಞೆ ಹೆಲನ್ ಷ್ರೂಮನ್, ಮೆಲಾಟೆ ಎಂಬ ಒರ್‍ಯಾಂಗುಟಾನ್ ಇದ್ದ ಬೋನಿನೊಳಕ್ಕೆ ಒಂದು ಕಿತ್ತಳೆ ಹಣ್ಣನ್ನು

ಎಸೆದರು. ಹಣ್ಣನ್ನು ಎತ್ತಿಕೊಳ್ಳಲು ಹೋಗುವ ಬದಲು ಮೆಲಾಟೆ ಫ್ರೊಮನ್‌ಳನ್ನೇ ದೃಷ್ಟಿಸಿ ನೋಡಿ ತನ್ನ ಕೈಯನ್ನು ಚಾಚಿತು. ಕಿತ್ತಳೆ ಹಣ್ಣು ಮೆಲಾಟೆಗೆ ಸಿಗದಂತೆ ಎಲ್ಲೋ ಉರುಳಿ ಹೋಗಿರಬೇಕೆಂದುಕೊಂಡ ಫ್ರೊಮನ್ ಮತ್ತೊಂದು ಕಿತ್ತಳೆ ಹಣ್ಣನ್ನು ಕೊಟ್ಟರು. ಹಣ್ಣನ್ನು ಹಿಡಿದು [illegible] ಹೊರಡಲು ಅನುವಾದ ಮೆಲಾಟೆಯು ಮತ್ತೊಂದು ಕೈಯಲ್ಲಿ ತಾವು ಮೊದಲು ಕೊಟ್ಟಿದ್ದ ಕಿತ್ತಳೆ ಹಣ್ಣಿದ್ದುದನ್ನು ಫ್ರೊಮನ್ ಗಮನಿಸಿದರು!

ಟೋವನ್ ಎಂಬ ಗಂಡು ಕೋತಿ ಈ ನಾಟಕವನ್ನು ಕುತೂಹಲದಿಂದ ಗಮನಿಸಿತು. ಮಾರನೆಯ ದಿನ ಫ್ರೊಮನ್ ಆಹಾರ ಕೊಡಲು ಬಂದಾಗ, ಅವರನ್ನೇ ದೃಷ್ಟಿಸಿ ನೋಡಿ, ತನಗೂ ಮೊದಲನೆಯ ಕಿತ್ತಳೆ ಹಣ್ಣು ಸಿಕ್ಕಿಲ್ಲವೆಂಬಂತೆ ನಟಿಸಿ, ಅವರ ಕಡೆ ಕೈಚಾಚಿತು. ಕನಿಕರಪಟ್ಟ ಫ್ರೊಮನ್ ಮತ್ತೊಂದು ಕಿತ್ತಳೆ ಹಣ್ಣನ್ನು ಕೊಟ್ಟರು. ಆದರೆ ಮೊದಲು ಕೊಟ್ಟಿದ್ದ ಕಿತ್ತಳೆ ಹಣ್ಣನ್ನು ಟೋವನ್ ತನ್ನ ಕಾಲಿನ ಕೆಳಗೆ ಬಚ್ಚಿಟ್ಟಿದ್ದು-ಕಂಡುಬಂತು!

ಪ್ರಾಣಿಗಳಲ್ಲಿ ಹಾಸ್ಯಪ್ರಜ್ಞೆ ಇರಲು ಸಾಧ್ಯವೇ? ಸಾಧ್ಯ -ಎಂದು ಪೆಟ್‌ಬರ್ಡ್ ರಿಪೋರ್ಟರ್' ಪತ್ರಿಕೆಯ ಸಂಪಾದಕಿ ಸ್ಯಾಲಿ ಬ್ಲಾಂಚರ್ಡ್ ಅಭಿಪ್ರಾಯಪಡುತ್ತಾರೆ. ಆಕೆ ಸಾಕಿದ್ದ ಬಾಂಗೊಮೇರಿ ಎಂಬ ಆಫ್ರಿಕನ್ ಬೂದು ಗಿಣಿ, ಪ್ಯಾಕೊ ಎಂಬ ಮತ್ತೊಂದು ಗಿಣಿ ಸತ್ತಿರಬಹುದೆಂಬುದನ್ನು ತಿಳಿದು ಹುಸಿ ಸಂಕಟವನ್ನು ತೋರಿಸಿ ತಮಾಷೆ ಮಾಡಿತ್ತಂತೆ.

ಬ್ಲಾಂಚರ್ಡ್ ಒಮ್ಮೆ ಕೋಳಿಮಾಂಸವನ್ನು ಬೇಯಿಸಲು ಅನುವಾಗುತ್ತಿದ್ದಾಗ ಇದು ನಡೆಯಿತು. ಕೋಳಿಯನ್ನು ಕುಯ್ಯಲು ಬ್ಲಾಂಚರ್ಡ್ ಚಾಕುವನ್ನು ಎತ್ತಿಕೊಂಡಾಗ, ಆ ಆಫ್ರಿಕನ್ ಗಿಣಿ ''ಓ ಬೇಡ, ಪ್ಯಾಕೊ'', ಎಂದಿತು. ಬ್ಲಾಂಚರ್ಡ್ ಸ್ವಲ್ಪವೂ ನಗದೆ ''ಅದು ಪ್ಯಾಕೊಅಲ್ಲ'' ಎನ್ನುತ್ತ ಬದುಕಿದ್ದ ಪ್ಯಾಕೊ [illegible] ಅದಕ್ಕೆ ತೋರಿಸಿದರು. ಪ್ಯಾಕೋ ಬದುಕಿರುವುದನ್ನು ನೋಡಿದ ಮೇಲೂ ನಿರಾಸೆ ತುಂಬಿದ ದನಿಯಲ್ಲಿ ''ಓ ಬೇಡ'' ಎಂದು ಹೇಳಿದ ಬಾಂಗೋ ಮೇರಿ ತತ್‌ಕ್ಷಣವೇ ಜೋರಾಗಿ ನಗುವುದಕ್ಕೆ ಶುರು ಮಾಡಿತು. ಬದುಕಿದ್ದ ಪ್ಯಾಕೊ ಅನ್ನು ನೋಡಿದ ಮೇಲೂ, ಅದು ಬದುಕಿಲ್ಲವೆಂಬಂತೆ ನಟಿಸಿದಾಗ ಬಾಂಗೊ ಮೇರಿ ತಮಾಷೆ ಮಾಡುತ್ತಿತ್ತೆ? ಬ್ಲಾಂಚರ್ಡ್ ಹೇಳಿದ್ದು ಆ ಗಿಣಿಗೆ ಅರ್ಥವಾಗಿತ್ತೆ?

ಆಫ್ರಿಕನ್ ಬೂದು ಗಿಣಿಗಳು ಪದಗಳ ಅರ್ಥವನ್ನು ಗ್ರಹಿಸಬಲ್ಲವೆಂಬುದು ಅಧ್ಯಯನಗಳಿಂದ ತಿಳಿದು ಬಂದಿದೆ. ಉದಾಹರಣೆಗೆ : 'ಕೆಂಪು' ಎಂದರೆ ಕೇವಲ ಕೆಂಪು ಬಣ್ಣದ ವಸ್ತುವಲ್ಲ, ಅದು ಒಂದು ಬಣ್ಣವನ್ನು ಸೂಚಿಸುತ್ತದೆ-ಎಂಬುದನ್ನು ಈ ಬೂದು ಗಿಣಿಗಳು ಬಲ್ಲವು. ಅಷ್ಟೇ ಅಲ್ಲ, ತಮ್ಮ ವರ್ತನೆಗೆ ಮಾನವರು ಪ್ರತಿಕ್ರಿಯಿಸುವುದನ್ನು ಗಿಣಿಗಳು ಇಷ್ಟಪಡುವಂತೆ ತೋರುತ್ತದೆ. ಹೀಗಾಗಿ ಬೂದು ಗಿಣಿ ಬಾಂಗೊ ಮೇರಿಯ ವರ್ತನೆ ಗಿಣಿಗಳ ದೃಷ್ಟಿಯಿಂದ ಸಮಾಧಾನಕರವಾಗಿಯೇ ಇದೆ.

'ಬುದ್ಧಿಶಕ್ತಿ' ಎಂದರಾದರೂ ಏನು? ಯಾವುದೇ ಜೀವಿಯ ಸಂತತಿಯನ್ನು ಭೂಮಿಯ ಮೇಲೆ ನಿರಂತರವಾಗಿ ಉಳಿಸುವುದೇ 'ಬದುಕಿ'ನ ಉದ್ದೇಶವಾಗಿ, 'ಬುದ್ಧಿಶಕ್ತಿ'ಯು ಈ ಗುರಿಯನ್ನು ಮುಟ್ಟುವ ಸಾಧನವಾದಲ್ಲಿ ಮಾನವನಿಗಿಂತ ಎಷ್ಟೋ ಹಿಂದೆಯೇ ಭೂಮಿಯ ಮೇಲೆ ಬಂದು, ಡೈನೋಜಾರ್ ಗಳನ್ನು ನಿರ್ನಾಮ ಮಾಡಿದ ವಿಪತ್ತಿನಿಂದಲೂ ಪಾರಾಗಿ ಉಳಿದಿರುವ ಕಡಲಾಮೆಗಳು ಮನುಷ್ಯನಿಗಿಂತ ಬುದ್ಧಿವಂತವೆಂದು ಪರಿಗಣಿಸ ಲಾಗದು.

ಏನೇ ಆಗಲಿ, ತಮ್ಮ ಸುತ್ತಲಿನ ಪ್ರಪಂಚವನ್ನು-ಅವುಗಳ ವೀಕ್ಷಣೆಯ ದಿಗಂತವು ಎಷ್ಟೇ ನಿರ್ಬಂಧಿತವಾಗಿದ್ದರೂ-ನಿಂತು ನೋಡಿ, ಪರೀಕ್ಷಿಸಿ ಅಳೆಯಬಲ್ಲ ಜೀವಿಗಳು ಮಾನವರಲ್ಲದೆ ಬೇರೆಯವೂ ಇವೆ ಎಂಬುದು ಅತ್ಯಂತ ಸಮಾಧಾನಕರ.

ಕೆಟ್ಟ ಬೆನ್ನಿಗೆ ಸಿಹಿ ಸುದ್ದಿ

ಕಿವಿಮಾತು ಓದಿರಿ. ನೋವು, ಸೆಳೆತದಿಂದ ಪಾರಾಗಿರಿ

ಗೀತಾ ಶಾಸ್ತ್ರಿ
೨೯, ೫ನೇ ರಸ್ತೆ ಕೊನೆ,
ಸಂಜಯನಗರ,
ಬೆಂಗಳೂರು-೫೬೦ ೦೯೪

ಮೂವತ್ತೇಳು ವರ್ಷಪ್ರಾಯದ ಮುಂಬೈನ ಚಾರ್ಟರ್ಡ್ ಅಕೌಂಟೆಂಟ್ ಮೋಹನ ರಾಮನಾಥನ್ ದಿನವೂ ಬ್ಯಾಡ್ಮಿಂಟನ್ ಆಡುತ್ತಿದ್ದರು. ಅದು ಆತನ ನೆಚ್ಚಿನ ಕ್ರೀಡೆ. ತೀರಾ ತಗ್ಗಿನಲ್ಲಿ ಬಂದ ಚೆಂಡೆತ್ತಲು ಒಮ್ಮೆ ಆತ ಬಗ್ಗಿದರು. ಬೆನ್ನು ಸೆಟೆದು ಕೊಂಡಿತು. ಅಲುಗಾಡಲಾಗಲಿಲ್ಲ. ''ಅಬ್ಬಾ ಅದೆಂತಹಾ ನೋವು, ಅಸಹನೀಯವಾಗಿತ್ತು!'' ಎಂದು ಆತ ಉದ್ಗರಿಸುತ್ತಾರೆ. ನೆಲಕ್ಕೆ ಕಾಲು ಚೆಲ್ಲಿ ಬಿದ್ದಿದ್ದ ಮೋಹನರನ್ನು ಮಿತ್ರರು ಎತ್ತಿ ಕೊಂಡೊಯ್ದರು. ಆಗ ಅವರಿಗೆ ಬೆನ್ನಿನ ಆಘಾತದ ಅರಿವಾಯಿತು.

ಬೆನ್ನುನೋವಿನ ತೊಂದರೆ ಆರಂಭವಾಗಲು ಕಾಲಮಿತಿ ಇಲ್ಲ. ಎಳವೆಯಿರಬಹುದು. ಏರಿದ ವಯಸ್ಸಿರಬಹುದು ವಾರ್ಧಕ್ಯವಿರಬಹುದು. ಎಳೆತಕ್ಕೊಳಗಾದ ಮಾಂಸಪೇಶಿಯ ದೆಸೆಯಿಂದಲೋ, ಸ್ನಾಯು ಬಿಗಿತದಿಂದಲೋ, ಜರುಗಿದ ಬೆನ್ನು ಮೂಳೆಯ ಸಂಪುಟದಿಂದಲೋ ಬೆನ್ನು ನೋವು ಕಾಣಿಸಬಹುದು. ಜನರು ಭಾವಿಸಿರುವುದುಂಟು. ಯಾವುದೋ ಆಘಾತದಿಂದ ಏಕಾಏಕಿ ಬೆನ್ನಿನ ತೊಂದರೆ ಆರಂಭವಾದುದು. ಎಂಬ ಭ್ರಮೆ ಮಾತ್ರ. ವಾಸ್ತವ ಅದಲ್ಲ. ಅನೇಕ ಕಾರಣಗಳ ನಿಧಾನ ಪರಿಣಾಮದ ಒಟ್ಟಾರೆ ಫಲಿತಾಂಶವದು. ಹೀಗೆನ್ನುವವರು ಅನುಭವಿ ಫಿಸಿಯೋಥೆರಪಿಸ್ಟ್ ಕರೀನ್ ಪಬ್ರಿ. ವರ್ಷಾನುಗಟ್ಟಲೆ ದಣಿದ ಬೆನ್ನು ಕೊನೆಯಲ್ಲಿ ಒಮ್ಮೆಗೆ ಮುಷ್ಕರ ಹೂಡುತ್ತದೆ. ನೋವು ಕಾಣಿಸುತ್ತದೆ. ಸುದೈವದ ಸಂಗತಿಯೆಂದರೆ ಬೆನ್ನಿನ ಆರೋಗ್ಯ ಕಾಪಾಡಲು ಸಾಕಷ್ಟು ವಿಧಾನಗಳಿವೆ.

ಭಾರವೆತ್ತಲು ಕಲಿಯಿರಿ : ''ಒಮ್ಮೆಗೇ ಹೆಚ್ಚಿನ ಸಾಮಾನು ಸರಂಜಾಮು ಎತ್ತದಿರಿ'' ಎನ್ನುತ್ತಾರೆ ಮುಂಬೈನ ಮೂಳೆತಜ್ಞ ಡಾ. ನಂದು. ದೇಹಕ್ಕೊತ್ತಿದಂತೆ ಭಾರ ಬೀಳಲಿ ಹಾಗೂ ಎರಡೂ ಕೈಗಳಲ್ಲಿ ಸಮತೂಕವಿರಲಿ. ಒಂದೇ ಕಡೆ ಭಾರ ಜೋತಾಡಿಸಿದರೆ ಆ ಕಡೆಯ ಬೆನ್ನು ಸ್ನಾಯು ಬಿಗಿತಕ್ಕೊಳಗಾಗುತ್ತದೆ. ಭಾರವೆತ್ತಲು ಮಂಡಿ ಬಗ್ಗಿಸಿ ಎರಡು ಕೈಬಳಕೆ ಕ್ಷೇಮಕರ. ವಸ್ತುವು ಬಲು ಭಾರದ್ದಾದರೆ ಚೀಲವು ಅರ್ಧ ಮಾತ್ರಾ ತುಂಬಿರಲಿ. ಬಗಲು ಚೀಲದಲ್ಲಿ ಸಹಾ ಬಲುಭಾರ ಕ್ಷೇಮಕರವಲ್ಲ. ಎತ್ತುವ ಭಾರವು ದೇಹದ ತೂಕದ ಶೇಕಡಾ ಹತ್ತಕ್ಕಿಂತ ಮಿಗಿಲಾಗಿರಬಾರದೆನ್ನುತ್ತಾರೆ ವೈದ್ಯರು. ಮಿಲಿಟರಿ ಮಂದಿ ಬಳಸುವಂಥ ಬೆನ್ನಿಗಾನಿಸುವ ಹೊರಲಿ ಚೀಲದಲ್ಲಿ ಸಾಮಾನು ಹೊರುವುದೇ ಉತ್ತಮ ಎನ್ನುತ್ತಾರೆ ಡಾ. ನಂದು.

ಕುರ್ಚಿ ಸರಿಯಾಗಿರಲು : ಕುಳಿತಿರುವತಳಕ್ಕೆ ಸಮಭಾರ ಬೀಳುವಂಥ ಕುರ್ಚಿಯಲ್ಲಿ ಕುಳಿತರೆ ಒಳಿತು. ನೆಲದಲ್ಲಿ ಪಾದ ಚಪ್ಪಟೆಯಾಗಿರುವಂತೆ ಕುಳಿತಿರಲು ಅಂಥ ಕುರ್ಚಿಯಲ್ಲಿ ಅವಕಾಶವಿರಲಿ. ಕುರ್ಚಿ ಆಯ್ಕೆಗೆ ತಮಗೆ ಅವಕಾಶ ವಿಲ್ಲವೆ? ಚಿಂತಿಸದಿರಿ. ಡಿಲ್ಲಿಯ ಮೂಳೆತಜ್ಞ ಡಾ. ದವೆ ಪ್ರಕಾರ ಪುಟ್ಟ ದಿಂಬಿನಾಸರೆ ಬೆನ್ನಿಗಾನಿಸಿದರೆ ಸಾಕು. ಸಮಸ್ಯೆ ಇತ್ಯರ್ಥ. ಅಷ್ಟೇ ಅಲ್ಲ, ಕುಳಿತುಕೊಳ್ಳುವ ಭಂಗಿ ಆಗಾಗ್ಗೆ ಬದಲಿಸಬೇಕು. . ಕುಳಿತಿರುವುದು ಸಾಕಾದಾಗ

ಮೇ ೧೯೯೯ರ ರೀಡರ್ಸ್ ಡೈಜೆಸ್ಟ್‌ನಲ್ಲಿ ಪ್ರಕಟವಾದ ರೋಕ್ಸಾನ್ನೆ ಕವರೂನಾ ಅವರ 'ಗುಡ್ ನ್ಯೂಸ್ ಟು ಬ್ಯಾಡ್ ಬ್ಯಾಕ್ಸ್' ಎಂಬ ಲೇಖನದ ಭಾವಾನುವಾದ

ನಿಂತ ಭಂಗಿಯಲ್ಲಿ ಡೆಸ್ಕ್ ಕೆಲಸ ಕೈಗೊಂಡರೂ ಕ್ಷೇಮ. ಆಗಿಂದಾಗ್ಗೆ ಓಡಾಡಿದರೂ ಸಲೀಸು. ಯಾವುದೇ ಸ್ನಾಯು ಸಮೂಹಕ್ಕೆ ಒಂದೇ ತೆರನ ಪರಿಶ್ರಮವಿರದು. ನಿಮ್ಮ ತೂಕ ಹೊರುವ ಆಯಾಸವಿರದು. ಅವಕಾಶ ವಿದ್ದಾಗ ಕುಳಿತೆಡೆ ಒಂದು ಕಾಲೆತ್ತಿ ಪುಟ್ಟ ಪೀಠದಲ್ಲಿಟ್ಟರೆ ಒಳಿತು.

ನಿರಂತರತೆಗೆ ಕಡಿವಾಣ ಹಾಕಿ : ಸುದೀರ್ಘ ಕಾರು ಯಾನ ಹಾನಿಕರ. ಇಡೀ ದೇಹದ ಕುಲುಕಾಟದಿಂದ ಹಾನಿ. ಸುಖನೀಡದ ಆಸನವ್ಯವಸ್ಥೆ, ಕೆಟ್ಟ ರಸ್ತೆ, ಆಗಾಗ ಎತ್ತಿಹಾಕುವ ಪ್ರಯಾಣದಿಂದ ಬೆನ್ನು ಮೂಳೆಗೆ ಆಘಾತ ವಾಗುತ್ತದೆ ಎಂದು ಮುಂಬೈನ ಮೂಳೆ ತಜ್ಞ ಬಿ.ಡಿ. ಅಥಣಿ ಅಭಿಪ್ರಾಯ. ಕೆಲವು ಕಿವಿ ಮಾತು. ಕೆಟ್ಟರಸ್ತೆಯೇ. ನಿಧಾನಿಸಿ. ಆಘಾತ ತಡೆಗೆ ಅದೇ ಸಾಕು. ದೀರ್ಘ ಪ್ರಯಾಣ ವಿದ್ದರೆ ಗಂಟೆಗೊಮ್ಮೆ ನಿಲ್ಲಿಸಿ. ವಿಶ್ರಾಂತಿ ಪಡೆಯಿರಿ. ಅನಂತರ ಮುಂದುವರಿಯಿರಿ. ಗುರಿಸೇರಿದ ಕ್ಷಣ ಲಗೇಜು ಇಳಿಸದಿರಿ. ವಿಶ್ರಾಂತಿ ಪಡೆದು ಪ್ರವೃತ್ತರಾಗಿರಿ.

ಶಯನ ಹೇಗೆ ? : ದೊರಗು ಗಟ್ಟಿ ಹಾಸಿಗೆಗಿಂತ ಅಗ್ಗದ ವ್ಯವಸ್ಥೆ ಬೆನ್ನುನೋವಿನವರಿಗೆ ಬೇರೆ ಇಲ್ಲ. ಇಡಿಯ ದೇಹದ ಭಾರ ತಡೆಯಬಲ್ಲ ಈ ಹಾಸಿಗೆಯು ಬೆನ್ನು ಮೂಳೆಯ ಮೇಲೆ ಬೀಳಬಹುದಾದ ಒತ್ತಡ ತಡೆಯುತ್ತದೆ.ರಬ್ಬರ್ ಮತ್ತು ತೆಂಗಿನ ನಾರಿನ ಹಾಸಿಗೆ ಉತ್ತಮವಾದರೂ, ರೇಷ್ಮೆ ಹಾಗೂ ಹತ್ತಿ ಸೇರಿಸಿ ಸಿದ್ಧಪಡಿಸಿದ ಹಾಸಿಗೆಯೇ ಮಿಗಿಲು ಎಂದು ಡಾ. ನಂದು ಅವರ ಅಭಿಪ್ರಾಯ. ಹಾಸಿಗೆಯ ದೊರಗುತನ ಬದಲಾದರೆ ಹಾಸಿಗೆ ಬದಲಾಯಿಸಿ. ಮೂಡುವಂಥಹ ಲಘು ಸ್ವರೂಪದ್ದಾಗಿರಲಿ ಎನ್ನುತ್ತಾರೆ ವೈದ್ಯ ಸಮೀರ್. ಭಾರ ಎತ್ತುವ ಮಂದಿಯಲ್ಲಿ ಬಲು ಭಾರ ಎತ್ತಬಲ ಸಾಮರ್ಥ್ಯ ಹೆಗ್ಗಳಿಕೆಯದ್ದೇನಲ್ಲ. ಆದರಿಂದ ಹಾನಿ ಅಧಿಕ. ಪದೇ ಪದೇ ಲಘು ಭಾರ ಎತ್ತುಗೆ ಕೈಗೊಂಡರೆ ಬೆನ್ನಿನ ಆರೋಗ್ಯಕ್ಕೆ ಪೂರಕ.

ವಿಶ್ರಮಿಸಿ: ಒತ್ತಡವೇ ಬಹುಪಾಲು ಬೆನ್ನು ನೋವಿನ ರೋಗಿಗಳಲ್ಲಿ ರೋಗ ಕಾರಣ ಎನ್ನುವ ಅಭಿಪ್ರಾಯ ಮುಂಬೈನ ಕೈವಲ್ಯಧಾಮ ಯೋಗ ಕೇಂದ್ರದ ನಿರ್ದೇಶಕ ಡಾ. ಶ್ರೀಕೃಷ್ಣ ಅವರದು. ಹೋವ್ಯಾರ್ ಎಂಬಾತ ತನ್ನ ಮಗುವನ್ನೆತ್ತಿ ಕೊಳ್ಳಲು ಬಾಗಿದಾಗ ಉಳುಕಿಸಿಕೊಂಡ ನಡುವು ಕೇವಲ ವಿಶ್ರಾಂತಿ ಚಿಕಿತ್ಸೆಯಿಂದ ಗುಣವಾಯ್ತು. ೭೨ ವಯಸ್ಸಿನ ಈ ಔಷಧಿ ವಿತರಕ ಕೈಗೊಂಡದ್ದು ಯೋಗಾಸನ ಮತ್ತು ಪ್ರಾಣಾಯಾಮದ ಕೆಲವು ವಿಧಾನ ಮಾತ್ರ. ಹೋಮ್ಯಾರ್‌ನ ಮಾತುಗಳನ್ನೇ ಓದಿರಿ. 'ಒತ್ತಡ ಗೆಲ್ಲಿರಿ. ನೋವಿನಿಂದ ಮುಕ್ತರಾಗಿರಿ'.

ಹಲವಾರು ಪ್ರಕಾರದ ಬೆನ್ನುನೋವಿಗೆ ಶಸ್ತ್ರ ಚಿಕಿತ್ಸೆ ಅನಗತ್ಯ. ಉಳುಕಿನ ಸ್ನಾಯು, ಜರುಗಿದ ಮೂಳೆಯೂ ಸ್ವಯಂ ಗುಣಹೊಂದಬಲ್ಲ ಸಹಜ ವ್ಯವಸ್ಥೆ ದೇಹದಲ್ಲಿದೆ. ನಾಕಾರು ವಾರದ ವಿಶ್ರಾಂತಿ ಮಾತ್ರ ಸಾಕಾದೀತು. ಬೆನ್ನುನೋವಿದ್ದಲ್ಲಿ ಮಂಜುಗಡ್ಡೆ ಕೆಲನಿಮಿಷಕಾಲ ಇರಿಸುವಿಕೆಯಿಂದ ಆ ಸ್ಥಳದ ಊತ ತಗ್ಗೀತು. ಪ್ರಭಾವಿ ನೋವುನಿವಾರಕ ಗುಳಿಗೆಯಿಂದ ನೋವು ಊತ ಉಪಶಮನ. ೪೮ಗಂಟೆಗಳ ಅನಂತರ ಬಿಸಿ ಉಪಚಾರ ಲೇಸು. ಎರಡು ವಾರದೊಳಗೆ ನೋವು ನಿವಾರಣೆಯಾಗದಿದ್ದರೆ ವೈದ್ಯರನ್ನು ಮತ್ತೆ ಕಾಣುವ ಅನಿವಾರ್ಯತೆ ಇದೆ. ನೋವು ಏರುತ್ತಿದ್ದರೆ, ಜ್ವರ ಸಹಿತವಾಗಿದ್ದರೆ, ತೀವ್ರ ನಿತ್ರಾಣವಾಗುತ್ತಿದ್ದರೆ, ಕೆಲವೆಡೆ ವೇದನಾ ರಾಹಿತ್ಯವಿದ್ದರೆ ತತ್‌ಕ್ಷಣ ತಜ್ಞ ವೈದ್ಯರ ಭೇಟಿ ಅಪೇಕ್ಷಣೀಯ. ಕೆಲವರಿಗೆ ಬೆನ್ನಲ್ಲಿ ಮತ್ತು ಕೆಲವರಿಗೆ ಮಗ್ಗುಲಾಗಿ ಮಲಗುವ ಅಭ್ಯಾಸ. ಮಗ್ಗುಲು ಮಲಗುವವರು ಮೊಣಕಾಲು ಮಧ್ಯೆ

ದಿಂಬಿರಿಸಿ ಮಲಗಿದರೆ ಬೆನ್ನು ನೋವಿಗೆ ಹಿತಕರ. ಹೊಟ್ಟೆಯ ಮೇಲೆ ಮಲಗುವುದು ದುರಭ್ಯಾಸ. ಬೆನ್ನುಮೂಳೆ ಬಾಗಿ ಕೆಳಭಾಗದ ಮೂಳೆಗೆ ಶ್ರಮ.

ತೂಕ ತಪ್ಪದಿರಿ : ಏರುವ ತೂಕದಿಂದ ಬೆನ್ನಿಗೆ ಪರಿಶ್ರಮ. ಬರೋಡಾ ಮೂಳೆ ತಜ್ಞ ಪ್ರಿಗಾಂಕ್ ಪ್ರಕಾರ ಬೊಜ್ಜು ಹೊಟ್ಟೆಯ ದೆಸೆಯಿಂದಲೇ ಬೆನ್ನುಮೂಳೆ ವಕ್ರ ಹಾಗೂ ನೋವು. ಡೊಳ್ಳುಹೊಟ್ಟೆಯ ಪೇಶಿ ಶಿಥಿಲ ವಾಗಿದ್ದರಂತೂ ನಡು ಮೂಳೆಗೆ ಬೇಕಾದಷ್ಟು ಅವಲಂಬನೆ ದೊರಕದು. ಇದೇ ವೈದ್ಯರ ಇನ್ನೊಂದು ಅಭಿಪ್ರಾಯವೆಂದರೆ ಧೂಮ ಪಾನವೂ ಬೆನ್ನು ನೋವಿದ್ದವರಿಗೆ ಕೆಡುಕುಂಟು ಮಾಡೀತು. ಬೆನ್ನು ಮೂಳೆಯೆಡೆ ರಕ್ತ ಪ್ರವಹಣಕ್ಕೆ ಧೂಮಪಾನ ಅಡ್ಡಿ ಒಡ್ಡುತ್ತದೆ. ದೇಹದ ಇತರೆಡೆಗೆ ಬೇಕಾದಷ್ಟೇ ನಡು ಮೂಳೆಗೂ ರಕ್ತ ಪರಿಚಲನೆ ಅತ್ಯಗತ್ಯ. ಧೂಮಪಾನಿಸ್ತ್ರೀಯರಲ್ಲಂತೂ ಮೂಳೆ ಸವಕಳಿ ಅತ್ಯಧಿಕ. ಧೂಮಪಾನ ಜನಿತ ಕೆಮ್ಮಿನ ದೆಸೆಯಿಂದ ಬೆನ್ನುಮೂಳೆಗೆ ಅನಗತ್ಯ ಶ್ರಮ.

ಎಚ್ಚರದ ವ್ಯಾಯಾಮ ಅಗತ್ಯ: ವ್ಯಾಯಾಮವು ಬೆನ್ನು ಮೂಳೆಗೆ ಮಹಾ ಉಪಕಾರಿ ಅಥವಾ ಅಪಕಾರಿ ಆಗಬಹುದು. ಕ್ರೀಡಾವೈದ್ಯ ದಿಲೀಪ್ ನಾಡಕರ್ಣಿ ಪ್ರಕಾರ ನಡುಬಗ್ಗಿಸಿ ಪಾದ ಮುಟ್ಟುವ ಕಸರತ್ತಿನ ಪರಿಣಾಮ ಬೆನ್ನು ಮೂಳೆಗೆ ಆಘಾತ. "ರೀಯಲ್ ಫಿಟ್‌ನೆಸ್" ಕೃತಿ ಕರ್ತೃ ಆತ. ಬಳುಕುತನ ಸಹಜವಾಗಿರ ದಿದ್ದವರು ಅಂಥಹ ನಡುಬಗ್ಗಿಸಿ ವ್ಯಾಯಾಮ ಮಾಡಿದರೆ ಹಾನಿಯೇ ಅಧಿಕ ಎನ್ನುತ್ತಾರವರು. ಆರಂಭದಲ್ಲಿ ಬಲು ಮಿತ ಹಿತ ವ್ಯಾಯಾಮ ಲೇಸು. ಅದು ಮತ್ತೆ ಮತ್ತೆ.

ಮೂಲ ಮಂತ್ರಗಳಿಗೆ ಮರಳಿರಿ: ಕೆಳನಡು ನೋವಿನ ಪರಿಹಾರಕ್ಕೆ ಈ ಸುಲಭ ಸೂತ್ರ ನಿರೂಪಿಸಿದಾತ ರೋಬಿನ್ ಮೆಕೆಂಜಿ. ಹಾಗೆಂದು ಎಲ್ಲರಿಗೆ ಎಲ್ಲ ಕಾಲಕ್ಕೆ ಇದು ಅನ್ವಯವಾಗುತ್ತದೆ ಎಂದರೆ ತಜ್ಞ ವೈದ್ಯರ ಸಲಹೆ ಮೇರೆಗೆ ಇವುಗಳ ಪೈಕಿ ಒಗ್ಗಬಲ್ಲುದನ್ನು ಆಯ್ಕೆಮಾಡಿ ಅನುಸರಿಸ ಬಹುದು.

೧. ಹೊಟ್ಟೆಯ ಮೇಲೆ ಮಲಗಿರಿ. ನಿಧಾನವಾಗಿ ನಾಲ್ಕಾರು ಬಾರಿ ಸುದೀರ್ಘ ಶ್ವಾಸ ಎಳೆದು ಬಿಡಿರಿ.

೨. ನಿಧಾನವಾಗಿ ತಲೆ ಮತ್ತು ಎದೆಭಾಗ ಎತ್ತಿರಿ. ಮೊಣಕ್ಕೆ ಮೇಲೆ ಭಾರ ಬಿಡಿ. ಟೊಂಕ ಎತ್ತಿ ೨-೩ ನಿಮಿಷ ಅದೇ ಭಂಗಿಯಲ್ಲಿದ್ದು ಪುನಃ ಮೊದಲ ಭಂಗಿಗೆ ಮರಳಿರಿ.

೩. ಒಂದನೆ ಭಂಗಿಯಿಂದ ಎರಡೂ ಕೈಗಳನ್ನು ಭುಜದ ಸಮೀಪಕ್ಕೆ ಇರಿಸಿ ಶರೀರದ ಮಧ್ಯಭಾಗವನ್ನು ಹಿಂದೆದೂಡಿ ಮುಂದೆ ಓಲಾಡಿಸಿ ೪ ಸೆಕೆಂಡ್ ವಿರಮಿಸಿ ಮೊದಲ ಭಂಗಿಗೇ ಮರಳಿರಿ.

೪. ಮಧ್ಯ ದೇಹದ ಭಾಗ ಓಲಾಡಿಸುವ ಹಂತದಲ್ಲಿ ಪ್ರತಿಬಾರಿ ಕೊಂಚ ಕೊಂಚವಾಗಿ ಶರೀರದ ಮೇಲ್ಭಾಗವನ್ನು ಎತ್ತರೆತ್ತರಕ್ಕೆ ಚಾಚಿ ಕೊಳ್ಳಿ. ದಿನಕ್ಕೆ ನಾಲ್ಕಾರು ಬಾರಿ ಪುನಃ ಪುನಃ ಇದೇ ಕಸರತ್ತು ಕೈಗೊಳ್ಳಲು ಯೋಗ್ಯ.

ಮನಸ್ಸಿನಲ್ಲಿ, ಮಾತಿನಲ್ಲಿ, ಕೆಲಸದಲ್ಲಿ ಯಾರನ್ನೂ ನೋಯಿಸದಿರುವುದು; ಎಲ್ಲರನ್ನೂ ಪ್ರೀತಿಸುವುದು; ಎಲ್ಲರಿಗೂ ಒಳ್ಳೆಯದನ್ನು ಬಯಸು ವುದು-ಇದೇ ಅಹಿಂಸಾಧರ್ಮ.

-ಮಹಾತ್ಮ ಗಾಂಧೀಜಿ

ಜೀವಿ ಜಾತಕ—ಜೀನ್ ಸಂಪುಟ

ಎಸ್. ಶ್ರೀಧರಮೂರ್ತಿ
ಮುಕ್ತ ವಿಶ್ವವಿದ್ಯಾನಿಲಯ
ಮೈಸೂರು-೫೭೦ ೦೦೬

ಪ್ರಕೃತಿ ಕೋಟ್ಯಾಂತರ ವರ್ಷಗಳಿಂದ ಮುಚ್ಚಿಟ್ಟಿದ್ದ ಆನುವಂಶಿಕ ರಹಸ್ಯ ಈಗ ಬಟ್ಟಬಯಲು. ನಮ್ಮ ಜೀನ್‌ಗಳು ಈಗ ತೆರೆದ ಪುಸ್ತಕ.

ಜೂನ್ ೨೬,೨೦೦೦ ಮನುಕುಲದ ಒಂದು ಸುವರ್ಣಾಕ್ಷರ ದಿನ. ಅಂದು ಅಮೆರಿಕದ ಅಧ್ಯಕ್ಷ ಬಿಲ್ ಕ್ಲಿಂಟನ್ ಮತ್ತು ಬ್ರಿಟಿಷ್ ಪ್ರಧಾನಿ ಟೋನಿ ಬ್ಲೇರ್ ಒಟ್ಟಾಗಿ ಘೋಷಿಸಿದರು. ಅಂತರ್ರಾಷ್ಟ್ರೀಯ ಸರ್ಕಾರಗಳ ನಿಧಿ ಬೆಂಬಲಿತ ಮಾನವ ಜೀನ್ ಸಂಪುಟ ಯೋಜನೆ ಹಾಗೂ ಅಮೆರಿಕದ ಖಾಸಗಿ ಕಂಪನಿ ಸೆಲೆರ ಜೀನೋಮಿಕ್ಸ್ ಎರಡು ಸಂಸ್ಥೆಗಳು ಜಂಟಿಯಾಗಿ ಮಾನವ ಜೀವಿ ಜಾತಕವನ್ನು ಸಿದ್ಧಪಡಿಸಿವೆ ಎಂಬುದೇ ಅವರ ಘೋಷಣೆ. ಈ ಜಾತಕ ಕರಡಿನಲ್ಲಿ ೩.೧ ಕೋಟಿ ಜೈವಿಕ ಅಕ್ಷರಗಳಿವೆ. ಮಾನವ ಜೀವದ ಇಡಿ ಜೀವಶಾಸ್ತ್ರೀಯ ರಹಸ್ಯಗಳೆಲ್ಲ ಇಲ್ಲಿ ಅಡಗಿವೆ. ಈ ಅನ್ವೇಷಣೆಯಿಂದಾಗಿ ವಿಸ್ಮಯಕಾರಕ ಹೊಸ ಔಷಧಿಗಳನ್ನು ತಯಾರಿಸಲು, ಸದ್ಯಕ್ಕೆ ಮಾರಕವಾಗಿರುವ ರೋಗಗಳಿಗೆ ಮದ್ದುಗಳನ್ನು ಕಂಡುಹಿಡಿಯಲು ವಿಪುಲಾವಕಾಶವಿದೆ. ಆನುವಂಶಿಕ ರೋಗಗಳನ್ನು ಹುಟ್ಟು ವಿಕಲತೆಗಳನ್ನು ಕ್ಯಾನ್ಸರ್ ಮತ್ತಿತರ ರೋಗಗಳನ್ನು ಹುಟ್ಟುವ ಮೊದಲೆ ಶಿಶುವಿಗೆ ಇದೆಯೆ, ಬರಬಹುದೆ ಎಂದು ನಿರ್ಣಯಿಸಿ ಅವು ಬರದಂತೆ ತೊಡೆದು ಹಾಕಬಹುದಾಗಿದೆ. ಆಧುನಿಕ ವೈದ್ಯ ಬೆಳವಣಿಗೆ ಊಹಾತೀತವಾಗಿ ಪ್ರಗತಿ ಪಡೆಯಲಿದೆ. ಈ ಅಗಾಧ ಶಕ್ತಿ ಮಾಹಿತಿಯನ್ನು ಹೇಗೆ ನಿಯಂತ್ರಿಸುವುದು ಎಂಬ ಸಮಸ್ಯೆಯೂ ಇದೆ.

ಆಧಾರ: ವಿವಿಧ ಪತ್ರಿಕೆಗಳ

ಜಗತ್ತೇ ಇಂದು ನಿಬ್ಬೆರಗಾಗಿದೆ. ೧೪೪೫ರಲ್ಲಿ ಜೋಹಾನ್ಸ್ ಗುಟೆನ್‌ಬರ್ಗ್ ಮುದ್ರಣ ಯಂತ್ರ ಕಂಡುಹಿಡಿದ ಮೇಲೆ ಜಾಗತಿಕ ಇತಿಹಾಸದ ಗತಿಯೇ ಬದಲಾಯಿತು. ಎಲ್ಲರಿಗೆ ಮಾಹಿತಿ ಜ್ಞಾನ ದೊರೆಯುವಂತಾಗಿತ್ತು. ೨೦ನೆ ಶತಮಾನದ ೪೦ರ ದಶಕದಲ್ಲಿ ಅಣುಸ್ಫೋಟದ ಆವಿಷ್ಕಾರದಿಂದ ಜಾಗತಿಕ ಇತಿಹಾಸದ ಗತಿ ಮತ್ತೆ ಬದಲಿಸಿತು. ಈ ಎರಡು ಗತಿಪ್ರವರ್ತನೆಗಳಷ್ಟೇ ಅಥವಾ ಅದಕ್ಕಿಂತ ಹೆಚ್ಚು ಪರಿವರ್ತನೆಗಳನ್ನು ಈ ನೂತನ ಆವಿಷ್ಕಾರ ತಂದೀತೆಂದು ನಂಬಲಾಗಿದೆ.

ಇನ್ನು ೨೦ ವರ್ಷಗಳಲ್ಲಿ ಹುಟ್ಟು ಬದುಕು ಸಾವಿನ ಬಗ್ಗೆ ಇರುವ ತಾತ್ವಿಕ ಅರ್ಥ ನಾವು ಇಂದು ಅರ್ಥೈಸಿಕೊಳ್ಳುವುದಕ್ಕಿಂತ ಅನುಭವಿಸುತ್ತಿರುವುದಕ್ಕಿಂತ ಭಿನ್ನವಾದ ಅಗಾಧ ಬದಲಾವಣೆಗೆ ಒಳಗಾಗುತ್ತದೆ ಎನ್ನುವುದು ಖಚಿತ.

ಹೊಸ ವಿಜ್ಞಾನವಾಗಿರುವ ಜೀನ್ ಸಂಪುಟದ ಮೂಲ ಸಂಗತ ಲಕ್ಷಣಗಳು ಏನು ಎಂದು ಸ್ವಲ್ಪ ನೋಡೋಣ.

ಮಾನವ ಜೀನ್ ಸಂಪುಟ ಎಂದರೇನು ?:

ಮಾಹಿತಿ ವಿಜ್ಞಾನ ಎಂದರೆ ಕೇವಲ ಕಂಪ್ಯೂಟರ್‌ಗಳಿಗೆ ಸಂಬಂಧಿಸಿದ್ದು ಎಂದು ಯಾರಾದರೂ ಭಾವಿಸಿದರೆ ಶುದ್ಧ ತಪ್ಪಾಗುತ್ತದೆ. ಜೀವ ಎನ್ನುವುದು ಮೂಲಭೂತವಾಗಿ ಮಾಹಿತಿಯ ಚಲನೆ ಮತ್ತು ಪ್ರಸರಣಕ್ಕೆ ಸಂಬಂಧಿಸಿದ್ದು. ಮಾನವರಾದ ನಾವು ಒಟ್ಟಾರೆಯಾಗಿ ಮಾಹಿತಿಯ ಕೋಶಗಳೇ ಆಗಿದ್ದೇವೆ. ಎಲ್ಲ ಜೀವಿಗಳಂತೆ ಮಾನವರೂ ಜೀವಕೋಶಗಳಿಂದ ರೂಪಿತವಾದವರು ನಮ್ಮ ದೇಹದಲ್ಲಿನ ಪ್ರತಿ ಜೀವಕೋಶದಲ್ಲಿಯೂ ೪೬

ಕ್ರೋಮೋಸೋಮುಗಳಿವೆ (ವರ್ಣತಂತು) ಪ್ರತಿ ಕ್ರೋಮೋಸೋಮಿನಲ್ಲಿ ಡಿಎನ್‌ಎ (ಡಿಆಕ್ಸಿರೈಬೋ ನ್ಯೂಕ್ಲಿಯಕ್ ಆಸಿಡ್) ಮತ್ತು ಕೆಲವು ಪ್ರೋಟೀನ್‌ಗಳಿವೆ. ಯಾವುದೆ ಮಾನವ ಜೀವಿಯಲ್ಲಿನ ಕ್ರೋಮೋಸೋಮುಗಳಲ್ಲಿ ಅರ್ಧಭಾಗ(೨೩)ತಾಯಿಯಿಂದ ಮತ್ತರ್ಧಭಾಗ(೨೩)ತಂದೆಯಿಂದ ಎರವಲು ಪಡೆದದ್ದೆ ಆಗಿದೆ.

ಜೀವಿ ಜಾತಕವನ್ನು ಅಂದರೆ ಜೆನ್‌ಸಂಪುಟವನ್ನು ಡಿಎನ್‌ಎ ವರ್ಣಮಾಲೆಯಲ್ಲಿ ಬರೆಯಲಾಗಿದೆ. ಡಿಎನ್‌ಎ ಎಂದರೆ ನಾಲ್ಕು ಅಕ್ಷರಗಳ ವರ್ಣಮಾಲೆ. A(ಅಡೆನೈನ್) G (ಗ್ವಾನೈನ್) C (ಸೈಟೊಸೈನ್) ಮತ್ತು T(ತೈಮೈನ್) ಈ ನಾಲ್ಕು ರಾಸಾಯನಿಕ ಘಟಕಗಳು ಸೇರಿ ಒಂದು ಡಿಎನ್‌ಎ ಕಣವಾಗುತ್ತದೆ. ಈ ಅಕ್ಷರಗಳಿಂದ ರೂಪಿತವಾದ ಪದ ಅಥವಾ ವಾಕ್ಯಗಳೇ 'ಜೀನ್'ಗಳು. ಇವು ಮಾಹಿತಿಯ ಮೂಲಭೂತ ಘಟಕಗಳು ಮಾನವಜೀವಿ ಏನಾಗುತ್ತಾನೆ, ಹೇಗಾಗುತ್ತಾನೆ ಎನ್ನುವುದನ್ನು ಇವು ನಿರ್ಧರಿಸುತ್ತವೆ. ಆತನ ಮೂಲಭೂತ ಕ್ರಿಯೆಗಳಾದ ಪಚನ, ಬೆಳವಣಿಗೆ, ರೋಗ ಪ್ರರೋಧ ಇತ್ಯಾದಿಗಳ ಸ್ವರೂಪವನ್ನು ಮೊದಲೇ ಬರೆದಿಟ್ಟಿರಲಾಗಿರುತ್ತದೆ.

ಜೀನ್‌ಗಳು ಮೂರಕ್ಷರ ಸಂಕೇತಗಳ ಸರಪಳಿಗಳು A,G,C,Tಗಳ ವಿವಿಧ ಸಂಯೋಜನೆಯಲ್ಲಿ ಇವು ಇರುತ್ತವೆ. ಮಾನವ ದೇಹದ ಸಂಪೂರ್ಣ ಮಾಹಿತಿ ರಾಶಿಯೇ ಜೀನ್ ಸಂಪುಟ.

ಮಾನವ ಜೀನ್‌ಸಂಪುಟ ಯೋಜನೆ ಎಂದರೇನು ?

ಜೀವ ಸಂಕೇತ ಪುಸ್ತಕದ ರಹಸ್ಯವನ್ನು ಬಿಡಿಸುವುದೇ ಈ ಯೋಜನೆಯ ಗುರಿಯಾಗಿದೆ. ಈ ಯೋಜನೆಯಲ್ಲಿ ೬ ರಾಷ್ಟ್ರಗಳ ೧೬ ವಿಜ್ಞಾನ ಪ್ರಯೋಗಾಲಯಗಳು ಕಾರ್ಯಶೀಲವಾಗಿದ್ದು ಮಾನವದೇಹದಲ್ಲಿ ಇರಬಹುದಾದ ಸುಮಾರು ೩೦,೦೦೦ ಜೀನ್‌ಗಳನ್ನು ಗುರ್ತಿಸಿ ನಾಮಕರಿಸಲು ಯತ್ನಿಸಿವೆ. ಮಾನವ ಡಿಎನ್‌ಎ ಎಂದರೆ ೩೧ ಕೋಟಿ ರಾಸಾಯನಿಕ ಘಟಕಗಳ ಸರಣಿಗಳು. ಇವು ಯಾವ ರೀತಿ ಜೋಡಣೆಗೊಂಡಿವೆ ಎಂಬುದನ್ನು ಗುರ್ತಿಸಿ ನಕಾಶೆ ಹಾಕುವುದು ಇವರ ಕೆಲಸವಾಗಿದೆ.

ಡಿಎನ್‌ಎ ವರ್ಣಮಾಲೆಯ ಎಲ್ಲ ಅಕ್ಷರಗಳ ಸ್ಥೂಲ ಅನುಕ್ರಮಣಿಕೆ ಯಾವ ರೀತಿಯಲ್ಲಿ ಮಾನವ ಕ್ರೋಮೋಸೋಮುಗಳಲ್ಲಿ ವ್ಯವಸ್ಥಿತವಾಗಿವೆ ಎಂಬುದರ ನಕ್ಷೆಯೇ ಜೀನ್ ಸಂಪುಟದ ಕರಡು. ಈ ಕರಡಿನ ಆಧಾರದ ಮೇಲೆ ಉನ್ನತ ಗುಣಮಟ್ಟದ ಪರಿಪೂರ್ಣ ನಕ್ಷೆಯನ್ನು ಸಿದ್ಧಪಡಿಸಲು ಸಾಧ್ಯವಾಗುತ್ತದೆ. ಅಲ್ಲದೆ ರೋಗಕಾರಕ ಜೀನ್‌ಗಳನ್ನು ಪತ್ತೆ ಹಚ್ಚಲು ಸಂಶೋಧಕರಿಗೆ ಅತ್ಯುತ್ತಮ ಸಾಧನ ವಾಗುತ್ತದೆ.

ಜೀನ್ ಸಂಪುಟದ ಅನ್ವೇಷಣೆಯನ್ನು ಅಣುಸ್ಫೋಟ ಮತ್ತು ಆಂಟಿಬಯಾಟಿಕ್, ಆವಿಷ್ಕಾರಗಳಿಗಿಂತ ಮಿಗಿಲಾದ ಸಾಧನೆ ಎಂದು ಏಕೆ ಹೇಳುತ್ತಾರೆ ?

ಈಗ ರೂಪಿಸಿರುವ 'ಸ್ಥೂಲ ಕರಡು' ಪುಟ್ಟದಾದ ತೊದಲು ಹೆಜ್ಜೆಯಾದರೂ ಇದರ ಮುಂದಿನ ಪರಿಣಾಮಗಳು ದಿಗ್ಭ್ರಮೆ ಉಂಟು ಮಾಡುವಂತಿಹವು. ಈ ವಿಜ್ಞಾನದ ಪ್ರಗತಿ ಊಹಿಸಿದಂತೆ ಮುಂದುವರಿದರೆ ಇಡಿಯಾಗಿ ಹೊಸದಾದ ಜೀವಶಾಸ್ತ್ರೀಯ ವಿಜ್ಞಾನವೇ ಉದ್ಭವವಾಗುತ್ತದೆ. ಇತ್ತೀಚಿನವರೆಗೆ ಕೇವಲ ಕೆಲವು ಮಾನವ ಜೀನ್‌ಗಳ ಸಂಕೇತಗಳನ್ನು ಅರ್ಥಮಾಡಿಕೊಳ್ಳಲಾಗಿತ್ತು, ಆದರೆ ಅವುಗಳ ಕಾರ್ಯಶೀಲತೆಯೂ ಅಷ್ಟು ಸ್ಪಷ್ಟವಾಗಿ ತಿಳಿದಿರಲಿಲ್ಲ. ಈ ಯೋಜನೆ ಪರಿಪೂರ್ಣ

ಗೊಂಡು ಎಲ್ಲ ಜೀನ್ ಸರಣಿಗಳು ಗುಟ್ಟು ಬಯಲಾದರೆ ಮಾನವನ ಎಲ್ಲ ದೈಹಿಕ ಕಾರ್ಯಚಟುವಟಿಕೆ, ರಚನಾ ವಿವರ ಹಾಗೂ ವರ್ತನಾ ವಿನ್ಯಾಸಗಳನ್ನು ಆನುವಂಶಿಕ ರೂಪತತ್ವದ ಆಧಾರದ ಮೇಲೆ ವಿವರಿಸಲು ಸಾಧ್ಯವಾಗುತ್ತದೆ. ಸದ್ಯಕ್ಕೆ ಗುಣಪಡಿಸಲಾಗದ ಕ್ಯಾನ್ಸರ್, ಅರೆಮರವಿನ ಹುಚ್ಚು ರೋಗ ಇತ್ಯಾದಿಗಳ ಕಾರಣ ಗೊತ್ತಾಗಿ ಕ್ರಾಂತಿಕಾರಕ ಹೊಸ ಔಷಧಿಗಳ ತಯಾರಿಕೆ ಸಾಧ್ಯವಾಗುತ್ತದೆ. ನವಜಾತ ಶಿಶು ಯಾವ ಯಾವ ರೋಗಕ್ಕೆ ತುತ್ತಾಗಬಹುದು ಎಂಬುದು ಮುಂಚಿತವಾಗಿ ತಿಳಿದು ಬಂದು ನಿವಾರಕ ಕ್ರಮಗಳನ್ನು ಕೈಗೊಳ್ಳಬಹುದು. ತಂದೆತಾಯಿಗಳು ತಮಗೆ ಬೇಕಾದ ಬಗೆಯ ಮಕ್ಕಳನ್ನು ಪಡೆಯುವ ಸಾಧ್ಯತೆಯೂ ಇದೆ.

ಜೀನ್‌ಗಳು ಯಾವ ರೀತಿ ಕಾರ್ಯ ನಿರ್ವಹಿಸುತ್ತವೆ?

ಮಾನವನ ಅಂಗಾಂಗ ರಚನೆ ಪ್ರೋಟೀನ್‌ಗಳಿಂದ ಆಗಿದೆ. ನಮ್ಮ ಚರ್ಮದ ಪ್ರೋಟೀನ್ ಎಂದರೆ ಕೆರಾಟಿನ್; ಸ್ನಾಯುಗಳದು ಕಲ್ಲಾಜೆನ್.. ಹೀಗೆ. ಕೆಲವು ಪ್ರೋಟೀನ್‌ಗಳು ಕಿಣ್ವಗಳೂ (ಎಂಜೈಮ್ಸ್) ಆಗಿದ್ದು ಪಚನದಂತಹ ಕಾರ್ಯಗಳಿಗೆ ಅನುವು ಮಾಡುತ್ತವೆ. ಪ್ರೋಟೀನ್‌ಗಳೆಂದರೆ ಅಮಿನೊ ಆಸಿಡ್‌ಗಳ ಸರಪಳಿಗಳು ಪ್ರತಿಯೊಂದು ಜೀನ್ ಮೂರು ಸಂಕೇತಗಳ ಸರಣಿ. ಪ್ರತಿ ಮೂರು ಸಂಕೇತ ಗುಂಪು ಎಂದರೆ ಒಂದು ಅಮಿನೊ ಆಸಿಡ್. ಹಾಗಾಗಿ ಯಾವುದೆ ನಿರ್ದಿಷ್ಟ ಉದ್ದೇಶಕ್ಕೆ ಅಗತ್ಯವಾದ ಪ್ರೋಟೀನ್ ತಯಾರಿಕೆಗೆ ಇರುವ ಸಂಕೇತೀಕರಿಸಿದ ಸೂತ್ರವೇ ಜೀನ್ ಆಗಿರುತ್ತದೆ. ಯಾವ ಯಾವ ಜೀನ್ ಎಂತಹ ಪ್ರೋಟೀನ್‌ಗಳ ಉತ್ಪಾದನೆಗೆ ಪ್ರೇರಣೆ ನೀಡುತ್ತವೆ ಎನ್ನುವುದನ್ನು ಓದಿದರೆ ಜೀವಿಯ ಜಾತಕ ನೋಡಿದಂತೆ ಆಗುತ್ತದೆ.

ನಮ್ಮ ಗುಣಲಕ್ಷಣಗಳಿಗೆ ಜೀನ್‌ಗಳೇ ಏಕಮಾತ್ರ ನಿರ್ಧಾರಗಳೇ?

ಸಾಮಾನ್ಯವಾಗಿ ಶಾರೀರಿಕ ಲಕ್ಷಣಗಳು ನಿರ್ದಿಷ್ಟ ಜೀನ್‌ಗಳ ಫಲಗಳು ಎನ್ನುವುದರಲ್ಲಿ ಅನುಮಾನವೇ ಇಲ್ಲ. ಬಹುತೇಕವಾದ ವರ್ತನಾ ವಿನ್ಯಾಸಗಳು ಹಾಗೂ ಕೆಲವು ವಿಶಿಷ್ಟ ಸಾಮರ್ಥ್ಯಗಳನ್ನು ಆನುವಂಶಿಕವಾಗಿ ನಿರ್ಧರಿಸುವುದೇ ಆದರೆ ಯಾವುದೆ ಒಂದು ನಿರ್ದಿಷ್ಟ ಜೀನ್‌ಗೆ ಅನ್ವಯಿಸಲಾಗುವುದಿಲ್ಲ. ಹಲವಾರು ಜೀನ್‌ಗಳು ಸಾಮರಸ್ಯದಿಂದ ಕಾರ್ಯಶೀಲವಾಗುವುದರಿಂದ ಸಂಕೀರ್ಣ ಮಾನವ ಗುಣಗಳು ಪ್ರಕಟಗೊಳ್ಳುತ್ತವೆ. ಸಂಗೀತ ಕಛೇರಿ ಇದ್ದಂತೆ ಮೃದಂಗ, ತಬಲ, ತಂಬೂರಿ, ಕೊಳಲು, ಘಟಂ ಮತ್ತಿತರ ವಾದ್ಯಗಳ ಸಮ್ಮೇಳದಿಂದ ಸಾಂಗತ್ಯಮಯ ಸಂಗೀತ ಉಗಮಿಸುವಂತೆ ಅನೇಕ ಜೀನ್‌ಗಳ ಸಾಂಗತ್ಯದಿಂದ ಒಂದು ನಿರ್ದಿಷ್ಟ ಲಕ್ಷಣ ಕಾಣಿಸಿಕೊಳ್ಳಬಹುದು. ಅಲ್ಲದೆ ಮಾನವ ಬೆಳವಣಿಗೆಯ ಮೇಲೆ ಪರಿಸರದ ಪ್ರಭಾವ ಇದ್ದೇ ಇರುತ್ತದೆ.

ಜೀನ್ ಪ್ರಭಾವ ಪ್ರಧಾನವೊ ಪರಿಸರ ಪ್ರಭಾವ ಪ್ರಧಾನವೊ?

ಎರಡು ಪ್ರಧಾನವೆ. ಏಕೆಂದರೆ ಇದು ಪಂದ್ಯವಲ್ಲ. ಜೀನ್ ಪ್ರಭಾವ ಹಾಗೂ ಪರಿಸರ ಪ್ರಭಾವದ ಅನ್ಯೋನ್ಯಕ್ರಿಯೆ ಮುಖ್ಯ. ಮಾನವ ಜೀವಿ ಏನಾಗಬಹುದು ಎನ್ನುವಲ್ಲಿ ಎರಡರ ಪಾತ್ರವೂ ಅಗತ್ಯವಿದೆ. ಮಾನವರು ತಮ್ಮ ಗುಣಲಕ್ಷಣಗಳನ್ನು ಆನುವಂಶಿಕವಾಗಿ ಪಡೆಯುವುದಿಲ್ಲ, ಜೀನ್‌ಗಳನ್ನು ಮಾತ್ರ ಪಡೆಯುತ್ತಾರೆ. ಗರ್ಭಿಕೃತ ಅಂಡದಲ್ಲಿನ ಡಿಎನ್‌ಎ ಕಣಗಳು ಪಿತೃಮಾತೃಾರ್ಜಿತ. ಗರ್ಭಿತವಾದಂದಿನಿಂದ ಸಾವಿನವರೆಗೆ ಜೀವಿ ಬೆಳವಣಿಗೆಯ ಐತಿಹಾಸಿಕ ಪ್ರಕ್ರಿಯೆಗೆ ಒಳಗಾಗುತ್ತಾನೆ. ಪ್ರತಿಕ್ಷಣದಲ್ಲಿ ಜೀವಿ ಯಾವರೀತಿ ಮಾರ್ಪಾಡಾ


ಗುತ್ತದೆ ಎನ್ನುವುದು ಜೀನ್‌ಗಳ ಮೇಲೆ ಮತ್ತು ಬೆಳವಣಿಗೆಯಾಗುತ್ತಿರುವ ಪರಿಸರದ ಮೇಲೆ ಅವಲಂಬಿತವಾಗಿದೆ. ಆದ್ದರಿಂದ ಅವಳಿಜವಳಿ ಮಕ್ಕಳಲ್ಲಿ ಏಕರೂಪದ ಆನುವಂಶಿಕ ತಳಿ ಇದ್ದರೂ ಭಿನ್ನ ಪರಿಸರಗಳಲ್ಲಿ ಬೆಳೆದರೆ ಒಂದೆ ರೀತಿ ಗುಣಗಳನ್ನು ಹೊಂದಲು ಸಾಧ್ಯವಿಲ್ಲ.

ಎಲ್ಲರೂ ಮುದಿಯಾಗಿ ಸಾಯಲೇ ಬೇಕೇ ?

ಕೆಲವು ವಿಜ್ಞಾನಿಗಳ ಪ್ರಕಾರ ಕೆಲವು ಜೀನ್‌ಗಳು ಮಾನವನಿಗೆ ವಯಸ್ಸಾಗುತ್ತಿದ್ದಂತೆ ಕೋಶಪಟುತ್ವ ಸಡಿಲಗೊಳ್ಳುವಂತೆ ಮಾಡುತ್ತವೆ. ಆದರೆ ಇದೇ ಜೀನ್‌ಗಳೇ ವ್ಯಕ್ತಿ ಎಳೆಯವನಾಗಿದ್ದಾಗ ಅವನ ಉಳಿವಿಕೆಗೆ ನೆರವಾಗಿರುತ್ತವೆ. ಅದೇರೀತಿ ದೇಹದಲ್ಲಿನ ಮುರಿದ ಮೂಳೆಗಳು ಶೀಘ್ರ ಗುಣವಾಗಲು ಅನುಕೂಲವಾಗಿ ಕ್ಯಾಲ್ಸಿಯಂ ಚಯಾಪಚಯ ಕ್ರಿಯೆಯನ್ನು ನಿಯಂತ್ರಿಸುವ ಜೀನ್ ಒಂದಿದೆ. ಅದೇ ಜೀನ್ ವ್ಯಕ್ತಿಗೆ ವಯಸ್ಸಾದ ಮೇಲೆ ರಕ್ತನಾಳಗಳಲ್ಲಿ ನಿಧಾನವಾಗಿ ಕ್ಯಾಲ್ಸಿಯಂ ಹೆಪ್ಪುಗಟ್ಟುವಿಕೆಗೂ ಕಾರಣವಾಗುತ್ತದೆ. ಹಾಗಾಗಿ ಇಂತಹ ಜೀನ್‌ಗಳನ್ನು ನಾವು ತೆಗೆಯುವಂತಿಲ್ಲ. ಪರಿವರ್ತಿಸುವಂತೆಯೂ ಇಲ್ಲ. ಆದ್ದರಿಂದ ಸದ್ಯಕ್ಕೆ ಬದುಕಿದವನು ಮುದಿಯೂ ಆಗಬೇಕು, ಸಾವನ್ನೂ ನಿರೀಕ್ಷಿಸಬೇಕು ತಪ್ಪಿಸಿಕೊಳ್ಳುವಂತಿಲ್ಲ.

ಜೀನ್ ತಳೀಕರಣದಿಂದ ಆದರ್ಶ ಮಾನವ ಕುಲವನು ಸೃಷ್ಟಿಸಬಹುದೆ ?

ಅಣುಶಕ್ತಿಯ ಕಥೆ ನಿಮಗೆ ಗೊತ್ತಿದೆಯಲ್ಲ. ಹಾಗೆಯೇ ಜೀನ್ ಶಕ್ತಿಯನ್ನು ಸಾತ್ವಿಕ ಉದ್ದೇಶಕ್ಕೆ ಬಳಸಬಹುದು. ರಾಕ್ಷಸ ಉದ್ದೇಶಗಳಿಗೂ ಬಳಸಿಕೊಳ್ಳಬಹುದು. ಜೀನ್‌ವಿಜ್ಞಾನ ಪ್ರಯೋಗಾಲಯಗಳಿಂದ ಹೊರ ಬಂದು ಸಮಾಜದ ಸ್ವತ್ತಾದಾಗ ಆ ವಿಜ್ಞಾನ ಕೇವಲ ವೈಜ್ಞಾನಿಕ ವಲಯದಲ್ಲಿ ಉಳಿಯುತ್ತದೆ ಎನ್ನುವುದು ಭ್ರಮೆ. ಅದು ಹೆಚ್ಚು ಹೆಚ್ಚು ರಾಜಕೀಯ ಬಣ್ಣವನ್ನು ಪಡೆಯುವ ಸಾಧ್ಯತೆ ಇದೆ. ಜೀನ್ ವಿಜ್ಞಾನದ ಲಾಭಗಳನ್ನು ಚಿಕಿತ್ಸೆಗೆ ಬಳಸಿಕೊಂಡರೆ ಪ್ರಗತಿಕಾರಕ ಹೆಜ್ಜೆ ಎನ್ನಬಹುದು. ಆದರೆ ಜನಾಂಗ ಮೇಲ್ಮೆ, ವರ್ಣ ಪಕ್ಷಪಾತ ಇತ್ಯಾದಿ ಅವೈಜ್ಞಾನಿಕ ಸಿದ್ಧಾಂತಗಳಿಗೆ ಕಟ್ಟುಬಿದ್ದು ವೈಜ್ಞಾನಿಕ ಸತ್ಯವನ್ನು ತಿರುಚಿ ಹಾಕುವ ಪ್ರಯತ್ನ ನಡೆದಾಗ ಜೀನ್‌ವಿಜ್ಞಾನ ಸ್ವಾರ್ಥ ಸಾಧನೆಯ ಸಾಧನ ಮಾತ್ರವಾಗುತ್ತದೆ. ಈ ಸಮಸ್ಯೆ ಮುಂದಿನ ತಲೆಮಾರುಗಳ ಜನರಿಗೆ ತಲೆನೋವಾಗುವ ಪ್ರಶ್ನೆಯೇ ಸರಿ.



ಲಾಭಕ್ಕಿಂತ ಕರ್ತವ್ಯ ಮುಖ್ಯ. ಜಯಕ್ಕಿಂತ ಸಾಧನೆ ಮುಖ್ಯ.
ಫಲಕ್ಕಿಂತ ಪ್ರಯತ್ನ ಮುಖ್ಯ. ಮಾತಿಗಿಂತ ಕೃತಿ ಮುಖ್ಯ.
-ವೇದ

ಪುಸ್ತಕ ಪರಿಚಯ ಮತ್ತು ಪುಸ್ತಕ ವಿಮರ್ಶೆ

ಮೋಡಗಳಲ್ಲಿ ಮೊದಲ ಹೆಜ್ಜೆ : ಅನುವಾದಕರು : ವೆಂಕಟರಾಜ ಪಾನಸೆ, ಪ್ರಕಾಶಕರು : ನವ ಕರ್ನಾಟಕ ಪಬ್ಲಿಕೇಶನ್ ಪ್ರೈವೇಟ್ ಲಿಮಿಟೆಡ್, ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ ಬೆಂಗಳೂರು-೫೬೦ ೦೦೧, ಬೆಲೆ: ರೂ ೪೦, ಪುಟಗಳು :೧೪೪.

ದಿವಂಗತ ವೆಂಕಟರಾಜ ಪಾನಸೆಯವರು ಅನುವಾದಿಸಿದ ಈ ಕಥೆಗಳನ್ನು ಸಿ.ಆರ್. ಕೃಷ್ಣರಾವ್ ಅವರು ಸಂಪಾದಿಸಿ ಕೊಟ್ಟಿದ್ದಾರೆ. ಅವರ ಹೇಳಿಕೆಯಂತೆ ಪಾನಸೆಯವರು ಹೊಸ ವಿಷಯಗಳನ್ನು ತಿಳಿದುಕೊಳ್ಳುವುದರಲ್ಲಿ ಅತೀವ ಆಸಕ್ತಿಯುಳ್ಳವರಾಗಿದ್ದರೆಂಬುದು ಅವರು ಅನುವಾದಿಸಿದ ಈ ಪುಸ್ತಕವನ್ನು ಓದಿದಾಗ ತಿಳಿಯುತ್ತದೆ. ಇದರಲ್ಲಿ ಬೇರೆ ಬೇರೆ ದೇಶಗಳ ಒಟ್ಟು ೧೬ ಕಥೆಗಳಿವೆ.

ದ.ಆಫ್ರಿಕದ ಕಥೆ, ಹಸಿದ ಹುಡುಗ. ಹದಿಮೂರು ವರ್ಷದ ಕರಿಯ ಹುಡುಗನ ಕಥೆ. ಈ ಹುಡುಗ ಭಿಕ್ಷುಕನಾಗಲು ಕಾರಣರು ಯಾರು ? ಹೆತ್ತ ತಾಯಿ, ತಂದೆ ದಾರಿ ತಪ್ಪಿ ನಡೆದರೆ ಮಕ್ಕಳು ಅಪರಾಧಿಗಳಾಗದಿರುತ್ತಾರೆಯೇ? ಇದೊಂದು ಉತ್ತಮ ಕಥೆಯಾಗಿದೆ. ಆಫ್ರಿಕದ ಇನ್ನೊಂದು ಕಥೆಯಲ್ಲಿ ೨೫ ವರ್ಷದ ಮಗಳು ತನ್ನ ಮದುವೆಗಾಗಿ ಮನೆಯಿಂದ ಹೊರಗೆ ಅಲೆಯಬಹುದು. ಆದರೆ ೧೯ ವರ್ಷದ ಮಗ ಈ ರೀತಿ ಮನೆಯಿಂದ ಹೊರಗೆ ಅಲೆಯುವುದನ್ನು ತಾಯಿ ಸಮ್ಮತಿಸುವುದಿಲ್ಲ. ಕರಿ ಹುಡುಗ ಬಿಳಿ ಹುಡುಗಿಯನ್ನು ಪ್ರೀತಿಸಿ ಹೇಗೆ ದುರಂತಕ್ಕೊಳಗಾಗುತ್ತಾನೆ ಎಂಬ ಈ ಕಥೆ ಚೆನ್ನಾಗಿದೆ.

ಹಂಗೆರಿಯ ಕಥೆಯಲ್ಲಿ ಹಿದೆಮೆಗ್ ಎಂಬ ಲೇಖಕ ತಾನು ಒಂದು ಉತ್ತಮ ಪುಸ್ತಕ ಬರೆದಿರುವೆನೆಂದು ಮತ್ತು ಆ ಪುಸ್ತಕದ ಮೂಲಕ ಮರಣದ ಅನಂತರವೂ ಜನರು ತನ್ನನ್ನು ಜ್ಞಾಪಿಸಿಕೊಳ್ಳುವಂತಾಗಬೇಕೆಂದು ಆಶಿಸುತ್ತಾನೆ. ಆದರೆ ಆ ಪುಸ್ತಕವನ್ನು ಓದಿದ ಕೆಲವು ಕೆಟ್ಟ ಬುದ್ಧಿಯವರು ಅವನ ಮೇಲೆ ಮತ್ಸರಗೊಂಡು ಅದನ್ನು ನಾಶಮಾಡಿ ಅವನು ಸೆರೆಮನೆಯನ್ನು ಸೇರುವಂತೆ ಮಾಡುತ್ತಾರೆ. ಅಲ್ಲದೆ, ಅವನ ಮಗ ಸೈನ್ಯಕ್ಕೆ ಸೇರುವಂತೆ ಮಾಡುತ್ತಾರೆ. ಸೈನ್ಯಕ್ಕೆ ಸೇರಿದ ಅವನ ಮಗ ಯುದ್ಧದಲ್ಲಿ ಮಡಿದನೆಂಬ ವಾರ್ತೆ ಹಿದೆಮೆಗ್‌ಗೆ ತಿಳಿಯುತ್ತದೆ. ಅನಂತರ ಆತ ಸೆರೆಮನೆಯಿಂದ ಪರಾರಿಯಾಗಿ ಬೇರೆ ಊರಿಗೆ ಹೋಗಿ ಕೃಷಿಕನಾಗುತ್ತಾನೆ. ಮುದುಕನಾದಾಗ ಆತನಿಗೆ ತನ್ನ ಮಗ ಬದುಕಿರುವನೆಂದು ತಿಳಿಯುತ್ತದೆ. ಮತ್ತು ತನ್ನ ತಂದೆಯ ಪುಸ್ತಕದ ಒಂದು ಪ್ರತಿಯನ್ನು ಜೋಪಾನವಾಗಿರಿಸಿಕೊಂಡು ಭಾರತಕ್ಕೆ ಹೋಗಿ ಅಲ್ಲಿ ಅದನ್ನು ಮುದ್ರಿಸಿದ್ದನೆಂದು ತಿಳಿಯುತ್ತದೆ. ಕೆಲವು ವರ್ಷಗಳಿಂದ ತುಂಬ ಊರುಗಳಲ್ಲಿ ಈ ಪುಸ್ತಕ ಮಾರಾಟವಾಗುತ್ತಿದೆಯೆಂದು ಮಗ ತಂದೆಗೆ ತಿಳಿಸುತ್ತಾನೆ. ಇದನ್ನು ಕೇಳಿ ಹಿದೆಮೆಗ್‌ಗೆ ತುಂಬಾ ಸಂತೋಷವಾಗುತ್ತದೆ. ನೂರು ವರ್ಷ ಬದುಕಿದ ಹಿದೆಮೆಗ್‌ನನ್ನು ಜನರು ಅವನೊಬ್ಬ ಜ್ಞಾನಿ, ಸಭ್ಯ, ಒಳ್ಳೆ ಕೃಷಿಕನಾಗಿದ್ದವನು ಎಂದು ಹೊಗಳುತ್ತಾರೆ.

ಸೋವಿಯತ್ ಒಕ್ಕೂಟದ ಸುಖದ ಹಕ್ಕಿ ಎಂಬ ಕಥೆಯಲ್ಲಿ ಬಡ ಹುಡುಗಿಗೆ ಶ್ರೀಮಂತಳಾಗುವ ಆಸೆ. ಶ್ರೀಮಂತಳಾದ ಬಳಿಕ ಆಕೆಗೆ ಶ್ರೀಮಂತಿಕೆಯಿಂದ ಯಾವ ಸುಖವೂ ಇಲ್ಲವೆಂದು ತಿಳಿಯುತ್ತದೆ. ಯುಗೊಸ್ಲೋವಿಯಾದ ಕಥೆಯಲ್ಲಿ ಒಬ್ಬ ಪ್ರೊಫೆಸರನು ಹತ್ತು ವರ್ಷ ತನ್ನ ಪತ್ನಿ ಮತ್ತು ಇಬ್ಬರು ಮಕ್ಕಳ ಜತೆ ಚೆನ್ನಾಗಿದ್ದವನು ಅನಂತರ ನಡೆದ ಒಂದು ಘಟನೆಯಿಂದಾಗಿ ತನ್ನ ಪತ್ನಿಯನ್ನು ತಾನು ವಂಚಿಸಿದೆನೆಂದು ಮನಃಶ್ಶಾಂತಿಯನ್ನು ಕಳೆದುಕೊಂಡು ಚಿಕಿತ್ಸೆಗಾಗಿ ಡಾಕ್ಟರರಲ್ಲಿಗೆ ಹೋಗುತ್ತಾನೆ. ಪ್ರೊಫೆಸರನ ಈ ಕಥೆ ಕೇಳಿದ ಡಾಕ್ಟರರನೇ ತನ್ನ ಮನಃಶ್ಶಾಂತಿಯನ್ನು

ಕಳೆದುಕೊಳ್ಳುತ್ತಾನೆ. ಈ ಕಥೆ ಚೆನ್ನಾಗಿದೆ.

ಆಸ್ಟ್ರೇಲಿಯಾದ ಎನ್‌ಗೊಲ ಎಂಬ ಕಥೆಯಲ್ಲಿ ಕಣ್ಮರೆಯಾದ ತನ್ನ ಪ್ರೀತಿಯ ಮಗಳನ್ನು ಅರಸುತ್ತಾ ವ್ಯಕ್ತಿಯೊಬ್ಬ ಊರಿಂದ ಊರಿಗೆ ಅಲೆದಾಡುತ್ತಾನೆ. ಹಲವಾರು ವರ್ಷಗಳ ತರುವಾಯ ಮುದುಕನಾದ ಅವನು ಮೇರಿ ಎಂಬ ಹೆಂಗಸನ್ನು ಭೇಟಿಯಾಗಿ ಆಕೆಗೆ ತನ್ನ ಮಗಳ ವಿಷಯನ್ನು ತಿಳಿಸುತ್ತಾನೆ. ಈ ಕಥೆಯ ಅಂತ್ಯ ಕುತೂಹಲಕಾರಿಯಾಗಿದೆ.

ಈ ಪುಸ್ತಕದಲ್ಲಿ ಬರುವ ಇನ್ನೊಂದು ಕಥೆ ಪೋಲೆಂಡಿನದು. ಜಾನ್‌ನ ಸ್ನೇಹಿತ ದೂರವಾಣಿಯ ಮೂಲಕ ಜಾನ್‌ಗೆ ಸಂದೇಶ ಕಳುಹಿಸುತ್ತಾನೆ. ಈ ಸಂದೇಶವನ್ನು ಪಡೆದವನು ಜಾನ್‌ನ ಮಗ. ಈ ಕಥೆಯನ್ನು ಓದುವಾಗ ಚೆನ್ನಾಗಿಲ್ಲವೆನಿಸಿದರೂ ಇದರ ಅಂತ್ಯ ಚೆನ್ನಾಗಿದೆ. ಮೋಡಗಳಲ್ಲಿ ಮೊದಲ ಹೆಜ್ಜೆ ಎಂಬುದು ಪೋಲೆಂಡಿನ ಇನ್ನೊಂದು ಕಥೆ. ಇದು ಈ ಪುಸ್ತಕದ ಹೆಸರೂ ಆಗಿದೆ. ಈ ಕಥೆಯನ್ನು ಓದಿದಾಗ ಸರಿಯಾದ ದಾರಿಯಲ್ಲಿ ನಾವು ಯಾಕೆ ಮುನ್ನಡೆಯಬೇಕು ಎಂಬುದು ಗೊತ್ತಾಗುತ್ತದೆ.

ಜಗತ್ತಿನಲ್ಲಿ ಬೇರೆ ಬೇರೆ ದೇಶಗಳಲ್ಲಿ ಬೇರೆ ಬೇರೆ ಭಾಷೆಗಳನ್ನಾಡುವ ಲೇಖಕರು ಯಾವ ರೀತಿಯಲ್ಲಿ ಕಥೆಗಳನ್ನು ಬರೆಯುತ್ತಾರೆಂಬುದು ಈ ಅನುವಾದಿತ ಕಥೆಗಳನ್ನು ಓದಿದಾಗ ತಿಳಿಯುತ್ತದೆ. ಆದರೆ ಇದರಲ್ಲಿ ಬಂದ ಕೆಲವು ಕಥೆಗಳು ಅಷ್ಟೊಂದು ಚೆನ್ನಾಗಿಲ್ಲವೆಂದು ಅನಿಸುತ್ತದೆ. ಕೆಲವು ಚಿಕ್ಕ ಕಥೆಗಳು ಚೆನ್ನಾಗಿವೆ. ಬೇರೆ ಬೇರೆ ದೇಶದ ಕಥೆಗಳು ಒಂದೇ ಕಡೆ ಬಂದಿರುವುದರಿಂದ ಓದುಗರಿಗೆ ಒಂದೇ ಕಡೆ ಬೇರೆ ಬೇರೆ ಕಥೆಗಳನ್ನು ಓದಲು ಈ ಪುಸ್ತಕ ಸಹಾಯವಾಗಿದೆ. ವೆಂಕಟೇಶ ಪಾನಸೆಯವರು ಈಗಿಲ್ಲವಾದರೂ ಅವರು ಬರೆದಿರುವ ಈ ಕಥೆಗಳನ್ನು ಸಂಪಾದಿಸಿ ಪ್ರಕಾಶಪಡಿಸಿದ ಸಿ.ಆರ್. ಕೃಷ್ಣರಾವ್ ಅವರು ಪಾನಸೆಯವರನ್ನು ಜನರು ಮರೆಯದಂತೆ ಮಾಡಿದ್ದಾರೆ. ಅವರಿಗೆ ಧನ್ಯವಾದಗಳು

ಭಾರತಿ ಭಟ್
೧೩೫, ಡಿ-ಬ್ಲಾಕ್, ೨೨ನೇ ಕ್ರಾಸ್
೩ನೇ ಮೈನ್, ವಿಜಯನಗರ ೩ನೇ ಹಂತ
ಮೈಸೂರು-೫೭೦-೦೦೭

"ವ್ಯಷ್ಟಿ" (ಕಥಾಸಂಕಲನ) ಲೇಖಕಿ : ಸರೋಜಾ. ಆರ್. ಆಚಾರ್ಯ, ಪ್ರಕಾಶನ: ಶ್ರೀ ಪ್ರಕಾಶನ, ೮೨ 'ಶ್ರೀಗುರುಕೃಪ' ೩ನೇ ಹಂತ, ಗಿರಿನಗರ, ಬೆಂಗಳೂರು- ೫೬೦ ೦೮೫. ಪುಟಗಳು: viii+೧೬೮. ಪ್ರಥಮ ಮುದ್ರಣ :೧೯೯೯. ಬೆಲೆ: ರೂ ೬೫.

ಸರೋಜಾ ಆರ್. ಆಚಾರ್ಯರು ಊಟಿಯಲ್ಲಿ ಹುಟ್ಟಿ ಬೆಳೆದರು. ತಮಿಳು ಭಾಷೆಯಲ್ಲಿ ವಿದ್ಯಾಭ್ಯಾಸ. ತಾಯಿಯಿಂದ ಕನ್ನಡ ಕಲಿತರು. ಮದುವೆಯಾಗಿ ಊರೂರು ಸುತ್ತುತ್ತಿದ್ದರೂ (ಗಂಡನಿಗೆ ಬ್ಯಾಂಕಿನಲ್ಲಿ ಉದ್ಯೋಗ) ಕನ್ನಡ ಭಾಷೆಯಲ್ಲಿ ಪ್ರೌಢಿಮೆ ಗಳಿಸಿದರು. ತುಷಾರ, ಉದಯವಾಣಿ, ಮಯೂರ ಇತ್ಯಾದಿ ಪತ್ರಿಕೆಗಳಲ್ಲಿ ಈಗಾಗಲೇ ಇವರ ಹಲವಾರು ಕತೆ ಲೇಖನಗಳು ಪ್ರಕಟವಾಗಿವೆ. ಇವರ ಕಲ್ಪನೆ ಹಾಗೂ ಬರವಣಿಗೆಯ ಶೈಲಿ ಪ್ರಬುದ್ಧವಾಗಿವೆ.

ಈ ಹೊತ್ತಗೆಯಲ್ಲಿ ನಾಲ್ಕು ಕತೆಗಳಿವೆ. ಇವುಗಳಲ್ಲಿ ೨ ದೀರ್ಘಕತೆಗಳು. ಒಬ್ಬ ಯುವತಿಯ ಮನೋವಿಪ್ಲವವನ್ನು 'ಆಚೆ ತೀರದ ಹಸಿರು' ಕತೆಯಲ್ಲಿ ಸಮರ್ಥವಾಗಿ ನಿರೂಪಿಸಿದ್ದಾರೆ. ಅನಾಥನಾದ ಸೂರಿ ಚಂಚಲ ಮತಿ ಹೆಂಡತಿಯ ನಡವಳಿಕೆಯಿಂದ ನೊಂದರೂ

ಅವಳ ಭಾವನೆಗೆ ಎದುರಾಡದೆ ತಾಳ್ಮೆಯಿಂದ ಸಂಸಾರ ತೂಗಿಸುತ್ತಾನೆ. ತಮಗೆ ಮಕ್ಕಳಾಗುವುದಿಲ್ಲ(ಅದೂ ಹೆಂಡತಿಯಲ್ಲಿರುವ ದೋಷದಿಂದ) ಎಂದು ತಿಳಿದಾಗ ದತ್ತು ತೆಗೆದುಕೊಳ್ಳುವ ನಿರ್ಧಾರ ತಾಳುತ್ತಾನೆ. ಆದರೆ ಹೆಂಡತಿಯ ಒಪ್ಪಿಗೆ ಸಿಗುವುದಿಲ್ಲ. ಕೊನೆಗೆ ಹೆಂಡತಿಗೆ ತಗ್ಗಿದ್ದು ಹೆಚ್ಚಾಯಿತೇನೊ ಎಂದು ಎಚ್ಚೆತ್ತುಕೊಳ್ಳುವ ಸೂರಿ ತನ್ನ ಮನೆಯಲ್ಲಿ ಕೆಲಸ ಮಾಡುತ್ತಿದ್ದ ಹೆಂಗಸು ತೀರಿಕೊಂಡಾಗ ಅವಳ ಮಗುವನ್ನೇ ಸಾಕುವ ದೃಢ ನಿಶ್ಚಯ ತಳೆಯುತ್ತಾನೆ. ಸೂರಿಯ ನಿಲವನ್ನು 'ವಲಯಗಳ ದಾಟ' ಕತೆಯಲ್ಲಿ ಮಾರ್ಮಿಕವಾಗಿ ಚಿತ್ರಿಸಿದ್ದಾರೆ. ಗಾಳಿ ಮಾತನ್ನು ನಂಬುವ, ಪೂರ್ವಗ್ರಹ ಪೀಡಿತ ಮನೋಭಾವವನ್ನು 'ವ್ಯವಸ್ಥೆ' ಕತೆಯಲ್ಲಿ ನೀಳವಾಗಿ ನಿರೂಪಿಸಿದ್ದಾರೆ. 'ನಿರೀಕ್ಷೆ' ಕತೆ ಓದುವಾಗ ತುಂಬ ಉದ್ದವಾಗಿ ಹೇಳಿದ ವಿಷಯವೇ ಚರ್ವಿತಚರ್ವಣವಾಗಿ ಉದಾಸೀನ ಮೂಡುತ್ತದೆ. ಇದನ್ನೇ ಹ್ರಸ್ವಗೊಳಿಸಿದ್ದರೆ ಚೆನ್ನಾಗಿರುತ್ತಿತ್ತು.

ಪುಸ್ತಕಕ್ಕೆ ಕಳಶಪ್ರಾಯವಾಗಿ ಎ. ಈಶ್ವರಯ್ಯನವರ ಮುನ್ನುಡಿ ಇದೆ. 'ಸರೋಜಾ ಆಚಾರ್ಯ ಅವರದ್ದು ವಿವರಣಾತ್ಮಕ ಶೈಲಿ. ಸಣ್ಣಕತೆಗಿಂತ ಕಾದಂಬರಿ, ನೀಳ್ಗತೆಗಳಿಗೆ ಹೆಚ್ಚು ಹೊಂದಿಕೊಳ್ಳುವಂಥಾದ್ದು. ಸಣ್ಣಕತೆಯ ದೃಷ್ಟಿಯಿಂದ ಅವರು ಇನ್ನಷ್ಟು ನಿಪುಣರಾಗುವ ಅವಶ್ಯಕತೆ ಇದೆ' ಎಂದು ಈಶ್ವರಯ್ಯ ಮುನ್ನುಡಿಯಲ್ಲಿ ಬರೆದಿದ್ದಾರೆ. ಒಟ್ಟಿನಲ್ಲಿ ವಿಚಾರಾತ್ಮಕವಾಗಿ ಚಿಂತಿಸಿ ಕತೆ ರಚಿಸಬಲ್ಲ ಸರೋಜರು ಒಳ್ಳೆಯ ಕತೆಗಾರ್ತಿಯರೆಂದು ಹೇಳಬಹುದು.

ರುಕ್ಮಿಣಿ ಮಾಲಾ
ಮನೆ ಸಂಖ್ಯೆ ೮ 'ಅತ್ರಿ'
ಕಾಮಾಕ್ಷಿ ಆಸ್ಪತ್ರೆ ರಸ್ತೆ, ಸರಸ್ವತೀಪುರ
ಮೈಸೂರು ೫೭೦ ೦೦೯

ನನ್ನ ಬೆಲ್ಜಿಯಮ್ ಪ್ರವಾಸ : ಲೇಖಕಿ: ಭಾರತಿಭಟ್, ಪುಟಗಳು-೧೬೦, ಬೆಲೆ :ರೂ ೫೦ , ವಿತರಕರು : ಅತ್ರಿಬುಕ್ ಸೆಂಟರ್, ಬಲ್ಮಠ, ಮಂಗಳೂರು-೫೭೫ ೦೦೧.

ಈ ಕೃತಿಯಲ್ಲಿ ಶ್ರೀಮತಿ ಭಾರತಿಯವರು ಪ್ರವಾಸ ಕಥನದೊಂದಿಗೆ ತಮ್ಮ ಅಡಿಕೆ ಕೃಷಿಯ ಅನುಭವವನ್ನೂ ವಿವರಿಸಿದ್ದಾರೆ. ಎತ್ತಣ ಅಡಿಕೆ? ಎತ್ತಣ ಬೆಲ್ಜಿಯಮ್ ಎನ್ನುವಿರೇನೋ! ಆದರೆ ಅದು ಹಾಗಲ್ಲ. ಅಡಿಕೆಗೂ ಮಾನಕ್ಕೂ ಹತ್ತಿರದ ನಂಟು ಉಂಟೆಂದು ಕೇಳಿದ್ದೇವೆ. ಆದರೆ ಅಡಿಕೆಯ ಹಿಂದೆ ಅಡಗಿರುವ ಹೋರಾಟದ ಬದುಕನ್ನರಿತಾಗ ನೀವು ಈ ಹೊಸಗಾದೆ ಕಟ್ಟಬಹುದು. ''ಮನೆ ಕಟ್ಟಿ ನೋಡು-ಅಡಿಕೆ ನೆಟ್ಟು ನೋಡು'' ಪ್ರಕೃತ 'ಕೃತಿಯಲ್ಲಿ ಲೇಖಕಿ ಬೆಲ್ಜಿಯಂ ಪ್ರವಾಸದ ನಿರೀಕ್ಷೆಯಿಂದ ಪ್ರಾರಂಭಿಸಿ ಹಳ್ಳಿಗೆ ಪುನಃ ಬಂದು ಸೇರುವವರೆಗಿನ ಎಲ್ಲ ಘಟನೆಗಳನ್ನು ಎಳೆ ಎಳೆಯಾಗಿ ಬಿಡಿಸಿ, ಅಚ್ಚುಕಟ್ಟಾಗಿ ಓದುಗರ ಮುಂದಿರಿಸಿದ್ದಾರೆ. ದೀರ್ಘವಾದ ಆತ್ಮ ವೃತ್ತಾಂತದಂತೆ ಈ ಕೃತಿಯನ್ನು ಪ್ರಸ್ತುತಪಡಿಸಿದ್ದಾರೆ.

ಲೇಖಕಿ ತಮ್ಮ ಪ್ರಯಾಣದ ಸಿಹಿಕಹಿ ಅನುಭವಗಳನ್ನೆಲ್ಲ ಬೊಗಸೆ ಬೊಗಸೆಯಾಗಿ ಉಣಬಡಿಸಿರುವುದರಿಂದ ಓದುಗರಿಗೆ ಸ್ವತಃ ಗಮ್ಯಸ್ಥಾನಕ್ಕೆ ಪಯಣಿಸಿದ ಅನುಭವವಾದೀತು. ಇಲ್ಲಿ ಗಮನಿಸಬೇಕಾದ ಇನ್ನೊಂದಂಶವಿದೆ. ಬೆಲ್ಜಿಯಮ್‌ನ ರಾಜಧಾನಿ ಬ್ರಸೆಲ್ಸ್‌ನ ವಿಮಾನ ನಿಲ್ದಾಣದಲ್ಲಿ 'ಪಾಸ್ ಪೋರ್ಟ'ನ್ನು ಪರಿಶೀಲಿಸಿದ

ಅಧಿಕಾರಿಯು ಭಾರತಿಯವರಿಗೆ ''ಈ ದಿನ ನಿಮಗೆ ಶುಭವಾಗಲಿ'' ಎಂದು ಹಾರೈಸಿದ್ದು ಆಶ್ಚರ್ಯಕರವಾಗಿದೆ. ಇಂಥ ಆದರ, ಸೌಜನ್ಯ ನಮ್ಮ ದೇಶದ ಅಧಿಕಾರಿಗಳಲ್ಲಿ ಎಲ್ಲಾದರೂ ಕಂಡು ಬಂದೀತೇ? 'ಅತಿಥಿದೇವೋ ಭವ' ಎನ್ನುವುದು ನಮ್ಮ ಸಂಸ್ಕೃತಿ ಎಂದೆನ್ನುವ ನಾವು ಆಚರಣೆಯಲ್ಲಿ ಹಾಗಿದ್ದೇವೆಯೇ ಎಂದು ಪ್ರಶ್ನಿಸಿಕೊಳ್ಳಬೇಕು.

ಇದೇರೀತಿ ಬ್ರಸ್ಸೆಲ್ಸ್, ಅಂಟ್‌ವರ್ಪ್‌ಗಳ ತರಕಾರಿ, ದಿನಸಿ ಅಂಗಡಿಗಳಲ್ಲಿ, ಮಹೋನ್ನತ ಮಾರುಕಟ್ಟೆಗಳಲ್ಲಿ, ಸೌಜನ್ಯದ ಸ್ವಾಗತ, ಶುಭಾಶಯಗಳ ಬೀಳ್ಕೊಡುಗೆ ಇರುತ್ತವೆಯೆಂದು ಭಾರತಿಯವರು ಬರೆದಿದ್ದಾರೆ. ಆದರೆ ಅಲ್ಲಿರುವ ಭಾರತೀಯರ ಮಳಿಗೆ, ಅಂಗಡಿಗಳಲ್ಲಿ ಭಾರತೀಯತ್ವವೇ! ಎಂದರೆ- ಗ್ರಾಹಕರ ಬಗ್ಗೆ ಸ್ನೇಹದ ಸಂತೋಷದ ಯಾವುದೇ ಪ್ರತಿಕ್ರಿಯೆ ತೋರಿಸುವ ಅಭ್ಯಾಸವಿಲ್ಲ. ವಿದೇಶೀ ಮಾರುಕಟ್ಟೆಯಲ್ಲಿ ನಾವು ಹಿಂದೆ ಬೀಳುತ್ತಿರುವುದರ ಮೂಲ ಕಾರಣ ಇಲ್ಲಿರಬಹುದೇ?

ವಿಲ್‌ರಿಜ್‌ಕ್ ಒಂದು ಹಳ್ಳಿಯಾದರೂ ಅಲ್ಲಿಯ ಬಾಡಿಗೆ ಮನೆಗಳು ಆಧುನಿಕ ಸುಖ ಜೀವನದ ದ್ಯೋತಕವಾಗಿವೆ. ಉಷ್ಣಜನಕ ಯಂತ್ರಗಳಿಂದ ಶೀತೋಷ್ಣ ನಿಯಂತ್ರಣವಿರುವ ಕೋಣೆಗಳು, ಸೇವೆಗೆ ಸಜ್ಜಾಗಿ ಒಲೆ, ಇಂಧನ, ವಿದ್ಯುತ್ ಚಾಲಿತ ಇತರ ಸಲಕರಣೆಗಳು (ಬಟ್ಟೆ ಒಗೆಯುವ ಯಂತ್ರ ಮಾತ್ರ ಈ ಪಟ್ಟಿಯಲ್ಲಿಲ್ಲ) ಪಾತ್ರೆ, ಪಡಗಗಳು, ಮೆತ್ತೆ ಹಾಸಿದ ಮಂಚಕುರ್ಚಿಗಳು, ವಿವಿಧೋದ್ದೇಶಗಳನ್ನು ಪೂರೈಸಲು ಬೇಕು ಬೇಕಾದ ಸಕಲ ಸಾಧನಗಳು, ಅವು ಎಲ್ಲೆಲ್ಲಿ ಇರಬೇಕೋ ಅಲ್ಲಲ್ಲಿ ನಿಯುಕ್ತಗೊಂಡಿರುವುದು ಒಂದು ರೀತಿಯ ನಿಶ್ಚಿಂತೆಯ ಜೀವನಕ್ಕೆ ಪೂರಕವೆನ್ನಬಹುದು. ಇಷ್ಟಿದ್ದರೂ ಮನೆಗಳ ಶೌಚಗೃಹಗಳು ಭಾರತೀಯ ಶೌಚಕ್ಕೆ ಹೊಂದುವಂಥವುಗಳಲ್ಲವೆಂಬುದೊಂದು ಕೊರತೆಯಾಗಿ ಕಾಣುವುದು.

ವಸತಿ ಬಡಾವಣೆಗಳಿಂದ ನಗರಕ್ಕೆ ಹೋಗಲು ಸಾಲುಮರಗಳ ನಡುವೆ ಹಾಯುವ ಕಾಲ್ದಾರಿಗಳು ಮನತಣಿಸುವಂಥವು. ಅಂಟ್‌ವರ್ಪ್ ಪಟ್ಟಣದ ಕನಸಿನ ಲೋಕದಂಥ ಸರೋವರದಲ್ಲಿ ನೌಕಾ ವಿಹಾರ; ಚಳಿಗಾಲವು ಉಚ್ಚಸ್ಥಾಯಿಗೇರುವ ಮೊದಲೇ ಅದನ್ನೆದುರಿಸಲು ಪ್ರಕೃತಿಯು ಗಿಡಮರಗಳನ್ನು ಸಜ್ಜುಗೊಳಿಸುವ ಕ್ರಮ ಅತಿಸುಂದರ- ಮೊದಲಹೆಜ್ಜೆ- ಮರಗಳ ಎಲೆಗಳೆಲ್ಲ ಹಸುರ ಕಳೆದು ಬಂಗಾರದ ವರ್ಣತಾಳುವುದು, ಮತ್ತೆ ಹಣ್ಣೆಲೆಗಳೆಲ್ಲ ಉದುರಿ ಬೋಳು ಕೊಂಬೆಗಳ ಅಸ್ಥಿಪಂಜರವಾಗುವುದು, ಉದುರಿದ ಎಲೆಗಳು ವರ್ಣವಿನ್ಯಾಸವನ್ನು ಚಿತ್ರಿಸುವುದು, ಹಿಮಪಾತದಲ್ಲಿ ಮಿಂದ ಸ್ವಚ್ಛ ಶುಭ್ರ ಮೈದಾನುಗಳಲ್ಲಿ, ಮರಗಳು ಶೀತನಿದ್ದೆಯಲ್ಲಿ ತೊಡಗುವುದು, ಮುಂದೆ ತಿಂಗಳೆರಡುರುಳಿದಂತೆ ಸೂರ್ಯಕಿರಣದಲ್ಲಿ ಶಾಖ ಹುಟ್ಟಿ, ವಸಂತಾಗಮನವಾಗಿ, ಮರಗಳೆಲ್ಲ ಎಚ್ಚತ್ತು ಚಿಗುರೊಡೆಯ ತೊಡಗುವುದು; ಇಂಥ ಅನುಪಮ ಲಾಸ್ಯವನ್ನು ಕಂಡವರೇ ಧನ್ಯರು. ಆದರೆ ಅಷ್ಟು ಕಾಲ ಅಲ್ಲಿರಲು ಭಾರತಿಯವರಿಗೆ ಅವಕಾಶ ಒದಗಿರಲಿಲ್ಲ. ಅವರು ಭಾರತಕ್ಕೆ ಹಿಂದಿರುಗುವ ಸಮಯ ಒದಗಿ ಬಂತು. ಆದರೆ ಪತಿಯ ಜತೆಗೂಡಿ ಸುಖಪ್ರಯಾಣದ ಕನಸು ಹೊತ್ತ ಅವರಿಗೆ ಸಿಕ್ಕಿದ್ದು ಮರುಬಾರಿಯೂ ಒಂಟಿಪ್ರಯಾಣ. ಹೀಗೆ ಮನೆ ಸೇರುವವರೆಗಿನ ಕಥೆ ಇದರಲ್ಲಿದೆ.

ಇಲ್ಲಿ ಮುಖ್ಯವಾಗಿ ಗಮನಕ್ಕೆ ಬರುವ ಅಂಶವೆಂದರೆ- ಭಾರತಿಯವರು ತೆರೆದ ಹೃದಯದಿಂದ, ಒಂದಿಷ್ಟೂ ಬೇಸರವಿಲ್ಲದೆ, ತಮ್ಮ ಅನಿಸಿಕೆಗಳನ್ನು- ಚಿಂತೆ, ಭಯ, ನಿರಾಸೆ, ಸಂತಸ, ಉತ್ಸಾಹಗಳನ್ನು ಓದುಗರೊಡನೆ ಹಂಚಿಕೊಂಡಿರುವುದು ಮಂಗಳೂರಿಂದ ಮುಂಬಯಿ, ಕೈರೋ ಮಾರ್ಗವಾಗಿ ಬ್ರಸೆಲ್ಸ್‌ವರೆಗೆ ನಡೆಸಿದ ಪ್ರವಾಸದಲ್ಲಿ ಒಂಟಿತನದಿಂದಾಗಿ ಉಂಟಾದ ಅಳುಕು, ಭಯಗಳು- 'ವಿಮಾನಾಪಹರಣ, ಪ್ರಯಾಣಿಕರ ಪ್ರಾಣವಿತ್ತಗಳನ್ನು ಪಣವಾಗಿಡುವ, ಭಯೋತ್ಪಾದಕ

ಸಂಸ್ಕೃತಿ ಬೆಳೆದಿರುವ ಈ ಯುಗದಲ್ಲಿ- ಸಾಮಾನ್ಯ ವಿಷಯವೇ. ನಮ್ಮನೆಲ, ನಮ್ಮ ಜನ, ಎಂಬ ವಿಶ್ವಾಸದ ಪರಿಧಿಯಿಂದ ಹೊರ ಬಂದು ದೂರ ಹೋದಾಗ ಸ್ವದೇಶವಾಸಿಗಳು ಕಾಣಸಿಕ್ಕಿದರೆ ಅವರು ಬಂಗಾಳಿಗಳಿರಲಿ, ಅಥವಾ ಬೇರಿನ್ನಾವುದೋ ರಾಜ್ಯದವರಿರಲಿ, ಆತ್ಮೀಯತೆ ಸಹಕಾರ ಬುದ್ಧಿ ತಕ್ಷಣವೇ ಬೆಳೆಯುವುದೆಂಬು ದಕ್ಕೆ ಒಂದೆರಡು ನಿದರ್ಶನಗಳಿಲ್ಲಿವೆ. ಸಹ ಪ್ರಯಾಣದ ಅಲ್ಪಾವಧಿಯಲ್ಲೇ 'ಗೋಸ್ವಾಮಿ' ಎಂಬ ಮುಂಬಯಿವಾಸಿ ವಿಧುರರು ತಮ್ಮ ಮರುವಿವಾಹದಂಥ ವೈಯಕ್ತಿಕ ವಿಷಯವನ್ನು ತಿಳಿಸಿ ಭಾರತಿಯವರಿಗೆ ಆತ್ಮೀಯ ಗೆಳತಿಯ ದರ್ಜೆಯನ್ನಿತ್ತುದಲ್ಲದೆ, ಯಾವ ಕನ್ಯೆಯನ್ನು ಆರಿಸಿಕೊಳ್ಳಬಹುದೆಂದು ಸಲಹೆಯನ್ನು ಕೇಳಿ ಸಮಾಧಾನ ಹೊಂದಿದ ಸಂಗತಿ, ಮಾನವರ ನಿಜಸ್ವಭಾವದ ಪರಿಚಯ ನೀಡುತ್ತದೆ. ಅಪರಿಚಿತ ವಿದೇಶೀಯರ ನಡುವೆ, ನಮ್ಮ ನೆರೆಹೊರೆಯ ದೇಶವಾಸಿಗಳೂ ಆತ್ಮೀಯರೆನಿಸುತ್ತಾರೆ. ಪಾಕಿಸ್ತಾನಿಗಳು ಕೂಡ ಈ ಮಾತಿಗೆ ಹೊರತಲ್ಲ.

ಪಾಕಿಸ್ತಾನಿ ವಿದುಷಿಯೊಬ್ಬಳು ಭಾರತಿ ದಂಪತಿಗಳನ್ನು ತನ್ನ ಬೆಲ್ಜಿಯಮ್ ಮಿತ್ರರಲ್ಲಿಗೆ ಬಂದು ಔತಣಕ್ಕೆ ತನ್ನ ಕಾರಿನಲ್ಲಿ ಕರೆದೊಯ್ಯುತ್ತಾಳೆ. ಇದನ್ನು ಓದಿ ನನಗೆ ಇಂತಹುದೇ ಸ್ನೇಹ ಸಹಕಾರದ ಘಟನೆಗಳು ನೆನಪಾದುವು. ನನಗೆ ಚೆನ್ನಾಗಿ ಪರಿಚಯವಿರುವ ಒಬ್ಬ ಹಿಂದುಸ್ತಾನಿ ಪಿಟೀಲು ವಾದಕಿ 'ಟ್ರಿಪೋಲಿ' ನಗರದಲ್ಲಿ (ಅರಬಸ್ಥಾನದಲ್ಲಿದ್ದಾಗ ಅವಳಿಗೆ ಅಲ್ಲಿಯ ಆಕಾಶವಾಣಿಯಿಂದ ಕಾರ್ಯಕ್ರಮ ನೀಡಲು ಆಹ್ವಾನಗಳು ಬರುತ್ತಿದ್ದವು. ಅವಳ ಸಂಗೀತಗೋಷ್ಠಿಯಲ್ಲಿ ಗಾಯಕರು ಪಾಕಿಸ್ತಾನಿ, 'ತಬಲಾಸಾಥಿ' ಬಾಂಗ್ಲಾದೇಶದವರಿರುತ್ತಿದ್ದರು. ದೇಶ ವಿಭಜನೆಯಾಗಿದ್ದರೂ, ಪರದೇಶೀಯರ ನಡುವೆ ಅವರನ್ನು ಸಂಗೀತದ ಏಕತಾನವು ಬಂಧುಗಳಂತೆ ಬೆಸೆದಿತ್ತು.

ಒಟ್ಟಿನಲ್ಲಿ ಆತ್ಮೀಯತೆಯ ತೆಕ್ಕೆಯೊಳಗೆ ಸೆಳೆದುಕೊಳ್ಳುವ ಇವರ ಲೇಖನಿ ಸ್ನೇಹ ಸರಳತೆಗೆ ಕನ್ನಡಿ ಹಿಡಿದಂತಿದೆ. ಇಷ್ಟಾದರೂ, ಇದೊಂದು ಮಾತನ್ನು- ಕನ್ನಡ ಭಾಷೆಗೆ ನ್ಯಾಯ ಒದಗಿಸುವ ಕರ್ತವ್ಯಕ್ಕಾಗಿ- ಹೇಳಲೇ ಬೇಕಾಗಿದೆ. ಅದೇನೆಂದರೆ- ಪುಸ್ತಕದ ಉದ್ದಕ್ಕೂ ಬರುವ ಆಂಗ್ಲಪದಗಳಿಗೆ ಲಭ್ಯವಿದ್ದಲ್ಲೆಲ್ಲಾ ಕನ್ನಡ ಅಥವಾ ದೇಶೀ ಪದಗಳನ್ನು ಬಳಸಿಕೊಂಡಿದ್ದಲ್ಲಿ ಪುಸ್ತಕದ ಘನತೆ ಇಮ್ಮಡಿಯಾಗುತ್ತಿತೆಂಬುದು. ಆದರೆ ಭಾರತಿಯವರ ನಿಲುವು ಹೀಗಿರಬಹುದೇ? - ಬ್ಯಾಗು, ಟಾಯ್ಲೆಟ್, ಟೇಕ್ಸ್, ಡ್ರಿಂಕ್ಸ್, ಡೈರೆಕ್ಷನ್ ಚಾರ್ಟ್, ಲೆಕ್ಚರ್ ಹಾಲ್, ರೂಮ್, ಆರೆಂಜ್ ಜ್ಯೂಸ್ ಮುಂತಾದ ಪದಗಳು ಓದಿದ ಹಾಗೂ ಓದದ ಕನ್ನಡಿಗರ ಮನೆ ಮಾತಿನಲ್ಲೇ - ಹಾಸು ಹೊಕ್ಕಿನಂತೆ ಸೇರಿ ಹೋಗಿರುವ ವಸ್ತುಸ್ಥಿತಿಯಲ್ಲಿ, ಸ್ಪಷ್ಟತೆ ಹಾಗೂ ಅರ್ಥವ್ಯಾಪ್ತಿಯಲ್ಲಿ ವ್ಯತ್ಯಯವಾಗುವ ಸಾಧ್ಯತೆಯುಳ್ಳ ಪರ್ಯಾಯ ಪದಗಳ ಅಗತ್ಯವೇನೆಂಬ ಅನಿಸಿಕೆ ಇದ್ದೀತೇ? ಆದರೆ 'ಕನ್ನಡ ಉಳಿಸಿ 'ಹೋರಾಟವನ್ನು ಕಡೆಗಣಿಸಬಹುದೇ? ನನ್ನಲ್ಲೇಳುವ ಪ್ರಶ್ನೆಗಳು.

ಸರಸ್ವತಿ ಬಡೆಕ್ಕಿಲ
ಮನೆಸಂಖ್ಯೆ ೧೨, ದೀಪಾನಗರ
ಭೋಗಾದಿ, ಮೈಸೂರು-೫೭೦ ೦೦೬

ಸುಖ ನೀಡದ ಸಂಪತ್ತು : ಪ.ರಾಮಕೃಷ್ಣ ಶಾಸ್ತ್ರಿ; ಪ್ರಕಾಶನ: ನವಕರ್ನಾಟಕ ಪಬ್ಲಿಕೇಶನ್ ಪ್ರೈವೇಟ್ ಲಿಮಿಟೆಡ್, ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ, ಬೆಂಗಳೂರು-೫೬೦ ೦೦೧, ಮೊ.ಮು. ೧೯೯೯. ಪುಟಗಳು-೪೦ ಬೆಲೆ-೧೨.೦೦.

ಇದು ಪ.ರಾಮಕೃಷ್ಣಶಾಸ್ತ್ರಿ ಅವರ ಏಳು ಮಕ್ಕಳ ಕಥೆಗಳನ್ನು ಒಳಗೊಂಡ ಪುಟ್ಟ ಪುಸ್ತಕ. ಕನ್ನಡದ ಪ್ರಸಿದ್ಧ ವಾರಪತ್ರಿಕೆ, ದಿನಪತ್ರಿಕೆಗಳಲ್ಲಿ ಈ ಲೇಖಕರ ಕಥೆಗಳು ಪ್ರಕಟವಾಗಿ ಮಕ್ಕಳ ಮನಸ್ಸಿನಲ್ಲಿ ಸ್ಥಾನ ಪಡೆದುಕೊಂಡಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್ತಿನ ಮಕ್ಕಳ ಪುಸ್ತಕ ಪ್ರಶಸ್ತಿ, ದಕ್ಷಿಣ ಕನ್ನಡ ಮಕ್ಕಳ ಸಾಹಿತ್ಯ ಸಂಗಮ ಪ್ರಶಸ್ತಿ ಇವರದಾಗಿದೆ. ಅಂತೆಯೇ ಏನೋ ಯಾವುದೇ ಮುನ್ನುಡಿ, ಪ್ರಕಾಶಕರ ನುಡಿಯ ಬೆನ್ನು ಹತ್ತದೆ ನೇರವಾಗಿ ಕಥೆಗಳು ಪ್ರಾರಂಭವಾಗಿ ಬಿಡುತ್ತವೆ.

ಸಂಕಲನದ ಮೊದಲ ಕಥೆಯೇ ಪುಸ್ತಕಕ್ಕೂ ಶೀರ್ಷಿಕೆ ಒದಗಿಸಿರುವ 'ಸುಖ ನೀಡದ ಸಂಪತ್ತು' ನಾವು ಚಿಕ್ಕಂದಿನಿಂದಲೂ ಕೇಳಿ ತಣಿದ ಬಂಗಾರದ ಮೊಟ್ಟೆಯಿಡುವ ಬಾತುಕೋಳಿಯ ಕಥೆಯೇ ಇದು. ಆದರೆ ಕಥೆಯನ್ನು ಹೇಳಿಕೊಂಡು ಹೋಗಿರುವ ರೀತಿ ಆಕರ್ಷಕವಾಗಿದೆ. ಕಷ್ಟಪಟ್ಟು ಕೆಲಸ ಮಾಡಿ ಆಹಾರ ಧಾನ್ಯ ಬೆಳೆಯುತ್ತಿದ್ದ ಯುವಕ ಸುಲಭವಾಗಿ ಬಂಗಾರಗಳಿಸುವ ಆಸೆಗೆ ಬಿದ್ದು, ಚಿನ್ನದ ಮೊಟ್ಟೆಯಿಡುವ ಬಾತುಕೋಳಿಯನ್ನು ಸನ್ಯಾಸಿನಿಯೊಬ್ಬಳಿಗೆ ದಾನವಾಗಿ ನೀಡಿದ ಧಾನ್ಯಕ್ಕೆ ಪ್ರತಿಫಲವಾಗಿ ಪಡೆದು ಹಗಲಿರುಳೂ ವರ್ಷದವರೆಗೆ ಬಂಗಾರದ ಮೊಟ್ಟೆಗಾಗಿ ಅದನ್ನು ಕಾಯ್ದು, ಸಿಕ್ಕ ಮೊಟ್ಟೆಯನ್ನು ಮಾರಲು ಪೇಟೆಗೆ ಬಂದಾಗ 'ಚಿನ್ನ ಯಾರಿಗೂ ಬೇಕಾಗಿಲ್ಲ, ಬಂಗಾರಕ್ಕಿಂತ ಜೋಳದ ಕಾಳಿಗೆ ಹೆಚ್ಚು ಬೆಲೆ' ಎಂಬ ಸತ್ಯ ಅವನಿಗೆ ಗೋಚರವಾಗುತ್ತದೆ. ಹಸಿವು ಬಾಯಾರಿಕೆಯಿಂದ ಬಳಲಿ ಬಿದ್ದವನಿಗೆ ಅದೇ ಸನ್ಯಾಸಿನಿ ನೀರು, ಸುಟ್ಟ ಜೋಳದ ತೆನೆ ಕೊಟ್ಟು ಬಂಗಾರದಲ್ಲಿ ಸಿಗುವ ಸುಖಕ್ಕಿಂತ ಹಸಿದವರ ಹಸಿವು ತಣಿಸಿದ ಶಾಂತಿ ಸಮಾಧಾನಗಳು ಲಕ್ಷ ಪಾಲು ಮೇಲು ಎಂದು ಅರಿಯುವಂತೆ ಮಾಡುತ್ತಾಳೆ. ಈ ಕಥೆ ಸುಲಭ ಪ್ರಚೋದನೆಗೆ ಒಳಗಾದರೆ ಶಾಶ್ವತ ಸುಖ ಹೇಗೆ ದೂರವಾಗುತ್ತದೆ ಎಂಬುದನ್ನು ಮಕ್ಕಳಿಗೆ ನಯವಾಗಿ ತಿಳಿಸಿಕೊಡುತ್ತದೆ.

ಎರಡನೇ ಕಥೆ, 'ಹರಿದು ತಿಂದ ಪತ್ರ' ಹಾಸ್ಯದ ಲೇಪನದೊಂದಿಗೇ ಜಮಿನ್ದಾರಿ ಪದ್ಧತಿಯ ಕ್ರೂರ ಮುಖವನ್ನೂ ಮಕ್ಕಳಿಗೆ ಪರಿಚಯ ಮಾಡಿಕೊಡುತ್ತದೆ. ಕಾಡಿನಲ್ಲಿ ದಾರಿ ತಪ್ಪಿದ ಸುಲ್ತಾನನು ಗೌಳಿಗನೊಬ್ಬನ ಆತಿಥ್ಯದಿಂದ ಸಂತೃಪ್ತನಾಗಿ ಅವನಿಗೆ ಫಲವತ್ತಾದ ಭೂಮಿಯನ್ನು ಚರ್ಮದ ಹಾಳೆಯ ಮೇಲೆ ಬರೆದು ಕೊಟ್ಟರೆ, ಆ ಭೂಮಿ ಮಂಜೂರು ಮಾಡಬೇಕಾಗಿದ್ದ ಪಟೇಲನು ಭೂಮಿ ಕೊಡದೇ ದೌರ್ಜನ್ಯದಿಂದ ಆ ಗೌಳಿಗನನ್ನು ಚೆನ್ನಾಗಿ ಬಡಿದು, ಆ ಚರ್ಮ ಪತ್ರವನ್ನು ಅವನಿಗೇ ತಿನ್ನಿಸಿ ಓಡಿಸುತ್ತಾನೆ. ಮತ್ತೊಮ್ಮೆ ಆ ಕಾಡಿಗೆ ಬೇಟೆಗೆ ಬಂದ ಸುಲ್ತಾನನು ಆ ಗೌಳಿಗನ ಮತ್ತಷ್ಟು ಹೀನವಾದ ಸ್ಥಿತಿ ಗಮನಿಸಿ ಅವನಿಗೆ ಸಿಕ್ಕಿದ ಭೂಮಿ ಸಾಕಾಗಲಿಲ್ಲವೇನೋ ಎಂದುಕೊಂಡು ಮತ್ತಷ್ಟು ಭೂಮಿಯನ್ನು ಕೊಡಲು ಚರ್ಮ ಪತ್ರದಲ್ಲಿ ಬರೆಯ ಹೊರಟಾಗ ಭಯಭೀತನಾದ ಗೌಳಿಗ 'ಗಿಣ್ಣಿನ ಮೇಲೆ ಬರೆದುಕೊಟ್ಟರೆ ತಿನ್ನಲು ಸುಲಭ' ಎಂಬ ಮಾತುಗಳಿಂದ ಪಟೇಲನ ದ್ರೋಹ ತಿಳಿಸುತ್ತಾನೆ.

'ಆತ್ಮವಿಶ್ವಾಸ ಗೆದ್ದಿತು' ಕಥೆ ಡಾ.ಬಾಬೂ ರಾಜೇಂದ್ರ ಪ್ರಸಾದ್ ವಿದ್ಯಾರ್ಥಿಯಾಗಿದ್ದಾಗ

ಪ್ರದರ್ಶಿಸಿದ ಆತ್ಮ ವಿಶ್ವಾಸವನ್ನು ಕುರಿತು ಹೇಳುತ್ತಾ ಸ್ವಾಭಿಮಾನ , ಆತ್ಮವಿಶ್ವಾಸಗಳ ಮಹತ್ವವನ್ನು ಮಕ್ಕಳಿಗೆ ತಿಳಿಸಿದರೆ ನಾಲ್ಕನೇ ಕಥೆ.'ದೊರೆ ಕೇಳಿದ ಕಥೆ' ಯು ಕಥೆಯನ್ನು ಕೇಳುವ ಅತಿಯಾದ ಹುಚ್ಚು ಬೆಳೆಸಿಕೊಂಡಿದ್ದ ರಾಜನೊಬ್ಬ, ಕಥೆ ಕೇಳಿದ ಮೇಲೆ ಕಥೆಗಾರರಿಗೆ ಬಹುಮಾನದ ಬದಲು ಹಿಂಸೆ ನೀಡುತ್ತಿದ್ದುದನ್ನು ತಿಳಿದ ಬಾಲಕನೊಬ್ಬ, ಕಥೆ ಹೇಳುವ ನೆಪದಲ್ಲಿ ತನ್ನ ಆಕರ್ಷಕ ಮಾತುಗಳು ಎಳೆಯಿಂದ ದೊರೆಯನ್ನು ಅವನ ಮಾತುಗಳಲ್ಲೇ ಕಟ್ಟಿ ಬೀಳಿಸಿ ಬೊಕ್ಕಸದ ಚಿನ್ನವನ್ನೆಲ್ಲಾ ಪಡೆದುಕೊಂಡು ರಾಜನ ಹುಚ್ಚು ಬಿಡಿಸಿದ ಕಥೆಯ ಮನೋಜ್ಞ ನಿರೂಪಣೆಯನ್ನು ಒಳಗೊಂಡಿದೆ.

'ಏಟಿಗೆ ಇದಿರೇಟು' ಕಥೆಯಲ್ಲಿ ಬೇಕೆಂದಷ್ಟು ಮೀನು ಕೊಡುವ ಮೀನಿನ ಬುಟ್ಟಿ ತೆಗೆದುಕೊಂಡು ಹೋಗಿ ಅದನ್ನು ನಾಯಿ ತಿಂದುಬಿಟ್ಟಿತು ಎಂದು ಸುಳ್ಳು ಹೇಳಿದ ಶ್ರೀಮಂತನಿಗೆ ಅವನ ಮಗ ನರಿಯಾಗಿಬಿಟ್ಟ ಎಂದು ಹೇಳಿ ಅವನ ಬಾಣವನ್ನು ಅವನಿಗೇ ತಿರುಗಿಸುವ ಚಾಕಚಕ್ಯತೆಯ ನಿರೂಪಣೆ ಇದೆ.

'ಬಂಗಾರದ ಬೆಳೆ' ಭೂಮಿಯಿಂದ ಬಂಗಾರವನ್ನು ಹೇಗೆ ಬೆಳೆಯಬಹುದು ಎಂಬ ಹೃದ್ಯ ವಿವರ ನೀಡಿದರೆ ಕೊನೆಯ ಕಥೆ 'ಗುಟ್ಟಿನ ಸಂಗತಿ' ರೈತನೊಬ್ಬ ತನಗೆ ಸಿಕ್ಕಿದ ನಿಧಿಯ ಸಂಗತಿ ಹೊರಗೆ ಹರಡದಂತೆ ಗೋಪ್ಯವಾಗಿಡಲು ಹೆಂಡತಿಗೆ ಬೋನಿನಲ್ಲಿ ಮೀನು, ಬಲೆಯಲ್ಲಿ ಮೊಲ, ಮರದಲ್ಲಿ ರೊಟ್ಟಿ ಸಿಗುವಂತೆ ನಂಬಿಸಿ ಅವಳು ನಿಧಿ ಸಿಕ್ಕಿದೆ ಎಂದು ನಿಜ ಹೇಳಿದರೂ ಅದರ ಜತೆಗೆ ಆಡಿದ ಅಸಂಗತ ವಿಷಯಗಳಿಂದ ಆ ಸುದ್ದಿ ಸುಳ್ಳು ಎಂದು ಸಾಧಿಸುವ ರೈತನ ಜಾಣ್ಮೆ ವರ್ಣಿತವಾಗಿದೆ.

ಹೀಗೆ ಈ ಮಕ್ಕಳ ಪುಸ್ತಕವು ಜಾಣ್ಮೆ, ಚಾಕಚಕ್ಯತೆ, ಆತ್ಮವಿಶ್ವಾಸ, ಸ್ವಾಭಿಮಾನ, ಸ್ಥೈರ್ಯ ಮುಂತಾದವುಗಳ ಬಗೆಗೆ ನೀಡುವ ಆತ್ಮೀಯ ಸಂದೇಶವು ಮಕ್ಕಳ ಅವಶ್ಯಕತೆಯಾಗಿದೆ.

ಡಾ. ಮಂಜುಳಾ ಹುಲ್ಲಹಳ್ಳಿ
ಡಿ.ಸಿ.ಸಿ.ಟಿ-೩೧, ಎಂಟನೇ ಮಹಡಿ
ವಾಣಿಜ್ಯ ತೆರಿಗೆಗಳ ಕಟ್ಟಡ
ಗಾಂಧೀನಗರ ಬೆಂಗಳೂರು-೯

ಪ್ರತಿಬಿಂಬ : ಲೇ. ಪ್ರೊ. ಡಿ. ಆರ್. ಬಳೂರಗಿ ; ಪ್ರಕಾಶಕರು: ನವಕರ್ನಾಟಕ ಪ್ರಕಾಶನ, ಪುಟ: ೪೮, ಬೆಲೆ : ರೂ ೩೫.

ಪ್ರಕೃತಿಯಲ್ಲಿ ಹಲವು ವಿಸ್ಮಯಕರ ವಿದ್ಯಮಾನಗಳು ಜರುಗುತ್ತಲಿರುತ್ತವೆ. ಈ ಎಲ್ಲಾ ವಿದ್ಯಾಮಾನಗಳು ಒಂದಲ್ಲಾ ಒಂದು ರೀತಿಯ ವೈಜ್ಞಾನಿಕ ಪರಿಕಲ್ಪನೆಗಳಿಗೆ ಸಂಬಂಧಿಸಿವೆ. ಹೀಗಾಗಿ ಇವುಗಳನ್ನು ಅರಿತುಕೊಳ್ಳಲು ಇಂತಹ ವೈಜ್ಞಾನಿಕ ಲೇಖನಗಳು ಅವಶ್ಯ.

'ಪ್ರತಿಬಿಂಬ' ಈ ದಿಕ್ಕಿನಲ್ಲಿ ಸಹಕಾರಿಯಾದ ಒಂದು ಕಿರಿಯ ಹೊತ್ತುಗೆ. ಇದರಲ್ಲಿ ಅಧ್ಯಾಯಗಳು ಮತ್ತು ಅವುಗಳ ಚಟುವಟಿಕೆಗಳು ಮಕ್ಕಳಿಗೆ ಬೆಳಕಿನ ಕೆಲವು ಪರಿಕಲ್ಪನೆಗಳನ್ನು ತಿಳಿದುಕೊಳ್ಳಲು ಸಹಾಯಕವಾಗಿವೆ. ವಿಜ್ಞಾನದ ವಿಷಯಗಳನ್ನು ಕೇವಲ ಉಪನ್ಯಾಸಗಳಿಂದ ಅರ್ಥಮಾಡಿಕೊಳ್ಳಲು ಸಾಧ್ಯವಿಲ್ಲ. ಪ್ರಾತ್ಯಕ್ಷತೆಯು ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ಮನೋಭಾವನೆಯನ್ನು ಹುಟ್ಟು ಹಾಕುವಲ್ಲಿ ನೆರವಾಗುತ್ತದೆ. ಇಲ್ಲಿ ಲೇಖಕರು ತಿಳಿಸಿರುವ

ಮೂವತ್ತನಾಲ್ಕು ಚಟುವಟಿಕೆಗಳು ಬೆಳಕಿನ ಪ್ರತಿಫಲನ, ವಕ್ರೀಭವನ ಪ್ರತಿಬಿಂಬಗಳ ಉತ್ಪತ್ತಿ ಮೇಲೆ ಕೇಂದ್ರೀಕೃತವಾಗಿವೆ. ಸಮತಲ ದರ್ಪಣಗಳಲ್ಲಿ ಪ್ರತಿಬಿಂಬ ಲಕ್ಷಣ ಹೇಗಿರುತ್ತದೆ ಎಂಬುದನ್ನು ಒಂದನೆ ಅಧ್ಯಾಯದ ಎಂಟು ಚಟುವಟಿಕೆಗಳು ತಿಳಿಸುತ್ತವೆ. ಮಸೂರಗಳ ಮೇಲೆ ರೂಪಿಸಿರುವ ಖಗೋಲ ದೂರದರ್ಶಕ, ಗೆಲಲಿಯೊ ದೂರದರ್ಶಕಗಳ ರಚನೆ ತುಂಬಾ ಚೆನ್ನಾಗಿವೆ. ಸುಲಭವಾಗಿ ಕಡಿಮೆ ವೆಚ್ಚದಲ್ಲಿ ಮಾಡಬಹುದಾಗಿದೆ. ಈ ಚಟುವಟಿಕೆಗಳು ಮಕ್ಕಳಲ್ಲಿ ಆಸಕ್ತಿಯನ್ನು ಮೂಡಿಸುತ್ತವೆ, ಸೃಜನಶೀಲತೆಯನ್ನು ಹೆಚ್ಚಿಸುತ್ತವೆ.

ಲೇಖಕರೇ ಹೇಳಿರುವಂತೆ ಇದರಲ್ಲಿನ ಚಟುವಟಿಕೆಗಳು ಕಿರಿಯರೂ ಮಾಡಬಹುದಾಗಿವೆ. ಆದರೆ ಪುಸ್ತಕದ ಕೊನೆಯಲ್ಲಿ ಬರುವ ಕೆಲವು ಚಟುವಟಿಕೆಗಳಾದ 'ಪ್ರತಿಬಿಂಬಗಳು ಭ್ರಮಾಲೋಕ'ದಲ್ಲಿನ ಚಟುವಟಿಕೆಗಳು ಸ್ವಲ್ಪ ದುಬಾರಿ ಎನಿಸುತ್ತವೆ. ಅಲ್ಲದೆ ಬೇಕಾದ ವಸ್ತುಗಳನ್ನು ಗ್ರಾಮಾಂತರ ಶಾಲೆಗಳು ಹೊಂದಿಸಿಕೊಳ್ಳಲು ಕಷ್ಟವಾಗ ಬಹುದು.

ವಿಜ್ಞಾನ ಕಲಿಕೆಯು ಈಚೆಗೆ ಶಾಲಾ ದಿನಗಳಲ್ಲೆ ಕ್ಲಿಷ್ಟಕರ ಹಾಗೂ ಬೇಸರ ತರುವಂತ ಪಠ್ಯ ಪುಸ್ತಕಗಳು ರಚನೆಯಾಗುತ್ತಿರುವ ಈ ದಿನಗಳಲ್ಲಿ 'ನವಕರ್ನಾಟಕ' ಪ್ರಕಾಶನದವರು ಸಾಹಸ ಮಾಡಿ ಇಂಥ ಉತ್ತಮ ಹೊತ್ತಿಗೆಗಳನ್ನು ತರುತ್ತಿರುವುದು ಶ್ಲಾಘನೀಯ. ಬೆಲೆ ಸ್ವಲ್ಪ ಹೆಚ್ಚೆನಿಸಿದರು ಉಪಯುಕ್ತವಾದ ಕೃತಿಯನ್ನು ಬಳೂರಗಿಯವರಿಂದ ಬರೆಸಿ ಮಾಧ್ಯಮಿಕ ಹಾಗೂ ಪ್ರೌಢಶಾಲೆಗಳ ಮಟ್ಟದ ಬೋಧನೆಗೆ ಜೀವತುಂಬಿದಂತಾಗಿದೆ.

ಮಹೇಶ
ವಿಜ್ಞಾನ ಶಿಕ್ಷಕರು, ಬಿ.ಎಸ್.ಸುಬ್ಬಣ್ಣ
ಸಾರ್ವಜನಿಕ ಪ್ರೌಢಶಾಲೆ
ತಾಯೂರು.



ಸ್ವಾತಂತ್ರ್ಯವನ್ನು ಪಡೆಯಲು ತೆತ್ತಷ್ಟೇ ಬೆಲೆಯನ್ನು ಅದರ ರಕ್ಷಣೆಗಾಗಿಯೂ ತೆರಬೇಕಾಗುವುದು. ಗಳಿಸಿದ ಸ್ವಾತಂತ್ರ್ಯ ತಾನಾಗಿಯೇ ನಮ್ಮ ಕೈಯಲ್ಲಿ ಉಳಿಯಲಾರದು. ಅದನ್ನು ನಾವೇ ಸಾಕಿಕೊಂಡು ಹೋಗಬೇಕು.

-ನೆಹರೂಜಿ

ಓದುಗರ ಅನಿಸಿಕೆ

ಮಾನ್ಯರೆ,

ನಿಮ್ಮ ಮೇ ೨೦೦ ಮಾಹೆಯ ಸಂಚಿಕೆಯಲ್ಲಿ ''ಚಿಂತೆಯನ್ನು ಗೆಲ್ಲುವ ಐದುದಾರಿಗಳು'' ಮತ್ತು ಡಿಸೆಂಬರ್ ೨೦೦೦ ಮಾಹೆಯಲ್ಲಿ ಪ್ರಕಟವಾದ ಇಂತಹದೇ ಇನ್ನೊಂದು ಲೇಖನ ''ತಲೆ ತುಂಬ ಚಿಂತೆಗಳು ಚೆಲ್ಲಾಡಿದಾಗ'' ಓದಿದೆ.

ನಾನು ಇದುವರೆವಿಗೂ ಸಂಭವಿಸಬಹುದಾದ ಘಟನೆಗಳ ಬಗ್ಗೆ ಭಯಭೀತನಾಗುತ್ತಿದ್ದೆ. ಹಾಗೆಯೇ ನಡೆದ ಘಟನೆಯ ಬಗ್ಗೆಯೂ ಸಹ. ಆದರೆ ಈ ನಿಮ್ಮ ಎರಡೂ ಲೇಖನಗಳು ನನ್ನ ಚಿಂತೆಯನ್ನು ದೂರಮಾಡಿದೆ. ಜೀವನವನ್ನು ಧೈರ್ಯದಿಂದ ಹೇಗೆ ಎದುರಿಸಬಹುದು ಎಂಬುದನ್ನು ಈ ಲೇಖನಗಳು ನನಗೆ ಕಲಿಸಿವೆ. ನನ್ನಂತೆಯೇ ಈ ಲೇಖನಗಳು ಅನೇಕ ಜನರಿಗೆ ಧೈರ್ಯ ತುಂಬಿದೆ ಎಂದು ಪರಿಭಾವಿಸುತ್ತೇನೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ
ಅ.ಸಿ. ಸಿದ್ದೇಗೌಡ
ಅರಳುಕುಪ್ಪೆ
ಕ್ಯಾತನಹಳ್ಳಿ-೫೭೧ ೪೨೭
ಮಂಡ್ಯ ಜಿಲ್ಲೆ

ಮಾನ್ಯರೆ,

ಪುಸ್ತಕ ಪ್ರಪಂಚದ ಸುವರ್ಣ ಸಂಚಿಕೆ ಒಳ್ಳೇ ಲೇಖನಗಳಿಂದ ತುಂಬಿ ಬಂದಿದೆ. ಆದರೆ ಆವರಣದ ಮುಖಪುಟದಲ್ಲಿ ಅಚ್ಚಾಗಿರುವ ಕನ್ನಡ ಸಾಹಿತ್ಯದ ಹಿರಿಯ ಕವಿಗಳ-ರೇಖಾಚಿತ್ರಗಳು ಕಳೆಗೆಟ್ಟಿವೆ.

ಇತಿ ವಂದನೆಗಳು

ತಮ್ಮ ವಿಶ್ವಾಸದ
ಗೌ.ಮ. ಉಮಾಪತಿ ಶಾಸ್ತ್ರಿ
ಧರ್ಮಸ್ಥಳ

ಮಾನ್ಯರೆ,

ವಯಸ್ಕರ ಶಿಕ್ಷಣ ಸಮಿತಿಯ ಮೊದಲಿನಿಂದ ಇದುವರೆಗಿನ ಬೆಳವಣಿಗೆ, ಕಾರ್ಯ ಸಾಧನೆಯ ಇತಿಹಾಸ ಹಾಗೂ ಸಾಕ್ಷರತಾ ಕಾರ್ಯಕ್ರಮದಲ್ಲಿ ಅದರ ಪಾತ್ರ, ಹಾಗೂ ಹಿರಿಮೆಗರಿಮೆಗ ಅವಲೋಕನದೊಂದಿಗೆ ''ಪುಸ್ತಕ ಪ್ರಪಂಚ''ದ ಮೌಲಿಕತೆಯನ್ನು ಎತ್ತಿತೋರುವ ಸೆಪ್ಟೆಂಬರ್/ಅಕ್ಟೋಬರ್ ೨೦೦೦ ಸುವರ್ಣ ಸಂಚಿಕೆ - ಅಮೂಲ್ಯ ಕೈಪಿಡಿ ಎನ್ನುವಂತಿದೆ. ಅದಕ್ಕಾ ಶ್ರಮಿಸುತ್ತಿರುವ ತಮಗೂ ತಮ್ಮ ಸಿಬ್ಬಂದಿ ವರ್ಗದವರಿಗೂ ಅನಂತ ಧನ್ಯವಾದಗಳು

ತಮ್ಮ ವಿಶ್ವಾಸದ
ಡಾ. ಶಿವರುದ್ರಪ್ಪ ಮಹದೇವಪ್ಪ, ಹರದಗಟ್ಟಿ
ಪ್ಲಾಟ್ ಸಂ. ೪೧೯, ಸೆಕ್ಟರ್ ನಂ. ೩
ಶಿವಬಸವ ನಗರ ಬೆಳಗಾಂ-೫೯೦ ೦೧೦

ಕಾರ್ಯಕಾರಿ ಸಮಿತಿ ಸದಸ್ಯರುಗಳು :

ಸರ್ವಶ್ರೀಗಳಾದ :

ಹೆಚ್. ಭಾಸ್ಕರ್, ಅಧ್ಯಕ್ಷರು ಮತ್ತು ಮೈಸೂರು ವಿಭಾಗಾಧಿಕಾರಿಗಳು

ವೈ. ಎನ್. ಶಂಕರೇಗೌಡ, ಖಜಾಂಚಿ

ಎಸ್. ಮಾದೇಗೌಡ

ವೈ. ಎಂ. ಚಂದ್ರು

ಕೆ. ಎಂ. ಚನ್ನೇಗೌಡ

ಮಹದೇವಯ್ಯ

ಆರ್. ಜಯರಾಮ

ಎಚ್. ಎಸ್. ನಂಜಪ್ಪ

ಎಸ್. ಮಂಚಯ್ಯ

ಕೆ.ಜಿ. ಚನ್ನಕೇಶವ

ಶ್ರೀಮತಿ ಕಮಲ ಸಿ. ಹೆಗಡೆ

ನಿರ್ದೇಶಕರು, ಲೋಕಶಿಕ್ಷಣ ನಿರ್ದೇಶನಾಲಯ

ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ

ಆಯುಕ್ತರು ಮತ್ತು ಕಾರ್ಯದರ್ಶಿಗಳು
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

ಆಯುಕ್ತರು ಮತ್ತು ಕಾರ್ಯದರ್ಶಿಗಳು
ಸಮಾಜ ಕಲ್ಯಾಣ ಮತ್ತು ಕಾರ್ಮಿಕ ಇಲಾಖೆ

ಆಯುಕ್ತರು ಮತ್ತು ಕಾರ್ಯದರ್ಶಿಗಳು
ವಸತಿ ಮತ್ತು ನಗರಾಭಿವೃದ್ಧಿ ಇಲಾಖೆ

ಅಭಿವೃದ್ಧಿ ಕಮೀಷನರ್

ಶ್ರೀರಂಗರಾಜು, ಪ್ರಧಾನ ಕಾರ್ಯದರ್ಶಿ

ಮುದ್ರಣ ಮತ್ತು ಪ್ರಕಟಣೆ : ಕ. ರಾ. ವ. ಶಿ. ಸಮಿತಿ, ಮೈಸೂರು–570 006

ಸಮಿತಿಯ ಪ್ರಕಟಣೆ

ಪುಸ್ತಕ ಪ್ರಪಂಚದಲ್ಲಿ ಪ್ರಕಟಗೊಂಡ ಡಾ|| ದೇಜಗೌ ಅವರ
ಸಂಪಾದಕೀಯ ಲೇಖನಗಳ ಸಂಗ್ರಹ—

ಸಂಪಾದಕೀಯ ಸಂಕಲನ

(ಬೆಲೆ: ರೂ. ೫೦–೦೦)

ನಾಡಿನ ಖ್ಯಾತ ಕಲಾವಿದರಾದ ಡಾ|| ಪಿ. ಆರ್. ತಿಪ್ಪೇಸ್ವಾಮಿ ಅವರ ಆಕರ್ಷಕ ಮುಖಚಿತ್ರದೊಂದಿಗ, ಡೆಮಿ ೧/೮, ೧೪೪ ಪುಟಗಳ ಆಫ್‌ಸೆಟ್ ಮುದ್ರಣ. ವೈವಿಧ್ಯಮಯ ವಿಚಾರಪೂರಿತ ಚಿಂತನಾರ್ಹ ವಿಷಯಗಳ ಸಾರಸಂಗ್ರಹ.

ಪ್ರತಿಗಳಿಗಾಗಿ ಸಂಪರ್ಕಿಸಿ:

ಪ್ರಧಾನ ಸಂಪಾದಕ
ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ
ಸಂ. ೫/೧, ವಿನೋಬಾ ರಸ್ತೆ, ಮಾನಸಗಂಗೋತ್ರಿ ಆವರಣ, ಮೈಸೂರು–೫೭೦ ೦೦೬
ದೂರವಾಣಿ: 511875

Licence No. 21, Reg. No. KA/SK/Mys–56
Licenced to Post with payment at Mysore, R. M. S/II

If undelivered please return to:

CHIEF EDITOR
KARNATAKA STATE ADULT EDUCATION COUNCIL
5/1, Vinoba Road, P.B. No. 15
Manasagangothri Campus, Mysore-570 006
Phone: 511875